
ಕಾರ್ಡು ಬರೆದರೆ ಆಗಿನ ಕ್ಯಾಟಲಾಗು ಪೂರ್ತಿಯಾಗಿ ಕಳುಹಿಸಲ್ಪಡುವುದು.

ಬಂದೂಕುಗಳು, ಕತ್ತಿಗಳು, ಬಚ್ಚಿಗಳು, ತೋಟಿಗಳು, ಕೇತ್ರಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.
GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—17 210 Abdul Rehman Street, BOMBAY.

# ಬಿ. ಎಸ್. ಕಾಮತ್ ಆಂಡ್ ಕಂಪೆನಿ.
ಇವರ ಸ್ವದೇಶಿ ಬಂಗಾರದ ಚಿತ್ತಾಕರ್ಷಕ ಆಭರಣಗಳನ್ನು ಕೊಳ್ಳಿರಿ.

14 ಕ್ಯಾರೆಟ್ ಶುದ್ಧ ಚಿನ್ನದ ಹೊಸ ಫ್ಯಾಶನ ಪಾತ್ರಿಯೂ ಬಂದೋಬಸ್ತು ಆದ ಪೌಂಟನ್‌ಪೆನ್‌ಗಳು.

| | | |
|---|---|---|
| ಸರ್ಲ್ಡ್ ಪಂಡರ್ ಪೌಂಟನ್‌ಪೆನ್ | 1ಕ್ಕೆ | ರೂ 3 0 0 |
| " " ಜಗ್ ಜ್ಯಾರೆಲ್ ಪೆನ್ | 1ಕ್ಕೆ | 3 3 0 |
| " " ಸ್ಕ್ರ್ಯೂ ಕ್ಯಾಪ್ ಪೆನ್ | 1ಕ್ಕೆ | 3 8 0 |
| " " ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೂಡಲ್ ಕಲರ್ ಪೌಂಟನ್‌ಪೆನ್ | 1ಕ್ಕೆ | 3 14 0 |
| " " ಮೂಗರ್ ಕೇರ್ ಸ್ಕ್ರೂ ಕ್ಯಾಪ್ ಪೌಂಟನ್‌ಪೆನ್ | 1ಕ್ಕೆ | 4 2 0 |
| " " ಸೆಲ್ಫ್ ಫಿಲ್ಲಿಂಗ್ ಮೂಡಲ್ ಆಫವ್ ಪ್ರವುನ್ ಕಲರ್ ಪೌಂಟನ್‌ಪೆನ್ | 1ಕ್ಕೆ | 5 8 0 |
| ಬಿಗ್ ಸ್ಕಾಟ್ ಪೌಂಟನ್‌ಪೆನ್ | 1ಕ್ಕೆ | 10 8 0 |
| ಪಾರ್ಕರ್ ಪೆನ್ | 1ಕ್ಕೆ | 14 6 0, & 20 10 0 |
| ಬ್ಲಾಕ್‌ಬರ್ಡ್ ಪೌಂಟನ್‌ಪೆನ್ | 1ಕ್ಕೆ | 3 8 0, & 5 12 0 |
| ಸ್ಯಾಫ್ಟ್ ಪೌಂಟನ್ ಪೆನ್ | 1ಕ್ಕೆ | 6 4 0, & 6 12 0 |
| ವಾಟರ್‌ಮನ್ ಪೌಂಟನ್ ಪೆನ್ | 1ಕ್ಕೆ | 8 2 0, & 8 10 0 |

ಟೈಂ ಪೀಸ್ ಗಳು.

| | | |
|---|---|---|
| ಸ್ಮಾಲ್ ಇರುವ ಸಣ ಟೈಂಪೀಸ್ | 1ಕ್ಕೆ | 3 6 0 |
| ಜರ್ಮನ್ ಮೇಡ್ ಸೆಮಿ ಟೈಂಪೀಸ್ | 1ಕ್ಕೆ | 2 2 0 |
| ಲಿಲಿಯೂ ಅಲಾರು ಟೈಂಪೀಸ | 1ಕ್ಕೆ | 6 9 0, & 6 15 0 |
| ಲಿಲಿಯೂ ಸಣ್ಣ ಸೈಜಿನ ಅಲಾರು ಟೈಂಪೀಸ್ | 1ಕ್ಕೆ | 7 2 0 |
| ಲಿಲಿಯೂ ಅಲಾರು ಸಣ್ಣ ಟೈಂಪೀಸ್ ಡೇಡಿಯು ಜೈಲಿನದು | 1ಕ್ಕೆ | 8 10 0 |
| ಬಿಗ್‌ಪೆನ್ ಅಲಾರಂ ಟೈಂಪೀಸ್ | 1ಕ್ಕೆ | 9 6 0 |
| ಬಿಗ್‌ಪೆನ್ ಅಲಾರು ಸ್ಯಾಂಡ್ ಇರತಕ್ಕ ಪಾತ್ರಿ ಯೂದ ಟೈಂಪೀಸ್ | 1ಕ್ಕೆ | 13 4 0 |
| ಪಾತ್ರಿಯೂ ಒಂದೋಬಸ್ತೂ ಆದ ಪಾಕೆಟ್ ವಾಚ್ | 1ಕ್ಕೆ | 5 10 0 |
| ಡಿಟೋ ನಮೂನೆಯಲ್ಲಿ ಎಲ್ಲ ಹಾತ್ರ ಕಂಪೆನಿಯ ಪಾಕೆಟ್ ವಾಚ್ | 1ಕ್ಕೆ | 12 4 0 |
| ನಿಕ್ಕಲ್ ಕೇಸ್ ಸಿಲಿಂಡರ್ ಮುವೆಂಟ್ ಸಾಧಾರಣ ತರಹ ರಿಸ್ಟ್ ವಾಚ್ | 1ಕ್ಕೆ | 5 4 0, 7 8 0, 10 0 0 & 12 8 0 |



ಇಲ್ಲಿ ನಮೂದಿಸಿರುವ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ವ್ಯಾಕಿಂಗ್ ಪೋಸ್ಟೇಜು ಆಲಾಯಿ.

ಮತಿಯೂರ್ಡರ್ ರವಾನಿಸುವ ವಿಳಾಸ —ಎಂ ಎಸ್ ಶಿವಪ್ಪ ಆಂಡ್ ಬ್ರದರ್ಸ್,
ಹಾರ್ಡ್‌ವೇರಿಯಂ ವ್ಯಾಪಾರಿಗಳು, ಮೈಸೂರು.

52-4

## ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಸಂ ಲಿಮಿಟೆಡ್ ಸೊಸೈಟೀಸ್
ಬಟ್ಟೆ ಪ್ರಕಾರ ರಿಜಿಸ್ಟರಾಗಿದೆ.

| | ರೂ. |
|---|---|
| ಶೇರ್ ಬಂಡವಾಳ — | 50,000 |
| ವಸೂಲಾದ ಶೇರ್ ಮೊಬಲಗು — | 21 310 |
| ಒಮ್ಮೊಂದು ರೇವಣಾತಿ — | 2,16,271 |

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆಯ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಬಹುದಷ್ಟು.

ಹಿಂದು ವರ್ಷ ವಾಯಿದೆ ಆಧಾರ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಒಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ರೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಡ ಸರೇಟಿವ್ ರಿಜಿಸ್ಟ್ರಾರರು ಲೆಕ್ಕ ಆಡಮೊಯಿಸಿಕೆ ಮಾಡುತ್ತಾರೆ.

ಪೈಸಾರಿ ಮಂಡಂಡ ಅಪ್ಪಯ್ಯನವರು, ಡೈರೆಕ್ಟರ್
ಕಾಫಿ ಬಹದ್ದೂರ್. ಮನೆಯಪ್ಪಂಡ ಬೆಳ್ಯಪ್ಪ ನವರು.

ಸೆಕ್ರೆಟರಿ
ಸಿ. ಯನ್. ವೆಂಕಟ್ಯೆಯ್ಯನವರು, ಬಿ.ಎ, ಬಿ.ಎಲ್.
ಕಾರ್ಯಕ್ರಮ 1-9-1930.

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಜಂಟಿ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಆರ್ಡರ್ಸು ವಿಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರೀತಿ ಫ್ರಸ್ತಗಳು ಕೂಡಲಾಗಿವೆ. ಕೆಳಗಿನ ಸಬ್ ವಿಜೆಂಟರುಗಳಿಗೆ ನಿರ್ದಿಷ್ಟ ಜಂಗಮಂಡ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರೀತಿ ಫ್ರಸ್ತಗಳು ಕೂಡಲಾಗಿವೆ. ಸಮಯವಿಟ್ಟು ಜಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಪ್ಪೆ ಜಂದಾವನ್ನು ವಾವತಿ ಮಾಡಿ ರೀತಿ ಪಡೆಯಬೇಕಾಗಿ ಕೋರಿಕೆ.

ವಿಜಂಟರುಗಳು,
ಮರಂಡಾಡು—ಮೆ. ಶೇಕರ ಅಯ್ಯಪ್ಪನವರು.
ಸಬ್ ವಿಜೆಂಟರುಗಳು.
ವೀರರಾಜಪೇಟೆ—ಮೆ. ಮಂಡೇಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಸ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಚ್ಚಮೊಡ ನೂದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮೊದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಏನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮೈಯ್ಯನವರು,
ಮತ್ತು, ಅರಮಣಮೊಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಪೂವಮ್ಮೆಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚೆಯ್ಯನವರು,

ಸೂಚನೆ:—ಪ್ರಿಂಟು ಆದ ರೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಿರಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

## ಮೊರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಳಕುಹಿಸಿದಾಗ ಅದು ಸರಿಯೊಗಿ ಬರೆಯಲ್ಪಡಲಿಲ್ಲ ವೆಂದು ವಾಪಸು ಳಕುಹಿಸಿ ಅದನ್ನು ಪುನಹ ಸರಿಯೂಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿಡ್ಡರ್ ಸ್ವ್ಯೂರಿಯಲ್ಲಿಯೂ ಮಾರಾಟಕ್ಕಿವೆ. ಮೇನೇಜರ್,
"ಕೊಡಗು" ಮಡಿಕೇರಿ.




12 bore Victor Cartridges Rs 10/- Per 100
**Mahomedally-Noorbhoy.**
ARMS & AMMUNITION MART.
221 Abdul Rehman Street.
BOMBAY.

## ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ
## ಓರಿಯಂಟಲ್ ಜೀವವಿಮೆ ಕಂಪೆನಿಯ

ಹಿಮ್ಮೊಂಟನೇ ಸಾರಿಯ ತ್ರೈವಾರ್ಷಿಕ ಆದಾಯದ ಹುಚೆಯು ಇದೇ ಡಿಸೆಂಬರ್ 31ನೇ ತಾರೀಕಿನಲ್ಲಿ ಕೊಡಲ್ಪಡುತ್ತೆ

ಕಳೆದ ಮೂರು ಸಾರಿ ಆದಾಬಾಬು ಮೊಬಲ್ಬಟ್ಟಾಗ ಇದ್ದ ಉತ್ತೇಜನದ ನಿವರ
1921ನೆಲ್ಲಿ 21½ ಲಕ್ಷ ರೂಪಾಯಿಗಳು.
1924ರಲ್ಲಿ 53½ " "
1927ರಲ್ಲಿ 78 " "

**ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.**

1921ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ. | 1927ರಲ್ಲಿ 2000 ರೂಪಾಯಿಗಳಿಗೆ ವರ್ಷಕ್ಕೆ 25 ರೂ.
1924ರಲ್ಲಿ " " " 22½ "

ಈ ವರ್ಷದಲ್ಲಿ ದಾಖಲಾಗುವ ಪಾಲಿಸಿಗಳಿಗೂ ಸಹ 1940ನೇ ಇಸವಿ ಡಿಸೆಂಬರ್ 31ನೇ ತಾರೀಕಿನಲ್ಲಿ ಆದಾಯದ ಹಂಚಿಕೆಯು ಕೊಡಲ್ಪಡುತ್ತೆ.

ಆದುದರಿಂದ ನೀವು ಓರಿಯಂಟಲ್ ಕಂಪೆನಿಯ ಪಾಲಿಸಿದಾರರಾಗುವುದರಲ್ಲಿ ಹೇರಳ ಲಾಭವುಂಟು.

**ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.**

**ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.**

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು:—

ಓರಿಯಂಟಲ್ ಬಿಲ್ಡಿಂಗ್ಸ್, ಯಂ. ವಿ. ಮುತ್ತುಕೃಷ್ಣ ನಾಯಡು,
ಸೌತ್ ಪೇರೇಡ್, ಬೆಂಗಳೂರು. 52—23 ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

**ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ಮೋಹನಿವಾರಕವೆಂಬ ಮಂತ್ರ ಯಂತ್ರದ ತಾಯಿತ.**

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ಮಸ್ಕರ್ಮದಿಂದಲೂ, ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೂ ಸರಿಯಾಗಿ ಮುಟ್ಟಾಗದಿರುವಿಕೆ, ಮುಟ್ಟಾಗುವ ಸಮಯದಲ್ಲಿ ಕೈಕಾಲು ಹಿಡಿಯುವಿಕೆ, ಮೈಸ್ಪಷ್ಟ ಬೀಳುವಿಕೆ, ಹೊಟ್ಟೆ ಕೂಡಿ, ಬೆಳುವು-ಕೆಂಪು ಹೋಗಿ ಗರ್ಭ ಪತನವಾಗುವಿಕೆ, ವಾಂತಿ, ಸರ್ದಿಕಾಸ, ವಿಪರೀತಾಳೆಯಿಂದ ನರಳುವಿಕೆ, ದಿನ ತುಂಬಿದ ಹಡಿಯೋಜಿಂದ ದೆರೆ ಹಲವೊಮ್ಮೆ ಮಗುವಿಕೆ, ಇವೇ ಮೊದಲಾದವುಗಳು ಸಂತಾನ ಭಂಗಕ್ಕೆ ಕಾರಣಗಳು ಚಿಕ್ಕ ಮಕ್ಕಳಿಗೆ ೧೩ ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂಭವಿಸುವ ಗ್ರಹಣ, ಮುಟ್ಟುದೋಷ, ಕಾಮಾಲೆ, ಗೃಹಪೀಡೆ, ದೃಷ್ಟಿದೋಷ ಮುಂತಕಿದ್ದಾಸಿ ವಿಪರೀತ ಅಳುವಿಕೆ ಹೊಟ್ಟೆಯೊಳಗಿಂದ ಏಳೋಣ, ಭಯದಿಂದ ಜ್ವರಬಿಡ್ಡೆ, ಕ್ಷೀಣ ಹೊಂದುವಿಕೆ ಮೊದಲಾದವುಗಳಿಂದ ಕಾಪಾಡಿಕೊಳ್ಳುವದು, ಗರ್ಭಕೋಶಕ್ಕೆ ಕರ ವಿಧುಲ್ಲಿ ಸೂರ್ಯ ರಶ್ಮಿ ಕರ ವಿಧುಲ್ಲಿ ಇನ್ನೂ ಅನೇಕ ಗ್ರಹಗಳಲ್ಲಿ, ಹೀಂದ ಪ್ರಕಾರ ಪಂಡಿತರೊಡನೆ ಸರಿಯೋಧಿಸಿ ಗ್ರಹಣ ಕಾಲದಲ್ಲಿ ಸಾಧು ಸತ್ಕುರುವರ ಸಹಾಯದಿಂದ ನುತ್ತಿದ ಯಂತ್ರವನ್ನು ಕಡೂರಿನ ಬಳ್ಳಿಯ ಕಾಯಿತದಲ್ಲಿ ಹಾಕಿ ಭದ್ರಪಡಿಸುತ್ತದೆ ಇದನ್ನು ಕಂಠಿ ಧರಿಸಿದರೆ ಹೆಣ್ಣು ಮಕ್ಕಳಾಗುವ ಸಂತಾನ ಭಂಗವೂ, ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಯೂನಷ್ಟೂ ಪರಿಹಾರವಾಗುತ್ತದೆ ಹೆಣ್ಣು ಮಕ್ಕಳಿಗೆ ಸಂತಾನ ಶಕ್ತಿಯಿಂದ ೩ ರೂಪಾಯಿ, ಚಿಕ್ಕಮಕ್ಕಳಿಗೆ ೧೫ಕ್ಕೆ ತಿ-೮-೦ ಪೋ. ಖ. ಬೇರೆ. ಶ್ವೇರಲ್ ವಾ ಜಾಗ್ರತೆ ಬರುವ ಕಾಯಿತಕ್ಕೆ ಪೋ. ಖ ಸೇರಿ ೫ ರೂ. ಆಗಕ್ಕೆ ಏ ಕಾರಗಳನ್ನು ಸ್ಪಷ್ಟ ಬರೆಯಿರಿ. ಈತಾಯಿತ ಧರಿಸಿಕೊಂಡು ಗುಜರಿಲ್ಲೆಂದವರಿಗೆ 100 ರೂ ಬಹುಮಾನ ಒಂದು ಸಲ ಧರಿಸಿ ಅನುಭವ ತಕ್ಕೊಳ್ಳಿರಿ

**ಸ್ಥಳ ಸಂಕೋಚ ಮೂಲಕ ನೂದರಿಗಾಗಿ ಇಷ್ಟೊಂದು ಪತ್ರಿಕೆ ಒಂದೇ ಕೊಟ್ಟಿದೆ.**

ನನ್ನ ಹೆಂಡತಿಯ ಶ್ರಕೃತಿಯನ್ನು ನಾವೊಂಕಿತ ವೈದ್ಯ ಡಾಕ್ಟರರೂಡ ತೋರಿಸಲು ಗುಣವೆಂಂದಿರಲು ಕಮ್ಮ ಆಸ್ಪರ್ಗೆಯಾದ ತಾಯಿತವನ್ನು ಸಪ್ತ ಹೆಂಡತಿಯು ಈಗಾಗ್ಗೆ 3 ತಿಂಗಳಿಗೆ ವರೆಗೆ ಧರಿಸಿದ ನಮ್ಮತ್ತಿನ ಮೈಸೊಳಗಿನ ಯೂನಷ್ಟೂ ಕಾಯಿಲೆಗಳು ನಾಶವಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುವುದನ್ನು ತಿಳಿಸಲು ಆತಿ ಸಂತೋಷವೆನಿಸುತ್ತೆ. ಕಮ್ಮ ಸಿ. ಕೆ. ರಾಮಾಶಾಹೀಬ, ಸುದಾಮ ಜಾನ್ಸ್,
ಪ್ರಲ್ಹಾದ ಎಸ್ಟೇಟ್, ಮುಂಬೈ.

**ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,**
52—47 **ಮು. ಪೋ. ಆಥಣಿ, ಜಿ. ಬೆಳಗಾಂವ.**

## ೫೫-ವರ್ಷಗಳ ಅನುಭವಸಿದ್ಧ ಮತ್ತು ಸಾರಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

### ೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗಿವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ಪಷ್ಟದಲ್ಲಿ ಧಾತುವು ಸಪ್ಪವಾಗುವಿಕೆ, ಜ್ಞಾಪಕ ಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮೆಲ ಒಡ್ಡತೆ, ಕೈಕಾಲು ಒಜ್ಜುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು:—ಕೃಯ ಡಜ್ಜಿ 1ಕ್ಕೆ 2—8—0 ಮೂರು ಡಜ್ಜಿಗಳಿಗೆ ರೂ. 7—0—0.

### ೨. ಅಶೋಕಾರಿಷ್ಟ ಮತ್ತು ಮೂತ್ರೆ.

ಹೆಂಗಸರ ಮುಟ್ಟು, ದೋಷಗಳು, ಮಕ್ಕುನ್ಯಾವುದು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮೆಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ತೊಗಗಳನ್ನೂ ಆತಿ ವಿಶಿಷ್ಟವಾಗಿ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮೂತ್ರೆಗಳು ಸಾಮಿರಾರು ಹೆಂಗರುಳಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕೃಯ 1 ಬಾಟ್ಲಿ ಔಷಧ, 1 ಡಜ್ಜಿ ಮೂತ್ರೆ ರೂ. 2 ಆ. 4,
3 ಬಾಟ್ಲಿ ಮತ್ತು ಡಜ್ಜಿಗಳಿಗೆ ರೂ. 6 ಆ. 4.

### ೩. ಏಲೇಲಯೂ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಮಲೆ ಜ್ವರ, 2 ಯೂ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬಹುವ ಜ್ವರ, ಜ್ವರ ಗಿಜ್ಜೆಯಿಂದ ಒರುವ ಜ್ವರವನ್ನು ನಿಲ್ಲಿಸಿ ಜ್ವರ ಗತ್ತೆಯನ್ನು ಕಂಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

### ೪. ಮೇಹ ಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿಯಂತೆ ಹೋಗುತಕ್ಕ ಕೇವನ್ನೂ ನ್ಯೂಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಜ್ಜಿ 1ಕ್ಕೆ ರೂ. 2—8—0. ಳಕ್ಕೆ ರೂ. ..

### ೫. ಇಛ್ಛಾ ಭೇದಿ ಗುಟಿಕೆ.

ಆಯಾಸವನ್ನು ಉಂಟುಮಾಡುವ ಸುಖ ವೀರೇಚಕ ಬಾಟ್ಲಿ 1ಕ್ಕೆ 0—12—0 ಆಣೆ 3 ಬಾಟ್ಲಿಗಳಿಗೆ 2—2—0.

ಎಲ್ಲಾ ನವಾನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸುಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಲಾಹುದು. ಕೆಟಲಾಗು ತರಿಸಿ ನೋಡಿರಿ.

**ಯಂ. ಗಣಪಯ್ಯ ಅಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಸಿಯನ್ಸ್,
12—10 ರಥಬೀದಿ, ಮಂಗಳೂರು, ದ. ಕನ್ನಡ.

## ಟೆಲಿಫೋನ್ ಎಂಬ ಮಾತಾಡುವ ಯಂತ್ರ



ಇವ್ಯ ಶೀರಿಕಾದಲ್ಲಿ ತಯಾರಾದವು. ಭಾರಿ ಕೈಯದ ಟೆಲಿಫೋನ್ ಯಂತ್ರಗಳಂತೆಯೇ ಇವುಗಳಲ್ಲಿಯೂ ಸೂಪನಾಡ ಒಮದು. ದೂರದಲ್ಲಿರುವವರ ಸಂಗತಿ ನಾವು ಮನೆಯಲ್ಲಿದ್ದುಕೊಂಡೇ ಮಾತನಾಡಬಹುದು. ಮಾತನಾಡುವ ವಿಧಾನವನ್ನು ಯಂತ್ರದ ಜೊತೆಯಲ್ಲಿ ಕಳುಹಿಸುತ್ತೇವೆ.

ಕೃಯ 1ಕ್ಕೆ ರೂ 2—8—0.
ವಿಳಾಸ:—ಎಂ. ಲಿಯೋ ಆಂಡ್ ಕೊ.
52—47 243 ಮುದ್ರಾಸ್.

Printed & published by P. I. Belliappa at "Kodagu" Press, Mercara for "Kodagu" Ltd.

Regd. No. . . 1858.
First entered here return to
"Khabardar" office MIRDARA.

# ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯತ್ನತಃ॥ ಏಕ ನುತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಸದಾ॥

ವಾರ್ಷಿಕ ಚಂದಾ ರೂ. ೩—೪—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦ | ಸುಂಟಿಕೊಪ್ಪ, ಸನ್ ೧೯೦೦ನೇ ಇಸವಿ ಜೂನ್ ತಾರೀಕು ೨೦ ನೇ ಬುಧವಾರ. | ಸಂಚಿಕೆ ೩

Telephone :— 3145.

Cups, Rs. 6, and upwards.

By Appointment to H. E The Governor of Madras.

CUPS.
MEDALS.
SHIELDS.
CASKETS.

Medals, Rs. 1-8-0 and upwards

Telegrams :— 'PRETIOUS'

V. SUBRAMANIA IYAR.
JEWELLER.

Post Box No., 123, Tripliacne,

*Illustrated Catalogue Free on Application.*

52—39 MADRAS.

## ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಗಿಡಗಳಿಗೆ ಅವಶ್ಯವಿರುವ ನೈಟ್ರೋಜನ್ ಅಂಶವನ್ನು ರೀತಿಯಿಂದಲೂ, ಅತಿ ಸುಲಭ ಬೆಲೆಯಲ್ಲಿಯೂ ಸಿಕ್ಕು ವಂಥಾದ್ದು. ಬಹಳ ಬಲವಾದದ್ದು ನುತ್ತು, ತತ್ಕಾಲ ಸಿಕ್ಕುವಾಗುವದು. ಗಿಡಗಳು ಬೆಳೆಯಲಿಕ್ಕೆ ಇದರಷ್ಟು ಸಹಾಯ ಕಾರಿಯಾದದ್ದು ಬೇರೆ ಯಾವದನ್ನೂ ಇಲ್ಲ.

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ಫರ್ಮಾರ್ಧಯಾಗಿ ತಾವಿನ ಪತ್ರಿಕೆಗಳ ವರ್ಗೈರೆಗಳಿಗೆ ಈ ಕಛೇರಿಗೆ ವಿಳಾಸ. ದಾರರಿಗೆ ಬರೆಯಬಹುದು

(1) ಎಸ್. ಕೂಪರ್ ಅಂಡ್ ಸನ್ಸ್,
ನೇಪಿಯರ್ ಬ್ರಿಡ್ಜ್,
ಪೂನ.

(2) ವಿ ಸೈಲ್ ಯಂ. ಯಂ ಪ್ರಸ್ಟ್,
ಬಾಂಬೆ ಸ್ಯಾಲ್ ಕಮಿಟಿ,
ಮಡಿಕೇರಿ.

24—8

ಕೆಮ್ಮುಕೆಪ್ಪಾಸು ಮತ್ತೆಜ್ವರಕ್ಕೆ—ಇದು ಇಂಫ್ಲುಯೆಂಜಾ ಮತ್ತು ಕ್ಷೀಣಸು ಸೇರಿದರೂ ಗುಣವಾಗದಿರುವ ಹಳೆ ಜ್ವರ ದಿನ ಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಕ್ಕೆ ಔಷಧಿಯಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14



ಚೆಂಪಿನ ನೆಪ್ಪ—ಇದು ಪ್ರಮೋದ ಬಾಲ್ಯ ಕೆಟ್ಟ ಮತ್ತೆ ಹಾಕುವುದಕ್ಕೆ ಹೊಗುವುದು, ಮಂಕ್ರಕೆಂಪು ಉರಿ, ಮೂತ್ರ ಹಿಂಡುಗ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ರಕ್ತ ಬರುವುದು, ಮೂತ್ರದಲ್ಲಿ ಧಾರು, ಮುಟ್ಟು ಹೋಗುವುದು, ಆಗಾಗ್ಗೆ ಸುಟ್ಟು ಬರುವುದು, ಮೂತ್ರ ಪಪಿಸುಲ್ಲೆ ಇವುಗಳಿಗೆ ಖಾತ್ರಿಯಿಲ್ಲದಿರುವ ಪೂಮಿ, ವೀರ್ಯದಲ್ಲಿ ಉರಿ, ಬಾಯಾಕಿಸಿ, ಸ್ಪರ್ಶಾಸಕ್ತಿ ಮೂತ್ರ ನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3 ಕ್ಕೆ ರೂ 1—1—6 3—6—0 6—12—0

ರೋಗಿಯ ತಾಪತ್ರಯಗಳಿಗೆ—ತಲೆಯಿಂದ ಹಿಡಿದು ಪಾದದವರೆಗೆ ಕೆಲಸ ಮಾಡುವ ಔಷಧಿಯ ಗುಣವುಳ್ಳ ಔಷಧಿ ಇದು ಹಸಿವು ಹುಟ್ಟಿಸಿ ಆಹಾರವನ್ನು ಚೆನ್ನಾಗಿ ಜೀರ್ಣಮಾಡಿ ಮೈಯಲ್ಲಿ ರಕ್ತ ಹೆಚ್ಚಿಸಿ ಮೈಯಲ್ಲಿ ಶಕ್ತಿ ಕುಂದಿಹೋಗುವದು. ಇತರರಿಲ್ಲ ಎಂದರೆ ಗುಣವಾಗುವುದಕ್ಕೆ ಅಸಾಧ್ಯವಾದ ಹಳೆ, ಕೆಟ್ಟು ನೋವು. ಅಪಸ್ಮಾರ ಖಿನ್ನ ಬಾರದಿರುವುದು, ನೆನಪಿನ ಶಕ್ತಿ ಕುಂದಿಹೋಗುವದು, ಕಣ್ಣಿಗೆ, ಕಿವಿಯಿಂದ ಕೀವು ಸೋರುವುದು ಕೆಮ್ಮು ಉಬ್ಬಸ, ಕೆಮ್ಮ

# ಕೊಡಗು.

ಸರ ೧೯೪೦ನೇ ಇಸವಿ

ಜೂನ್ ತಾ. ೨೦ನೇ ಶುಕ್ರವಾರ.

## ಬ್ಯಾಂಕಿಂಗ್ ಎಂಕ್ವೈರಿ ಕಮಿಟಿಯ ರಿಪೋರ್ಟು.

ಒಟ್ಟು ಹಿಂದೂಸ್ಥಾನದಲ್ಲೆಲ್ಲಾ ಬ್ಯಾಂಕುಗಳ ಅನುಕೂಲತೆ ಎಷ್ಟರ ಮಟ್ಟಿಗೆ ಇದೆಯೆಂಬದನ್ನು ತನಿಖೆ ಮಾಡಲು ಮಧ್ಯವರ್ತಿ ಕಮಿಟಿಯೊಂದನ್ನೂ, ವ್ಯಾಪಾರೀಕ ಕಮಿಟಿಗಳನ್ನೂ ಇಂಡಿಯಾ ಸರ್ಕಾರವು ಕಳೆದ ವರ್ಷ ನೇಮಿಸಿತು. ಕೊಡಗಿನಲ್ಲಿ ಈ ವಿಷಯವನ್ನು ತನಿಖೆಮಾಡಲು ಪ್ರತ್ಯೇಕ ಕಮಿಟಿಯನ್ನು ನೇಮಿಸುವ ಬದಲು ಮದ್ರಾಸ್ ಕಮಿಟಿಯು ಮೂವರೂ, ಕೊಡಗಿನಿಂದ ಇಬ್ಬರೂ ಕೂಡಿದ ಸಬ್‌ಕಮಿಟಿಯೊಂದು ನೇಮಕವಾಯಿತು. ಮದ್ರಾಸು ಕಮಿಟಿಯಿಂದ ಕೊಡಗಿನ ತನಿಖೆಗೆ ಬಂದವರು ಮದ್ರಾಸ್ ಸಹಕಾರಿ ಸಂಘ ಳರಿಜಿಸ್ಟ್ರಾರ್, ಮದ್ರಾಳ್ ಯುನಿವರ್ಸಿಟಿ ಪ್ರೊಫೆಸರಾದ ಪಿ. ಜೆ. ಥೋಮಸ್ ಮತ್ತು ಬಿ. ಮುನಿಸಾಮಿ. ನಾಯಿಡು ಇವರ ಜೊತೆಗೆ ಕೊಡಗಿನ ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಮತ್ತು, ಸೆಂಟ್ರಲ್ ಬ್ಯಾಂಕಿನ ಪೈಸಿಡೆಂಟ್ ರಾವ್ ಬಹದ್ದೂರ್ ಕೋದಂಡ ಅಪ್ಪಯ್ಯನವರೂ ಸಬ ಕಮಿಟಿ ಮೆಂಬರುಗಳಾಗಿ ನೇಮಿಸಲ್ಪಟ್ಟರು. ಕಳೆದ ಫೆಬ್ರವರಿ ತಿಂಗಳಲ್ಲಿ ಇವರು ಕೊಡಗು ದೇಶದ ಕೆಲವು ಕಡೆಗಳನ್ನು ಸುತ್ತಿ ಕೆಲವು ಜನರುಗಳನ್ನು ವಿಚಾರ ಮಾಡಿ ಬಳಿಕ ರಿಪೋರ್ಟು ಕಳೆದ ವಾರ ಪ್ರಕಟವಾಗಿದೆ. ಇವರ ವಿಚಾರಸ್ಸುಗಳನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ

ಕೊಡಗಿನಲ್ಲಿ ಜನರ ಆರ್ಥಿಕ ಸ್ಥಿತಿಯನ್ನು ತಪಶೀಲಾಗಿ ಕಲ್ಪಿಸಿ ಪೋಡಬೇಕೆತ್ತು. ಹಾಗೆ ಪೋಡದೆ ಒಂದೊಂದು ನಾಡಿನಲ್ಲಿ, ಒಂದೊಂದು ಗ್ರಾಮದಲ್ಲಿ ಜನರಿಗೆ ಇರುವ ಸಾಲಬೆಷ್ಟು, ಈ ಸಾಲವು ಯಾರ್ಯಾರಿಗೆ ಕೊಡತಕ್ಕದ್ದು ಯಾವ ಯಾವ ಒಕ್ಕಲು ಮಾಡಿದ ಸಾಲವೆಂತ ಮೊತ್ತ ವಾಲಂಪಸ್ಯಗಾರರುಗಳಿಂದ ರಿಪೋರ್ಟು ತರಿಸಿಕೋಡಿದ್ದಾರೆ. ಜಮಿನ್ದಾರರ ಸಂಘವೂ, ಸೆಂಟ್ರಲ್ ಬ್ಯಾಂಕೂ ಈ ಕಮಿಟಿಗೆ ಅಭಿವ್ಯಾಯ ಕೊಟ್ಟಂತೆ ಒಂದು ಉಪ ಕಮಿಟಿಯ ಮೂಲಕ ಈ ತನಿಖೆಯು ನಡಿಸಲ್ಪಡಬೇಕೆತ್ತು. ಅಂಥಾ ತಪಶೀಲ್ ತನಿಖೆ ಇಲ್ಲದೇನೇ ರಿಜಸ್ಟರಾದ ಸಾಲದ ಪತ್ರಗಳ ಲೆಬ್ಬುದಿಂದಲೂ, ವಾರುವಕ್ಕೆಗಾರರ ರಿಪೋರ್ಟ್‌ಗಳ ಮೇರೆಗೆ ಅಂದಾಜಿನಿಂದಲೂ ಕೊಡಗಿನ ರೈತರ ಸಾಲವು (ಅಸಲು ಮೊತ್ತ) ಮೂವತ್ತು ಲಕ್ಷ ರೂಪಾಯಿ ಇರಬಹುದೆಂತ ವರದಿಯಲ್ಲಿ ಅಂದಾಜು ಮಾಡಲಾಗಿದೆ. ಇದರಲ್ಲಿ ಕಾಫಿ ವ್ಯವಸಾಯಗಾರರು ವರ್ಷ ವರ್ಷ ಪಡೆಯುವ ಸಾಲವು ಸೇರಲಿಲ್ಲ. ಈ ಬಾಬಿನ ತನಿಖೆಯು ಸಂಪೂರ್ಣವಾಗಿ ನಡಿಸಲ್ಪಟ್ಟಿದ್ದಿದ್ದರೆ ಜನರ ಸಾಲವು ಇನ್ನೂ ತುಂಬಾ ಹಚ್ಚಿದೆಯೆಂತ ತಿಳಿದು ಬರುತ್ತಿತ್ತು. ಮೂವತ್ತು ಲಕ್ಷವಾದರೂ ಸಣ್ಣ ಸಾಲವಲ್ಲ. ಒಂದುವರೆ ಲಕ್ಷ ಜನ ಸಂಖ್ಯೆ ಇರುವ ದೇಶದಲ್ಲಿ ಸಾಲವು ಮೂವತ್ತು ಲಕ್ಷವಾದರೆ ಜನರ ಸ್ಥಿತಿಯು ಎಷ್ಟು ಕಡಿಮೆ ದರ್ಜೆಯಲ್ಲಿದೆ ಎಂತ ಊಹಿಸಬಹುದು

ಜನರಿಗೆ ಸಾಲ ದೊರಕುವದಕ್ಕೂ, ಜನರ ಸ್ಥಿತಿ ಉತ್ತಮ ತರಕ್ಕೆ ವಿರಿಸಿಕೊಳ್ಳಲಿಕ್ಕೂ ಕಮಿಟಿಯು ಪೂಡಿದ ತಿಫಾರಸ್ಸುಗಳು ಕೆಲವನ್ನು ವಿಮರ್ಶನೆಮಾಡಲಾಗಿದೆ. ಕೃಷಿ ಉತ್ಪತ್ತಿಯನ್ನು ರೈತರಿಗೆ ಹಣದ ಆಕರವಿರುವಾಗ ಒಂದೇ ಸಮಯದಲ್ಲಿ ಮಾರಾಟ ಮಾಡುವದರಿಂದ ರೈತರಿಗೆ ದೊರೆಯುವ ದರೆಯು ಬಹಳ ಕಡಿಮೆಯಾಗುತ್ತದೆ. ಈ ಬಗ್ಗೆ ಕೃಷಿ ಉತ್ಪತ್ತಿಯನ್ನು ಠೇಖರಿಸಿ ಮಾರುವ ಮಂಡಗಳನ್ನು ವರ್ಪಡಿಸಬೇಕಂದು ಇವರೊಂದು ತಿಫಾರಸ್ಸಾಗಿದೆ. ಇಂಥಾ ಸಂಸ್ಥೆಗಳು ಅವತ್ಯವಾಗಿ ಆಗಬೇಕು. ಇದಾಗಬೇಕಾದರೆ ಜನರಲ್ಲಿ ಎಗ್ಗಿಟ್ಟು, ಸಹಕಾರ ಬುದ್ಧಿ, ಕೆಲಸ ನಡಿಸುವ ಜೈತಸ್ಥ, ಪ್ರಮಾಣಿಕತೆ ಸಹ ಹೆಚ್ಚಬೇಕು. ಸಹಕಾರಿ ಮಂಡಿ ಸಂಘಗಳನ್ನು ವರ್ಪಡಿಸಿಕೊಂಡು ತುಂಬಾ ಹಣ ಒಮಾಯಿಸಿಕೊಂಡರೆ ಮೆಂಬರುಗಳು ತಂದುಕೊಡುವ ಭತ್ತ ಬಗ್ಗೆರೆ ಉತ್ಪತ್ತಿಗಳ ಮೇಲೆ ಸಾಲ ಕೊಟ್ಟು ಧಾನ್ಯಗಳನ್ನು ಒಳ್ಳೇ ಕೈಯ ಬಂದಾಗ ಮಾರಿ ಹಾಯಿಮಿಡಿಕೊಳ್ಳಬಹುದು.

ಇಂಥಾ ಮಂಡಿ ಸಂಘಗಳನ್ನು ವರ್ಪಡಿಸುವದು ಸುಲಭವಲ್ಲ. ಕಾಫಿವ್ಯಾಂಟರುಗಳ ಸಹಕಾರಿ ಸಂಘದಲ್ಲಿ ಕಾಫಿ ಮಾರಾಟ ಮಾಡುವ ಬೈಲಕ ಸಹ ಮೊಡಿಯಾಂಡಿದ್ದಾರೆ. ಆದರೆ ಆ ಕೆಲಸವನ್ನು ಆ ಪರಿಗೂ ಕೈಕೊಳ್ಳಲೇ ಇಲ್ಲ. ವಿಧಿಯು ತಿಫಾರಸ್ಸುಗಳಲ್ಲಿ ಹೇಳಿರುವಂತೆ ಈ ಬಾಬಿನಲ್ಲಿ ತಂಡೇತು ಜೊಂದಿದ ಒಬ್ಬ ಅಧಿಕಸೆರನ್ನು ಈ ಸಂಘಗಳನ್ನು ಸ್ಥಾಪಿಸಿ ನಡಿಸಲು ಎರವಾಗಿ ಕೊಡಬೇಕಾದದ್ದು ಬಹಳ ಅವತ್ಯ.

ದೇಶದಲ್ಲಿ ಸಾಲ ದೊರೆಯದೆ ಇರಲೂ ಬಡ್ಡಿ ದರ ಹೆಚ್ಚಾಗಿರಲೂ ಒಮ್ಮ ಭೂಮಿ ಸರಾಧೀನ ಮಾಡಕೂಡುವಿಂತ ಊ, ಯಾವ ಭೂಮಿಯು ಮೈಸಾಲಕ್ಕೆ ಈಡಾಗಬಾರದೆಂತ ಊ ಇರುವ ಖಾನೂನು ಒಂದು ಕಾರಣವೆಂತ ವರದಿಯಲ್ಲಿ ಅಲ್ಲಲ್ಲಿ ಬರೆದಿದೆ. ಈ ಕಾರಣವೇನೇನೋ ಕೆಲವು ಮಟ್ಟಿಗೆ ನಿಜವಾದ್ದೇ. ಆದರೆ ಅದನ್ನು ಪರಿಹರಿಸಲು ವರದಿಯು ಮೊಡಿರುವ ತಿಫಾರಸ್ಸಿಗೆ ದೇಶದಲ್ಲಿ ಸರ್ವಸಮ್ಮತವಾಗುವದು ಸಾಧ್ಯವಿಲ್ಲ. ಜಮ್ಮದ ಭೂಮಿಯನ್ನು ಸೆಕಾರಿ ಸಂಘಗಳಿಗೆ ಎಲ್ಲಾ ನ್ಯಾಯವಾದ ಸಾಲಗಳಿಗೆ ಗಿರ್ನಿಕೊಡುವ ಸ್ವಾತಂತ್ರ್ಯವಿರಬೇಕೆಂತಲೂ ಹಾಗೆ ಗಿರ್ನಿ ಕೊಡಬೇಕಾದರೆ ಪ್ರತಿಸಿ ತಿಯೂ ಕಮಿಶನರ ಸ್ಯಾಂಕ್ಷನ್ ಇರಬೇಕಿಲ್ಲವಾಗಿಯೂ ಹರಾಜು ಮಾಡುವಾಗ ಮೊತ್ತ ಕಮಿಶನರ ಸ್ಯಾಂಕ್ಷನ್ ಇದ್ದರೆ ಸ ಕಂತಲೂ ಸಹಕಾರಿ ಸಂಘಗಳ ಮೈಸಾಲಕ್ಕೆ ಭೂಮಿಯು ಈಡಾಗಬೇಕಂತಲೂ, ಗಿರ್ನಿಯಾದ ಭೂಮಿಯನ್ನು ಸಹಕಾರಿ ಸಂಘಗಳೇ ಮಾರುವ ಹಕ್ಕಿರಬೇಕೆಂತಲೂ ತಿಫಾರಸ್ಸುಗಳಿವೆ. ಇವೆಲ್ಲವೂ ಜರ್ಜಾಸ್ತಿದವುಗಳಾಗಿವೆ. ಸಹಕಾರಿ ಸಂಘಗಳಿಗೆ ಎಲ್ಲಾ ತರದ ಸಾಲಕ್ಕೂ ಜಮ್ಮದ ಭೂಮಿಯನ್ನು ಕೊಡಬಾರದೆಂತ ಅಭಿವ್ಯಾಯವಿದ್ದರೂ ಅದು ಅಷ್ಟೊಂದು ಸಕಾರಣವಾದದ್ದಲ್ಲ. ಕಮಿಶನರ ಮಂಜೂರಾತಿ ಸ್ಯತಿಯೊಂದು ಸಾರಿ ಬೇಕೆಂಬ ರೂಲಿನಿಂದ ಸಾಲದೊರೆಯಲು ಕುಬಾ ತಡವಾಗುವದೇನೋ ನಿಜ. ಈ ವಿಷಯವನ್ನು ಜಮ್ಮದ ರೈತರು ಚೆನ್ನಾಗಿ ಯೋಚಿಸಿ ತಮ್ಮ ಅಭಿವ್ಯಾಯವನ್ನು ಕೊಡಬೇಕಾಗಿದೆ. ಗಿರ್ನಿಯಿಲ್ಲದೆ ಭೂಮಿಯನ್ನು ಸಾಲಕ್ಕೆ ಈಡುಮಾಡುವ ತಿಫಾರಸ್ಸನ್ನೂ ದೇಶವು ಅಂಗೀಕರಿಸಬಾರದು. ಸಂಘಗಳಿಗೆ ಗಿರ್ನಿಯಾದ ಭೂಸ್ಥಿತಿಯನ್ನ ಸಂಘಗಳಿಗೆ ಸೂರಾಟ ಮಾಡುವ ಹಕ್ಕ ಇರುವಂಥಾದ್ದು ಬಹಳ ಅವಾಯಕರ.

ಬ್ಯಾಂಕಿನ ಹಣವನ್ನು ಖುಜಾನೆಯಲ್ಲಿ ಇಡುವ ಅನುಕೂಲತೆ ಮತ್ತು ಸರಕಾರಿ ಸಾಲಗಳ ಬಾಕಾರುಗಳ ಆಫಾರದ ಮೇಲೆ ಖುಜಾನೆಯಿಂದ ಸಾಲ ಕೊಡುವ ಶರತ್ತೂ ಸಹಕಾರಿ ಸಂಘಗಳ ಮನೆಜರ್‌ರ್‌ಗಳಿಗೆ ಆರ್ಥ ಚಾರ್ಜು ಮಾಡಬೇಕೆನ್ನುವದೂ ಒಳ್ಳೇ ತಿಫಾರಸ್ಸುಗಳಾಗಿವೆ.

ಲ್ಯಾಂಡ್ ಮೊರ್ಗೇಜ್ ಬ್ಯಾಂಕನ್ನು ವರ್ಪಡಿಸಬೇಕೆಂತ ಊ ಇದರಲ್ಲಿ ಸರಕಾರವು 50,000 ರೂಪಾಯಿಗಳ ಡಿಬೆಂಚರ್ಸ್ ನ್ನು ತೆಗೆದು ಕೊಳ್ಳಬೇಕೆಂತಲೂ ಒಳ್ಳೇ ಸಲಹೆಗಳಿವೆ. ಈ ವಿಷಯದಲ್ಲಿ ಜನರ ಮತ ಭಂದಮಿಲ್ಲದಿದ್ದರೂ ಮತ್ತು ಈ ವಿಷಯದಲ್ಲಿ ಜನರು ತಮ್ಮ ಅಭಿವ್ಯಾಯವನ್ನು ಒಂದೂವರೆ ವರ್ಷಕ್ಕೆ ಮೊದಲೇ ಸೂಚಿಸಿದ್ದರೂ ಸರಕಾರವು ಇನ್ನೂ ಗನು ಸ ಕೊಡದಿರುವದು ವಿಷಾದಕರ. ಇನ್ನಾದರೂ ತಡಮೂಡದೆ ಈ ಕಾರ್ಯವನ್ನು ಸರಕಾರವು ಕೈ ಕೊಳ್ಳಬೇಕಂತ ಅಭಿವ್ಯಾಯ ಪಡುತ್ತೇನೆ.

ವೀರರಾಜಪೇಟೆಯಲ್ಲಿ ಒಂದು ಬ್ಯಾಂಕಾಗಲೀ, ಬ್ಯಾಂಕಿನ ಶಾಖೆಯಾಗಲೀ ಇರಬೇಕೆಂತ ಅಭಿವ್ಯಾಯಪಟ್ಟಿದ್ದಾರೆ. ಇದು ಬಹಳ ಅವತ್ಯವಾದ ಸಂಗತಿಯಾಗಿದೆ ಕೊಡಗಿನಲ್ಲಿ ಒಂದು ಬ್ಯಾಂಕ್ ಇರಬೇಕೆಂತ ಜವಿನ್ದಾರರ ಸಂಘವು ಅನೇಕ ವರ್ಷಗಳಿಂದ ಕೇಳಿಕೊಳ್ಳುತ್ತಿತ್ತು. ವರದಿಯಲ್ಲಿ ಹೇಳಿರುವಂತೆ ಸಮುದ್ರ ಕಿನಾರೆಳ ವ್ಯಾಪಾರಿಗಳಿಂದ ಹಣವನ್ನೆ ತರಿಸುವದೂ, ದೇಶದಿಂದ ಹೊರಗೆ ಹಣ ಕಳುಹಿಸುವದೂ ತಕ್ಕ ಮಟ್ಟಿಗೆ ಆಗುತ್ತಲಿವೆ ಈ ತರದ ಹಣದ ಚಲಾವಣೆಗೂ, ಜನರಿಗೆ ಸಾಲ ದೊರೆಯಲಿಕ್ಕೂ ಬ್ಯಾಂಕಿನ ಅವತ್ಯಕತೆ ಇದೆ. ಸೆಂಟ್ರಲ್ ಸಹಕಾರಿ ಬ್ಯಾಂಕಿನಲ್ಲಿ ಕರೆಂಟ್ ಎಕೌಂಟ್ ಇಡಬೇಕಾದ ಕಾಲ ಬಂದಿದೆ. ಈ ವರ್ಷಾದು ಮೂಡಿದರೆ ವ್ಯಾಪಾರಗಾರರಿಗೆ ಕೆಲವು ಮಟ್ಟಿನ ಸಹಾಯ ಮಾಡಿದಂತಾಗುವದು.

ಅಳತೆಗಳ ವಿಷಯದಲ್ಲಿ ಕಮಿಟಿಯವರು ನೂಡಿರುವ ತಿಫಾರಸ್ಸುಗಳಿಗೆ ದೇಶವು ಕಮಿಟಿಗೆ ಧನ್ಯವಾದಗಳನ್ನು ಕೊಡುತ್ತದೆ. ಅಳತೆಗಳನ್ನು ಮುಖ್ಯವಾಗಿ ಪರೆಯನ್ನು ಕ್ಲುಪ್ತಪಡಿಸಿ ಕೊಡಬೇಕೆಂತ ದೇಶವು ಅನೇಕ ವರ್ಷಗಳಿಂದ ಕೇಳುತ್ತಿದ್ದರೂ, ಸರ್ಕಾರವು ಇದರ ಅವತ್ಯಕತೆಯನ್ನು ಒಪ್ಪುತ್ತಿದ್ದರೂ ಏನೇ ಪ್ರಯೋಜನಕರವಾದ ಕೆಲಸ ಈ ವರೆಗೆ ನಡೆದಿರುವದಿಲ್ಲ. ಅಳತೆಗಳನ್ನು ನಿರಮು ಮಾಡಿ ಅಂಥಾ ನಿರಮು ಅಳತೆಗಳ ವಿರೋಧವಾಗಿ ನಡೆದುಕೊಳ್ಳುವವರನ್ನು ಶಿಕ್ಷೆಗೆ ಗುರಿಪಡಿಸಲೂ ಸಿಬ್ಬಂದಿ ಇಡಬೇಕಂತಲೂ ಒಳ್ಳೇ ಸಲಹೆಗಳಿವೆ. ತಡ ಮಾಡದೆ ಸರ್ಕಾರವು ಈ ವಿಷಯಕ್ಕೆ ಸಿಗ ಕೊಡಬೇಕೆಂತ ಅಪೇಕ್ಷಿಸುತ್ತೇನೆ.

## ಆ ದೊಡ್ಡ ಶೋಧನ.

(ಮಹಾತ್ಮ ಗಾಂಧಿಯವರ ಶಿಷ್ಯರಾದ ವಿನೋಬಾಜಿಯ ಎಂಬ ಅಂಗ್ಲೇಯ ಸ್ತ್ರೀಯು 'ಯಂಗ್ ಇಂಡಿಯ' ದಲ್ಲಿ ಬರೆದ ಲೇಖನದ ಸಾರಾಂಶ)

"ಇದು ಬಯಶಃ ನನ್ನ ಕತೆಯು ಮತ್ತು ದೊಡ್ಡದಾದ ಶೋಧನ"— ಈ ರೀತಿಯಾಗಿ ಗಾಂಧಿಯವರು ಅನೇಕ ಸಾರಿ ಈಗಿನ ಹೋರಾಟವನ್ನು ಕುರಿತು ಹೇಳಿರುವರು. ಈಗಿನ ಚಳವಳಿಯ ಅರ್ಥವನ್ನು ಗ್ರಹಿಸಬೇಕಾದರೆ ನಾವು ಈ ಮಾತ್ಯ ದ ವಿಷಯ ಸ್ಪಲ್ಪ ಅಲೋಚನೆ ಮಾಡಬೇಕು.

ಇದು ಯಾವ ಶೋಧನೆ? ಇದು ಎಶ್ಟೆ ಮತಿಗಳೂ ಸಾರಿ ಸಾರಿ ಹೇಳಿರುವ ಅನಾದಿ ಸಿದ್ಧವಾದ ತತ್ವಗಳನ್ನು ಸ ವರ್ತಾಚರಣೆಯಲ್ಲಿ ತರುವಂಥಾದ್ದು —ದ್ವೇಷವನ್ನು ಪ್ರೇಮದಿಂದ ಜಯಿಸುವುದು; ಹಿಂಸೆಯನ್ನು ಅಹಿಂಸೆಯಿಂದ ಗೆಲ್ಲುವುದು; ಅಸತ್ಯವನ್ನು ಸತ್ಯದಿಂದ ಸೋಲಿಸುವುದು.

ಗಾಂಧಿಯವರ ಬೋಧನೆಯು ಯೇಸು ಕ್ರಿಸ್ತನ ಬೋಧನೆಯನ್ನು ಒಳಗೊಂಡಾಗಿ ಹೋಲುತ್ತದೆ. ಗಾಂಧಿಯವರ ಮಹಾ ಶೋಧನೆಯು ಕ್ರಿಸ್ತನ ತತ್ವಗಳ ಸಮರ್ಥನೆಯನ್ನು ಹೋಲುತ್ತದೆ.

ಈಗ ನಾವು ನೋಡುತ್ತಿರುವುದು ಇದು—ಬಲಿಷ್ಠ 'ಕ್ರಿಶ್ಚಿಯನ್' ಸಾಮ್ರಾಜ್ಯವು ತನ್ನ ಎಲ್ಲಾ ಶಕ್ತಿಯನ್ನೂ ಪ್ರಯೋಗಿಸಿ ಕ್ರಿಸ್ತನ ತತ್ವಗಳನ್ನು ವ್ಯಕ್ಕಪಡಿಸುತ್ತಿರುವಂಥ ನತ್ಯಾಗ್ರಹ ಚಳವಳಿಯನ್ನು ಮುರಿದು ಹಾಕಲು ಪ್ರಯತ್ನ ಪಡುತ್ತಿರುವುದನ್ನು.

ಈ ಬಲಿಷ್ಠ 'ಕ್ರಿಶ್ಚಿಯನ್' ಸಾಮ್ರಾಜ್ಯವು ಹಿಂದೀಯರ ಜೀವ ಸತ್ವವನ್ನು ಹೀರಿ ಕೊಬ್ಬಿರುವುದು. ಈ ಹಿಂದೀಯರು ಹೊಟ್ಟೆಗಿಲ್ಲದೆ ನರಳಿ, ಆ 'ಕ್ರಿಶ್ಚಿಯನ್ನ ರನ್ನು ಕೊಬ್ಬಿಸಿ ಕೊಡಿದೆಂದು ಕೇಳಲು ಅನುಮ ಕಲ್ಲನ್ನು ಕೊಚ್ಚಿರುವರು. ಇಷ್ಟೇ ಅಲ್ಲ. ಅವರು ಬಲಗೆನ್ನೆಗೆ ಹೊಡೆಯಲ್ಪಟ್ಟರು. ಆಗ ಅವರು ತಮ್ಮ ಮುಂದಾಳಿನ ತತ್ವಕನುಸಾರವಾಗಿ ಕಮ್ಮ ಎಡಗೆನ್ನೆಯನ್ನು ಆ 'ಕ್ರಿಶ್ಚಿಯನ್ನ'ರಿಗೆ ತೋಲದರೂ ಅದಕ್ಕೂ ಅವರು ಹೊಡೆದರು ಅದರೂ ಜನರು ಅಧಂರ ನೆಂತೋ ಷಪಡುವರು. ಏಕಂದರೆ, ಗಾಂಧಿಯವರು ಅವರಿಗೆ ಆ ಮೊ ಲಕದಿಂದಲೇ ಕೆಟ್ಟದನ್ನು ಜಯಿಸಬೇಕಾದದ್ದು ಎಂದು ಹೇಳಿರುವರು. ಕೇಡನ್ನು ಕೇಡಿನಿಂದಲೇ ನೀಡು ತೀರಿಸಲು ಯತ್ನಿಸಬಾರದು. ಕೇಡನ್ನು ಕೇಡಿನಿಂದಲೇ ಎದುರಿಸುವುದೇ ಈ ಲೋಕದ ವ್ಯಸನ—ಸಂತಾಪಗಳಿಗೆ ಕಾರಣ. ಇವನ್ನು ಹೋಗಲಾಡಿಸಬೇಕಾದರೆ ಕೆಟ್ಟದನ್ನು ಒಳ್ಳೆಯದರಿಂದ ಗೆಲ್ಲುವ ಶಕ್ತಿಸಬೇಕು; ಹಿಂಸೆಯನ್ನು ಅಹಿಂಸೆಯಿಂದ ಜಯಿಸಬೇಕು.

ಸಂಕಟಪಡುತ್ತಿರುವ ಜನತೆಯ ಉದ್ಧಾರಕ್ಕಾಗಿ ಈ ಜ ಲವಳಿಯನ್ನು ಹೂಡಿರುವಂಥ ಗಾಂಧಿಯವರನ್ನು ಹೆದರಿಕೆಯಿಂದ ಆ 'ಕ್ರಿಶ್ಚಿಯನ್ನ'ರು ಕೊಮ್ಮೆಯ್ದು ಸೆರೆಮನೆಯಲ್ಲಿಟ್ಟಿರುವರು. ಆದರೆ ಗಾಂಧಿಯವರು ನಮ್ಮ ಮೇಲೆ ವಿಶ್ವಾಸವನ್ನೂ, ನಂಬಿಕೆಯನ್ನೂ ಇಟ್ಟಿರುವರು. ನಾವು ಅವರ ಧ್ಯೇಯವನ್ನು ಸಾಧಿಸಬೇಕೆಂದು ಅವರು ನಮ್ಮ ಕೈಯಲ್ಲಿ ಅವರ ಸರ್ವಸ್ವವನ್ನೂ ಇಟ್ಟಿರುವರು. ಹಾಗಾದುದರಿಂದ ನಮ್ಮ ಜವಾಬ್ದಾರಿಕೆಯು ಬಹಳ ದೊಡ್ಡದಿದೆ. ಆದುದರಿಂದ ನಾವು ಈ ಉತ್ಕಟ ಸಂದರ್ಭದಲ್ಲಿ ಬಿದೆಗೆಯಬಾರದು. ಅಹಿಂಸಾ, ಸತ್ಯ, ಧೈರ್ಯ—ನೋಡಲಸೆಯಪೆರಡನ್ನು ನಾವು ಅಡಾಣೆಗೆ ತರುವಾಗ ಮೂರನೆಯದನ್ನು ದೇವರು ಕೊಡುತ್ತಾನೆ. ಅದೆ ಕೊಡನೆ ನಮಗೆ ಜಯವು ಖೊರಕುತ್ತದೆ.

## ಸೇಂದಿ ಸಾರಾಯಿ ಅಂಗಡಿಗಳ ಪಿಕೆಟಿಂಗ್.

(ಸ್ವಂತ ಬಾತ್ಮಿದಾರರಿಂದ)

ಕಳೆದ ವಾರ ಪ್ರಕಟಿಸಿದಂತೆ ಕೊಡಗಿನ ಸತ್ಯಾಗ್ರಹಿಗಳು ಪೊನ್ನಂಪೇಟೆಯಲ್ಲಿ ಈ ತಾ. 10ನೇ ಮಂಗಳವಾರ ಪಿಕೆಟಿಂಗ್ ವ್ಯಾಪಾರಂಭಿಸಿದನ್ನು ಮುಂದರಿಸುತ್ತಾ ಬರುತ್ತಿದ್ದಾರೆ. ಮರುದಿನ ಬೆಳಿಗ್ಗೆ ಸ್ವಯಂಸೇವಕರಲ್ಲಿ ಇಬ್ಬರು ಕಾಯಿಲಸ್ಥರಲ್ಲದೆ ಬಾಕಿಯವರೆಲ್ಲರೂ 8 ಗಂಟೆಗೆ ಅವರ ಶಿಬಿರದಿಂದ ರಾಷ್ಟ್ರೀಯ ಧ್ವಜದಿಂದಗೂಡಿ ರಾಷ್ಟ್ರೀಯ ಗೀತೆಗಳನ್ನು ಹಾಡುತ್ತಾ ಪೇಟೆಯ ಎಲ್ಲಾ ಬೀದಿಗಳಲ್ಲಿ ಮೆರವಣಿಗೆ ಮಾಡಿ ಈ ಕೆಳಗಿನ 8 ಸತ್ಯಾಗ್ರಹಿಗಳು ಸೇಂದಿ ಮತ್ತು ಸಾರಾಯಿ ಅಂಗಡಿಗಳ ಮುಂದೆ ನಿಂತು ನಿಷಾಸೇವನೆ ಮಾಡಬಾರದೆಂದು ಒನರಿಗೆ ಬೋಧನೆ ಹೇಳತೊಡಗಿದರು ಸತ್ಯಾಗ್ರಹಿಗಳು—ಮಾ. ರಾ. ಶ್ರೀ ಗಳಾದ 1. ಅಜ್ಜಮಾಡ ಮಾದಪ್ಪನವರು, 2. ಪಿ. ಯಸ್. ವೆಂಕಟಯ್ಯನವರು, 3. ಕೈಬಿರ ಅಪ್ಪಣ್ಣನವರು, 4. ಅಜ್ಜಿಕುಟ್ಟಿರ ಚಿಣ್ಣಪ್ಪನವರು, 5 ಚೊಟ್ಟೆಕಾಳಪಂಡ ಅಪ್ಪಣ್ಣನವರು, 6. ಮಕ್ಕಿ ಕೃಷ್ಣಯ್ಯನವರು, 7. ನಾಣಮಂಡ ಸುಬ್ಬಯ್ಯನವರು ಮತ್ತು 8. ಪೊನ್ನಪೂಡ ಮಾಚಯ್ಯನವರು. ಮೆ. ಪಿ. ವಾ. ವೆಳ್ಳಪ್ಪನವರು, ಸಾರಾಯಿ ಅಂಗಡಿಯ ಮುಖ್ಯ ಮೆ. ಕೆ. ಸಿ. ಕರುಂಬಯ್ಯನವರು ಸೇಂದಿ ಅಂಗಡಿಯ ಪಿಕೆಟಿಂಗಿನ ಮೇಲುಸ್ತುವಾರಿ ನೋಡುತ್ತಿದ್ದರು. ಸೇಂದಿ ಅಂಗಡಿಯನ್ನು ಬೆಳಿಗ್ಗೆ 8½ ಗಂಟೆಯಿಂದ ಸಾಯಂಕಾಲ 7 ಗಂಟೆ ವರೆಗೆ ಸಾಲ್ಕು ಜನರ ಪ್ರಕಾರ 2 ಗಂಟೆಗೊಮ್ಮೆ ಬದಲಾಯಿಸಿಕೊಂಡು ಪಿಕೆಟ್ ಮಾಡುತ್ತಿದ್ದರು. ಸಾರಾಯಿ ಅಂಗಡಿಯನ್ನು ಬೆಳಿಗ್ಗೆ 11 ಗಂಟೆಯಿಂದ ರಾತ್ರಿ 8 ಗಂಟೆ ವರೆಗೆ ಇಬ್ಬರ ಪ್ರಕಾರ 2 ಗಂಟೆಗೊಮ್ಮೆ ಬದಲಾಯಿಸಿಕೊಂಡು ಪಿಕೆಟ್ ಮಾಡುತ್ತಿದ್ದರು. ರಾತ್ರಿ 7 ಗಂಟೆಗೆ ಸೇಂದಿ ಅಂಗಡಿಯಿಂದ ಮೆರವಣಿಗೆ ವಾಪಸು ಹೊರಟು ಸಾರಾಯಿ ಅಂಗಡಿ ಸಮೀಪದ ಬಸವನಗುಡಿಯಲ್ಲಿ 8 ಗಂಟೆ ವರೆಗೆ ರಾಷ್ಟ್ರೀಯ ಗೀತೆಗಳನ್ನು ಹಾಡುತ್ತಾ ಇದ್ದು ನಂತರ ಎಲ್ಲರೂ ಶಿಬಿರಕ್ಕೆ ಮೆರವಣಿಗೆಯಿಂದ ವಾಪಸು ಬರುತ್ತಿದ್ದರು. ಬಸವನ ಗುಡಿಯ ಮುಂದೆ ಗೀತೆಗಳನ್ನು ಕೇಳಲು ಜನರು ಗುಂಪುಕಟ್ಟುತ್ತಿದ್ದರು.

(೩ನೇ ಪುಟವಲ್ಲಿ ಮುಂದುವರಿದಿದೆ)

### ಕೊಡಗಿನ ಬ್ಯಾಂಕಿಂಗ್ ಎಂಕ್ವೈರಿ ಉಪ ಸಮಿತಿಯು ಮಾಡಿರುವ ಶಿಫಾರಸ್ಸುಗಳ ಸಾರಾಂಶ.

(1) ಭಾವಿಗಳನ್ನು ತೋಡಿ ನೀರು ಸೌಲಭ್ಯಾರ್ಥಿಗೆ ಎಷ್ಟು ಇದೆ ಇದಕ್ಕೆ ಸಾಲ ಕೊಡಬಹುದು (2) ಸಣ್ಣಾರೂ ಕೈಗಳಿಗೆ ಕೃಷಿ ಉತ್ಪತ್ತಿಗಳನ್ನು ಶೇಖರಿಸಿಡಲು ಮಂಡಿಗಳನ್ನು ವ್ಯವಸ್ಥೆ ಮಾಡಬೇಕು. (3) ಅಂಥಾ ಮಂಡಿಗಳು ಇರಿಗಳ ಹತ್ತಿರ ಇರಬೇಕು. ಆದರೆ ಚಾರಿಯಾಗಿ ಕಟ್ಟಿಸಬೇಕು. (4) ಸ್ವಂತ ಹಣದಿಂದಾದರೂ, ಸರ್ಕಾರದ ಸಾಲದಿಂದಾದರೂ ಕಟ್ಟಿಸಬೇಕು. (5) ಅಂಥಾ ಮಂಡಿಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ, ಕಕ್ಕಿಂಬಂತೆ ಮೇಲ್ವಿಚಾರಣೆಯ ಮೂಲಕ ನಡಿಸಬೇಕು. (6) ಇಂಥಾ ಮಂಡಿಗಳನ್ನು ನಡಿಸಲು ಅವಶ್ಯವಿದ್ದರೆ ಸರಕಾರವು ಒಬ್ಬ ಉದ್ಯೋಗಸ್ಥನನ್ನು ಏರ್ಪಾಡಾಗಿ ಕೊಡಬೇಕು. (7) ಇಂಥಾ ಮಂಡಿ ಸಂಘಗಳು ಕೃಷಿ ಉತ್ಪತ್ತಿಯ ಆಧಾರದ ಮೇಲೆ ಅಡ್ವಾನ್ಸು ಕೊಡಬೇಕು. (8) ಪ್ರೈವೇಟ್ ಕಂಟ್ರಾಕ್ಟ್ ಮೂಲಕವೇ ಪ್ರಾರಂಭದಲ್ಲಿ ಮೂರಾಬ ಮಾಡಬೇಕು. ಕ್ರಮೇಣ ದೊಡ್ಡ ದೊಡ್ಡ ಶಾಟ್‌ಗಳಲ್ಲಿ ರಬ್ಬಾವಾರಾಗಿ ಮೂರುವ ವಿಸ್ತಾರಿಂದ ಮಾಡಬೇಕು. (9) ಮಂಡಿಗಳಿಗೆ ಸೆಂಟ್ರಲ್ ಬ್ಯಾಂಕಿನಿಂದ ಸಾಲ ಕೊಡಬೇಕು (10) ತೀರ್ಪುಪಲ್ಲಿ ಹಾಗಾಗುವ ಕಿತ್ತಳೆ ಹಣ್ಣು ಮುಂತಾದ ಉತ್ಪತ್ತಿಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ ಕೇಂದ್ರೋನ್ನಿಯೊದಲ್ಲಿ ಜಾರಿಯಲ್ಲಿರುವ ರೀತಿಯಲ್ಲಿ ಸೂರಂಟ ಮಾಡಬೇಕು. (11) ರಸ್ತೆಗಳು ಅಭಿವೃದ್ಧಿಯಾಗಬೇಕು. (12) ಸಣ್ಣ ಕೈಲ್‌ವೇಗಳಿಗೆ ಸುಲಭ ಧನವಂತರಿ ಇಲೆಕ್ಟ್ರಿಕ್ ಟ್ರಾಮ್‌ವೇಗಳನ್ನು ಏರ್ಪಡಿಸುವ ಯೋಜನೆ ಮಾಡಬೇಕು. (13) ವೀರರಾಜಪೇಟೆಯಲ್ಲಿ ಒಂದು ಬ್ಯಾಂಕ್ ಅಥವಾ ಬ್ಯಾಂಕಿನ ಶಾಖೆಯನ್ನು ಏರ್ಪಡಿಸಬೇಕು (14) ಕ್ಲೋಸ್ ಅಳತೆಗಳನ್ನು ನಿರ್ಣಯಿಸಬೇಕು (15) ತೂಕ ಮತ್ತು ಅಳತೆಯನ್ನು ಅಜಮೂಯಿಸ ಪ್ರೋಸಿಕ್ಯೂಶನ್ ನಡಿಸಲು ಏರ್ಪಾಡು ಇರಬೇಕು. (16) ಜಪಾತೆಯಲ್ಲಿ ಚೆಕ್ಕ್‌ಗಳನ್ನು ಕ್ಯಾಶ್ ಮಾಡಬೇಕು (17) ಜಮ್ಮು ಭೂಮಿ ಗಿರ್ವಿಮೋರೆ ಎಲ್ಲಾ ಒಳ್ಳೇ ಉದ್ದೇಶಗಳಿಗೆ ಸಾಲ ಕೊಡಬೇಕು. (18) ಮದುವೆ ವಗೈರೆ ವಿಶೇಷ ಕಾರ್ಯಗಳಿಗೆ ಅಗತ್ಯವಿರುವ ಖರ್ಚು ಕಡಿಮೆ ಮಾಡಲು ಪ್ರಯತ್ನಿಸಬೇಕು. (19) ಸಹಕಾರಿ ಕೆಲಸಗಾರರಿಗೆ ಹೆಚ್ಚಿನ ತರಬೇತಿ ಕೊಡಬೇಕು. (20) ಮದ್ರಾಸಿನ ತರಬೇತಿ ಸಂಸ್ಥೆಗಳಿಗೆ ಕಳಿಗೆ ದರ್ಜೆಯ ಆಫೀಸರುಗಳನ್ನು ತಂಬೇತಿಗೆ ಕಳುಹಿಸಬೇಕು. (21) ಸಹಕಾರಿ ಸಂಘಗಳಲ್ಲಿ ಹೆಚ್ಚಿನ ಅಧಿರುಚಿ ಗ್ರಾಮವಾಸಿಗಳಿಗೆ ಹುಟ್ಟುವಂತೆ ಏರ್ಪಾಡು ಮಾಡಬೇಕು. (22) ಮೂಲ ಸಹಕಾರಿ ಸಂಘಗಳು ಆಗಾಗ್ಗೆ ಜನರ ವಿಚಿಂಗ್ ನಡಿಸ್ತಿರಬೇಕು (23) ಸಹಕಾರಿ ಸಂಸ್ಥೆಗಳ ಮೂಲಕ ಕೃಷಿ ಅಭಿವೃದ್ಧಿಯ ಏರ್ಪಾಡು ಮಾಡಬೇಕು. (24) ಬ್ಯಾಂಡಾ ಮೊರ್ಗೇಜ್ ಬ್ಯಾಂಕ್ ಒಂದನ್ನು ಸ್ಥಾಪಿಸಲು ಪ್ರಯತ್ನಿಸಬೇಕು. (25) ಜಮ್ಮು ಭೂಮಿ ಗಿರ್ವಿಮೊಡಲು ಸ್ತ್ರಿಯೊಂದು ಸಾಲಿಯೂ ಕಮಿಶನರವರ ನಂಜಾರಾತಿ ದೇಶಂತ ಇರಬಾರದು (26) ವೈಶಾಲಶಕ್ತಿಗಿಯೂ ಭೂಮಿ ಹರಾಜಾಗಬೇಕು. (27) ಯಾವ ಭೂಮಿಯು ಮೂರಾಟವಾಗಬೇಕಾದರೂ ಕಮಿಶನರವರ ಮಂಜೂರಾತಿ ಪಡೆಯಬೇಕು (28) ಸಹಕಾರಿ ಸಂಸ್ಥೆಗಳಿಗೆ ತಮಗೆ ಗಿರ್ವಿಯಾದ ಭೂಮಿಯನ್ನು ಮೂರಾಟಮಾಡುವ ಹಕ್ಕಿರಬೇಕು. (29) ಜಮ್ಮ ಭೂಮಿ ಮೂರಾಟವಾದಾಗ ಇನ್ನಿಬ್ಬ ಜಮ್ಮಗಾರನು ಕೊಂಡುಕೊಂಡರೆ ಅದರ ಜಮ್ಮ ಹಕ್ಕು ತಪ್ಪಬಾರದು (30) ಜಮ್ಮು ಭೂಮಿ ಮೂರಾಟಕ್ಕೆ ಬಂದಾಗ ಮನೆಯವರು ಊಂಡುಕೊಳ್ಳಲು ಇಚ್ಛೆಯಿದೆಯೋ ಎಂತ ಕೇಳಿಬೇಕಾದ ಇರಬಾರದು. (31) ಬ್ಯಾಂಡಾ ಮೊರ್ಗೇಜ್ ಬ್ಯಾಂಕಿನಲ್ಲಿ ಸರಕಾರವು 50000 ರೂ. ನಷ್ಟ ಬಾಜರ್ ಕೊಂಡುಕೊಳ್ಳಬೇಕು. (32) ಟ್ರಸ್ಟು ಧನಗಳನ್ನು ಬ್ಯಾಂಡಾಮೊರ್ಗೇಜ್ ಬ್ಯಾಂಕ್ ಮತ್ತು ಸೆಂಟ್ರಲ್ ಬ್ಯಾಂಕಿನಲ್ಲಿ ಆಂಗೀಕರಿಸಬೇಕು (33) ಬ್ಯಾಂಡಾ ಮೊರ್ಗೇಜ್ ಬ್ಯಾಂಕಿನ ಸರವಾಗಿ ಭೂಮಿ ಬೆಲೆ ಯಕ್ಕಡಾರಿಕೆ ಮುಂತಾದ್ದನ್ನು ಅಜಮೂಯಿಸಲು ಒಬ್ಬ ಸರಕಾರಿ ಆಧಿಕಾರಿ ಇರಬೇಕು. (34) ಸುರುವಿನಲ್ಲಿ ಈ ಆಫೀಸರ ಕೆಲಸಕ್ಕೆ ಬ್ಯಾಂಕಿನಿಂದ ಪಣ ಕೇಳಬಾರದು. (35) ಕೃಷಿ ಉತ್ಪತ್ತಿಯನ್ನು ಅಮೇರಿಕಾದಲ್ಲಿ ಪ್ರಯೋಜನಕರವಾಗುವಂತೆ ಮೂರಾಟಮಾಡುವ ರೀತಿಯನ್ನು ತಿಳಿದುಕೊಳ್ಳಬೇಕು. (36) ಚಿಕ್ಕ ಕಾಫಿ ಪ್ಲಾಂಟರುಗಳ ಸಹಾಯಕ್ಕೆ ಸಹಕಾರಿ ಮೂರಾಟದ ಸಂಸ್ಥೆಯನ್ನು ಏರ್ಪಾಡಿಸಬೇಕು. (37) ಅಂಥಾ ಸಂಸ್ಥೆಗೆ ಹಣದ ಸಹಾಯ ತುಂಬಾ ಬೇಕು. (38) ಅದಕ್ಕೆ ಪ್ರತ್ಯೇಕ ಪೆಂಡಿ ಇರಬೇಕು. (39) ಫಸಲು ಗಿರ್ವಿ ಮೇಲೆ ಹಣ ಕೊಟ್ಟು ಸಲಸನ್ನು ವಂಡಿಯಲ್ಲಿ ತೀಪಾರಿಸಿ ಇಡಬೇಕು. (40) ಉತ್ಪತ್ತಿಯನ್ನು ದರ್ಜೆವಾರು ವಿಂಗಡಿಸಿ ಮೂಲು ಒಳ್ಳೇದಾಗಿ ಇಡಲು ವ್ಯವಸ್ಥೆ ಇರಬೇಕು. (41) ಈ ಸಂಸ್ಥೆಯು ಪ್ಲಾಂಟರುಗಳಿಗೆ ದೇಶಾದ ಸಾಮಾನುಗಳನ್ನು ಒದಗಿಸಬೇಕು. ಎಲ್ಲಾ ಕೋಟುಗಳನ್ನು ಸಂರ್ದಿಸಬೇಕು. (42) ಕಾಫಿ ಕಟ್ಟು ಜೊತ್ತೆ ರಬರಿನಲ್ಲಿ ಮೂರಾಟಮಾಡುವ ವಿಚಾರವು ಮಾಡಬೇಕು. (43) ಸೆಂಟ್ರಲ್ ಬ್ಯಾಂಕಿನ ಮೆಂಬರುಗಳಿಗೆ ಕರೆಂಟ್ ಎಕೌಂಟ್ ಇಡಲು ಅನುಕೂಲಮಾಡಿಕೊಡಬೇಕು. (44) ಸೆಂಟ್ರಲ್ ಬ್ಯಾಂಕಿನಲ್ಲಿ ಮೆಂಬರುಗಳಿಗೆ ಸೇವಿಂಗ್ಸ್‌ಬ್ಯಾಂಕ್ ಲೆಖ್ಖ ಇಡಲು ಅವಕಾಶಕೊಡಬೇಕು. (45) ಟೌನ್ ಸೊಘಗಳಲ್ಲಿ ಮೆಂಬರುಗಳು ಮೊಹಲೂನ ಡಿವಾಲ್ ಇಡಲು ಅವಕಾಶಕೊಡಬೇಕು. (46) ಸೆಂಟ್ರಲ್ ಬ್ಯಾಂಕಿನ ಹಣ ಬಜಾನೆಯಲ್ಲಿ ಇಡಲು ಅವಕಾಶ ಕೊಡಬೇಕು. ಬಜಾನೆ ಮೀರಿದ ಸಾಲ ಸೆಹ ಕೊಡಬೇಕು. (47) ಗ್ರಾಮ ಸೊಘಗಳೆಲ್ಲಾ ಸೆಂಬಿಂಗ್ಸ್ ಬ್ಯಾಂಕ್ ಲೆಖ್ಖ ಸಾಲ್ಸುನಿದ್ದಲ್ಲೆಲ್ಲಾ ಇಡಬೇಕು. (48) ಇನ್ ಕಮ್‌ಟ್ಯಾಕ್ಸಿನ ವಿನಾಯಿತಿಯು ಇನ್ನು ಮುಂದಕ್ಕೂ ಇರಬೇಕು. (49) ಬಜಾನೆ ಮೂಲಕ ಹಣ ಕಳುಹಿಸಲು ಇರುವ ವಿತಿಯನ್ನು ತೆಗೆಯಬೇಕು. (50) ಸ ಸೊಘಗಳು ಮನಿಆರ್ಡರ್ ಮೂಲಕ ಹಣ ಕಳುಹಿಸುವಾಗ ಅರ್ಧ ಚಾರ್ಜು ವಿತ್ತ ತೆಗೆದುಕೊಳ್ಳಬೇಕು. (51) ಯುಕ್ಯೂರಿಯಸ್ ಲೋನ್ಸ್ ಆಕ್ಟ್‌ನ್ನು ಹೆಚ್ಚಾಗಿ ಉಪಯೋಗಿಸಬೇಕು.

---

### ಗೋಣಿಕೊಪ್ಪಲು ಹಸುರುವಾಣಿಗಳ ಪ್ರದರ್ಶನ.

(ಮೇ 30ರ ಸಂಚಿಕೆಯಿಂದ ಮುಂದುವರಿದ್ದು.)

ಆದರೆ ಇಂತಹ ವ್ಯವಸಾಯಗಳಿಗನ್ನು ಕೈಕೊಂಡವರಿಗೆ ಅನೇಕ ತೊಂದುತೊರತೆಗಳು ಕೋರಿ ಬರಬಹುದು. ಒಂದನೆಯದಾಗಿ ಕೂಲಿ ಆಳುಗಳು ದೊರಕುವ ತೊಂದರೆ. ಈಗಿನ ರೈತನು ತನ್ನ ಆಸಿಗಳಿಗೆ ವರ್ಷಕ್ಕೆ ಬರೆ 4 ತಿಂಗಳು ಕೆಲಸವನ್ನು ಕೊಡುತ್ತಾನೆ. ಉಳಿದ ತಿಂಗಳುಗಳಲ್ಲಿ ತಾನು ಯಾವ ಕಸಬನ್ನು ಮಾಡಲು ಪ್ರಯತ್ನಿಸಿದೆ ಆಳುಗಳಿಗೆ ಕೆಲಸವನ್ನು ಕೊಡದೆ ಕೊನೆಗೆ ಸಮ್ಮಸೆ ಕಂಡಿಸುವ ಅನಿಗಳಿಗೆ ಅನ್ನ ಜೀವನಕ್ಕೆ ತಕ್ಕ ಸಂಬಳ ಸೆಹ ಕೊಡಲು ಇಚ್ಚಿಸದೆ ಇರುವುದರಿಂದಲೇ ಈಗಿನ ಆಳುಗಳು ಒಮ್ಮೆ ಇದ್ದ ಸ್ಥಳದಲ್ಲಿ ಜೀ ಹೆಚ್ಚು ಕಾಲ ಇರದೆ ಬೇರೆ ಯಜಮಾನರ ಬಳಿಗೆ ಬೆಂ ಹೊಗಲು ಬಯಸುತಿದೆ. ಇವರ ಒಡಲು ಪ್ರತಿಯೊಬ್ಬ ಯಜಮಾನನೂ ತನ್ನ ತನ್ನ ಆಳುಗಳಿಗೆ ವರ್ಷದ ಪ್ರತಿ ದಿನವೂ ಕೆಲಸವನ್ನು ಕೊಟ್ಟರೆ, ಅವರು ನಿಶ್ಚಯವೂ ದುಂದು ತನ್ನ ಜೀವನವನ್ನು ಕಳಕಳಿಲ್ಲದೆ ಕಳೆದು ಈಗಿನ ಆಳುಗಳ ತೊಂದರೆಯ ಗೋಳಾಟವು ನಿಂಗುವುದೆಂದು ದೃಢವಾಗಿ ನಂಬುತ್ತೇನೆ.

ಎರಡನೆಯ ತೊಂದರೆ—ಕೆಲವು ಸೇವನೊಂಗಳು ಬೆಳೆಗೆ ಕಾಲದಲ್ಲಿ ತಾವು ಒಂದು ಸಣ್ಣ ತರಕಾರಿ ತೋಟವನ್ನು ಸಹ ವಂಡಿಕೊಳ್ಳದೆ, ಇತರರು ತರಕಾರಿ ತೋಟ ಮಾಡಿದರೆ ಅವರು ನಿಶ್ಯೆಷ ನೀಚ ಜಾತಿಯ ಕೂಲಿಕಾರರಂತೆ ಕೆಲಸ ಮಾಡುತ್ತಾರೆಂದು ಹೇಳುವ ದು; ಆಧುನಿಕ ಅನುಭವಿ ತಾವು ತನ್ನ ಕಷ್ಟಾಜಿತವಾಗಿ ಬೆಳೆಯಿಸಿದ ಪದಾರ್ಥಗಳನ್ನು ನೂರಾರರ ವೆಂದಲೆನೆಯ ಸಂಜೆಕೆಯಲ್ಲಿ ಜೀಳಿದಂತೆ ಅವರನ್ನು ಅಲ್ಪ ಸಂಬಾವನೆ ಮೇಡುತ್ತಾರೆಂದು ಖಾನ್ಯ ಮಾಡಬಹುದು ಉದಾಹರಣೆಗಾಗಿ ಕೆಲವು ವರ್ಷಗಳ ಹಿಂದೆ ಕೊಡಗಿನಲ್ಲಿ ಧನಿಕನೆಂದು ಕರೆಯಿಸಿಕೊಳ್ಳುವ ವ್ಯಕ್ತಿಯೊಬ್ಬರು ಕುಲ್ಪ ಜಂತ್ರಿಗೆ ತಾವು ಬೆಳೆಸುವ ಎಸಳೀರುಗಳನ್ನು ತಾವು ಸೊರುಕ್ಕಿದ್ದರು. ಅವನ್ನು ನೋಡಿ ಆ ಜಾತ್ರೆಯಲ್ಲಿ ನನ್ನ ಪಕ್ಕದಲ್ಲಿ ನಿಂತಿದ್ದ ಒಬ್ಬ ಕೇವಲ ವಿದ್ಯಾವಂತನು "ಈಗಿನ ಎಳೆಸೀರನ್ನೂ ಕೊಳೆ ಮೊಟ್ಟೆಯನ್ನೂ ಮೂರು ಸೀಜ ಸಂಖಾದರೆ ಮೂರು ಸೀಜ ಹಣಗಾತನಾಗಿದ್ದರೇನು" ಎಂದು ಮೊದಲಾಗಿ ಹೇಳುತ್ತಿದ್ದನು. ಆಯ್ಯೋ ಕೇವಲ ವಿದ್ಯಾವಂತನೇ ನಿನ್ನ ವಿದ್ಯೆಯು ಸಂಪೂರ್ಣವಾಗಿಲ್ಲವೆಂಬುದಕ್ಕೆ ಇದೇ ದೃಷ್ಟಾಂತವಲ್ಲವೇ! ಆಧುನ ನೀನು "ನೀಚ ಸಂಖಾದನೆ" ಎಂಬ ಪದಗಳ ಅರ್ಥವನ್ನು ತಿಳಿದಿರುವುದಿಲ್ಲವೆ! ಆಥವಾ ನೀನು ಕೊಡಗಿನ ನೆರೆ ದೇಶಗಳ ಒಸಾದರೂ ಹೇಗೆ ಜೀವಿಸುತ್ತಿರುವರೆಂದು ನೋಡಿಲಿಲ್ಲವೇ! ಎಳನೀರು ಮಾರುವುದು ತುಚ್ಛೀಕರವಾದರೆ ಕಾಫಿ, ಭತ್ತ, ಕಿತ್ತಳೆ ವೆಂಡಲಾದುವುಗಳನ್ನು ಮಾರುವುದು ತುಚ್ಛೀಕರವಲ್ಲವೇ!! ಇನ್ನಾದರೂ ನೀನು ಭಾಷಿಯೊಳಗಿನ ಕಪ್ಪಗಿರುವಂಥ ಹೆಮ್ಮೆಯನ್ನು ಬಿಡು. ಇಂಥ ಹೆಮ್ಮೆ ಅಹಾಭಾನ (Pride and vanity) ಗಳಿಂದ ಕೂಡಿದ ಕೂಸಗು ಪುತ್ರರಿಂದಲ್ಲವೇ ಕೊಡಗು ದೇಶವು ಈಗಿನ ಪುಸ್ಥಿತಿಯಲ್ಲಿ ಘೋರತನ ಬಾದು ಮೊಲೆಯೆಲ್ಲಿ ತೀಲುತ್ತಿರುವುದು!

ಇದರೊಂದಿಗೆ ತಲವರು "ನಮ್ಮ ಅದೃಷ್ಟವು ಚೆನ್ನಾಗಿಲ್ಲ ಅದುಡರಿಂದಲೇ ನಾವು ಸೆಟ್ಟಿ ತೆಗಿಸಿ ಮೂರಲ್ಲಿ ವರ್ಷಕ್ಕೆ ಒರೆ 100 ತೆಗಿನಕಾಯಿಗಳು ಹಿಡಿಯುವಾಗ ಅದ್ಯಾರಂಡೆ ಬರ್ವ ಅದೃಷ್ಟವಂತರು ತಿಗಿನ ಮಾಡಲ್ಲಿ ವರ್ಷಕ್ಕೆ 1000 ತೆಗಿನಕಾಯಿಗಳು ಹಿಡಿಯುತ್ತಿವೆ" ಎಂದೀ ಬೆರಸಾಗಿ ಹೇಳುವವರನ್ನು ಕೇಳಬಹುದು. ಮಹಾಯಿಲೇ ಕೈ ತೆಸರಾದರೆ ಬಾಯಿ ಮೊಸರು ಎಂದು ಗೆತ್ತಿಲ್ಲವೇ! ("ಅದೃಷ್ಟಕ್ಕನ ನಂಬಿಕೆ ಪಾರಿಕಲ್ಲ್‌ಲ್ ಆಳ್‌ಕೆಂಡ್‌ತೀಂಗಿ ಕೂಳಾಕ್ಟ್‌ವ") ಮಲೆಯಾಳ, ಮಂಗಳೂರು ಮೊದಲಾದ ದೇಶದ ಕೆಲವು ಕಡೆಗಳಲ್ಲಿ ತೆಂಗಿನ ಮರಗಳು ನೆಟ್ಟ ಜಾಗವು ಉಬ್ಬು ವ ಣ್ಣಿನಿಂದ ಕೂಡಿದರೂ ಸಹ ಅವರು ವರ್ಷಕ್ಕೊಮ್ಮೆ ತೆಂಗಿನ ಮರಗಳ ಬುಡಮೆನ್ನು ಅಗಚೆ ಮಾಡಿ ಉಬುದಕ್ಕೆ ಗೊಬ್ಬರ ಮತ್ತು ಉಪ್ಪು ಹಾಕುವುದಲ್ಲದೆ ಬೇಸಿಗೆ ಕಾಲದಲ್ಲಿ ನಿರವಸ್ಯತೆಯ ನೀರನ್ನು ಹಾಯಿಸುತ್ತಾರೆ. ಕೊಡಗಿನಲ್ಲಿಲ್ಲದಿದೇ ಅನೇಕರು ಹೀಗಾದರೂ ಒಂದು ಜಾತಿ ತೆಂಗಿನ ಸಸಿಗಳನ್ನು ನೆಟ್ಟು ಬಿಡುತ್ತಾರೆ. ಅನಂತರ ಆ ಸಸಿಗಳು ದೊಡ್ಡದಾಗಿ ಫಲ ಬಿಡುವ ವರೆಗೆ ಅವುಗಳ ಗೋಚಿಗೆ ಹೋಗುವುದಿಲ್ಲ. ಅಂದ ಬಳಿಕ ಅವರ ಮರದಲ್ಲಿ ವರ್ಷಕ್ಕೆ ಬರೆ 100 ಯೊ ಕಮ್ಮಿ ತಾಯಿಗಳ ಫಲವು ದೊರಕಿದರೆ ಆಶ್ಚರ್ಯವೇನಿದೆ! ಇದೂ ಅದೃಷ್ಟದ ಫಲವೋ? ಇಲ್ಲವೇ ಮೈಗಳ್ಳತನದ ಫಲವೋ?

ಆಮದರಿಂದ ಸ್ನೇಯ ಸಹೋದರರೇ, ನೀವು ದೃಢ ಮನಸ್ಸಿನಿಂದ ನಿಮ್ಮ ಕೆಲಸವನ್ನು ಕೈ ಕೊಂಡು ಅನನ್ಯ ಕೊನೆಯವರೆಗೆ ಸಾಧಿಸಲು ಪ್ರಯತ್ನಿಸಿ ಹೀಗೆ ಮಾಡಿದರೆ ನಿಮ್ಮನ್ನು ಹಾಸ್ಯಮಾಡಿದ ಶತ್ರುಗಳು ಸಹ ಕೊನೆಗೆ ನಿಮ್ಮಲ್ಲಿ ಮೊರೆಯಿಟ್ಟು ನಿನ್ನನ್ನ ಹಿಂಬಾಲಿಸುವರು. ಕೊಡಗು ವೀರ ಪುತ್ರರೇ ಇನ್ನಾದರೂ ಎದ್ದೇಳಿ! ಇಲ್ಲವಾದರೆ ನಮ್ಮ ನೆರೆ ಹೊರೆ ದೇಶಗಳಲ್ಲಿ "ಕೊಡಗು ಇತ್ಯರ್ಯವಂತರು" ಎಂದೆನ್ನುವ ಡಂಭವು ಸಹ ಬೇಗನೆ ಅಳಿಸಿ ಹೋಗುವುದರಲ್ಲಿ ಸಂದೇಹವಿಲ್ಲ. ಆದರಾರಣ ದಕ್ಷಿಣ ಕೊಡಗಿನ ಮಹನೀಯರೇ, ನೀವೆಲ್ಲರೂ ಪ್ರೋತ್ಸಾಹವಿತ್ತು ಗೋಣಿಕೊಪ್ಪಲಿನಲ್ಲಿ ಹಸರು ವಾಣಿಗಳ ಪ್ರದರ್ಶನವನ್ನು ತೆರೆದು ಆ ಮೂಲಕ ನಮ್ಮ ರೈತ ರಾದ ಸಹೋದರರುಗಳಿಗೆ ಇತರ ದೇಶಗಳ ವ್ಯವಸಾಯದ ರೀತಿ ಯನ್ನು ತೋರಿಸಿ ಅದರ ಪ್ರಯೋಜನಗಳನ್ನು ದೃಷ್ಟಾಂತವಾಗಿ ತೋರಿಸಿ ದೇಶೋದ್ಧಾರಕರಾಗಿ ಕೊಡಗಿನಲ್ಲಿ ಶೋಭಿಸಿ! ನೀವೆಲ್ಲರೂ ಈ ವಿಷಯದಲ್ಲಿ ಮತಿಯರ್ಜಿಯಿಂದ ಕೆಲಸ ಮಾಡಿದರೆ ಸರಕಾರದವರು ಸಹ ಅನರ ಎಗ್ಸಿಕ್ಯಲ್ಟರ್ ಡೆಮಾನ್‌ಸ್ಟ್ರೇಟರ್‌ರ ಮೂಲಕ ಇಂಥಾ ದೇಶದ ಏಳಿಗೆಯ ಕಾರ್ಯಗಳಿಗೆ ತಕ್ಕ ಸಹಾಯವನ್ನು ಕೊಡುವುದರಲ್ಲಿ ಸಂಶಯವಿಲ್ಲ.

ಮ. ಈ. ಕಳಿಪ್ಪ.

---

### ಸಹಕಾರ್ಯಗ್ರಹಕ್ಕೆ ಪ್ರವೇಶದಲ್ಲಿ ಮಹತ್ವ.

(ರಿಚಾರ್ಡ್‌ಗ್ರೆಗ್ ಎಂಬವರ ಪಕ್ಕಿಂದ)

ಪ್ರವೇಶದ ಇತಿಹಾಸದಲ್ಲೆಲ್ಲಾ ಈಗ ಹಿಂದೂಸ್ಥಾನದಲ್ಲಿ ಸಹಕಾರಿತ್ವದ ಪೋಷಣೆಯು ಅತಿ ಮಹತ್ವದ್ದಾಗಿರುವುದು. ಬಡ್ಡಿದೇವನು ಆಹಾರಸೆಯನ್ನು ಬೋಧಿಸಿ ಸಾಧಿಸಿದನು. ಆತನಿಗೆ ಅವಶ್ಯಕ್ಕಾಗಿ ಅವನು ಕಷ್ಟ ಅನುಭವಿಸಬೇಕಾಗಿಲ್ಲ. ಕ್ರಿಸ್ತನು ಬೋಧಿಸಿ ಸಾಧಿಸಿದನು ಅದರೆ ಅವಶ್ಯಕ್ಕಾಗಿ ಕಷ್ಟ ವನ್ನನು ಭವಿಸಿಗರೂ ಆಹಂಸೆಯ ಆಧ್ಯವೆನ್ನು ಸ್ವೀಕರಿಸಿಲ್ಲ. ಬಾಪು (ಮಹಾತ್ಮ ಗಾಂಧಿಯವರ) ರೋಧಿಸಿ ಸಾಧಿಸಿ ಅವ ಕ್ಕಾಗಿ ಕಷ್ಟವನ್ನನುಭವಿಸಿದ್ದು ಅಲ್ಪದೆ ಅವನ್ನು ತಿಳಿದುಕೆಂಡಿ, ತಿಗಿನಸಕಾರವಾಗಿ ಸಾಧನೆಯೆಂಬಂದಲೂ, ಜಗ್ಗಟ್ಟಿನಿಂದಲೂ ನವ ವಿಧಾನದಲ್ಲಿ ಹೋರಾಟವು ಹೇಗೆ ಆಹಂಸೆಯನ್ನು ಅಯೋಗ್ಯ ಗಿಸಬಹುದೆಂಬುದನ್ನು ಮನುಷ್ಯರೆಲ್ಲರೂ ತಿಳಿದುಕೊಳ್ಳಲು ಸಾಧ್ಯವಾಗುವಂತೆ ಮಾಡಿದ್ದಾರೆ. ಇದರಿಂದ ಸಸಿಲ್ಲೂ ಸಹ ಯೋಚಿಸಿದಷ್ಟು ಸಾಧ್ಯವಾಗುವ ವಿಷಯಗಳಿಂತೆ ಹಿಂಸೊಸ್ಥಾನಕ್ಕೆ ಮತ್ಸರವಲ್ಲ, ಪ್ರಸಂಶಕ್ಕೆನೀಯ ಮಹತ್ವದ ವಿಷಯವಾಗಿಗೆ.

ಪಶ್ಚಿಮೋತ್ತರ ರಾಜ್ಯಗಳಲ್ಲಿ ರಾಜಕೀಯ ತತ್ವಗಳನ್ನು, ರಾಜಕೀಯ ಚರಿತ್ರೆಗಳನ್ನೂ, ಸರಕಾರಿ ವರ್ತನೆಗಳನ್ನೂ ಸೂಕ್ಷ್ಮ ದೃಷ್ಟಿಯಿಂದ ನೋಡುತ್ತಿದ್ದವರಿಗೆ ಇವೆಲ್ಲಾ ಎಷ್ಟು ಸುಪ್ರಾಣವಾಗಿ ಮೋಸ ಕುತಂತ್ರ ಅಪ್ರಮಾಣಿಕತೆ ಮನುಷ್ಯರ ಭಾವನೆಗಳನ್ನು ಮನನೆಗೆ ಇಚ್ಚೆ ಉಪಯೋಗಿಸುವದರಿಂದಲೂ ನಡೆಯುತ್ತಿದೆಯೆಂಬುದು ಗೊತ್ತಾಗದೆ ಇರದು. ಇವೆಲ್ಲಾ ಕೃತ್ಯಗಳು ಅಲ್ಪ ಸಂಖ್ಯೆ ಜನರ ಪ್ರಯೋಜನಕ್ಕಾಗಿ ಆಗುತ್ತಲಿವೆ ಮತ್ತು ಹಿಂಸೆ ಮತ್ತು ಸ್ವಾರ್ಥತೆಯನ್ನು ಹೊಂದಿ ಇದೆಯೆಂಬಲೂ ತಿಳಿಯುತ್ತಿದೆ.

ಆ ಕಾರಣದಿಂದ ಈ ಚಳವಳಿಯು ಜಯಪ್ರದವಾದರೆ ಈಗ ಇರುವ ಎಲ್ಲಾ ಸರಕಾರಗಳ ಶಕ್ತಿಯನ್ನು ಕಡಿಮೆ ಮಾಡಿ ಬಡ ಜಯಿಸುತ್ತದೆ. ಸರಕಾರಗಳಲ್ಲೆಲ್ಲಾ ಅತ್ಯಂತ ಶಕ್ತಿಶಾಲಿಯಾದ ಸರಕಾರವನ್ನು ಸಹಕಾರ್ಯಹವು ಸೋಡಿಸಿದರೆ ಅವರಿಂದ ಸರಕಾರಗಳೆಲ್ಲಾ ಎಷ್ಟು ಹಾಳಾಗಿನೆಯೆಂತ ನಿದರ್ಶನವಾಗುತ್ತದೆ. ಯಾಕೆಂದರೆ, ಎಲ್ಲಾ ಸರಕಾರಗಳೂ ಒಂದೇ ತತ್ವದ ತಾಯಿದ ಮೇಲೆ ಕೂತಿದೆ. ಸಹಕಾರ್ಯಗ್ರಹದ ಜಯದಿಂದ ಎಲ್ಲಾ ಸರಕಾರಗಳ ಮರ್ಯಾದೆಯೂ, ಶಕ್ತಿಯೂ ಕಡಿಮೆಯಾಗುತ್ತದೆ. ದಜ್ಜಾಬ್ಬಳಿಕೆಗೆ ಗುರಿಯಾದ ಎಲ್ಲಾ ಜನರಾಂಗಗಳಿಗೂ ಹಣಗಾರರಿಂದ ರಚಿಸಲ್ಪಡುವ ಸರಕಾರಗಳಿಗೆ ಅಡಗಿಸುತ ಕೂಲಿಕಾರರುಗಳು ಹೆಸರ ಪೀಡನದ ಹೊಸ ಆಕಾಶ ಬೆಳಕು ತೋರಿ ಬರುತ್ತದೆ.

ರಷಿಯಾದ ಕ್ರಾಂತಿ ಸಮಯದಲ್ಲಿ ಎಲ್ಲಾ ರಾಜ್ಯಗಳಲ್ಲೂ ಸೆನೆಗಾಯದ ಜಕರಲ್ಲಿ ಮೆಚ್ಚುಪದ ವಿಜ್ಞಾಂಕೆಯೂ ಕ್ಕು. ಆತರಿಂದ ಹಣಗಾತರ ಮತ್ತು ರಾಜಕೀಯ ಪಕ್ಷಗಳಿಗೆ ಗೆಲುವನ್ನು ಪಡೆಯಲು ಬಡಿಯುತ್ತಿದ್ದರು ಪ್ರಾರಂಭವಾಗಿತ್ತು. ಆದರೆ ಹಿಂದೂ ಸ್ಥಾನದ ಜನಸಾಗನಸ್ಥೆಯಲ್ಲಾ ಆರಂಭಿಕಾಂಶ ಸತ್ಯಾಗ್ರಹದ ಜಯದಿಂದ ಸುಸಸ್ಥಿರ ಸ್ವಾತಂತ್ರ್ಯಕ್ಕೆ ಈ ವರೆಗೆ ಯಿಂತ ಕ್ರಾಂತಿಯಿಂದಲಿ ಆಗದಿರುವಷ್ಟು ಸಹಾಯವಾಗುತ್ತದೆ ಎಂತ ನಾನು ನಂಬುತ್ತೇನೆ.

ಕಳೆದ ಮಹಾ ಯುದ್ಧದಿಂದ ಯೂರೋಪಿನ ಬೊಡ್

ಆರ್ಥಿಕ ವಾತಾವರಣದಲ್ಲೂ ಸಹ ಸತ್ಯಾಗ್ರಹದ ಪ್ರಭಾವವು ಬಹಳವಾಗಿದ್ದೀತು. ಹೊಣಗಾರರ ಗರ್ವವನ್ನೂ ಯುದ್ಧವನ್ನೂ ಮುರಿಯಲು ಸತ್ಯಾಗ್ರಹವು ಬಹಳ ಉಪಯೋಗಕರವಾಗಿದೆಯೆಂಬದೇ ನನ್ನ ಅಭಿಪ್ರಾಯವಾಗಿದೆ. ಹೊಣಗಾರರ ಗರ್ವ ಮುರಿಯಲು ಎಲ್ಲಾ ಸಾಮ್ಯವಾದಿಗಳಿಗಿಂತಲೂ ಸತ್ಯಾಗ್ರಹವು ಹೆಚ್ಚು ಶಕ್ತಿಯುಳ್ಳದ್ದಾಗಿದೆ ಕೂಲಿಕಾರರ ಕೂಟಗಳ ರಚನೆಯೇ ವ್ಯತ್ಯಾಸವಾಗಬೇಕಾದೀತು. ಕೈ ಗಾರಿಕೆಗಳಲ್ಲಿಲ್ಲಾ ಹಿಂದೆ ಬಿದ್ದು ಕೃಷಿಗೆ ಮಹತ್ವ ಬಂದೀತು.

ಹಿಂದೂಸ್ಥಾನವನ್ನೂ ಹಿಂದೂಸ್ಥಾನದ ಆಧಿವ್ಯಾಯವನ್ನೂ ಪಶ್ಚಿಮದೇಶ ದೇಶಗಳಲ್ಲಿ ಜೆನ್ನಾಗಿ ತಿಳಿದುಕೊಳ್ಳಲು ಅವಕಾಶವಾಗಿ ಹಿಂದೂಸ್ಥಾನದ ಮೇಲೆ ಆಧಿಪೂರ್ವವು ಹೆಚ್ಚುವಂತಾಗುತ್ತದೆ. ಪಶ್ಚಿಮೋತ್ತರು ಹಿಂದೂಸ್ಥಾನವನ್ನು ಸರಿಯಾಗಿ ತಿಳಿಯದೆ ಇರಲು ಹಿಂದೂಸ್ಥಾನದವರು ಕೈಕೊಂಡ ಅಹಿಂಸಾಮಾರ್ಗವು ಬಲಹೀನತೆಯ ಕುರುಹು ಎಂತ ತಪ್ಪಾಗಿ ತಿಳಿದುಕೊಂಡದ್ದೇ ಕಾರಣವಾಗಿದೆ. ಎಲ್ಲಾ ಜನಾಂಗಗಳಲ್ಲೂ ಬಲಹೀನತೆಗಳಿರುವಂತೆ ಹಿಂದೂಸ್ಥಾನದವರಲ್ಲೂ ಇರಬಹುದು ಆದರೆ ಅಂಥಾ ಬಲಹೀನತೆಯು ಅಹಿಂಸೆಯ ಫಲವಾಗಿ ಹುಟ್ಟಿರುವದಲ್ಲ. ಸರಿಯಾಗಿ ಸಂಘಟನೆಯಾದ ಸತ್ಯಾಗ್ರಹವು ಎಷ್ಟು ಒಳ್ಳೆಯದೆಂಬ ಗೊತ್ತಾದರೆ ಹಿಂದೂಸ್ಥಾನದ ಮೇಲೆ ಇರುವ ತುಚ್ಛೀಕಾರವು ಹರಿದು ಹೋಗುತ್ತದೆ. ಈ ಅಡಚಣೆ ಹೋದನಂತರ ಹಿಂದೂಸ್ಥಾನದವರ ಮೇಲೆ ಗೌರವ ಭಾವವು ಬೆಳೆಯುತ್ತದೆ. ಇದೆಲ್ಲಾ ವಿಷಯದ ಲಾಭ. ಮಾನಾತ್ಮರು ಸಟ್ಟಿರುವ ಅಧಿವ್ಯಾಯಗಳೆ. ಸರಿಯಾದ ವುಗಳಾಗಿವೆ.

ನಿಮ್ಮ ಕೆಲಸದಿಂದ ಅಮೇರಿಕಾಕ್ಕಿಂತ ಮುಂದಾಗಿ ಮಕ್ಕು ಹೆಚ್ಚಾಗಿ ಬ್ರಿಟಿಷ್ ಸಾಮ್ರಾಜ್ಯವನ್ನು ಪೂರ್ಪಡಿಸುತ್ತದೆ. ಆದರೂ ಅಮೇರಿಕಾದಲ್ಲಾಗಲಿ ಈ ಚಳವಳಿಂದ ಒಳ್ಳೇದಾಗುವುದರಲ್ಲಿ ಸಂಕಯವಿಲ್ಲ. ಸ್ವಪಂಜದ ಸ್ವಾತಂತ್ರ್ಯಕ್ಕಾಗಿ ನೀವು ನಡಿಸುತ್ತಿರುವ ಹೋರಾಟಕ್ಕಾಗಿ ನಾನು ನಿಮಗೆ ಮನಃಪೂರ್ವಕವಾಗಿ ಕೃತಜ್ಞನಾಗಿದ್ದೇನೆ.

---

### ಸೇಂದಿ ಸರಾಯಿ ಅಂಗಡಿಗಳ ಪಿಕೆಟಿಂಗ್.

(2ನೇ ಪುಟದಿಂದ ಮುಂದುವರಿದದ್ದು.)

ತಾ. 12ರಲ್ಲಿ ಒಂದು ದಿನಕ್ಕೆ ಮುಂಚೆ ಪಿಕೆಟ್ ನೂಡಿದ 8 ಸತ್ಯಾಗ್ರಹಿಗಳೊಂದಿಗೆ ಈ ಕೆಳಗಿನ 5 ಸ್ವಯಂಸೇವಕರೂ ಸೇರಿ ಪಿಕೆಟ್ ನೂಡಿದರು. ಮೆ. ಗಳಾದ 1. ಕೊಳ್ಳಿ ನೂಡ ಅಯ್ಯಮ್ಮನವರು, 2. ಮಗ್ಗುಲದ ಒಕ್ಕಲಿಗರ ತಮ್ಮಯ್ಯನವರು, 3. ಅಜ್ಜಮಾಡ ಮುದ್ದಪ್ಪನವರು, 4 ಕಾಳೇಂಗಡ ಚಿಣ್ಣಪ್ಪನವರು, ಮತ್ತು 5. ಬೊಜ್ಜಂಗಳ ಬೋಪಯ್ಯನವರು.

ಇದೇ ವೇಳೆ ಪ್ರತಿ ದಿನವೂ ಮೆರವಣಿಗೆಯೂ, ಪಿಕೆಟಿಂಗೂ ನಡೆಯುತ್ತಾ ಇದೆ. ಮೊದಲನೆಯ ದಿವಸ ಸೇಂದಿ ಅಂಗಡಿಯ ಎದುರುಗಡೆ ಇರುವ ಪಬ್ಲಿಕ್ ರಸ್ತೆಯಲ್ಲಿ ಮೂತ್ರ ಇಬ್ಬರು ಪಿಕೆಟ್ ನೂಡಿದಾಗ್ಯೆ ಅಂಗಡಿಯವನು ಹಿಂದುಗಡೆ ಬೆಗಾಗಿ ಹಾಯ್ದುಬರುವ ಕಾಲುದಾರಿಯಾಗಿ ಕೆಲವರಿಗೆ ಕಾಣದೆ ಸೇಂದಿ ಮಾರಿದನು. ಇದನ್ನು ನೋಡಿ ಮರುದಿನ ಹಿಂಭಾಗದ ಕಾಲುದಾರಿಯಲ್ಲೂ ಇಬ್ಬರು ಸ್ವಯಂ ಸೇವಕರನ್ನು ನಿಲ್ಲಿಸಿದ್ದರಿಂದ ಕಾಣದೆ ಮೊಂಬುದು ಕಡಿಮೆಯಾಯಿತು. ಮೊದಲನೇ 3—4 ದಿವಸಗಳಲ್ಲಿ ಒಬ್ಬ ಮೋಡಿ ವಿದ್ಯದ ಯುವಕನು ಸೇಂದಿ ಮತ್ತು ಸಾರಾಯಿ ಅಂಗಡಿಗಳಲ್ಲಿ ಬೇಕಾದ ದಪ್ಪು ಕುಡಿಯುತ್ತಿಳು, ನಿಷಾ ಪದಾರ್ಥವನ್ನು ರಸ್ತೆಗೆ ತಂದು ಸ್ವಯಂ ಸೇವಕರ ಸಮೀಪ ಎದುರುಗಡೆಯಲ್ಲಾ ನಿಂತು ಕೂಡಿಯುತ್ತಲೂ ಇಲ್ಲ ಸಲ್ಲದ ಮಾತುಗಳನ್ನಾಡುತ್ತಾ ಚೇಷ್ಟೆ ಮಾಡುತ್ತಿದ್ದನು. ಆದರೆ ಸತ್ಯಾಗ್ರಹಿಗಳು ಸಿಟ್ಟುಗೇಳದೆ ಯೂ, ಅವನಿಗೊಂದು ಪ್ರತ್ಯೇಕ್ಕರ ಕೊಡಪೆಯೂ ಮಹಾತ್ಮ ಗಾಂಧಿಯವರ ಬೋಧನೆಯ ಅಂಹಿಂಸಾ ತತ್ವವನ್ನು ಜೆನ್ನಾಗಿ ವಾಲಸಿ ತಾತ್ಪ ಒಂದರು. ಅಂಗಡಿ ಕಂಟ್ರಾಕ್ಟ್ದಾರರುಗಳ ವರ್ತನೆಯೂ ಪಿಕೆಟರುಗಳಿಗೆ ಸಹಾನುಭೂತಿಯುಳ್ಳದಾಗಿರಲಿಲ್ಲ. ಇವರು ಸತ್ಯಾಗ್ರಹಿಗಳ ತಾಳ್ಮೆಯನ್ನು ನೋಡಿ ಸಹಿಸಲಾರದೆಯೋ ಯಾ ತಮಗುಂಟಾಗುತ್ತಿರುವ ನಷ್ಟದ ವ್ಯಸನದಿಂದಲೋ ಏನೋ ಪಿಕೆಟರುಗಳಿಗೆ ಕೆಲವು ವೇಳೆ ಕಾಣತರದ ಮಾತುಗಳನ್ನೂ ಕೂಡ ಆಡಿದರಂತೆ. ಆದರೆ ಪೊಲೀಸಿನವರು ಯಾವ ಗೋಜಿಗೂ ಬಾರದೆ ಯೋಗ್ಯ ರೀತಿಯಲ್ಲಿ ವರ್ತಿಸಿದರು. ಎಡಬು ಅಂಗಡಿಗಳ ಸಮೀಪ ಇಬ್ಬರು ಪೊಲೀಸಿನವರು ವೆದ್ದ ನಿಲ್ಲಿಸಲ್ಪಟ್ಟಿದ್ದರು. ಮೊದಮೊದಲು ಕುಡಿಯಲಿಚ್ಛಿಸಿದವರು ಅಂಗಡಿಗೆ ಒಲು ನಾಚಿಕೊಂಡವರಿಗೆ ಹೋಟೇಲಿನ ಕೆಲವು ಕೆಲಸಗಾರರು ಹೋಟೇಲಿಗೆ ಸಾರಾಯಿ ತೆಗೆದುಕೊಂಡು ಹೋಗಿ ಕೊಡುತ್ತಿದ್ದರು. ಹೋಟೇಲುಗಳ ಯಜಮಾನರುಗಳನ್ನು ಕೋರ್ಟಿಕೊಂಡನಂತರ ಹೀಗೆ ಮಾಡುವುದು ನಿಲ್ಲಿಸಲ್ಪಟ್ಟಿತು. ಮಹತ್ಪಲ್ಲ ಪ್ರಧಾನದಲ್ಲಿ ಕುಡಿದು ಜೇಪ್ಪೆ ಮಾಡುತ್ತಿದ್ದ ಪೋಡಿಯವನೂ ಕೂಡ ಈಗ ಪೆಡಿದಲನಂತೆ ಕುಡಿಯದೆ ಸತ್ಯಾಗ್ರಹಿಗಳನ್ನು ಕಂಡರೆ ನಮಸ್ಕಾರ ಮಾಡುತ್ತಿರುವನು! ಕುಡಿತದ ಒಲಿಗೆ ಸಿಕ್ಕಿಬಿದ್ದು ಪಿದಿರಿಂದ ತಪ್ಪಿಸಿಕೊಳ್ಳಲು ಮನಸ್ಸೈರ್ಯವಿಲ್ಲದವರು ಅಂಗಡಿಗಳಿಗೆ ನುಗ್ಗಿ ಕುಡಿಯಲು ನಾಚಿಕೆಯಿಲ್ಲವಾದರೂ, ಒಂದೊಂದು ಸಲ ಕುಡಿಯದ ಇಳುಗಳಿಂದಲೂ,ಇತರರಿಂದಲೂ ತರಿಸಿಕೊಂಡು ಹೊಟೇಲುಗಳಲ್ಲಿ ಗುಟ್ಟಾಗಿ ಕುಡಿಯುವುದುಂಟು. ಹೀಗೂ ನಿಷಾ ಸೇವನೆ ಮಾಡುವುದು ಒಳ್ಳೇಯದಲ್ಲ. ಆದರೆ ಲ್ಲಾ ಬಹಿರಂಗವಾಗಿ ಸೇವನೆ ಮಾಡುವದು ನಾಚಿಕೆಗೇಡು ಎಂಬ ಭಾವನೆಯು ಜನರಲ್ಲಿ ಹುಟ್ಟಿರುವುದರಲ್ಲಿ ಸಂಕಯವಿಲ್ಲ. ಪೊನ್ನಂಪೇಟೆಯವರು ಮತ್ತು ಸುತ್ತ ಮುತ್ತಲಿನ ಗ್ರಾಮಸ್ಥರೂ ಪಿಕೆಟರುಗಳಿಗೆ ಸಹಾಯಕರಾಗಿರುವುದಲ್ಲದೆ, ಇಲ್ಲಿಯು ಮೂಪಿಳ್ಳೆಯರೂ, ಮುಸಲ್ಮಾನರೂ ಕುಡಿಯದವರಾದರೂ ಈ ಕೆಲಸಕ್ಕೆ ವಿಶೇಷ ಸಹಾನುಭೂತಿ ತೋರಿಸುತ್ತಿರುವುದು ಸಂತೋಷಕರವಾದ ಸಂಗತಿಯಾಗಿದೆ. ಮೆರವಣಿಗೆಯಲ್ಲಿಯೂ, ಪಿಕೆಟ್ ನೂಡುವಲ್ಲಿಯೂ ದೇವತೆಗಳ ಪಟಗಳನ್ನು ಇಟ್ಟುಕೊಳ್ಳುವದಲ್ಲದೆ ಮಕ್ಕಳಕ್ಕೆ ಹುಟ್ಟಿಸುವ ಪದಗಳನ್ನು ಹಾಡುವುದರಿಂದ ಹಿಂದೂಗಳಿಗೆ ನಿಷಾ ನಿಷೇಧದ ಕಾರ್ಯವು ಮತ ಸಂಬಂಧದ ಕೆಲಸವೆಂಬ ಭಾವನೆ ಹುಟ್ಟಿದೆ. ಮಹಾತ್ಮಗಾಂಧಿಯವರ ಚಿತ್ರಪಟವನ್ನು ನೋಡಿ ಹಲವರು ಅದಕ್ಕೆ ಭಕ್ತಿಪೂರ್ವಕವಾಗಿ ನಮಸ್ಕರಿಸಿ, ಇನ್ನು ಮುಂದೆ ತಾವು ನಿಷಾ ಸೇವನೆ ಮಾಡುವುದಿಲ್ಲವೆಂದು ಹೇಳಿಕೊಂಡು ಹೋಗುತ್ತಿದ್ದಾರೆ. ತಾವು ಈ ವರ್ಷ ಕಂಟ್ರಾಕ್ಟು ತೆಗೆದುಕೊಂಡದ್ದರಿಂದ ಈ ಸಾರಿ ಪಿಕೆಟ್ ಮಾಡಿ ತಮಗೆ ನಷ್ಟವಪಡಿಸಬಾರದೆಂದೂ, ಇನ್ನು ಮುಂದೆ ತಾವು ಕಂಟ್ರಾಕ್ಟು ತೆಗೆದುಕೊಳ್ಳುವುದಿಲ್ಲವೆಂದೂ ಕಂಟ್ರಾಕ್ಟುದಾರರು ಕೇಳಿಕೊಳ್ಳುತ್ತಿರುವರಂತೆ. ಅಲ್ಲದೆ ಈ ಚಳವಳಿಂದ ವ್ಯಾಪಾರದ ಬಹಳ ಮಟ್ಟಿಗೆ ಕಡಿಮೆಯಾಗಿ ತಮಗೆ ತುಂಬಾ ನಷ್ಟ ಉಂಟಾಗುತ್ತಿರುವ ಕಾರಣ ತಮಗೆ ಕಂತು ಹಣವನ್ನು ಕಡಿಮೆ ಮಾಡಿ ಕೊಡಬೇಕು; ಇಲ್ಲವಾದರೆ ಪಿಕೆಟಿಂಗ್ ನಿಲ್ಲಿಸಬೇಕು ಅಥವಾ ಅಂಗಡಿ ಮುಚ್ಚಲು ಹುಕುಂ ಆಗಬೇಕು ಎಂದೂ, ಗುತ್ತಿಗೆದಾರರು ಕಮಿಷನರವರಿಗೆ ತಂತೀ ವರ್ತಮಾನ ಕಳುಹಿಸಿರುವರೆಂದೂ ಅರ್ಜಿ ಬರೆದಿರುವರೆಂದೂ ಸುದ್ದಿ ಇದೆ.

ಇಲ್ಲಿಯ ಸೇಂದಿ ಅಂಗಡಿಯ ಕಂಟ್ರಾಕ್ಟುದಾರನು ಕಳೆದ ತಿಂಗಳ ಕಂತಿನ ಹಣವನ್ನು ಕಟ್ಟಿದೆ ಬಾಕಿಯಾದ ಕಾರಣ ತಾ. 16ರಲ್ಲಿ ಸುಬ್ಬೇದಾರರು ಪೊನ್ನಂಪೇಟೆಯಲ್ಲಿ ಸದರಿ ಅಂಗಡಿಯನ್ನು ಪುನಹ ಹರಾಜು ಮಾಡಿದರು. ಅದನ್ನು ಕೂಗುವವರು ಯಾರೂ ಇಲ್ಲದ್ದರಿಂದ ಅದು ಹರಾಜಾಗದೆ ಬಾಕಿಯಾಗಿದೆ. ಆದಕಾರಣ ಸದರಿ ಅಂಗಡಿಯು ದೇಗನೆ ಮುಚ್ಚಲ್ಪಡುವದೆಂದು ಸುದ್ದಿ ಇದೆ. ನಿಷಾ ನಿಷೇಧದ ಸಂಬಂಧ ಗ್ರಾಮಗಳಲ್ಲಿ ವಿೀಟಿಂಗು ನಡಿಸದ ಮುಂಚೆ ಈ ಅಂಗಡಿಗೆ ಸುಮಾರು 80 ಸೇರು ಸೇಂದಿ ಬರುತ್ತಿದ್ದದ್ದು ವಿೀಟಿಂಗುಗಳು ಆದಮೇಲೆ ಸುಮಾರು 40 ಸೇರಿಗೆ ಇಳಿದಿತ್ತಂತಲೂ, ಪಿಕೆಟ್ ನೂಡಿದ ಕಾರಣ ಆದರಲ್ಲಿ ಮೂರರಲ್ಲಿ ಒಂದು ಭಾಗವೂ ಕೂಡ ಖರ್ಚಾಗದ್ದರಿಂದ ಈಗ ಬರೇ 10—15 ಸೇರು ಸೇಂದಿ ಪ್ರತಿ ದಿನ ಬರುತ್ತಿದೆಯೆಂದೂ ವರ್ತಮಾನವಿದೆ. ಇದೂ ಕೂಡ ಅರ್ಧಕ್ಕರ್ಧ ಖರ್ಚಾಗುವುದು ದುರ್ಲಭವಾಗಿದೆಯಂತೆ. ಇಷ್ಟೂ ಕೂಡ ಹೆಚ್ಚಾಗಿ ಕಾಣದೆ ಅವಿತು ಕುಡಿಯುವವರಿಗೇ ಖರ್ಚಾಗುವದಾಗಿದೆ.

ಸಾರಾಯಿ ಅಂಗಡಿಯಲ್ಲಿ ಪಿಕೆಟಿಂಗ್ ವ್ಯವಸ್ಥೆಯಾಗಿ ಮೊದಲು ದಿವಸಕ್ಕೆ ಸರಾಸರಿ ಸುಮಾರು ನಾಲ್ಕು ಗ್ಯಾಲನ್ ಸಾರಾಯಿ ಖರ್ಚಾಗುತ್ತಿದ್ದದ್ದು ಈಗ ದಿವಸಕ್ಕೆ 5 ಕುಪ್ಪಿಗೆ ಇಳಿದಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಅಂದರೆ 5 ರಲ್ಲಿ 4 ಭಾಗದಷ್ಟು ವ್ಯಾಪಾರ ಕಡಿಮೆಯಾದಂತಾಯಿತು. ಇದರಲ್ಲಿ ಇನ್ನೂ ಭಾಗವು ಅಂಗಡಿ ಮುಚ್ಚುವೇಕಾದ ರಾತ್ರಿ 8 ಗಂಟೆಯ ಮೇಲೆ ಅಂಗಡಿ ತೆರೆದಿದ್ದು ಮಾರಾಟವಾಗುವದೆಂದು ವರ್ತಮಾನ. ಒಂದು ವಾರದ ಪಿಕೆಟಿಂಗಿನಿಂದ ಇಷ್ಟರ ಮಟ್ಟಿಗೆ ಫಲಿತಾಂಶವಾದುದು ಕಿಭಮೂಡನೆಯೆಂಬೇ ಹೇಳಬೇಕಾಗಿದೆ. ಪಿಕೆಟ್ ನೂಡುವುದರಿಂದ ದೇಶಕ್ಕೆಲ್ಲಾ ನಿಷಾ ನಿಷೇಧದ ಸಂಬಂಧ ಜೊಸ ಜೈತನ್ಯವು ತಲದೋರಿಸಿದೆ ಯೆಂಬದರಲ್ಲಿ ಸಂಶಯವಿಲ್ಲ.

ಈಗ ಪಿಕೆಟಿಂಗ್ ಶಾಂತ ರೀತಿಯಿಂದ ಏನೊಂದೂ ಗಲಾಟೆ ಇಲ್ಲದೆ ನಡೆಯುತ್ತಾ ಇದೆ. ಇಷ್ಟರಲ್ಲೇ ಮಳೆಗಾಲವು ಪ್ರಾರಂಭವಾಗುವಂತಿದೆ. ಮಳೆಯು ಒಂದಾಗಿ ಹಿಡಿದರೆ ಪಿಕೆಟ್ ಮಾಡುವುದು ಅಸಾಧ್ಯವಾದ ಕಾರಣ, ಅದನ್ನು ತತ್ಕಾಲ ನಿಲ್ಲಿಸಬೇಕಾಗುವದೆಂದು ತೋರುತ್ತದೆ.

---

## Notice.

COORG EDUCATION FUND,

Dated, 17th June 1930.

Students who have been receiving scholarships and loans from the fund are requested to put in their applications for renewal of their scholarships & loans with their progress reports signed by the Principal of the College in which they are studying by the 5th July 1930. Applications without their progress reports will not be considered.

B. I. KUTTAPPA,
Hon. Secretary,

---


## ಬೇಕಾಗಿದೆ.

ಸಹಕಾರ ಸಂಘಗಳ ಮೇಲ್ವಿಚಾರಣೆ ಬಗ್ಗೆ ತರಬೇತು ಹೊಂದಲು ಮೂರು ಸುಪರ್‌ವೈಜರುಗಳು ಬೇಕಾಗಿದೆ.

ದರಕಾಸ್ತುದಾರರು ಇಂಗ್ಲಿಷ್ ಮತ್ತು ಕನ್ನಡ ಜೆನ್ನಾಗಿ ತಿಳಿದವರೂ ಮತ್ತು ಸ್ಕೂಲ್ ಫೈನಲ್ ಪಾಸಾದವರೂ ಅಧವಾ ಬಿಡುಗಡೆ ಸರ್ಟಿಫಿಕೇಟ್ ಹೊಂದಿ ದೇಶದ ಪ್ರೀತಿಗೆ ಪಾತ್ರರಾಗಿ ಜನರಲ್ಲಿ ಮಿಶ್ರತವಾಗಿ ಕೆಲಸ ಮಾಡುವ ಶಕ್ತಿಯುಳ್ಳವರಾಗಿರಬೇಕು.

ಪಾಸಾಗಿ ಕೆಲಸಕ್ಕೆ ನೇಮಕವಾದ ನಂತರ ಮಹೆಯೂಸ ಸಂಬಳ 25/—ರಿಂದ 50/—ರೂಪಾಯಿ ವರೆಗೆ ಕೊಡಲಾಗುವುದು. ಆರಿಸಲ್ಪಟ್ಟ ಉಮೇದುವಾರರು ಫೀಡರೇಶನ್ ಆಫೀಸಿನಲ್ಲಿ ಅಧವಾ ರಿಜಿಸ್ಟ್ರಾರರು ಇಷ್ಟಪಡುವ ಸ್ಥಳಗಳಲ್ಲಿ 3 ತಿಂಗಳ ಮಟ್ಟಿಗೆ ತಮ್ಮ ಸ್ವಂತ ಖರ್ಚಿನಿಂದ ತರಬೇತು ಹೊಂದಬೇಕು.

ಈ ಜೂನ್ ತಾರೀಕು 30 ರೊಳಗೆ ಈ ಕೆಳಗಿನವರಿಗೆ ಬರಲುಕೊಳ್ಳುವುದು.

ರಾವು ಬಹದ್ದೂರ್ ಪಿ. ಜೇಮ್ಯೆಯ್ಯ,
ಪ್ರೆಸಿಡೆಂಟ್, ಕೋ-ಆಪರೇಟಿವ್ ಫೆಡರೇಶನ್,
2—2 ಮಡಿಕೇರಿ, (ಕೊಡಗು.)

---

## WANTED.

Candidates desiring to serve in Government Railway and Canal Departments. Full particulars and Railway Fare Certificate on 2 Annas stamps; apply to—

Imperial Telegraph College,
Nai Sarak,
4—3 Delhi

---

## Mangalore Tiles.

Roofing, ridge and flooring Tiles etc. will be supplied at any station in Coorg accessible to motor lorries. For rates please apply to—

Siddeeka Aboobakar,
Proprietor—Siddeek's Manure Works,
Mercara.

## ಮಂಗಳೂರು ಹೆಂಚುಗಳು.

1ನೇ ಕ್ವಾಸ್ ಮೂಡು ಹುಡು ಮತ್ತು ನೆಲಹುಡು ನಮ್ಮಲ್ಲಿ ದೊರಕುವದು. ನೋಟಾರ್ ಲಾರಿ ಹೋಗುವ ಕಡೆಗಳೆಲ್ಲೆಲ್ಲಾ ಸಾಗಿಸಿ ಕೊಡಲಾಗುವದು. ಹೆಚ್ಚಿನ ವಿಷಯಕ್ಕೆ ಗೆ ಳಗಿನ ವಿಳಾಸಕ್ಕೆ ಬರಕೊಳ್ಳಿ.

ಸಿದ್ದೀಕ್ ಅಬ್ಬುಬಕರ್,
24—24 ಮಡಿಕೇರಿ.

---

೨೫೦ ವಿಲಾಯತಿಯ ಸಾಮಾನುಗಳು ಅಡಗಿರುವ

## ಪ್ರೊವಿನ್ಷಿಯಲ್ ಬಾಕ್ಸ್

ಎಂಬ ಪೆಟ್ಟಿಗೆ ರೂ. 3—8—0 ಕ್ಕೆ ಕ್ರಯಕ್ಕೆ ಸಿಗುವುದು.



ಈ ನಕ್ಷೆಯಲ್ಲಿ ಕಾಣಿಸಿರುವ ಪೆಟ್ಟಿಗೆಯಲ್ಲಿ ತಯಾರಾಗಿದೆ. ಇದಕ್ಕೆ 14 ಕ್ಯಾರಟ್ಟಿನ ಭಂಗಾರದಲ್ಲಿ ನಿಬ್ಬು ಇರಿಸಿದೆ. ಈ ಪೆನ್ನಿನವನ್ನು ನಮ್ಮ 5ನೆಯ ತಿಂಗ್ ಚಾರ್ಜ್ ಚಕ್ರವರ್ತಿಯವರು ಕೊಂಡು ಸಾರ್ವೋಪಜಿಟ್ಟು ಬಹು ಮೆಲಾದ ಯೋಗ್ಯತಾಶಕ್ತಿ (Certificate) ಕೊಟ್ಟಿರುವರು. ಇಷ್ಟೊಂದಿಗೆ ಬಯಸಿದವರಿಗೆ ಉಚಿತವಾಗಿ ಕೊಡಲಾಗುವುದು.

ಇಷ್ಟೊಂದಿಗೆ ಬಯಸಿದವರಿಗೆ ಉಚಿತವಾಗಿ ಕೊಡಲಾಗುವುದು.

ಪ್ರೊವಿನ್ಷಿಯಲ್ ಬಾಕ್ಸ್ ಎಂಬ ಪೆಟ್ಟಿಗೆಯನ್ನು ನೋಡಿದಂತೆ ವಾಂಟನ್ ಪೆನಾವನ್ನು ತರಿಸಿಕೊಳ್ಳುವವರಿಗೆ ಇನಾಮಾಗಿ ಕೊಡುವೆವು.

ಕ್ರಯ ಬಹುಮೂಸದ ಪೆಟ್ಟಿಗೆ ಸಹಿತ ಪೆನ್ ಒಕ್ಕೆ ರೂ. 3—8—(

ವಿಳಾಸ—ಸಿಟಿ ಪೋರ್ಟ್,
52—48 168. ಜೈನಾ ಬಜಾರ್, ವಿ.ದ್ಯಾನ್

# ಕೊಡಗಿನಲ್ಲಿ ಸತ್ಯಾಗ್ರಹ.

## ಪೊನ್ನಂಪೇಟೆಯಲ್ಲಿ "ಪಿಕೆಟಿಂಗ್" ನಡೆಯುತ್ತಾ ಇದೆ.

**ಸೇಂದಿ, ಸಾರಾಯಿ ಅಂಗಡಿಗಳಲ್ಲಿ ಮೂರಾಟವು ಬಹಳ ಕಡಿಮೆಯಾಗಿದೆ.**

**ಪೊಲೀಸಿನವರ ಗಲಾಟೆ ಏನೂ ಇಲ್ಲ.**

**ಸತ್ಯಾಗ್ರಹಿಗಳು ಅಹಿಂಸಾತತ್ವವನ್ನು ಚೆನ್ನಾಗಿ ಪಾಲಿಸುತ್ತಿರುವರು.**

**ಸೇಂದಿ ಅಂಗಡಿಗಳನ್ನು ಹರಾಜಿನಲ್ಲಿ ಪಡೆಕೊಳ್ಳುವವರೇ ಇಲ್ಲವಾದರು!**

ಈ ತಾ. 10ರಲ್ಲಿ ಪೊನ್ನಂಪೇಟೆಯಲ್ಲಿ 4 ಜನ ಸತ್ಯಾಗ್ರಹಿಗಳಿಂದ ಪ್ರಾರಂಭವಾದ "ಪಿಕೆಟಿಂಗ್" ಈಗ ಸದಾ 15 ಜನ ಸ್ವಯಂಸೇವಕರಿಂದ ನಡಿಸಲ್ಪಡುತ್ತಿದೆ. ಇವರು ಸೇಂದಿ ಮತ್ತು ಸಾರಾಯಿ ಅಂಗಡಿಗಳೆರಡರ ಮುಂದೆ ನಿಂತು ಬೆಳಿಗ್ಯೆಯಿಂದ ರಾತ್ರಿ ವರೆಗೆ ನಿಷ್ಠಾ ಸೇವನೆ ಮಾಡಬಾರದೆಂದು ಸವಿಸುಡಿಗಳಿಂದ ಬೋಧಿಸುತ್ತಿರುವರು. ಇವರ ಸೂಚನೆಗಳನ್ನು ಕೇಳಿ ಜನರಿಂಗೆ ಮನಸ್ಸು ಕರಗಿ ಕುಡಿಯುವಿ ರಾತ್ರಿನು ಹೋಗುತ್ತಿರುವರು. ಆದಕಾರಣ ಸೇಂದಿ, ಸಾರಾಯಿದ ಬಹು ಜೋರು ಬಹಳ ಕಡಿಮೆಯಾಗಿದೆ. ಇಬೆಡಿ ಅಂಗಡಿಗಳ ವ್ಯಾಪಾರವು ಏನರಲ್ಲಿ ನಾಲ್ಕು ಭಾಗದಷ್ಟು ಕಡಿಮೆಯಾಗಿದೆಯೆಂದು ವರ್ತಮಾನವಿದೆ ಮತ್ತೆಯು ಸ್ವಲ್ಪ ನಷ್ಟಾರಂಭವಾದ ಕಾರಣ "ಪಿಕೆಟಿ" ಯಾಡುತ್ತಿರು ಕಪ್ಪವಾಗಿತ್ತಿದೆಯೆಂದು ತಿಳಿಯ ಬರುತ್ತದೆ "ಪಿಕೆಟಿಂಗಿನ" ವಿಷಯವು ಏನೊಂದು ಕಡೆ ಸ್ವಷ್ಟವಿಲ್ಲವಾಗಿಬಿಟ್ಟಿದೆ.

## ಒಳದೇಶ.

ಯಫ್ ಯಸ್. ಪರೀಕ್ಷೆಯಲ್ಲಿ ಈ ಸೊದಲು ಸ್ಕಾಟಿಷಿರುವವರಲ್ಲದೆ ಮೆ. ಮುಲ್ಲಂಗಳ ಮುಕ್ಕಣ್ಣನವರೂ ಸಹ ಪಾಸಾಗಿದ್ದಾರೆಂತ ತಿಳಿಸಲು ಸಂತೋಷ ಪಡುತ್ತೇನೆ.

ಮಡಿಕೇರಿ ಮುನ್ಸಿಪಾಲಿಟಿ ಹುನಾರನಿಗೆ ಈ ತಾ 24ರ ಒಳಗೆ ಉಮೇದ್ವಾರರ ಅರ್ಜಿ ದಾಖಲಾಗಬೇಕೆಂತಲೂ, ಜುಲೈ ತಾ. 19ರಲ್ಲಿ ಓಟು ತೆಗೆದುಕೊಳ್ಳಲಾಗುವದೆಂತಲೂ ನಿರ್ಣಯ ವಾಗಿದೆ.

ವೀರಾಜಪೇಟೆಯಲ್ಲಿ ಇದ್ದ ಫಾನ್ಸಿ ಬಜಾರ್ ಎಂಬ ಹೆಸರಿನ ಅಂಗಡಿಯು ಮೊನ್ನೆಯಿಂದ ಮೆ. ಪೊನ್ನಕಚ್ಚಿರ ಚಿಣ್ಣಪ್ಪನ ಪರು ತಾ. 14ರಲ್ಲಿ ಮೈಕರಾರರು ಎಂತ ತಿಳಿಸಲು ವಿಷಾದಿಸುತ್ತೇವೆ.

ನಿನಂಡಂ ನಾಚಪ್ಪನವರ ಪುತ್ರಿ ಪೊನ್ನಮ್ಮ ಬಿ ಎ. ಎಲ್. ಟಿ ಇವರಿಗೆ ಉಡುಪಿ ಮಹಿಳೆಯರ ಟ್ರೈನಿಂಗ್ ಸ್ಕೂಲಿನಲ್ಲಿ ಉಪಾಧ್ಯಾಯಿನಿ ಕೆಲಸವಾಗಿದೆಯೆಂತ ತಿಳಿಸಲು ಸಂತೋಷಪಡುತ್ತೇವೆ.

ಮೆ. ಕರ್ತವಾಡ ಮೇದೈಯ್ಯನವರ ಮಗಳು ಗಂಗಮ್ಮ ಬಿ ಎ. ಇವರಿಗೆ ಮೈಸೂರ್ ವಿದ್ಯಾಭ್ಯಾಸಕ್ಕೆ ಸರಕಾರದಿಂದ ತಿಂಗಳಿಗೆ 40 ರೂ. ವೇತನ ಮುಂಜರಾಗಿದೆಯೆಂತ ತಿಳಿಸಲು ಸಂತೋಷಪಡುತ್ತೇವೆ.

ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಸ್ವೆಂತವಾಗಿ ಎಲ್ಲಾ ಸಬ್ಜಕ್ಟುಗಳಲ್ಲಿ ಪರೀಕ್ಷೆಗೆ ಹೋದವರ ಪೈಕಿ ಬಿಟ್ಟಿಯಂಡ ಎಂ. ಪೂಣಚ್ಚಯ್ಯನವರು ಮತ್ತು ಚಾರಾಳ ಎ. ಅಪ್ಪಯ್ಯನವರು ಪಾಸಾಗಿರುತ್ತಾರೆಂದು ತಿಳಿಯುತ್ತೇನೆ.

ಕಳೆದ ಒಂಭತ್ತು ತಿಂಗಳಿಂದ ವಿಚಾರಿದ್ದಿದ್ದ ಮೆ. ಕೆ. ಪಿ. ಚಿಣ್ಣಪ್ಪನವರು ಲೋಕಸಾವನವನ ಸಂಪಾದಕರ ಮೇಲೆ ಕೊಟ್ಟ ಕ್ರಿಮಿನಲ್ ಕೇಸಿನ ವಿಚಾರವು ಮುಗಿದು, ಈ ತಾರೀಕಿ. 24ನೇ ಮಂಗಳವಾರಕ್ಕೆ ಮಡಿಕೇರಿಯಲ್ಲಿ ಆರ್ಡ್ಯಮೆಂಟಿಗೆ ಇಟ್ಟಿದೆ.

ತಾ. 15–7–30ರಲ್ಲಿ ಕೆಲಸದಿಂದ ನಿವೃತ್ತರಾಗುವ ಡಿಪ್ಯುಟಿ ಡೈರೆಕ್ಟರಾದ ಮೆ. ಕೆ. ಯನ್. ಸುಬ್ರಾಯರ ಬದಲಿಗೆ ಉತ್ತರ ಕೊಡಗಿನ ಸಬ್ ಡೆಪ್ಯುಟಿ ಕಲೆಕ್ಟರಾದ ಮೆ. ಎ. ಎಸ್. ಮಂದಣ್ಣನವರು ನೇಮಿಸಲ್ಪಡುವರೆಂದೂ, ಇವರ ಬದಲಿಗೆ ಪಾರು ಪತ್ತೆಗಾರ್ ಮೆ. ಕೋಡಿರ ಉತ್ತಪ್ಪನವರು ಸುಬೇದಾರರಾಗಿ ನೇಮಿಸಲ್ಪಡುವರೆಂದೂ ವರ್ತಮಾನವಿದೆ.

ಕಾಸೂರು ಗ್ರಾಮದ ಹೆಚ್ ಪೂಸ್ಟರಾಗಿದ್ದ ಮೆ ಡಿ. ಅಯ್ಯಪ್ಪನವರು ಮೃತರಾದರೆಂತಲೂ ಇವರ ಪತಿಗಾನಿನ ಆ ಶಾಲೆಗೂ ಆ ಶಾಲೆಗೆ ಸಂಬಂಧಪಟ್ಟ ಎಂಡು ಗ್ರಾಮಗಳಿಗೂ ತುಂಬಾ ನಷ್ಟವಾಯಿತೆಂತಲೂ ಇವರ ಮರಣಾನಂತರ ಆ ದ ಸಂತಾಪವನ್ನು ಸೂಚಿಸಲು ಕೋತೂರು ಯೂನಿಯನ್ನಿನ ಮೀಟಿಂಗು ಒಂದು ನಡೆಯುತೆಂತಲೂ ಒಂದು ಬಾತ್ಮಿ ಬಂದಿದೆ.

ಸ್ವಯಂಸೇವಕರು ನಿಷಾ ನಿಷೇಧದ ಚಳವಳಿನ್ನು ಗಾ ಮೂಂಕರಗಳಲ್ಲಿ ನಡಿಸುತ್ತಾ ಬಂದದರ ಫಲಿತಾಂಶವಾಗಿ ಹಲವು ಸೇಂದಿ ಅಂಗಡಿಗಳಿಗೆ ಬರುತ್ತಿದ್ದ ಸೇಂದಿಯು ಕಡಿಮೆಯಾಗಿದೆ. ಹೀಗೆ ಸೇಂದಿ ಬರುವುದು ನಿಂತು ಹೋದ ಕಾರಣ ಕುಟ್ಟದ ಬಳಿ ಇರುವ 'ಕಾಮಧೇನು' ಸೇಂದಿ ಅಂಗಡಿಯು ಕೆಲವು ದಿವಸಗಳಿಂದ ಮುಚ್ಚಲ್ಪಟ್ಟಿದೆ ಎಂದು ಸುದ್ದಿ. ಅಲ್ಲದೆ ಪೊನ್ನಂಪೇಟೆ ಮತ್ತು ಬಿಟ್ಟಂಗಾಲ ಅಂಗಡಿಗಳ ಕಂಟ್ರಾಕ್ಟುದಾರರು ತಮ್ಮ ತಂತು ಪಣ ಕಟ್ಟಲಾಗದ ಕಾರಣ ಪೊನ್ನಂಪೇಟೆ ಅಂಗಡಿಯನ್ನು ತಾ. 16ರಲ್ಲಿ ಪೊನ್ನಂಪೇಟೆಯಲ್ಲೂ, ಬಿಟ್ಟಂಗಾಲ ಅಂಗಡಿಯನ್ನು ತಾ. 18ರಲ್ಲಿ ವೀರಾಜಪೇಟೆಯಲ್ಲೂ ಪುನಹ ಹರಾಜು ಮಾಡಿದರು. ಸತ್ಯಾಗ್ರಹಿಗಳ ನಿಷಾ ನಿಷೇಧ ಪ್ರಚಾರವೆ ಮಿಟಿಂಗುಗಳಲ್ಲಿ ಫಲಿತಾಂಶವಾಗಿಯೂ, ಪಿಕೆಟಿಂಗಿನ ದೆಸೆಯಿಂದಲೂ ಈ ಅಂಗಡಿಗಳನ್ನು ಹರಾಜಿನಲ್ಲಿ ಕೂಗಿ ಸಡಿಸಿಳ್ಳಲು ಯಾರೂ ಮುಂದೆ ಬರಲಿಲ್ಲವೆಂದು ತಿಳಿಯಲು ಸಂತೋಷಪಡುತ್ತೇವೆ.

## ಹಿಂದೂದೇಶ.

**ಲೆಜಿಸ್ಲೇಟಿವ್ ಎಸೆಂಬ್ಲಿಗೂ, ಕೌನ್ಸಿಲ್ ಆಫ್ ಸ್ಟೇಟಿಗೂ ಬರುವ ಸೆಪ್ಟೆಂಬರ್ ತಿಂಗಳಲ್ಲಿ ಚುನಾವಣೆ ನಡೆಯತಕ್ಕದಿದೆ.**

ಉತ್ತರ ಹಿಂದೂಸ್ಥಾನದ ಕೆಲವು ಸ್ಥಳಗಳ ಇಂಗ್ಲಿಷ್ ಪತ್ರಿಕೆಗಳು ಮಹಾತ್ಮಗಾಂಧಿಯವರ ಹೋರಾಟದ ರೀತಿ ಕ್ರಿಸ್ತನ ರೀತಿಯನ್ನು ಹೋಲುತ್ತಿವೆ. ಹಿಂದೂಸ್ಥಾನದ ರಾಜಕೀಯ ಭವಿಷ್ಯತ್ತನ್ನು ನಿರ್ಣಯಿಸುವ ಹಕ್ಕನ್ನು ಹಿಂದೀಯರಿಗೆ ಗೊನೇ ಬಿಡಬೇಕೆಂತ ವಗೈರೆ ಸಂಗತಿಗಳು ಒಂದು ವಿಜ್ಞಾಪನಾ ಪತ್ರವನ್ನು ಹೊರಡಿಸಿರುತ್ತಾರೆ.

ಕಳೆದ ವಾರ ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುತನಕ್ಕೆ ಮಿಸ್ ಡಿಸ್ಕಾಸನ್ ಎಂಬವರು ರಾಜೀನಾಮೆ ಕೊಟ್ಟರೆಂತ ತಿಳಿಸ್ದೇವನ್ನೆ. ಇವರಿಗೆ ಸರ್ಕಾರದಿಂದ ಮಂಜೂರಾಗಿದ್ದ ಬೈಸರಿ ಹುದ್ದೆ ಚಿತ್ತದ ಮೇಗಲನ್ನೂ ಇವರು ನಿರಾಕರಿಸಿರುತ್ತಾರೆ. ಸರ್ಕಾರದ ಅಕೃತ್ಯಗಳಿಗೆ ತನ್ನ ಅಕೃತ್ಯವನ್ನು ಸೂಚಿಸಲಿಕ್ಕಾಗಿ ಹೀಗೆ ಮಾಡಿರುವದಾಗಿ.

ತಮಿಳು ನಾಡಿನಲ್ಲೂ, ಮಲಬಾರಿನಲ್ಲೂ, ಬೆಂಗಳಾಯಿ ಕರ್ನಾಟಕದಲ್ಲೂ, ಆಂಧ್ರದೇಶದಲ್ಲಿ ಅಸ್ಪೃಸ್ಯ ಜಾತಿಯವರಿಗಾಗಿ ಮತ್ತು ರಾಜಪ್ರೋಹದ ಖಾಯಿದೆ ಭಂಗ ಮುಂತಾದವ್ರ ಪ್ರಸನಿಂದ ನಡೆಯುತ್ತಲೇ ಇದೆ. ಬೊಂಬಾಯಿ ಪಟ್ಟಣದಲ್ಲಿ ಪಿಕೆಟಿಂಗನ್ನು ನಿಷೇಧಿಸುವ ಖಾನೂನು ಜಾರಿಗೆ ಬಂದ ಮೇಲೆ ಪಿಕೆಟಿಂಗ್ ತುಂಬಾ ಉತ್ಸಹದಿಂದ ನಡೆಯು ತ್ತಿದೆ. ಸ್ವಯಂಸೇವಕರು ಜೈಲಿಗೆ ಹೋಗುತ್ತಲೇ ಇದ್ದಾರೆ. ಯಾವ ನ್ಯಾಯಾಧ್ಯದಲ್ಲೂ ಚಳವಳಿಯು ಕಡಿಮೆಯಾಗಿಯುವುದಿಲ್ಲ.

"ಹಿಂದೂ" ಪತ್ರಿಕೆಯ ಸಂಪಾದಕರಾದ ಶ್ರೀ ಎ. ರಂಗಸ್ವಾಮ್ಯೆಯ್ಯಂಗಾರರು, "ಲೀಡರ್" ಪತ್ರಿಕೆಯ ಸಂಪಾದಕರು ಸಿ. ವೈ. ಚಿಂತಾಮಣಿ "ಕೇಸರಿ" ಪತ್ರಿಕೆಯ ಸಂಪಾದಕ ರಾದ ಶ್ರೀ ಕೇಲ್ಕರರು ಮತ್ತು 'ಅಸ್ಪೃಶ್ಯ ಬಜಾರ್' ಪತ್ರಿಕೆಯ ಸಂಪಾದಕರು ಸೆಪ್ಟೆ ಈ ತಾರೀಕು 19ರಲ್ಲಿ ಬೈಕಾಯ ರನ್ನು ಪೂನಾ ಆರ್ಥರ್‌ಸೀಟ್‌ನ್ನು ವಿತೆಂಧಿಸಿಲು, ಹೋಗಿದ್ದಾಗ ಪಲಿತಾಂಶವೇನಾಯಿತೆಂತ ತಿಳಿದಿರುವಿರಿ.

ಮಂಗಳೂರಿನ ಸತ್ಯಾಗ್ರಹಿಗಳ ಚಟುವಟಿಕೆಗಳು ದಿನ ಹೋ ದಂತೆ ಹೆಚ್ಚಾಗುತ್ತಿವೆ. ಮಜ್ಜಿದುರಗಡಿಗಳ ಮುಂದೆ ಪಿಕೆಟಿಂಗ್ ನಡೆಸುವದೇ ಮುಖ್ಯ ಕಾರ್ಯಂಗವನ್ನಾಗಿಟ್ಟುಕೊಂಡಿರುವರು. ವಾರದಕ್ಕೊಮ್ಮೆ ಉಪವಾಸ ಕುಳಿತಿದ್ದಾರೆ. ರವಿವಾರ ಸ್ವಯಂಸೇವಕರ ವಿಶೇಷ ಪ್ರಸ್ತೆ ಹೋಳಿ ನಡೆಯುತ್ತಿದೆ. ವಿಠಲಾಚಾರ್ ಸಾರ್ವಜನಿಕ ಸಭೆಗಳು ಕೂಡುತ್ತಿರುವವು ಖಲೆಕ್ಟರ ಯಾಕುಮಿಗೆ ವಿರೋಧವಾದ ಪಿಕೆಟಿಂಗ್ ನಡಾವುವರಿಗೆ ಸಜೆಯೂಗುತ್ತಲಿದೆ

ಮಂಗಳೂರಿನಲ್ಲಿ ತಾ. 12ರಲ್ಲಿ ಹಾದಿನ ದಿನ ನಿರ್ಣಾಯವಾದಂತೆ ಅಪರಾಹ್ನ 3 ಗಂಟೆಗೆ ಪಟ್ಟದ ವ್ಯಾಪಾರಿಗಳೆಲ್ಲರೂ ಕಡ್ಡಂಬಿಗಳನ್ನೂ, ಧಂದ ಶಾಲೆಗಳನ್ನು ಮುಚ್ಚಿ ಒಂದರನಿಂದ ಮೆರವಣಿಗೆ ಹೊರಟು, ರಥಬೀದಿಯ ವರ್ಗಾವಾಗಿ ಹುಸನ ಕಟ್ಟೆಯಿಂದ ಬೆಟ್ಟದಾನಿಗೆ ಬಂದು ಪ್ರಚಂಡ ಸಭೆಯಾಯಿತು. ಸಭೆಯಲ್ಲಿ ಪ್ರತಿಯೊಬ್ಬರೂ ರಾಷ್ಟ್ರ ಕಾರ್ಯದಲ್ಲಿ ಭಾಗ ವಹಿಸಲು ಮುಂದುವರಿಯಬೇಕೆಂದೂ, ಬಂದಿ ಧಿಗಳಿಗೆ ಬೇಕೆಂದೂ, ಸತ್ಯಾಗ್ರಹ ನಿಧಿಗೆ ಸಾಕಾರು ಮಾಡಬೇಕೆಂದೂ ವಿನಂತಿಸಿ ಭಾಷಣಗಳಾದವು.

ನಾಗಪುರದಲ್ಲಿ ಕೈತ್ಯಿಯನರ ಸಭೆ ಒದು ಕೂಡಿ ಬು ಲೈ ತಿಂಗಳಿಂದ ಮೊದಲನೇ ಅರಿಕ್ಕುವಾರ ಡಕ್ಕಿನಲ್ಲಿ ವರ್ಷ ಆಗುವ ಧರ್ಮಾದ ಹಣವನ್ನು ಬೊಂಬಾಯಿಯುಲ್ಲಿ ಕಾಂಗ್ರೆಸ್ ಸತ್ಯಾಗ್ರಹಿಗಳ ಉಪಯೋಗಕ್ಕಾಗಿ ವಿನಿಯೋಗವಾಗಿರುವ ಆ ನ್ಯಾಯಕ್ಕೆ ಕೊಡಬೇಕೆಂತಲೂ, ಪರೋಕ್ಷ ಒಟ್ಟಿಯನ್ನು ಕೊಳ್ಳ ಬಾರದೆಂತಲೂ, ದೇಶದ ಹಿಗಿನ ಪೋಲೀಸಾಳಿಕ್ಕೆ ಜಯವಾಗು ವಂತೆ ಎಲ್ಲಾ ಗುಡಿಗಳಲ್ಲೂ ಒಂದು ದಿನ ಪ್ರಾರ್ಥನೆ ಸಡಿಸ ಬೇಕೆಂತಲೂ, ಪ್ರತಿಯೊಬ್ಬನು ತನ್ನ ವ್ಯಾಧ್ಯಾನದಲ್ಲಿ ದೇಶದ ಅಭ್ಯುದಯ ಸ್ವಸ್ಥಿಕೆಗೆ ತೆಂಬಲ ತೀರ್ಮಾನಿಸಿಕೊಂಡಿರುವಂತೆಯೂ.

ಆಹಮದಾಬಾದಿನಲ್ಲಿ ಒಂದು ಸಾರಾಯಿ ಅಂಗಡಿಯನ್ನು ಪಿಕೆಟ್ ಮಾಡುತ್ತಿದ್ದಾಗ ಒಬ್ಬ ಸಿಂಧಿ ಮನುಷ್ಯನು ಒಬಾಯಿಂದ ಅಂಗಿಗೆ ಹೋಗಿ ಎಂಟು ಸೀಸೆ ಸಾರಾಯಿಯನ್ನು ಕೊಂಡು ಕೊಂಡು ಬಂದನು ಸ್ವಯಂ ಸೇವಕರು ತಾವಾಗಿ ಅಕ್ಕಪಕ್ಕಗಳಲ್ಲಿ ಮಲಗಿದರು ಸ್ವಯಂಸೇವಕರನ್ನು ತ್ರೋಸಿಕೊಂಡು, ದಬ್ಬಿಗಿ ನೂಡಿದನು. ಅವನ್ನು ನೋಡಿ ಸಿಟ್ಟಾ ಮಲಗಿದನು ಸಾರಾಯಿ ಅಂಗಡಿಯ ತಾಗಳಿಗೆ ತಾವನೆ ತೊಳಲು ಹೇಳಿದನು. ಅಂಗಡಿಯವನು ತೆಗೆಯಲಿಕ್ಕಿಲ್ಲ. ಆಗ ಬಾಟ್ಲಿಗಳನ್ನು ನೆಲಕ್ಕೆ ಎಸೆದು ಒಡೆದನು. ಆಗ ಆ ಯಜಮಾನನನ್ನು ಸಡಿ ಪೋಲೀಸರು ದಸ್ತಗಿರಿ ಮಾಡಿದರು.

ಕಾಂಗ್ರೆ ಪ್ರೆಸಿಡೆನ್ಸಿಗೆ 50 ಪ್ರತಿಶತ ಇದಿ ಯಾದ ಸ್ಥಾನಮಾನಗಳು, 12 ಪ್ರೊವಿನ್ಸಿಯರ್ ಗಳ ಸ್ವಯನಿರ್ಧಿಗಳ ಪೈಕಿಗೆಯಂತೆ ತೀರ್ಮಾನವಾಗಿದೆ. ಇದರ ಪ್ರಕಾರ ಹಿಂದೂಸ್ಥಾನದ ಸೈನ್ಯಾವ್ಯಯ ೬೫,೦೦,೦೦೦ ರೂ. ಬ್ರಿಟಿಷ್ ಪೊಲೀಸು ಅಂದಾಜು ಮಾಡಲಾಗಿದೆ. ಈ ಕಾನೂನಪಸ್ಸಿನ್ನು ಇಂಗ್ಲೆಂಡಿನಲ್ಲಿ ಎರಡು ತಿಂಗಳ ಒಳಗೆ ನಡೆಯುವುದೆಂತ ಅಂದಾಜು ಮಾಡಲಾಗಿದೆ. ಇಂಗ್ಲೆಂಡಿನಲ್ಲಿ ಮೊಂಬಾಯಿಗಳ ಆತಿಥ್ಯವನ್ನು ಇಂಗ್ಲೆಂಡಿನ ಸರ್ಕಾರವೇ ನಡಿಸುತ್ತಿದ್ದೆಯೂ ಮೊಂಬಾಗಿನಿಂದ 100 ಪೌಂಡು ಎತ್ತೀವೆಸ್ಟ್ ಮತ್ತು ದಿನ ಒಂದರ 25 ವಿಂಗಳಿಗೂ ಊಟ ಅಂದಾಜಾದರೆ ಬಿರ್ಮಾ ದೇಶಕ್ಕೆ ಸಂಬಂಧಪಟ್ಟ ಕಾನ್ಫರೆನ್ಸಿನ ಖರ್ಚು ಬರ್ಮಾದ ಸರ್ಕಾರವೇ ಕೊಡುವುದೆಂತ ಅಂದಾಜಾಗಿದೆ. ಈ ಕಾನ್ಫರೆನ್ಸಿನ ಪ್ರಮುಖ ಉದ್ದೇಶವು ಸಂವಿಧಾನವನ್ನು ಕುರಿತು ಚರ್ಚೆ ಮಾಡುವುದಾಗಿದೆ. ಈ ಕಾನ್ಫರೆನ್ಸಿನಲ್ಲಿ ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳಲ್ಲದೆ ಹಿಂದೂಸ್ಥಾನದ ಸಂಸ್ಥಾನಿಕರು, ಬ್ರಿಟಿಷ್ ಇಂಡಿಯಾದ ಪ್ರತಿನಿಧಿಗಳು ಸೇರಿ ಒಟ್ಟು 114ಜನ ಸೇರುವರೆಂತ ತಿಳಿದು ಬಂದಿದೆ. ಈ ಕಾನ್ಫರೆನ್ಸಿನ ಕಾರ್ಯವು ಸುಮಾರು ಮೂರು ತಿಂಗಳು ನಡೆಯುವುದೆಂತ ಅಂದಾಜು ಮಾಡಲಾಗಿದೆ.

## ಯರವಡಾ ಆಶ್ರಮದಿಂದ ಮಹಾತ್ಮರ ಸಂದೇಶವು.

ಇಂಗ್ಲೆಂಡದಲ್ಲಿ ಈಗ ಕೂಲಿಕಾರರ ಪಕ್ಷವೇ ಪ್ರಬಲವಿದ್ದು, ಅವರೇ ಈಗ ಇಂಗ್ಲೆಂಡನ್ನು ಆಳುತ್ತಾರೆ. 'ಡೆಯಿಲಿ ಹೆರಲ್ಡ್' ನೆಂಬುದು ಅವರ ಪ್ರಮುಖ ವರ್ತಮಾನ ಪತ್ರವು. ಆ ವೃತ್ತಪತ್ರದ ಒಬ್ಬ ಸ್ನೇಹಿತರೆಂಬ ಸುದ್ದಿಗಾರನು ಮೈಸೂರಾಯರ ಅಪ್ಪಣೆಯನ್ನು ಪಡೆದು ಯರವಡಾ ಆರಮನೆಯಲ್ಲಿ ಮಹಾತ್ಮ ಗಾಂಧಿಯವರನ್ನು ಕಂಡು ಅವರೊಡನೆ ಸಮ್ಮುದ್ದ ಪರಿಸ್ಥಿತಿಯನ್ನು ಕುರಿತು ಮಾತನಾಡಿದರು. ಆ ಕಾಲಕ್ಕೆ ಯರವಡಾ ಆರಮನೆಯ ಮುಖ್ಯಾಧಿಕಾರಿಗಳಾದ ಪಟೇಲರವರೂ ಮತ್ತು ಇನ್ನೂರು ಅಧಿಕಾರಿಗಳೂ ಇದ್ದರು. ಶ್ರೀ. ಸ್ನೋ ಕೊಂಬರನ್ನು ಭೇಟಿಯಾಗಲು ಮಹಾತ್ಮರು ಮುಗುಳು ನಗೆನಗುತ್ತ ಬಂದರು. ಬಂದು ಒಂದು ಬೆತ್ತದ ಕುರ್ಚಿಯ ಮೇಲೆ ಕೂತರು. ಮಹಾತ್ಮರು ಸ್ನೋ ಕೊಂಬರ ಕೂಡಿ ಆಡಿದ ಮಾತುಗಳನ್ನು ಕೆಲವನ್ನು ಇಲ್ಲಿ ಕೊಟ್ಟಿದ್ದೇವೆ —

"ಬ್ರಿಟಿಷರ ಆಳಿಕೆಯನ್ನು ನಾನು ದ್ವೇಷಿಸುತ್ತೇನೆ ಹಿಂದೂಸ್ಥಾನದಲ್ಲಿಯ ಬ್ರಿಟಿಷರು ಹಿಂದೂಸ್ಥಾನದಲ್ಲಿನ ದುಃಖಕ್ಕೆ ಕಾರಣರಾಗಿದ್ದಾರೆ. ಆದರೆ ಬ್ರಿಟಿಷರ ವಿಷಯಕ್ಕೆ ನನಗೆ ದ್ವೇಷವಿಲ್ಲ. ಅವ್ಯಕ್ತಿಕ ದ್ವೇಷವೇನೂ ಇಲ್ಲ. ಇಂಗ್ಲೆಂಡಿನಲ್ಲಿ ನನ್ನ ಜೀವದ ಗೆಳೆಯರು ಅನೇಕರಿದ್ದಾರೆ ಬ್ರಿಟಿಷರ ಇತಿಹಾಸದಲ್ಲಿನ ಎಷ್ಟೋ ಸಂಗತಿಗಳ ವಿಷಯಕ್ಕೆ ನನಗೆ ಆದರವಿನಿಸುತ್ತದೆ"

"ಸ್ವಾತಂತ್ರ್ಯಕ್ಕೂ ವಿಸಾಹತಿನ ಸ್ವೌರಾಜ್ಯಕ್ಕೂ ಏನೂ ಅಂತರವಿಲ್ಲವೆಂದು ಇಂಗ್ಲೆಂಡಿನಲ್ಲಿನ ಜನರು ತಿಳಿಯುತ್ತಾರೆ ಆದರೆ ಇಲ್ಲಿನ ಆಳರವರು ಹಾಗೆ ತಿಳಿಯುವುದಿಲ್ಲ. ಆದುದರಿಂದಲೇ ನಾವು ಸಂಪೂರ್ಣ ಸ್ವಾತಂತ್ರ್ಯವನ್ನ ಕೇಳುತ್ತೇವೆ"

"ನಾನು ಸತ್ಯಾಗ್ರಹವನ್ನು ಪ್ರಾರಂಭ ಮಾಡುವಾಗ ಅದು ಎಷ್ಟು ದೊಡ್ಡ ಸಾಹಸವಿದೆಯಂಬುದನ್ನು ಸಂಪೂರ್ಣ ವಿಚಾರ ಮಾಡಿದ್ದೇನೆ."

"ಸೋಶಾಪುರದಲ್ಲಿ ಇಬ್ಬರು ಪೊಲೀಸರು ಕೊಲ್ಲಲ್ಪಟ್ಟರೆಂದು ಕೇಳಿದ್ದೇನೆ. ಆದರೆ ಅದರಲ್ಲಿ ಸತ್ಯಾಗ್ರಹಿಗಳು ಯಾವ ರೀತಿಯಿಂದಲೂ ಅಪರಾಧಿಗಳಿದ್ದಾರೆಂದು ನನಗೆ ಅನಿಸುವದಿಲ್ಲ. ಎಲ್ಲವನ್ನೂ ಆನಂದದಿಂದ ಸಹಿಸಲು ಸತ್ಯಾಗ್ರಹಿಗಳು ಸಿದ್ಧರಿದ್ದಾರೆ"

"ನಾನು ಯಾವಾಗಲೂ ಒಳ್ಳೆಯದನ್ನು ಅಪೇಕ್ಷಿಸುತ್ತೇನೆ. ಈಗ ನಲ್ವತ್ತು ವರ್ಷಗಳಲ್ಲಿ ಅನೇಕ ಸಾರಿ ನಾನು ಪ್ರಾರಂಭಿಸಿದುದನ್ನು ಅವ್ಯವಹಾರ್ಯವೆಂದು ಅನೇಕರು ಅಂದರು. ಪ್ರತಿ ಸಾರಿ ಕಡೆಗೆ ನಾನೇ ಯಸಸ್ವಿಯಾಯಿತು. ಆದರೂ ನಾನು ಶಾಂತಿ ಸಂಧಾನಕ್ಕೆ ಅಲ್ಲಗಳೆಯುವದಿಲ್ಲ. ನನ್ನ ಅಬಾಧ ಆಯುಷ್ಯವೇ ಶಾಂತಿ ಸಂಧಾನಗಳ ಎಣಿಕೆಯಾಗಿದೆ."

"ನೈಕ್ಷದ ಪರೀಕ್ಷೆಯನ್ನು ಆದರಿಂದಾಗುವ ಫಲಗಳಿಂದಲೇ ನಾನು ಮಾಡುಬಲ್ಲೆ. ಸರಕಾರವು ಸಹಾನುಭೂತಿಯುಳ್ಳದ್ದಾಗಿದ್ದರೆ ನಾನು ಈಗಿದ ಹನ್ನೊಂದು ಮಾತುಗಳನ್ನು ಆವರು ಒಪ್ಪಬೇಕು."

"ನಮ್ಮ ರಾಜಕೀಯ ಆಕಾಂಕ್ಷೆಗಳು ಸಫಲವಾಗುವವರೆಗೆ ಕಡೆ ತನಕ ನಾವು ಹೀಗೇ ಹೋರಾಡುವೆವು. ಬೇಕಾದರೆ ನಮ್ಮ ವ್ಯಾಜಗಳನ್ನು ರಾಷ್ಟ್ರೀಯ ಮಹಾಯಜ್ಞದ ಕುಂಡದಲ್ಲಿ ಆನಂದದಿಂದ ಆರ್ಪಿಸುವೆವು. ಸತ್ಯಾಗ್ರಹಿಗಳಿಂದ ಎಲ್ಲಾ ಕಾರಾಗೃಹಗಳನ್ನು ತುಂಬುವೆವು. ಆಡಳಿತೆಯು ಮುಂದೆ ಸಾಗುವಂತೆ ಮಾಡುವೆವು."

"ಈಗಲೂ ನಾವು ಸಂಧಾನಕ್ಕೆ ಸಿದ್ಧರಿದ್ದೇವೆ. ಈ ಕೆಳಗಿನ ಕರಾರುಗಳಿಗೆ ಸರ್ಕಾರದವರು ಒಪ್ಪಬೇಕು."

(೧) ಉಪ್ಪಿನ ಕರ, ಪರದೇಶಿ ಒಟ್ಟಿಯ ಬಹಿಷ್ಕಾರ, ಮೆತ್ತು ಮದ್ಯವಾನ ಇಂದಿ ಇವುಗಳ ವಿಷಯದಲ್ಲಿಯ ನನ್ನ ಬೇಡಿಕೆಗಳನ್ನು ಸೆರೆಕಾದವರು ಒಪ್ಪಬೇಕು.

(೨) ಯುದ್ಧವು ನಿಂತೆಹಡೆನೆ ರಾಜಕೀಯ ಸೆರೆಯಾಳುಗಳನ್ನ ಬಿಟ್ಟುಬಿಡಬೇಕು.

(೩) ದುಂಡು ಮೇಜಿನ ಪರಿಷತ್ತಿನಲ್ಲಿ ಸಂಪೂರ್ಣ ಸ್ವಾತಂತ್ರ್ಯದ ವಿಚಾರವಾಗಬೇಕು.

(೪) ಉಳಿದ ೩ ಬೇಡಿಕೆಗಳನ್ನು ಮುಂದೆ ವಿಚಾರಿಸಬೇಕು.

"ಕರ್ಮವೀರ"

---

### ಇಂಡಿಯೂ ದೇಶದ ರಾಜಕೀಯ ಪರಿಸ್ಥಿತಿ.

(ಮೈಸೂರು ದಿವಾನರ ಭಾಷಣದಿಂದ)

ಮಹಿಳೆಯರೇ, ಮಹಾಶಯರೇ, ಇಂಡಿಯೂದೇಶದ ರಾಜಕೀಯ ಪರಿಸ್ಥಿತಿಯು ನಾವು ಆತ್ಯವಶ್ಯವಾಗಿ ಗಮನಿಸಬೇಕಾದ ವ್ಯಾಪ ಎಷ್ಟು ವಿಚಾರವಾಗಿದೆ. ಆದನ್ನು ಕುರಿತು ನಾನು ಹಿಂದೆರಡು ಮಾತುಗಳನ್ನು ಹೇಳುವೆನು. ಇಂದಿನ ರಾಜಕೀಯ ಪರಿಸ್ಥಿತಿಯು ಕ್ಷೋಭೆಗೊಂಡ ಸಮುದ್ರದಂತಾಗಿದೆ. "ಮುಂದೇನು ನಡೆವುದೊ, ಮುಂದೇನು ನಡೆಯುವುದೊ" ಎಂಬುದಾಗಿ ನಾವು ತವಕದಿಂದಲೂ, ಕುತೂಹಲದಿಂದಲೂ ಕಳವಳಗೊಳ್ಳುವಂತಾಗಿದೆ. ಇಂಡಿಯೂದೇಶವು ಈಗ ಕೇವಲ ಸಂದಿಗ್ಧವಾಗಿ ಮಿಗ್ಗುಟ್ಟಿಗೆ ಒಂದಿರುವ ವಿಷಮ ಸ್ಥಿತಿಯ ವಾತಾವರಣದಿಂದ ಕೂಡಿದೆ. ಈಗಿನ ತೋಷಣೀಯವಾದ ಪರಿಸ್ಥಿತಿಯು ಕೊನೆಗೆ ಯಾವ ವಿಧದಲ್ಲಿ ಪರ್ಯವಸಾನಹೊಂದುವುದೆಂಬುದನ್ನು ಯಾರೂ ಹೇಳುವಂತಿಲ್ಲ. ಉತ್ಕನು ರೀತಿಯಲ್ಲಿ ಎಲ್ಲವೂ ಸುಮುಖವಾಗಿ ಪರಿಣಾಮಹೊಂದಲೆಂಬುದಾಗಿ ಹಾರೈಸುವುದು ಮಾತ್ರವೇ ಸಾಧ್ಯ. ನಾನಾ ಸುಸಾಧ್ಯಗಳಲ್ಲಿಯೂ ಇರುವ ನಮಗೂ, ನಮ್ಮ ನಮ್ಮ ದೇಶಗಳ ಸೌತ್ವಮುತ್ಕಲೂ ಬ್ರಿಟಿಷ್ ಇಂಡಿಯೂದಲ್ಲಿ ಜರುಗುತ್ತಿರುವ ಘಟನಾವಳಿಗಳೂ ಪ್ರತ್ಯಕ್ಷವಾಗಿ ಯಾವುದೊಂದು ಸಂಬಂಧವೂ ಇಲ್ಲದಿರಬಹುದು. ಆದರೂ, ಅವುಗಳ ಪರಿಣಾಮಫಲದಿಂದ ಮಾತ್ರ ನಾವು ತಪ್ಪಿಸಿಕೊಳ್ಳುವಂತೆಯೇ ಇಲ್ಲ. ಇಂಡಿಯೂದೇಶದ ಇತರ ವ್ಯಾಸಂಕ್ಯಗಳವರಂತೆಯೇ ನಾವೂ ಅವುಗಳ ಫಲಿತಾಂಶವನ್ನು ತಪ್ಪದೆ ಅನುಭವಿಸಲೇ ಬೇಕಾಗುವುದು.

ಈಗ ನಡೆಯುತ್ತಿರುವ ಹೋರಾಟದಲ್ಲಿ ಉಭಯ ಪಕ್ಷದವರೂ ಸಿದುದ್ದೇಶದಿಂದಲೇ ಕೂಡಿದ್ದಾರೆ. ಉಭಯ ಪಕ್ಷದವರೂ ಭರತ ಖಂಡದ ಹಿತಚಿಂತಕರಾಗಿ, ಭರತಖಂಡದ ಅಭ್ಯುದಯವನ್ನೇ ಕೋರಿ ಭರತಖಂಡದ ಪುರೋಭಿವೃದ್ಧಿಗೆ ಮಾರ್ಗವನ್ನು ಕಲ್ಪಿಸಲು ತೀವ್ರಾ ಶಕ್ತಿಯಿಂದ ಕೂಡಿದ್ದಾರೆ. ಹೀಗಿದ್ದೂ ಇಂದಿನ ರಾಜಕೀಯ ಕ್ಷೇತ್ರದಲ್ಲಿ ಇಂಥಾ ವಿಷಮ ಪರಿಸ್ಥಿತಿಯುಂಟಾಗಿದೆಯಶ್ಟಾ—ಎಂದು ನನ್ನ ಮನಸಿಗೆ ವಿಸಾದವಾಗುತ್ತದೆ. ಪರಿಣಾಮದಲ್ಲಿ ಪಡೆಯಬೇಕಾದ ಕಾರ್ಯ ಸಿದ್ಧಿಯ ಸಕ್ಷಲವೇನೋ ಎಲ್ಲರ ಮನೋ ನೇತ್ರಗಳಿಗೂ ಗೋಚರಿಸುತ್ತ ಕಂಗೊಳಿಸುತ್ತಿದೆ ಆದನ್ನು ನಮಗೆ ದೊರೆಯಿಸಲು ಹೊಂಟಿರುವ ಉಭಯ ಪಕ್ಷಗಳವಲ್ಲಿ ಒಂದು ಕಡೆಗೆ ನೋಡೋಣವೇ? ಸ್ವದೇಶ ಪ್ರೇಮದಿಂದ ಅನುವ್ಯಾಣಾತರಾಗಿ ಭಾರತ ವರ್ಷದ ಭಾವೋನ್ನತ್ಯಿಯೇ ಮೂರ್ತಿವತ್ತಾಗಿ ರೂಪದನ್ನು ತಳೆದು ಬಂದಂತೆ ತೋರುವ ಮಹಾನೀಯರು ನಾಯಕರಾಗಿ ನಿಂತಿದ್ದಾರೆ. ಈಚೆಗೆ ಇಂಡಿಯೂ ದೇಶದಲ್ಲಿ ಅನೇತುಹಿಮಾಚಲ ಪರ್ಯಂತವಾಗಿ ಪ್ರವಾಹ ತರಂಗಗಳಂತೆ ಎಲ್ಲೆಡೆಗಳನ್ನೂ ವ್ಯಾಪಿಸಿ ದಿನ ದಿನಕ್ಕೂ ವೃದ್ಧಿ ಹೊಂದುತ್ತಿರುವ ಜನಪದ ಜಾಗೃತಿಯ ಅತಿಯಗಳನ್ನೂ, ಆ ಪೋತ್ಕರಗಳನ್ನೂ ಭಾವ ಪೂರಿತವಾದ ಧೀರವಾಣಿಯಿಂದ ಸೂಚಿಸಲು ಆದರಶ್ಟು ಸಮರ್ಥರಾದವರು ಮತ್ತಾರೂ ಇಲ್ಲವೆಂದು ಹೇಳಬಹುದಾಗಿದೆ. ಇಂಥವರು ಪಕ್ಷವನ್ನವಲಂಭಿಸಿ ನಿಂತಿದ್ದಾರೆ. ಮತ್ತೊಂದು ಕಡೆ ನೋಡಿದರೆ ಉನ್ನತ್ತಿಯನ್ನು ಸಾಧಿಸಿರುವ ದೊಡ್ಡದೊಂದು ಜನಾಂಗದ ಯೋಗ್ಯ ಪ್ರತಿನಿಧಿಯೆನಿಸಿರುವ ವಿವೇಕ ಶಾಲಿಗಳೂ, ಗೌರವಾನ್ವಿತರೂ, ರಾಜನೀತಿಜ್ಞರೂ ಆದ ಮಹನೀಯರೊಬ್ಬರ ಪ್ರಧಾನ ಪುರುಷರಾಗಿ ನಿಂತಿದ್ದಾರೆ. ಅವರು ಉಭಯರ ಭಾವನೆಯುಳ್ಳ ಸಹೃದಯರೆಂಬುದೂ, ಆವರಿಗೆ ಭರತಖಂಡದ ವಿಷಯದಲ್ಲಿ ವಿಶೇಷ ಪ್ರೇಮ ಉಂಟೆಂಬುದೂ, ಸರ್ವಾನುಮತದಿಂದ ಅಂಗೀಕೃವಾದ ಅಂತಿಗಳಾಗಿವೆ. ಈಗ ಎದುರಾಳಿಗಳಾಗಿ ನಿಂತಿರುವ ಉಭಯ ಪಕ್ಷಗಳವರೂ ಸಮಾಧಾನ ಹೊಂದಿ ಸೌಹಾರ್ದ ಭಾವದಿಂದ ಒಮ್ಮತ ಸಮ್ಮತವಾದೊಂದು ತೀರ್ಮಾನಕ್ಕೆ ಒಬ್ಬರಂತೆ ಮಾಡುವುದು ಆಸಾಧ್ಯವಾಗಿರಲಾರದು. ಭಾರತೀಯರೇ ಆಗಲಿ, ಭಾರತೀಯರಲ್ಲದವರೇ ಆಗಲಿ, ಯಾರೇ ಆಗಲಿ ಈ ದೇಶದ ರಾಜಕೀಯ ವಿಚಾರಗಳಲ್ಲಿ ಆದರ ಫನಕೆಗೌರವಗಳಿಗೆ ಲೋಪವಿಲ್ಲದಂಥಾ ಸದ್ವ್ಯವಸ್ಥೆಯು ಶಾಂತಿ ಸಮಾಧಾನಗಳಿಂದ ನಡೆಯುವುದಕ್ಕೆ ಪ್ರತಿಬಂಧಕವನ್ನುಂಟು ಮಾಡಿ ಈ ದೇಶವು ಅನೇಕ ವರ್ಷಗಳ ಕಾಲ ಅನ್ಯವಸ್ಥೆಗೂ, ಕ್ಷೋಭೆಗೂ, ಗುರಿಯಾಗಲು ಕಾರಣರಾಗುವುದಾದರೆ ಅವರನ್ನೆಂದಿಗೂ ಭಾರತೀಯರು ಕ್ಷಮಿಸುವುದು ಸಾಧ್ಯವಿಲ್ಲ. ಇಂಡಿಯೂದೇಶಕ್ಕೆ ಸ್ವರಾಜ್ಯವನ್ನು ಕೊಡುವದೇ, ರಾಜಕೀಯ ಸುಧಾರಣೆಗಳನ್ನು ಸೆಡಿಸುವುದರಲ್ಲಿ ಪರಾಕಾಷ್ಠನ ತಮ್ಮ ಗುರಿಯೆಂಬುದಾಗಿ ಬ್ರಿಟಿಷ್ ಸರ್ಕಾರದವರು ಕಂಠೋಕ್ಕವಾಗಿ ಹೇಳಿದ್ದಾರೆ. ಅವಕಾರಣ ಸಾಧ್ಯವಾದಷ್ಟು ಶೀಘ್ರವಾಗಿ ಇಂಡಿಯೂದೇಶಕ್ಕೆ ಸ್ವರಾಜ್ಯವು ಲಭಿಸುವಂತೆ ಮಾಡುವ ಬಗೆ ಬೇಗೆಂಬುದೇ ಲಂಡನ್ ನಗರದಲ್ಲಿ ನಡೆಯುವ "ರೌಂಡ್ ಟೇಬಲ್ ಕಾನ್‌ಫರೆನ್ಸ್" ಎಂಬ ಚಕ್ರಗೋಷ್ಠಿಯಲ್ಲಿ ಜರಗುವ ಮುಖ್ಯ ಕಾರ್ಯವೆಂದು ನನ್ನ ಮನಸಿಗೆ ತೋರತ್ತಿದೆ. ಇದೇ ನಮ್ಮಂಥದಲ್ಲಿ ನಾವು ಮತ್ತೊಂದು ಆಶವನ್ನೂ ಗಮನಿಸಬೇಕು. ರಾಜ್ಯಾಡಳಿಕ ಸ್ವಾತಂತ್ರ್ಯವಿರುವ ಸ್ವೌರಾಜ್ಯವು ನಮ್ಮ ದೇಶಕ್ಕೂ ಅಭಿವೀತಿಂದೇ ಇಟ್ಟುಕೊಳ್ಳೋಣ. ಅಮೂಲ್ಯವಾದ ಆ ಭಾಗ್ಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವದೇ ನಮಗೆ ನಮಗೆ ಬಾರದೆ ಹೋದ ಮೇಲೆ ಆಮೆ ಅಭಿನಿತಾನೇ ಫಲವೇನು? ಹೀಗೆಂದ ಮಾತ್ರವೇ ಅದು ಬರಕೂಡದೆಂದು ಅರ್ಥವಲ್ಲ. ಅವಶ್ಯವಾಗಿಯೂ ಅದನ್ನು ಪಡೆಯುವ ಪ್ರಯತ್ನ ಮೂಲ ಆದು ದೊರೆಯುವುದನ್ನು ಭರವಸೆ ಪಡಿಸಿಕೊಳ್ಳೋಣ, ಆಗರೆ ಆ ರೀತಿ ಮೂಡುವರಲ್ಲಿ ನಾವು ಮಿಕ್ಕಿಂದು ಮುಖ್ಯ ವಿಚಾರಕ್ಕೂ ಗಮನ ಕೊಟ್ಟೀ ಕೊಡಬೇಕು. ನಾವು ಹೊರಬಿವುದು ಮಹಾ ಯೊಕ್ಕೆಗೆ. ಯಾತ್ರಾರ್ಥಿಗಳಾದ ನಮ್ಮಲ್ಲಿರುವವರೋ ಐಕ್ಯವಿತ್ಯವಿಲ್ಲದೆ ಭಿನ್ನಾಭಿಪ್ರಾಯಗಳಿಂದ ಕೂಡಿದ ಬಗೆ ಬಗೆಯ ವರ್ಗಗಳವರು! ಆದಕಾರಣ ಎಲ್ಲರೂ ಸೌಹಾರ್ದಭಾವದಿಂದ ಕೂಡಿ ಒಮ್ಮತ ಸಮ್ಮತವಾಗಿ ವರ್ತಿಸುತ್ತ ಕೃಮವರಿತು ಮುಂದುವರಿಯುತ್ತ ನಮ್ಮ ನಿರ್ದಿಷ್ಟ ಸ್ಥಾನವಾದ ಪುಣ್ಯಕ್ಷೇತ್ರವನ್ನು ಸೇರುವದು ಖಂಡಿತವಾಗುವಂತೆ ಒಳ್ಳೆಯ ವ್ಯವಸ್ಥೆಯನ್ನೇರ್ಪಡಿಸಿಕೊಂಡು ಜಾಗರೂಕತೆಯಿಂದ ನೋಡಿಕೊಳ್ಳುವದೂ ನಮ್ಮ ಕರ್ತವ್ಯವಲ್ಲವೇ? ಅಲ್ಲದೆ ಯಾತ್ರಾರ್ಥಿಗಳಾಗಿ ಹೊರಟಿರುವ ನಾವೆಲ್ಲರೂ ನಮ್ಮ ಯಾತ್ರಾಸ್ಥಾನಕ್ಕೆ ನೇರವಾಗಿ ನಮ್ಮನ್ನು ಕರದೊಯ್ಯುವ ಸೌಖಿಯದ ಮಾರ್ಗದಲ್ಲಿ ಹೋಗುವದು ಖಂಡಿತವಾಗುವಂತೆಯೂ, ನಾವು ತುಡ ತುಡವಾಗಿ ವಿಭಾಗವಾಗಿ ಸೀಳು ನಾಲಿಗೆಳನ್ನು ಹಿಡಿದು ನಮ್ಮ ಉದ್ದಿಷ್ಟಾರ್ಥಕ್ಕೇ ಭಂಗವನ್ನು ತಂದುಕೊಳ್ಳದಂತೆಯೂ ನೋಡಿಕೊಳ್ಳುವದೂ ನೆತ ನಮ್ಮ ಕರ್ತವ್ಯವಲ್ಲವೇ? ಇಂಡಿಯೂ ದೇಶದ ಸ್ವೇಚ್ಛಾನೆಕ್ಕೆರಿರಿಯನರು ಹೇಳಿರುವಂತೆ ಅವಶ್ಯವಾದ ರಕ್ಷಣ ಸಾಧನಗಳೊಡನೆ ಈ ದೇಶಕ್ಕೆ "ಡೊಮಿನಿಯೆನ್ ಸ್ವೇಟಸ್" ಎಂಬ ಸಾಮ್ರಾಜ್ಯಂತರ್ಗತ ಸ್ವರಾಜ್ಯ ರೂಪದ ರಾಜ್ಯಾಡಳಿತ ವ್ಯವಸ್ಥೆಯು ಅಭಿಸಲು ಸಾಧಕವಾಗುವಂತೆ ಲಂಡನ್ ನಗರದಲ್ಲಿ ನಡೆಯುವ ಚಕ್ರ ಗೋಷ್ಠಿಯಿಂದ ತೀರ್ಮಾನವಾಗುವದಾದರೆ ಭಾರತೀಯರೆಲ್ಲ ದೇಶಾಭಿಮಾನಿಗಳಾಗಿರುವವರು ಪ್ರತಿಯೊಬ್ಬರೂ ಅದರಿಂದ ಸಂತುಷ್ಟರಾಗಿ ಹರ್ಷಗೊಳ್ಳಲೇ ಬೇಕು.

---


# ಸಿದ್ಧಕಲ್ಪ ಚಂದ್ರೋದಯ.

**(Registerd)**

The best Nervine Tonic & Blood Purifier & Increaser —

ಇದು ಬಹಳ ಉತ್ತಮವಾದ ರಕ್ತಶೋಧಕ, ರಕ್ತವರ್ಧಕ, ನರಗಳಿಗೆ ಬಲಸ್ಫುಂಟು ಮಾಡುವ ಔಷಧಿ. ಶರೀರದಲ್ಲಿರತಕ್ಕ ಸರ್ವ ವ್ಯಾಧಿಗಳನ್ನೂ ಗುಣಪಡಿಸುವ ಶ್ರೇಷ್ಠವಾದ ಅನೇಕ ವಿಧ ಮೂಲಿಕೆಗಳೂ, ಭಸ್ಮಗಳೂ ಇದುಲ್ಲಿ ಸೇರಿಗುವದರಿಂದ ಯಾವ ವ್ಯಾಧಿಯಾದರೂ, ದ್ವಂದ್ವ ವ್ಯಾಧಿಯಾದರೂ ತೀವ್ರವಾಗಿಯೂ, ನಿರಂತರವಾಗಿಯೂ, ನಿಶ್ಶೇಷವಾಗಿಯೂ ಗುಣವಾಗ ವುದೆಂದು ದೃಢವಾಗಿದೆ. ಇದಕ್ಕೆ ಅಭ್ಯಾರ್ಥಿಯಾಗಿ ಅನೇಕ ಸರ್ಟಿಫಿಕೇಟುಗಳು ಬಂದಿವೆ. ಒಂದು ಸಲ ಇದನ್ನು ಉಪಯೋಗಿಸಿದವರು ಬೇರೆ ಯಾವುದನ್ನೂ ಉಪಯೋಗಿಸಲಾರರು ಅಲ್ಲದೆ ಇದು ಬಲಹೀನತೆ, ನರಗಳ ಬಲಹೀನತೆ, ರಕ್ತಹೀನತೆ, ಕೆಟ್ಟರಕ್ತ, ಕಜ್ಜಿ, ನವೆ ಮೊದಲಾದ ಜರ್ಮವ್ಯಾಧಿಗಳು, ಜ್ವಾಪಕ ಶಕ್ತಿ ಹೀನತೆ, ತಲೆಸುತ್ತು, ಶಿರೋಭಾರ, ಭ್ರಮೆ, ಉಬ್ಬಸ ಸಾಧಾರಣ ಕೆಮ್ಮು, ಕ್ಷಯ ಕಫ ಮುಂತಾದ ಶ್ವಾಸಕೋಶ ಸಂಬಂಧವಾದ ವ್ಯಾಧಿಗಳು, ಅಜೀರ್ಣ, ಭೇದಿಗಳು, ಶೀತಭೇದಿ, ಸೊಲಬದ್ಧತೆ, ಹೆಚ್ಚಿ ಶೂಲೆ, ಉಬ್ಬರ, ಗಸ್ಕ ಮೂಲ, ಹೊಟ್ಟು ಮೂಲ, ಅಸನಗಂಡಮೂಲೆ, ಭಗಂದರ ಅತಿಮೂತ್ರ, ಮಧುಮೇಹ, ಮಧುಹೇಹ, ವೀರ್ಯಸ್ಖಲನ, ಸ್ವಪ್ನಸ್ಖಲನ, ಫಿರಂಗಿ, ಸವಾಯು ಮುಂತಾದ ವೃಧಿಜಾರ ವ್ಯಾಧಿಗಳು, ವಾತ, ಕೀಲುವಾತ, ಇತರ ಎಲ್ಲಾ ವಾಯು ನೋವುಗಳು. ವಾತದಿಂದ ದೇಹದಲ್ಲಿ ಎಲ್ಲಿಂದ ಬೇಸುವುದು, ಪಾರ್ಶ್ವವಾತ, ದೇಹವೆಲ್ಲಾ ನೀರು ನೋರುವುದು, ಸಾಧಾರಣ ಜ್ವರ, ಕಾಡು ಜ್ವರ, ಮಲೇರಿಯೂ, ನ್ಯೂಮೋನಿಯೂ, ವಿಷಮಶೀತ ಜ್ವರ, ವರಸೆ ಜ್ವರ, ಸನ್ನಿಪಾತ ಜ್ವರ, ಹೆಡ್‌ಫ್ಲೂಯೆಂಜಾ, ಇವುಗಳಿಂದ ಉಂಟಾದ ಒಲಹೀನತೆ, ಸ್ತ್ರೀಯರ ಸೆಮಸ್ಯೆ ಗರ್ಭಾಶಯ ರೋಗಗಳಿಗೆ ಬಹಳ ಉತ್ತಮವಾದದ್ದು. ಈ ವ್ಯಾಧಿಗಳು ದೀರ್ಘವಾದವ್ಯಗಲೀ, ಹಳೇದಾಗಲೀ, ಹೊಸದಾಗಲೀ ಶೀಘ್ರವಾಗಿ ಗುಣಪಡಿಸಿ ಅಸಾಧಾರಣವಾದ ಶಕ್ತಿಯನ್ನೂ, ಮುಖಕ್ಕೆ ಕಾಂತಿಯನ್ನೂ ಉಂಟುಮಾಡುತ್ತದೆ. ಬುದ್ಧಿಶಕ್ತಿಯಿಂದ ಕೆಲಸ ಮಾಡುವ ವಿದ್ಯಾರ್ಥಿಗಳೂ, ಆಯಾಸುಗಳೂ, ವ್ಯಾಯಾಮಕ್ಕೆ ಅವಕಾಶವಿಲ್ಲದವರೂ, ಎಲ್ಲರಿಗೂ ಮುಖ್ಯವಾಗಿ ಬೇಕಾದದ್ದು. ವೃದ್ಧರಿಗೆ ನೂತನ ಚೀವತ್ಕಳೆ ಕೊಡುತ್ತದೆ.

ಬೆಲೆ 80 ಮಾತ್ರೆ ಡಬ್ಬಿ 1ಕ್ಕೆ ರೂ 10—0—0, 40 ಮಾತ್ರೆ ಡಬ್ಬಿ 1ಕ್ಕೆ 5—0—0.

ಆಲ್ ಇಂಡಿಯೂ ಆಯುರ್ವೇದ ವೈದ್ಯಶಾಲಾ,

4—2 ಪೋಸ್ಟು ಬಾಕ್ಸು ನಂ 159,

411 & 412 ಮಿಂಟ್ ಸ್ಟ್ರೀಟ್, ಮದ್ರಾಸು.

## Wanted,

Candidates for immediate Railway Service. Fare Paid. Apply at once for Rules enclosing 2 Annas stamps

ROYAL TELEGRAPH COLLEGE,
12—9 Delhi.

ಸಣ್ಣ ಹುಡುಗರ ಸಲುವಾಗಿ

# ಡೋಂಗರೆ ಇವರ ಬಾಲಾಮೃತ.

ಮನ್ನ

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52—32 ಗಿರಿಗಾಂವ, ಮುಂಬಯಿ.

## THE UNITED KARNATAK INSURANCE COMPANY LTD DHARWAR.

ಸುಸಂಧಿ! ಶೈರೆ ಮಾಡಿರಿ!! ಕಳೆತು ಕೊಳ್ಳಬೇಡಿರಿ!!!

## ದಿ ಯುನೈಟೆಡ್ ಕರ್ನಾಟಕ ಇನ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಧಾರವಾಡ.

(ಗವರ್ನಮೆಂಟಿನೇ ಇಸವಿಯ ಹಿಂದುಸ್ಥಾನದ ಕಂಪೆನಿಯು ಒನೇ ಒಕ್ಕಿನ ಸರಕಾರ ರಿಜಿಸ್ಟರಾಗಿದೆ)

ಡೈರೆಕ್ಟರರು.

೧. ಜೋಧರಾವ್ ಶ್ರೀನಿವಾಸರಾವ್ ಸಾವುಕಾರ ಬಿ ಎ ಎಲ್ ಎಲ್. ಬಿ. ಸರಕಾರಿ ವಕೀಲ ಮತ್ತು ಪಬ್ಲಿಕ್ ಟ್ರಾಸಿಕ್ಯೂಟರ್ ಧಾರವಾಡ ಜೇರ್ ಮ್ಯಾನರ್.

೨ ಡಾ ವಾಸುದೇವರಾವ್ ಶ್ರೀನಿವಾಸರಾವ್ ಉಮಚಗಿ ಎಲ್. ಯಂ. ಆಂಡ್. ಯಸ್. ಗದಗ.

೩. ವಿ ಶ್ರೀನಿವಾಸರಾವ್ ಶೇಷಗಿರಿರಾವ್ ಮುತಾಲೀಕ ದೇಸಾಯಿ ಬಿ ಎ ಅಣ್ಣಿಗೇರಿ.

೪. ಯಿ ರಾಮಚಂದ್ರ ರಂಗೋ ಸಾವುಕಾರ ವತನದಾರ, ಹಳೇ ಹುಬ್ಬಳ್ಳಿ.

೫ ಕೃಷ್ಣರಾವ್ ಲಕ್ಷ್ಮಣರಾವ್ ಹುಯಿಲ ಗೋಳಕ ಬಿ ಎ ಎಲ್ ಎಲ್. ಬಿ. ವಕೀಲ, ಗದಗ.

೬ ರಾಘವೇಂದ್ರರಾವ್ ಬಾಳಕೃಷ್ಣರಾವ್ ಗಿಡದ ಹುಬ್ಬಳ್ಳಿ ವಕೀಲ. ಬೈಲ ಹೊಂಗಲ

೭. ಯಿ. ಆನಂತರಾವ್ ವೆಂಕಾಜಿ ದೇಸಾಯಿ ಬಿ ಎ ಎಲ್ ಎಲ್. ಬಿ ವಕೀಲ, ಹುಬ್ಬಳ್ಳಿ

೮. ರಾಮರಾವ್ ವೆ. ಧಂಡಿನಾಡಿ ಬಿ. ಎ ಎಲ್ ಎಲ್. ಬಿ. ವಕೀಲ, ಧಾರವಾಡ.

೯. ಅಬ್ದುಲ್ ಕರೀಂ ಆಮೀನ ಸಾಹೇಬ್, ಹಣಗಿ ವ್ಯಾಪಾರಿ, ಗದಗ.

ಕರ್ನಾಟಕದಲ್ಲಿ ಹೊರಟ ಇನ್ಯೂರೆನ್ಸ್ ಕಂಪೆನಿಯೊಂದರ ಇನೇ ಮೊದಲನೇದು ಈ ಕಂಪನಿಯು ಜೈರೆಕ್ಟರರು ಮತ್ತು ಕೆಲಸ ನಡಿಸುವವರೂ ಕನ್ನಡಿಗರೇ ಆಗಿರುತ್ತಾರೆ ಪರದೇಶೀ ಕಂಪೆನಿಗಳಿಗೆ ವಿಜೆಂಟರಾಗಿರುವಿಗಿಂತಲೂ ವಿಮೆ ಇಳಿಸಿಯೂಗಲೇ ಸಹಾಯ ಮಾಡಿ ಹಣವನ್ನು ಹೊರಗೆ ಕಳುಹಿಸುವುದಕ್ಕಿಂತ ಕರ್ನಾಟಕದಲ್ಲಿಯೇ ಹಬ್ಬಿ ಹೆಸರು ಪಡೆಯಬೇಕೆಂಬ ಈ ಕಂಪೆನಿಗೆ ಸಹಾಸಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವುದು.

ಕಂಪೆನಿಯ ಶೇರುಗಳು ಮಾರಾವಟ್ಟೆ ಇರುತ್ತವೆ ಮತ್ತು ವಿಮೆ ಇಳಿಸಿನ ಕೆಲಸವು ಸ್ವಾರಂಭವಾಗಿರುವದು ಶೇರುಗಳನ್ನು ಮಾರ ಪದಕ್ಕೂ ವಿಮೆಯ ಕಲಸವನ್ನು ಕಾದು ಕೊಡುವುದಕ್ಕೂ ಎಲ್ಲಾ ದೊಡ್ಡ ದೊಡ್ಡ ಸ್ಥಳಗಳಲ್ಲಿ ವಿಜೆಂಟರು ಬೇಕಾಗಿರುವರು. ಏಜೆನ್ಸಿ ಬರಾವಟಿಗೆಗಳು ಸುಲಭ ನೆರವಿಕ್ಕುಗಳು ವಿಪುಲ ಮಿಕ್ಕು ಕವಿತಕ ದರಗಳು ಅಂಭಕಾರವಾಗಿರುವವು ಏಜಂಟಾಗಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Hulgolkar.
ಸೆಕ್ರೆಟರಿ.

26—4 ಯು. ಕ. ಇ. ಕ. ಲಿ. ಧಾರವಾಡ.



ಕಾರ್ಡು ಬರೆದರೆ ಆಗಿನ ಕ್ಯಾಟಲಾಗು ಮೊಫಯಾಗಿ ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬರ್ಚಿಗಳು, ಕೋಟಿಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

## GOOLAMHUSAIN ALLIBHOY & SONS,
## Largest Importers of Firearms and Ammunition
## Cheapest priced firm in India,

24—18 210 Abdul Rehman Street, BOMBAY.

# ಎಂ. ಎಸ್. ಶಿವಪ್ಪ ಚೆಟ್ಟಿಯಾರ್

## ಅಂಡ್ ಪ್ರದರ್ಸ್,

14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯೂ ಖಂಡೋಬಸೂ ಆದ ಪೌಂಟನ್‌ಪೆನ್‌ಗಳು.

| | | |
|---|---|---|
| ವರ್ಲ್ಸ್ ವಂಡರ್ ಪೌಂಟನ್‌ಪೆನ್ 1ಕ್ಕೆ | ರೂ. | 3 0 0 |
| " " ಬಿಗ್ ಬ್ಯಾರೆಲ್ ಪೆನ್ 1ಕ್ಕೆ | | 3 3 0 |
| " " ಸ್ಮಾಲ್ ಕ್ಯಾಪ್ ಪೆನ್ 1ಕ್ಕೆ | | 3 8 0 |
| " " ಬಿಗ್ ಬ್ಯಾರೆಲ್ ಸ್ಮಾಲ್ ಕ್ಯಾಪ್ ಮಾಡಲ್ ಕಲರ್ ಪೌಂಟನ್‌ಪೆನ್ 1ಕ್ಕೆ | | 3 14 0 |
| " " ಮಾಡಲ್ ಕಲರ್ ಸ್ಮಾಲ್ ಕ್ಯಾಪ್ ಪೌಂಟನ್‌ಪೆನ್ 1ಕ್ಕೆ | | 4 2 0 |
| " " ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಧವ ಪ್ರೆಸಿಡೆಂಟ್ ಪೌಂಟನ್‌ಪೆನ್ 1ಕ್ಕೆ | | 5 8 0 |
| ಬಿಗ್ ಸ್ಟಾಟ್ ಪೌಂಟನ್‌ಪೆನ್ 1ಕ್ಕೆ | | 10 8 0 |
| ಪಾರ್ಕರ್ ಪೆನ್ 1ಕ್ಕೆ | | 11 6 0, & 20 10 0 |
| ಬ್ಲಾಕ್‌ಬರ್ಡ್ ಪೌಂಟನ್‌ಪೆನ್ 1ಕ್ಕೆ | | 3 8 0, & 3 12 0 |
| ಸ್ವಾನ್ ಪೌಂಟನ್ ಪೆನ್ 1ಕ್ಕೆ | | 6 4 0, & 6 12 0 |
| ವಾಟರ್‌ಮನ್ ಪೌಂಟನ್ ಪೆನ್ 1ಕ್ಕೆ | | 8 2 0, & 8 10 0 |

ವಿಂ ಏ ಸ್ ಗಳು.

| | | |
|---|---|---|
| ಸ್ಯಾಂಡ್ ಇರುವ ಸೆಣ ವೈಂಪೀಸ್ 1ಕ್ಕೆ | 3 | 6 0 |
| ಜರ್ಮನ್ ಮೇಡ್ ಸೆಣ್ಣ ವೈಂಪೀಸ್ 1ಕ್ಕೆ | 2 | 2 0 |
| ಲಿಗಲಿಯೂ ಅಳಾರು ವೈಂಪೀಸ 1ಕ್ಕೆ | 6 | 8 0, & 6 14 0 |
| ಲಿಗಲಿಯೂ ಸೆಣ್ಣಸೈಜಿನ ಅಳಾರು ವೈಂಪೀಸ 1ಕ್ಕೆ | 7 | 2 0 |
| ಲಿಗಲಿಯೂ ಅಶಾರು ಸೆಣ್ಣ ವೈಂಪೀಸ್ ರೌಂಡಿಯು ಜೈಲನದು 1ಕ್ಕೆ | 8 | 10 0 |
| ಬಿಗ್ ವೆನ್ ಅಳಾರು ವೈಂಪೀಸ್ 1ಕ್ಕೆ | 9 | 6 0 |
| ಬಿಗ್ ವೆನ್ ಅಶಾರು ಸ್ವಾಯಂತ ಇರತಕ್ಕ ವಾಶ್ತಿ ಯೂದ ವೈಂಪೀಸ್ 1ಕ್ಕೆ | 13 | 4 0 |
| ಖಾತ್ರಿಯೂ ಒಂಬೋಬಸೂ ಆದ ವಾಕಟು ವಾಚ್ 1ಕ್ಕೆ | 5 | 10 0 |
| ಡಿಟೋ ನಮೂನೆಯಲ್ಲಿ ಎಬ್ಬ ಹಾರ್ಡ್ ಕಂಪೆನಿಯ ವಾಕಟ್ ವಾಚ್ 1ಕ್ಕೆ | 12 | 4 0 |
| ನಿಕ್ಕಲ್ ಕೇಸ್ ಸಿಲಿಂಡರ್ ಮುಮೆಂಟ್ ಸಾಒಭರಣ ಕರಹ ರಿನ್ಸ್ ವಾಚ್ 1ಕ್ಕೆ | 5 | 4 0, 7 8 0, 10 0 0 & 12 8 0 |



ಇಲ್ಲಿ ನಮೂದಿಸಿರುವ ನಮೂನೆ ಅಂದವಾದ ಟೇಬಲ್ ವೈಂಪೀಸ್ 1ಕ್ಕೆ 3—6—0 ವ್ಯಾಕಿಂಗ್ ಪೋಸ್ಟೇಜು ಅಲಾಯಿದ.

ಮುನಿಯೂರ್ದರ್ ರವಾನಿಸುವ ವಿಳಾಸ —ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್,
ಹಾರ್ಲೋವಿಯಂ ವಾಚಾರಿಗಳು, ಮೈಸೂರು.

52—5

## ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ನ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿದೆ.

| | ರೂ. |
|---|---|
| ಶೇರ್ ಬಂಡವಾಳ — | 50,000 |
| ದಸೂಲಾಪ ಶೇರ್ ಹೊಂಬಳಗಳು — | 21,310 |
| ಒಟ್ಟು ಸೇರಿದ ಪ್ರಮಾಣ — | 2,16,271 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ನೇರವಾಗಿ ಹೆಚ್ಚಾಗಿ ಸಾಲಕೊಡಬಹುದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಶೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ಕೊಡಲಿಕ್ಕೆ ಕಡಿಮೆ ವಾಯಿದೆಯ ಶೇವಣಾತಿಗಳಿಗೆ ಶೇಕಡ ಸಾಲಿಯಾನ ೨ರ ಬಡ್ಡಿ ಕೊಡಲಿಕ್ಕುತ್ತೆ.

ವರ್ಷಕ್ಕೊಂದಾವರ್ತಿ ಕೊಡ ದೇಶಿಟಿವ್ ಇನ್ಸ್ಪೆಕ್ಟರರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪೈಸಿಜೆಂಟರು, ಟೈಜರರ್
ಚೋಡಂಡ ಅಯ್ಯಪ್ಪನವರು, ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್. ನವರು.

ಸೆಕ್ರೆಟರಿ
ಸಿ. ಯನ್. ವೆಂಕಟ್ಯೆಯ್ಯನವರು, ಬಿ.ಎ., ಬಿ.ಎಲ್.
ಕಾರ್ಯಕ 1—2—1930.

## ನೋಟೀಸು.

ಈ ಕೆಳಗಿನ ಮಹನೀಯರ "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಈ ಕ್ರಿಗೆ ಸನ್ಮಾನ ಪತ್ರಗಳನ್ನು ಕೊಡಲಾಗಿದೆ. ಕೆಳಗಿನವರು ಏಜೆಂಟರುಗಳಿಗೆ ಏಜೆಂಟ್ ಜಂಗಮದ ಇಟ್ಟಪ್ಪನವರ ಜವಾಬ್ದಾರಿಕೆ ಮೇಲೆ ಪತ್ರಿಕೆ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಸೀತಿ ಪಡೆಯುವಿಕೆಗಾಗಿ ಕೋರಿಕೆ.

ವಿಜಯಪುರಗಳು.
ಮರಿಯಾಸು—ಮೆ. ತೀಕಿರ ಅಣ್ಣಯ್ಯನವರು.

ಸಬ್ ಏಜೆಂಟರುಗಳು.
ವೀರರಾಜಪೇಟೆ—ಮೆ. ಮಂಡೇಪಂಡ ನೋಮೆಯ್ಯನವರು,
(ಜಾಹಿರಾತುದಾರರು.)
ನಾಪೋಕ್ಲು—ಎಸ್. ಆರ್. ವೆಂಕಟ್ಯೆಯ್ಯನವರು.
ಶ್ರೀಮಂಗಲನಾಡು—ಮೆ. ಅಚ್ಚಮೂಡ ಮೂದಪ್ಪನವರು.
ಗೋಣಾಕೊಪ್ಪಲು—ಮೆ. ಜಮ್ಮಡ ಮೂದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೂದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಪಿ. ಮುದ್ದಯ್ಯನವರು,
ಮತ್ತು, ಅರಮನೆಮೂಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಬಿ. ಮೂದಮ್ಮಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚಟ್ಟೋಳಂಡ ಸೂಚ್ಯಯ್ಯನವರು,

ಸೂಚನೆ:—ಪೈಂಟು ಆದ ರೀತಿ ತೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸುತ್ತಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.


## ಮೊರಾಟ್ಕೆಗೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಸೆಂಬರನ್ನೆಯೂ ಇರಬೇಕಾದ ಅಮಿತ ಬವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪಬಂಧನೆಗಳೂ, ದಾನ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅವು ಸರಿಯಾಗಿ ಬರಿಯುವುದಲ್ಲಿ ಹೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ಕರಾರುಸಲ್ಲತ್ತದಾವಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮಕ್ಕು ವಿರಾಜಪೇಟೆ ಬುದ್ದ್ ಸ್ಟೋರಿನಲ್ಲಿಯೂ ಮಾರಾಟಕ್ಕೆವೆ.

ಮೇನೇಜರ್,
"ಕೊಡಗು" ಮಡಿಕೇರಿ.

12 bore Victor Cartridges Rs. 10/- Per 100
**Mahomedally-Noorbhoy.**
ARMS & AMMUNITION MART.
321 Abdul Rehman Street.
5? 39 BOMBAY. ?



## ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ
# ಓರಿಯಂಟಲ್ ಜೀವವಿಮೆ ಕಂಪೆನಿಯ

ಚತ್ತೊಂಬತ್ತನೇ ಸಾಲಿಯ ವೈವಾರ್ಷಿಕ ಅಡಾಯದ ಹಂಚಿಕೆಯು ಇದೇ ಡಿಸೆಂಬರ್ 31ನೇ ತಾರೀಕಿನಲ್ಲಿ ಕೂಡಿಬರುತ್ತೆ.

ಈವರೆಗೆ ಸಾರ್ವ ಜನರಾಜು ಮೊಹಲ್ಲಬ್ಬಟ್ಟಾಗ ಇದ್ದ ಉಳಿತಾಯದ ವಿವರ
1921ರಲ್ಲಿ 21½ ಲಕ್ಷ ರೂಪಾಯಿಗಳು.
1924ರಲ್ಲಿ 53½ „ „
1927ರಲ್ಲಿ 78 „ „

**ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.**

1921ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ. | 1927ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 25 ರೂ.
1924ರಲ್ಲಿ „ „ „ 22½ „

ಈ ವರ್ಷದಲ್ಲಿ ಚಾಲುಆಗುವ ಪಾಲಿಸಿಗಳಿಗೂ ಸಹ 1930ನೇ ಇಸವಿ ಡಿಸೆಂಬರ್ 31ನೇ ತಾರೀಕಿನಲ್ಲಿ ಆದಾಯದ ಹಂಚಿಕೆಯು ಕೊಡಲ್ಪಡುತ್ತೆ.

ಆದುದರಿಂದ ನೀವು ಓರಿಯಂಟಲ್ ಕಂಪೆನಿಯ ಪಾಲಿಸಿದಾರರಾಗುವುದರಲ್ಲಿ ಹೇರಳ ಲಾಭವುಂಟು.

## ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿಕೊಳ್ಳುವುದು:—

ಓರಿಯಂಟಲ್ ಬಿಲ್ಡಿಂಗ್ಸ್, ಯಂ. ವಿ. ಮುತ್ತುಕೃಷ್ಣ ನಾಯಡು,
ಸೌತ್ ಪೇರೇಡ್, ಬೆಂಗಳೂರು. 52—24 ಆಕ್ಟಿಂಗ್ ಜ್ಯಾಂಚ್ ಸೆಕ್ರೆಟರಿ.



**ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಗಳನ್ನು ಸಾಧಿಸಿಕೊಳ್ಳಲು ಜಾಣರ್ಗಿಸ ದೋಷನಿವಾರಕವೆಂಬ ಮಂತ್ರ ಯಂತ್ರದ ತಾಯಿತ.**

ಆನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ, ಜಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೂ ಸರಿಯಾಗಿ ಮುಟ್ಟಾಗದಿರುವಿಕೆ, ಮುಟ್ಟಾಗುವ ಸಮಯದಲ್ಲಿ ಕೈಕಾಲು ಹರಿಯುವಿಕೆ, ಮಸ್ತಿಷ್ಕ ಬೇಳುವಿಕೆ, ಹೊಟ್ಟೆ ಶೂಲೆ, ಬೆಳುಪು—ಕೆಂಪು ಹೋಗಿ ಗರ್ಭ ಪನವಾಗುವಿಕೆ, ವಾಂತಿ, ಸರ್ಪಕಾವು, ಪಿತಾಚಬಾಧೆಯಿಂದ ನರಳುವಿಕೆ, ದಿನ ಪೂರ್ತಿ ಹಡಿಯೋಣವೆ ಪರೆ ಹಲವುಕಾಲ, ಇವೇ ಮೊದಲಾದವುಗಳು ಸ್ತ್ರೀ ಕಾರಣ ಭಂಗಕ್ಕೆ ಕಾರಣಗಳು. ಚಿಕ್ಕ ಮಕ್ಕಳಿಗೆ ೧೨ ವರ್ಷದ ವರೆಗೆ ಬಾಲಾರಿಷ್ಟ ಮೊದಲಿಂದ ಅಕಸ್ಮಾತ್ ಕಂದುರೋಗ, ಮುಟ್ಟುದೋಷ, ಕಾವಿಲೆ, ಗೃಹಪೀಡೆ, ದೃಷ್ಟಿದೋಷ, ನುಟಿತಿಬ್ಬಾಸಿ, ವಿಪರೀತ ಆಳೋಡ ಹೊಟ್ಟೆಯೊಳಗಿಂದ ವಿಳೋಡ, ಭಯದಿಂದ ಜ್ವರಬಿಡ್ಡೆ, ಕ್ಷೀಣ ಹೊಂದುವಿಕೆ ಮೊದಲಾದವುಗಳಿಂದ ಕಾಡುತ್ತಿರುವವು, ಗರ್ಭರಕ್ಷಾಕರ ವಿಧಿಯಲ್ಲಿ ಸರ್ವಾ ಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ, ಹೇಳಿದ ಪ್ರಕಾರ ಪೂರ್ವಪರಿಷೆಯ ಪರಿತೀಕ್ಷಿಸಿ ಗೃಹಣ ಕಾಲದಲ್ಲಿ ಸಾಧು ಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ಕಟ್ಟಿಸಿ ಬಿಳಿಯ ಕಾಯಿಪದಲ್ಲಿ ಹಾಕಿ ಧರ್ತಿಸಿಕೊಳ್ಳುತ್ತಿರೆ ಇದನ್ನು ಪರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನ ಭಂಗವೂ, ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ದೂರತ್ತೂ ಪರಿಹಾರವಾಗುತ್ತದೆ. ಹೆಣ್ಣು ಮಕ್ಕಳಿಗೆ ಸಂತಾನ ವೆಯಿಂದ ೩ ವರ್ಷವಾಯ್ತು, ಚಿಕ್ಕಮಕ್ಕಳಿಗೆ ಗಳಿಕ್ಕೆ ೩—೪—೦ ಪೋ. ಖ ಬೆರೆ. ಫ್ರೀಕಲ್ ವಾ ಜಾಗ್ರತೆ ಗುಣ ಕೊಡುವ ತಾಯಿತಕ್ಕೆ ಪೋ. ಖ ಸೇರಿ ೩ ರೂ. ಆಗತಕ್ಕ ವಿಕಾರಗಳನ್ನು ಸ್ಪಷ್ಟ ಬರೆಯಿರಿ. ಈತಾಯಿತ ಧರಿಸಿಕೊಂಡು ಗುಣವಿಲ್ಲದಿದ್ದಲ್ಲಿ 100 ರೂ. ಬಹುಮಾನ ಹೊಂದಿ ಸಲ ಪರೀಕ್ಷಿಸಿ ಅನುಭವ ತೆಗೆದುಕೊಳ್ಳಿರಿ.

ಸ್ಥಳ ಹಂಕೋಚ ಮೂಲಕ ಮೂದರಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯ ಪ್ರಕೃತಿಯನ್ನು ನಾನೊಂತಿಕ ವೈದ್ಯ ಡಾಕ್ಟರರಾಡಿ ತೋರಿಸಿಲು ಗುಣಹೊಂದಿದ್ದು ತನ್ನ ಆರ್ಯುಷ್ಯಕರವಾದ ತಾಯಿತವನ್ನು ನನ್ನ ಹೆಂಡತಿಯು ಈಗಾಗ್ಲೆ ೨ ತಾರೀಕಿಗೆ ಧರಿಸಿದ ದಿವಸದಿಂದ ಮೈಮೊಳಗಿನ ಯಾವಕ್ಕೂ ಕಾಯಿಲೆಗಳು ಸಾರಿಸಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುವುದನ್ನು ತಿಳಿಸಲು ಅತಿ ಸಂತೋಷನಿಸುತ್ತೆ. ತಮ್ಮ ಸಿ. ಕೆ. ರಾಘವಾಚಾರಿ, ಸುದಾಮ ಹಾಸ್,
ಶ್ರೀಲಾಡ ಎಸ್ಟೇಟ್, ಮುಂಬೈ.

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ, ಪಂಚಗಟ್ಟಿ,
52—48 ಮು. ಪೋ. ಆಫಜಲ್, ಜಿ. ಬೆಳಗಾಂವ.



## ಜಿಗಿಪರ್ಣಗಳ ಅನುಭವಸಿದ್ಧ ಮತ್ತು ಸಾರ್ವತ್ರಿಕ ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

### ೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ಸರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ಕೆಡವಾಗುವಿಕೆ, ಜ್ಞಾಪಕ ಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ವೀರ್ಯ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳ ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ಕುಂಬಿಕೊಳ್ಳುವುದು:—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0.

### ೨. ಅಶೋಕಾರಿಷ್ಟ ಮತ್ತು ಮೂತ್ರೆ.

ಮೆಂಗನರ ಮುಟ್ಟು ದೋಷಗಳು, ಪುಟಿಸ್ಯಾವುವು ಹೆಸರು ಕಮ್ಮಿಯಾಗುವುದು, ಪೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂಳೆ, ಮಲಬದ್ಧತೆ, ಒಳಜ್ವರ, ರಕ್ತಕೀನತೆ, ಕೈಕಾಲು ನೆಗೆತ ಮೊದಲು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ತೀಕ್ಷ್ಣದಲ್ಲಿಯೇ ಗುಣ ಪಡಿಸುವುದು. ಆರೋಗ್ಯಕಾರಿಷ್ಟ ನಾಮ್ಮು ಮೂತ್ರೆಗಳು ಸಾರ್ವತ್ರಿಕರು ಹೆಂಗಸರಿಗೆ ಅಂತರಿಕ ಅವಯವಗ್ಯವನ್ನು ಒದಗಿಸಿ ಮನೋಧಿಶಕ್ತಿಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ದೊಡ್ಡ, 1 ಡಬ್ಬಿ ಮಾತ್ರೆ ರೂ. 2 ಆ. ೬,
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

### ೩. ಮಲೇರಿಯೂ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಪಾಲೆ ಜ್ವರ, 2 ಯೂ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ. ಜ್ವರ ಗಡ್ಡೆಯಿಂದ ಒರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

### ೪. ಮೇಹ ಕುಠಾರ. ಇದು ಮೂತ್ರನ್ಯಾನದಿಂದ ಕೆಂಪು, ಬಿಳಿದು, ಹಳದಿಯುತ್ತಾ ಹೋಗತಕ್ಕ ಕೀವನ್ನೂ ಪೂಯವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. ೫ಕ್ಕೆ ೨೦. ೦.

### ೫. ಇಛ್ಛಾ ಭೇದಿ ಗುಟಿಕೆ. ಆಮಪಿಸವನ್ನು ಉಂಟುಮಾಡುವ ಸುಖ ವಿರೇಚಕ ಬಾಟ್ಲಿ 1ಕ್ಕೆ 0—12—0 ಆಗಿ 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಇತರ ಯಾವ ಸಂಗತಿ ವಿಚಾರವಾಗಿ ಬರೆಯಲ್ಲಿ ಕೇಳಿಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಲವಾರು ತಲಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
12—11 ರಥಬೀದಿ, ಮಂಗಳೂರು, ದ. ಕನ್ನಡ.



## ಟೆಲಿಫೋನ್ ಎಂಬ ನೂತನಾಡುವ ಯಂತ್ರ



ಇತ್ತೀಚೆಗೆ ಕೆಲವರಿಕೆಯನ್ನು ತಯಾರಾದವು. ಭಾರಿ ಕೃಯನ ಟೆಲಿಫೋನ್ ಯಂತ್ರಗಳಿಂತೆ ಯೇ ಇವುಗಳಲ್ಲಿಯೂ ನೂತನವಾದ ಒಮದು. ದೂರದಲ್ಲಿರುವವರ ಸಂಗಡ ನಾವು ಮನೆಯಲ್ಲಿದ್ದುಕೊಂಡೇ ಮಾತನಾಡಬಹುದು. ಮಾತನಾಡುವ ವಿಧಾನವನ್ನು ಯಂತ್ರದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ 1ಕ್ಕೆ ರೂ. 2—8—0.
ವಿಳಾಸೆ.—ಯಂ. ಲಿಯೋ ಆಂಡ್ ಕೊ,
52—48 243 ಮದ್ರಾಸ್.


Printed & published by P I Bellimpa at "Kodagu" Press, Mercara for "Kodagu" Ltd.

R.-N. No. M. 1330.

Head Office & Press, Mercara.

"KODAGU" OFFICE, MERCARA.

# ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತಕಾ॥ ಏಕಮುಕೇನ ದೇಕಾನಾಂ ಸುಸ್ಥಿರಾ ರಾಜ್ಯ ಸಂಪದಾ॥

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦ | ಮಡಿಕೇರಿ, ಸನ್ ೧೯೩೦ನೇ ಇಸವಿ ಜೂನ್ ತಾರೀಕು ೨೭ ನೇ ಶುಕ್ರವಾರ. | ಸಂಚಿಕೆ ೪

Telephone :— 3145

By Appointment to H. E. The Governor of Madras.

Telegrams :— 'PRECIOUS',

Cups, Rs. 6, and upwards.

CUPS. MEDALS. SHIELDS. CASKETS.

Medals, Rs. 1-8-0 and upwards.

V. SUBRAMANIA IYAR.

JEWELLER.

Post Box No., 423, Tripliacne,

Illustrated Catalogue Free on Application,

52—40 MADRAS.

NITRATE OF SODA

The best and cheapest form of Nitrogen for plants. Highly concentrated and immediately available. Nothing like it to make plants grow.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

ಗಿಡಗಳಿಗೆ ಅವಶ್ಯವಿರುವ ನೈಟ್ರೋಜನ್ ಅತ್ಯುತ್ತಮವು ರೀತಿಯಿಂದಲೂ, ಅತಿ ಸುಲಭ ಬೆಲೆಯಲ್ಲಿಯೂ ಸಿಕ್ಕುವಂಥಾದ್ದು. ಬಹಳ ಬಲವಾದದ್ದು ಮತ್ತು ತಕ್ಕಾಲ ಸಿಕ್ಕುಬೆಂಥಾದು. ಗಿಡಗಳು ಬೆಸಿಬೆಳೆಕ್ಕೆ ಇಗಲ್ಲು ಸಹಾಯಕಾರಿಯಾದದ್ದು ಬೇರೆ ಯಾವದೂ ಇಲ್ಲ.

ಎನ್. ಕೂಪರ್ ಅಂಡ್ ಕಂನೆ, ನೇಪಿಯರ್ ರೋಡ್. ಪೂನ ಸೆ.

ಹೆಚ್ಚಿನ ವಿವರಕ್ಕೆ ವಿವಿಧ ಬೆಳೆಗಳ ವಿಷಯ ವರ್ಣಿಸಿದ ಪುಸ್ತಕ ಪತ್ರಿಕೆ ಸೈಲೆಗೆಗೆ ಸಂಪೂರ್ಣ ವಿಳಾಸ ಸಂತೋಷದಿಂದ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ, ಇಂಡಿಯನ್ ಸೆಲಿಗೇಶನ್, ಪೋ. ಬಾ ನಂ 469, ಕಲ್ಕತ್ತಾ.

(2) ಮಿಸ್ಟರ್ ಜೆ ಯಂ. ಬಿ ಚಿಲಿಯನ್ ನೈಟ್ರೇಟ್ ಕಮಿಟಿ, ಮಡಿಕೇರಿ.

24—9

ಕಪ್ಪುಕಷಾಯ ಮಲೆಯ್ಯರ ಸ್ಪೆಷಲ್:—ಇದು ಇಂಫ್ಲುಯೆಂಜಾ ಮತ್ತು ಕ್ಷೀಣಸು ಸೇವಿಸಿದರೆ ಗುಣವಾಗದಿರುವ ಮಲೆ ಜ್ವರ. ದಿನಕ್ಕೆ ಮೂರು ಬಾರಿ ಸೇವಿಸುವ ಜ್ವರ, 3—4 ದಿವಸಕ್ಕೊಮ್ಮೆ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಳ್ಳ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—4—0, 3ಕ್ಕೆ ರೂ 4—0—0, 6ಕ್ಕೆ ರೂ 7—8—0 12ಕ್ಕೆ ರೂ 14




ಜಂದನಾಸನ:—ಇದು ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಸಂಬಂಧವಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಬಂಧಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುತ್ತದೆ, ಮೂತ್ರದಲ್ಲಿ ರಕ್ತ ಹೋಗುವುದು, ಆನಾಗೆ ಮೂತ್ರ ಬರುವುದು, ನುಣ್ಣಗೆ ಕಲೆಯಲ್ಲಿ ಕಾರ್ಯಸಿದ್ಧಿಯಾಗಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ತ್ರೀಯಾಸ್ಥೆ, ಮೂತ್ರ ನಾಳದಲ್ಲಿ ಚುಚ್ಚುವ ನೋವು. ಅಂತಹಾಗೆ ಬಹು ದಿವಸ ಬೆಡಿದ್ದ ಬೆನ್ನಾ 1, 3, 6ಕ್ಕೆ ರೂ 1—4—0 3—8—0, 6—12—0.

ದೋಮನಾಸನಿ:— ಕಡುಹುಯಿನ್ನು ಕಾರಿಸಲ್ಲಿ ಕೆಲಸ ಮಾಯಲ್ಲಿ ದೋಮುವಿನ ಹಾಗೆ ಹಲ್ಲಿಲು ರೋಮವು ಉದುರಿ ಬೀಳುವದು ಹಲ್ಲಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—3—0

ಮನೋಲ್ಲಾಸಿನಿ ತೈಲ:—ಕಲಿಸೋತ, ಕಲಿತಲುಗುವುದು, ಕಡಿವ್ರು ಕಜ್ಜು, ತುರಿಯಿಂದ ಸಿಪ್ಪೆ ಸೊರಿಯುವದು ಬಿದ್ದು ಹೋಗಿ, ಕಜ್ಜು ಕೆಡವ. ಅಕಸ್ಮಾತ್ ಗಡ್ಡೆ ಬಾವರದಿರುವದು, ನೆತ್ತಿ ಕಡೆ ತುಂಬಾ ಹೋಗುತ್ತದೆ. ಇತರೆಲ್ಲ ಎಂಥಾ ಗುಜ್ಜಾದರೂ ಈ ತೈಲವನ್ನು ಹಚ್ಚಿಕೊಂಡರೆ ಕೂಡಲೆ ಕೆಡವಿಗೆ ಸಾಂತ್ವನವನ್ನೂ ಹೊಳಪನ್ನೂ ತೆಪ್ಪನ್ನು ಆಕಾಲಲ್ಲಿ ಹುಟ್ಟಾಗುವ ಕೂದಲನ್ನು ಪಡೆಯ ಕೆತಲು ಉಟ್ಟದ ಸ್ಥಳದಲ್ಲಿ, ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0- ಕಾರು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ನಮ್ಮ ಕೆಲಸಗಾರರು ತರಿಸಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ, ೨- ಮಂಗಳೂರು.

52—15

## ಬಾಲಾರ್ಕಮದು.

ನಿಮ್ಮ ಮಕ್ಕಳ ಸಾಂದರ್ಯವನ್ನು ನೋಡಬೇಕಾದರೆ ಅಮೃತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿ ಮಕ್ಕಳು ಪೋಷಣೆ




ಸಿದಿಕರಾಗಿ ಬೆಳೆಯಿರಿ ಕ್ಷೀಣಸಾಗಿದ್ದರೂ ಇದರಿಂದ ಬರು ವೇಗ ಪುಷ್ಟಿಯೂ ಬಲವೂ ಬರುವದು ದಿನ ದಿನಕ್ಕೆ ಆರೋಗ್ಯವೂ ಆಕರ್ಷಕ ಚೆಲ್ವವೂ ಇದು ಮಧುರವಾಗಿದೆ ಚಿಕ್ಕ ಮಕ್ಕಳು ಆನಂದಿಂದ ಸೇವಿಸುತ್ತಾರೆ ತೀಸೆ 1ಕ್ಕೆ 12 ಆಣೆ. ಪಿ. ಪಿ ಶುಲ್ಕ ಬೇರೆ.

52—31 ಯಂ. ವಿ. ಪ್ರಸಾದಿಕೆ, ಔಷಧಾಲಯ, ಶಿವಮೊಗ್ಗಾ, (ಮೈಸೂರು ಸಿಮು.)

# ಕೊಡಗು.

ಸನ್ ೧೯೩೦ನೇ ಇಸವಿ

ಜೂನ್ ತಾ. ೨೭ ನೇ ಶುಕ್ರವಾರ.


## ಸೈಮನ್ ಕಮಿಶನಿನ ರಿಪೋರ್ಟು.

ಹಿಂದೂಸ್ಥಾನದವರ ಇಚ್ಛೆಗೆ ವಿರೋಧವಾಗಿ ನೇಮಕವಾಗಿ ಬಂದಿರಿಯರಿಂದ ಬಹಿಷ್ಕರಿಸಲ್ಪಟ್ಟ ಸೈಮನ್ ಕಮಿಶನಿನವರು ತಮ್ಮ ರಿಪೋರ್ಟನ್ನು ಈ ತಾ ೨೪ರಲ್ಲಿ ಸ್ವಯಿಸಿದ್ದಾರೆ. ಈ ರಿಪೋರ್ಟಿನಿಂದ ಯಾವ ಹಿಂದೀಯನಿಗೂ ತೃಪ್ತಿಯುಂಗುವಂತಿಲ್ಲ. ಇವರು ಹಿಂದೂಸ್ಥಾನವನ್ನು ಸರ್ವಕಾಲಕ್ಕೂ ಬ್ರಿಟ್ಟಿನ ಅಧೀನದ ಆಸ್ತಿಯಾಗಿ ಇಟ್ಟುಕೊಳ್ಳಲು ಬೇಕಾದ ಭದ್ರ ಬೆಗಳನ್ನೆಲ್ಲಾ ಮಾಡಿಕೊಳ್ಳಲು ತಿಳಿದಾರೆಯೇ ಹೊರತು ಹಿಂದೂಸ್ಥಾನದವರು ಈಡುತ್ತಿರುವ ಸ್ವರಾಜ್ಯದ ಕುರುಹುಗಳು ಸಹ ಈ ಪುಂಡಿಯಲ್ಲಿ ಇಲ್ಲ. ಹಿಂದೂಸ್ಥಾನವು ಬ್ರಿಟಿಷಿನ ಅಧೀನದಲ್ಲಿ ಇಲ್ಲದಿದ್ದರೆ ಬ್ರಿಟಿಷ್ ಜನರ ಬೇವಸ ನಡಿಯುವುದೇ ಕಷ್ಟವೆಂತ ನಂಬಿರುವ ಜನರಿಂದ ಜ.ನಾಯಿಸಲ್ಪಟ್ಟ ಬದೀ ಬ್ರಿಟಿಷ್ ಜನರಿಂದಲೇ ಕೂಡಿದ ಈ ಕಮಿಶನ್ನಿನಿಂದ ಹಿಂದೂಸ್ಥಾನಕ್ಕೆ ವಿಶಾಸರೂಪ ಪ್ರಯೋಜನವಾದೀತೆಂತ ಆ ತೆ ಇಟ್ಟುಕೊಂಡವರ ಕಂಣು ಈಗಲಾದರೂ ತೆರೆದೀತೋ ಎಂಬ ಶ ನೋಡಬೇಕು.

ಹಿಂದೂಸ್ಥಾನದ ಇತರ ಭಾಗಗಳಲ್ಲಿ ಆಗಬೇಕಂತ ಸೂಚಿಸಿರುವ ಸುಧಾರಣೆಗಳನ್ನು ವಿಮರ್ತಿಸುವ ವೆಂಡಲು ಕೊಡಗಿನ ಸರಕಾರದ ಕ್ರಮದಲ್ಲಿ ಯಾವ ಸುಧಾರಣೆಯನ್ನೂ ಸೂಚಿಸಿರುವದಿಲ್ಲ ವೆಂತ ತಿಳಿಸಬೇಕಾಗಿದೆ. ಚಿಕ್ಕ ಪ್ರಾಂತ್ಯವಾದ ಕೊಡಗಿನಲ್ಲಿ ಪ್ರಜಾಪ್ರತಿನಿಧಿಗಳಿಂದ ಜವಾಬ್ದಾರಿಯುಳ್ಳಿರುವ ಸರಕಾರವನ್ನು ವಿಸ್ತರಿಸುವ ಪ್ರಜ್ನೆಯನ್ನು ಕೊಡಗಿನಿಂದ ಮೂಡಲು ಸಾಧ್ಯವಾಗಿಲಾರದಾದ್ದರಿಂದ ಕೊಡಗಿನಲ್ಲಿ ದೇಶದ ಜನರಿಗೆ ಜವಾಬ್ದಾರಿಯಿಲ್ಲಿರುವ ಸರಕಾರವನ್ನು ಒಳಗೆ ಕಾಲದ ವರೆಗೆ ವಿಸ್ತರಿಸಲು ಆಗಲಾರದೆಂತ ಈ ಕಮಿಶನಿನವರು ಅಭಿಪ್ರಾಯಪಟ್ಟಿರುತ್ತಾರೆ. ಕಮಿಶನಿನ ಅಭಿಪ್ರಾಯದಲ್ಲಿ ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿರಬೇಕೆನ್ನುವ ವರೆಗೆ ಖಾಸ್ ಅಧಿಕಾರಿಯ ನಿರಂಕುಶ ಆಳ್ವಿಕೆಯಲ್ಲೇ ಕಾಲಾತ್ಯಂತ ವರೆಗೂ ಈ ದೇಶವು ಇರಬೇಕೆಂತಾಯಿತು. ಈಗ ಇರುವ ಕೌನ್ಸಿಲಿನಲ್ಲಿ ಪ್ರತಿನಿಧಿಗಳ ಕೆಲಸವು ಕೃಷ್ಣಿಕರವಾಗಿದೆಯೆಂತ ಕಮಿತಿನಿಗೆ ತಿಳಿದು ಒಂದಿದ್ದರೂ ಸಹ ಆಡಳಿತದಲ್ಲಿ ದೇಶೀಯರಿಗೆ ಅಲ್ಪ ಸ್ವಲ್ಪ ಭಾಗವನ್ನಾದರೂ ಕೊಡಲು ಶಿಫಾರಸು ಮಾಡುವದಿಲ್ಲ. ಕೊಡಗಿನ ಜನರಲ್ಲಿ ಹುಟ್ಟಿರುವ ಕೊಡಗನ್ನು ಕೊಡಗಿನವರೇ ಆಳಬೇಕೆಂಬ ಭಾವನೆಯನ್ನು ಬದೀ ಉಶ್ಚಿತ್ಕ ಕಡಿಮೆ ಎಂಬ ಕಾರಣದಿಂದ ನಿರಾಕರಿಸಿದ್ದರಿಂದ ದೇಶದಲ್ಲಿ ನಿರಾಕೆಯು ಕುಂಬುವದರಲ್ಲಿ ಸಂಶಯವಿಲ್ಲ.

ಕೊಡಗನ್ನು ಎಂದೆಂದಿಗೂ ಪ್ರತ್ಯೇಕ ಪ್ರಾಂತ್ಯವಾಗಿಯೇ ಇರಿಸಿಕೊಳ್ಳಲು ಸಾಧ್ಯವಿಲ್ಲವೆಂತ ನಾವು ಒಪ್ಪುತ್ತೇವಾದರೂ ಈಗ ಚಾರಿಯಲ್ಲಿರುವಂಥ ಆಡಳಿತವನ್ನು ದೇಶದ ಜನರ ಪ್ರತಿನಿಧಿಗಳ ಹೇಳಿಕೆಯಂತೆ ನಡಿಸಲು ಖಾತಿತವಾಗಿಯೂ ಸಾಧ್ಯವೆಂತ ಹೇಳುತ್ತೇವೆ. ಜವಾಬುದಾರ ಸರಕಾರವು ಕಾಲಾನುಕಾಲಕ್ಕೆ ಬರೀ ಉಶ್ಚಿತ್ಕ ಕಡಿಮಿರುವ ಆಡಳಿತ ರಚನೆಯಲ್ಲಿ ಇದು ಹೇಗೆ ಸಾಧ್ಯವಿದೆ ಎಂಬದನ್ನು ತಪಶೀಲಾಗಿ ವಿವರಿಸಿದೆ. ಅಂಥಾ ರಚನೆಯನ್ನು ಜಾರಿಗೆ ತಂದುದರಿಂದ ಕೆಡಕುಗಳು ಕಂಡು ಬಂದರೆ ದೇಶೀಯರಿಗೆ ಯುಕ್ತ ತೋರಿದ ರೀತಿ ಮುಂದಿನ ಮಾರ್ಪಾಡನ್ನು ಸೂಡಿಕೊಳ್ಳಬಹುದು. ಪ್ರತ್ಯೇಕವಾಗಿರಬೇಕೆಂಬ ದೇಶದವರ ಆಪೇಕ್ಷೆಗಾಗಿ ದೇಶವನ್ನು ನಿರಂಕುಶ ಪ್ರಭುತ್ವಕ್ಕೆ ಇನ್ನು ನುಂದಕ್ಕೂ ಒಳಪಡಿಸಿ ದೇಶವನ್ನು ಶಿಕ್ಷಿಸಲು ಅಭಿನ್ಯಾಯ ಪಟ್ಟಿರುವಂತೆ ಕಾಣುತ್ತದೆ.

ಈಗ ಚಾರಿಯಲ್ಲಿರುವ ಮಧ್ಯಂತರ್ತಿ ಲೆಜಿಸ್ಲೇಟಿವ್ ಎಸೆಂಬ್ಲಿಯ ರಚನೆಯನ್ನು ಬದಲಾಯಿಸಲು ಶಿಫಾರಸು ಮಾಡಿದ್ದಾರೆ. ಅಂಥ ಹೊಸ ರಚನೆಯ ಸಭೆಗೆ "ಫೆಡರಲ್ ಎಸೆಂಬ್ಲಿ" ಎಂಬ ಹೊಸ ಹೆಸರು ಕೊಟ್ಟಿದ್ದಾರೆ. ಈ ಎಸೆಂಬ್ಲಿಯಲ್ಲಿ ೨೫೦ ರಿಂದ 280 ಮೆಂಬರುಗಳಿರಬಹುದು. ಈ ಸಭೆಗೆ ಕೂಡಗಿನ ಕೌನ್ಸಿಲಿನವರು ಒಬ್ಬನನ್ನು ಚುನಾಯಿಸಿ ಕಳುಹಿಸಲು ಹುದೆಂಬ ಶಿಫಾರಸು ಇದೆ. ಮಧ್ಯವರ್ತಿ ನ್ಯಾಯವಿಧಾಯಕ ಸಭೆಗೆ ಕೊಡಗಿನಿಂದ ಪ್ರತಿನಿಧಿಸ್ಥ ಬೇಕೆನ್ನುವ ಜಗಂ ಕೋರಿಕೆಯನ್ನು ನಿರಂವೇಶಿಸಿದಂತಾಯಿತು. ಅಷ್ಟರ ಮಟ್ಟಿಗೆ ತೃಪ್ತಿಕರವೇ.

ಹಿಂದೂಸ್ಥಾನದ ಬೇರೆ ಪ್ರಾಂತ್ಯಗಳಲ್ಲಿ ಪ್ರಾಂತೀಕ ಜಡಳಿತದಲ್ಲಿ ಈಗ ಚಾರಿಯಲ್ಲಿರುವ ದ್ವಿಮುಖ ಸಂಕೀರ್ಣವನ್ನು ತೆಗೆದು ಹಾಕಿ ಇಲಾಖೆಗಳನ್ನು ಮಂತ್ರಿಗಳ ಅಧೀನಕ್ಕೆ ಕೊಡಬೇಕೆಂಬ ಶಿಫಾರಸು ಇದೆ. ಆದರೆ ಅಧಾನ ಮಂತ್ರಿ ಮಂಡಳಿಯು ಜನರ ಅಭಿಪ್ರಾಯವನ್ನು ನಿರಾಕರಿಸಿ ನಡೆಯಲು ಕ್ಕು, ಅಥವಾ ಮಂತ್ರಿ ಮಂಡಳಿಯು ಪ್ರಜಾಪ್ರತಿನಿಧಿಗಳ ಅ ನ್ನು ಗವರ್ನರು ನಿರಾಕರಿಸಲಿಕ್ಕೂ ಅನುಕೂಲಗಳನ್ನು ಮಾ ಡಿಕೊಟ್ಟಿರುತ್ತಾರೆ. ಮಂತ್ರಿ ಮಂಡಲಿಯಲ್ಲಿ ಒಬ್ಬ ಅಧ ವಾ ಇಬ್ಬರು ಅಧಿಕಾರಿಗಳನ್ನು ಗವರ್ನರು ನೇಮಿಸಿಕೊಳ್ಳಬ ಹುದಂತೆ! ಕಡಿಮೆ ಸಂಖ್ಯೆಯ ಜನಾಂಗದ ಪ್ರತಿನಿಧಿಗಳನ್ನು ನೇಮಿಸಿಕೊಳ್ಳಬಹುದಂತೆ! ಮುಖ್ಯ ಮಂತ್ರಿಯಿಂತ ಒಬ್ಬನಿಗ ದೇಕೆಂತಾಗಲೀ, ಆತನು ಜನತಾಯಿಸುವವರನ್ನೇ ಇತರ ಮಂ ತ್ರಿಗಳಾಗಿ ನೇಮಿಸಿಕೊಳ್ಳಬೇಕಂತಾಗಲೀ, ಮಂತ್ರಿಗಳ ಸಂಬಳ ಕೊಡಬಾರದೆಂತ ಹೇಳಲು ಕೌನ್ಸಿಲಿಗೆ ಅಧಿಕಾರವನಾಗಲೀ, ಕೌ ನ್ಸಿಲಿನ ಸಂಬಿಕೆಯನ್ನು ಕಳಕೊಂಡರೆಂತ ಯೂವನಾದರೊಬ್ಬ ಮಂತ್ರಿಯು ನೇಲೆಯೂದರೂ ಕೌನ್ಸಿಲಿನಲ್ಲಿ ರಿತಾವು ಪಾಸ್ ಮಾಡದರೂ ಅಧಾನ ಮಂತ್ರಿಯು ತೆಲಸದಿಂದ ಬಿಡಬೇಕೆಂ ತಾಗಲೀ ಇಲ್ಲ. ಆಡಳಿತದ ಯಾವ ಕಾರ್ಯಕ್ಕಾಗಿದರೂ ದೇ ಶದ ಯಾವುದಾದರೂ ಒಂದು ಜಾತಿಯ ಜನರು ವಿರೋಧಿಸಿದರೆ ನುಂತ್ರಿಗಳ ಅಭಿಪ್ರಾಯವನ್ನು ನಿರಾಕರಿಸಿ ಗವರ್ನರು ವರ್ತಿಸು ಹುದಂತಲೂ ಇದೆ. ಕೌನ್ಸಿಲಿನ ಓಟಿಗೆ ಒಳಪಟ್ಟ ಮತ್ತು ಒಳಪಡದಿರುವ ಬಾಬ್ತಿನ ಬಾಬುಗಳು ಈಗಿನಂತೆಯೇ ಇರಬೇ ಕಂತೆ. ಮಂತ್ರಿಗಳ ಸ್ವಾತಂತ್ರ್ಯಕ್ಕೆ ಭಂಗ ಬರುವ ಇತರ ಎ ಷ್ಟೋ ಶರತ್ತುಗಳಿವೆ. ಆದ್ದರಿಂದ ಪ್ರಾಂತ್ಯಗಳಲ್ಲಿ ಸಹ ನಿಜವಾದ ಪ್ರಜಾ ಜವಾಬ್ದಾರಿ ಸರಕಾರವನ್ನು ಕೊಡುವಂತೆ ಶಿಫಾರಸು ಆದಂತಾಗಿಲ್ಲಿ.

ಮಧ್ಯವರ್ತಿ ಸರಕಾರದಲ್ಲಂತೂ ಪ್ರಜಾ ಜವಾಬ್ದಾರಿ ಸರಕಾರದ ಕುರುಹೇ ಇಲ್ಲ. ವೈಸರಾಯರ ಸರಕಾರವು ವೈ ಸರಾಯರಂತಿರುತ್ತಾ, ಸರಕಾರಿ ಉದ್ಯೋಗಸ್ಥರಿಂದಲೂ ನಡಿಸಲ್ಪಡಬೇಕು. ಫೆಡರಲ್ ಎಸೆಂಬ್ಲಿಯ ಇಚ್ಛೆಗೆ ಅನುಸಾರವಾ ಗಿ ನಡೆಯುಕ್ಕೊಳ್ಳಬೇಕಾದ ಮಂತ್ರಿಗಳು ಇಲ್ಲವೇ ಇಲ್ಲ. ಫೆಡರಲ್ ಎಸೆಂಬ್ಲಿಯಿಂದ ಬಿಚ್ಚುನನ್ನೋ, ಇಬ್ಬರನ್ನೋ ಎಗ್ಸಿಕ್ಯುಟಿವ್ ಕೌನ್ಸಿಲರುಗಳಾಗಿ ನೈಸರಾಯರು ನೇಮಿಸಿಕೊಳ್ಳಬಹುದಂತೆ. ಇಷ್ಟು ಮೊತ್ತ ಕಮಿಶನಿನ ವರದಿಯಲ್ಲಿ ದೇಶೀಯರ ಹಿತದ ಶಿಫಾರಸು ಆಗಿದೆ. ಇದು ಸಹ ಪ್ರಯೋಜನಕರವಾದ ಸೊಡನೆಯಲ್ಲ. ಈ ಸಭೆಯ ಪ್ರತಿನಿಧಿಗಳು ಈಗಿನಂತೆ ಪ್ರಜಾ ಜನರ ಓಟು ಪಡೆದು ಹೋಗುವವರಲ್ಲ. ಈಗ ಸ್ಥಾ ಜನರ ನಂಬಿಕೆ ಇರುವ ಒಟ್ಟು ಹಿಂದೂಸ್ಥಾನದ ಮು ಖಂಡರು ಎನೆಂಬ್ಲಿ ಮೆಂಬರುಗಳಾಗಿ ದೇಶದ ನಿಜವಾದ ಅಭಿ ವ್ಯಾಯವನ್ನು ತಿಳಿಸಿಕೊಡಲು ಸಾಧ್ಯವಾಗಿದೆ. ಕಮಿಶನಿನ ಶಿಫಾರಸು ಮೇರೆ ಫೆಡರಲ್ ಎಸೆಂಬ್ಲಿ ಮೆಂಬರುಗಳನ್ನು ವ್ಯಾಂ ತೀಕ ಲೆಜಿಸ್ಲೇಟಿವ್ ಕೌನ್ಸಿಲುಗಳು ಚುನಾಯಿಸುವುದಂತೆ. ವ್ಯಾಂತೀಕ ಕೌನ್ಸಿಲುಗಳಿಗೆ ಜನತಾಯರು ಜ.ನಾಪತಿಯಾಗಿ ನವಾಗಿದೆ. ಅಧಾನ ಸಭೆಗಳಿಂದ ನಿಜವಾದ ದೇಶಭಕ್ತರು ಚು ನಾವಣೆಯಾಗುವ ಸಂಭವ ಬಹಳ ಕಡಿಮೆಯಾಗಿದೆ.

ವಿಲಿಟರಿ ಇಲಾಖೆಯ ವಿಷಯದಲ್ಲಿ ರಿಪೋರ್ಟಿನಲ್ಲಿ ಕೊಟ್ಟಿರುವ ಅಭಿಪ್ರಾಯದಿಂದ ಹಿಂದೂಸ್ಥಾನಕ್ಕೆ ಸ್ವರಾಜ್ಯವು ಇನ್ನು ಎಂದೆಂದೂ ಸಿಕ್ಕುವಂತಿಲ್ಲ. "ಹಿಂದೂಸ್ಥಾನಕ್ಕೆ ಹೊರಗಿನಿಂದ ಬರುವ ಅಪಾಯವನ್ನು ತಪ್ಪಿಸಿ.ವುದು ಬರೀ ಹಿಂದೂಸ್ಥಾನಕ್ಕೆ ಸಂಬಂಧಪಡುವ ವಿಷಯವಲ್ಲ. ಅದು ಒ ಟ್ಟು ಸಾಮ್ರಾಜ್ಯಕ್ಕೆ ಸಂಬಂಧಪಡುವ ವಿಷಯವಾಗಿದೆ ಬ್ರಿ ಟಿನಿಂದ ಕಳುಹಿಸುವ ಅಧೀಸರು ಹಿಂದೀ ಮಂತ್ರಿಗಳ ಅಧೀ ನದಲ್ಲಿ ಇರಲು ಒಪ್ಪಲಿಕ್ಕಿಲ್ಲ. ಹಿಂದೀಯರಲ್ಲಿ ದೊಡ್ಡ ದೊ ಡ್ಡ ಜವಾಬ್ದಾರಿ ಮಿಲಿಟರಿ ಪದವಿಗಳಿಗೆ ಬರಲು ಅರ್ಹರಾದವ ರು ಈಗಲೂ ಇಲ್ಲ. ಇನ್ನು ಬಹು ಕಾಲಕ್ಕೆ ತಯಾರಾಗು ವಂತೆಯೂ ಇಲ್ಲ. ಆದ್ದರಿಂದ ಮಿಲಿಟರಿಯನ್ನು ಹಿಂದುಸ್ಥಾನದ ಸರ್ಕಾರದ ಅಧೀನದಿಂದ ತಪ್ಪಿಸಿ ಬ್ರಿಟಿಷ್ ಸರ್ಕಾರದ ಅಧೀ ನಕ್ಕೆ ತೆಗೆದುಕೊಳ್ಳಬೇಕು. ಬ್ರಿಟಿಷ್ ಸರ್ಕಾರದ ಏಜೆಂಟರಾಗಿ ವೈಸರಾಯರು ಈ ಇಲಾಖೆಯು ಮೇಲ್ವಿಚಾರ ನಡಿಸತಕ್ಕದ್ದು. ಈ ಬಗ್ಗೆ ಹಿಂದೂಸ್ಥಾನದ ಸರ್ಕಾರವು ಬ್ರಿಟಿಷ್ ಸರ್ಕಾರಕ್ಕೆ ಹಣದ ಹರಿಲಿಕೆ ಕೊಡತಕ್ಕದ್ದು" ಎಂತ ವರದಿಯಲ್ಲಿ ಹೇಳಿ ದೆ. ಈ ಅಭಿಪ್ರಾಯದಿಂದ ಹಿಂದೂಸ್ಥಾನಕ್ಕೆ ತತ್ಕಾಲ ಸ್ವ ರಾಜ್ಯವೆಂತೂ ಕೊಡುವೆಬಲ್ಲ ವೆಂತನ್ನಲ್ಲ, ಹಿಂದುಸ್ಥಾನದ ಅಂತಿಮ ಧ್ಯೇಯ ಸಹ ಸಾಮಂತ ಸ್ವರಾಜ್ಯವಾಗಿಲು ಸಾಧ್ಯ ವಿಲ್ಲವೆಂತ ಹೇಳಿದಂತಾಯಿತು. ಸಾಮ್ರಾಜ್ಯದ ಕೆನಾಡಾ ಮಂತಾದ ಸಾಮಂತ ರಾಜ್ಯಗಳಿಗೆ ಅವರವೇ ಪ್ರತ್ಯೇಕ ಸೈ ನ್ಯಗಳಿವೆ. ಹಿಂದೂಸ್ಥಾನವು ಪ್ರತ್ಯೇಕ ಸೈನ್ಯವನ್ನು ಇಟ್ಟು ಕೊಳ್ಳುವ ಕಾಲವು ಬಹು ಕಾಲವಪರೆಗೆ ಇಲ್ಲವಾದರೆ ಹಿಂ ದೂಸ್ಥಾನವು ಸಾಮಂತ ಸ್ವರಾಜ್ಯವನ್ನು ಸ್ವಪ್ನದಲ್ಲಿ ಸಹ ಬೋಚಿಸುವ ಸಂಭವವಿಲ್ಲ.

ಅಲ್ಲದೆ ಹಿಂದೂಸ್ಥಾನದ ಭದ್ರತೆಯು ಸಾಮ್ರಾಜ್ಯಕ್ಕೆ ಸುಬದ್ರವಾದುವ ವಿಷಯವನ್ನು ಹೇಳಿ ಹಿಂದೀಯರನ್ನು ಯ ತೋಟಿಯಲ್ಲಿ ಇಟ್ಟುಕೊಳ್ಳಲಿಕ್ಕಾಗಿ ಹಿಂದೂಸ್ಥಾನದ ಬರ್ತ ನಿಂದ ಬ್ರಿಟಿಷ್ ಸರ್ಕಾರದ ಅಧೀನದಲ್ಲಿ ಸೈನ್ಯವಿರಬೇಕಂತೆ! ಹಿಂದೂಸ್ಥಾನವನ್ನು ತಮ್ಮ ಕೈಯ್ಯಲ್ಲಿ ಇಟ್ಟುಕೊಳ್ಳುವುದು ಹಿಂದೀ ಜನತೆಯ ಕ್ಷೇಪಕ್ಕಾಗಿ ಎಂಬ ಟೀಕ್ಯು ಕಾರಣವ ನ್ನು ಬಿಟ್ಟು ಹಿಂದೂಸ್ಥಾನವನ್ನು ಸಾಮ್ರಾಜ್ಯದ ಪ್ರಯೋಜನ ಕ್ಕಾಗಿ ಬ್ರಿಟಿಷಿನವರು ಇಟ್ಟುಕೊಂಡಿರುವಂತೆ ಸ್ವಪ್ನಗೊಳಿಸಿ ದ್ದಂ ಮಾತ್ರವಲ್ಲದೆ ಹಿಂದೀಯರ ಆತ್ಮ ಗೌರವಕ್ಕೆ ತುಂಬಾ ಹಾನಿಯನ್ನುಂಟುಮಾಡಿದ್ದಾರೆ.

ವರದಿ ಪೂರ್ತಿಯಾಗಿ ನೋಡಲು ಇನ್ನೂ ಸಕ್ಕಿರುವುದಿ ಲ್ಲ. ಇದು ದೊರಕಿದಂತೆರ ಇನ್ನೂ ತಪಶೀಲಾಗಿ ವಿಮರ್ತಿ ಸ ಯೋಜನೆಯಿಂದ ಈ ಲೇಖನವನ್ನು ಮುಗಿಸಲಾಗಿದೆ.

## ಅದರ ಅರ್ಥ.

(ಮೆ. ಚಾರ್ಲ್ಸ್ ಟಕ್ಕರ್ ಎಂಬವರು ಅಮೇರಿಕಾದ ಪ್ರಸಿ ದ್ಧ ವ್ಯಾಪಾರಿ. ಅವರು ಒಂದಿಸ್ಕಾದಲ್ಲಿ ಗಾಂಧಿಯವರ ಸ್ನೇಹ ವನ್ನು ಸಂಪಾದಿಸಿದರು. ಅವರು ಗಾಂಧಿಯವರಿಗೆ ಮಹಾತ್ಮ ರು ದಂಡಿಗೆ ಪ್ರಯಾಣ ಬೆಳೆಸಿದಾಗ ಬರೆದ ಪತ್ರವನ್ನು "ಯಂಗ್ ಇಂಡಿಯಾ"ದಲ್ಲಿ ಪ್ರಕಟಿಸಿರುತ್ತಾರೆ. ಈ ಕೆಳಗಿ ನದು ಅದರ ಸಾರಾಂಶ)

ಲಾಹೋರ್ ಕಾಂಗ್ರೆಸ್ಸಿನ ವಾರದಲ್ಲಿ ನಾನು ಅಮೇರಿ ಕಾದಿಂದ ಇಂಡಿಯಾಕ್ಕೆ ಹಿಂದಿರುಗಿದೆನು. ಇಂಗ್ಲೆಂಡಿಗಾಗಿ ದಾಟುವಾಗ ನಾನು ಮೂರ್ತಿ ಜೋನ್ಸರೊಡನೆ ಮಾತನಾಡ ಲು ಅವಕಾಶ ದೊರೆಯಿತು. ಕೆಲವು ದಿನಗಳನ್ನು ಹೊರೇಸ್ ಎಲೆಕ್ಸಾಂಡರೊಡನೆ ಕಳೆದೆನು. ಹಿಂದೂಸ್ಥಿತದ ವಿಷಯ ತೀ ರ್ಮಾನಕ್ಕೆ ಬರಲು ಒಂದು ರಾಜಕೀಯ ಪಗಡೆಯ ಒಂದು ಭಾಗದವರು ಪ್ರಯತ್ನಿಸುತ್ತಿರುವರೆಂದು ನನಗೆ ಭಾಸವಾಯಿತು. ಆದುದರಿಂದ ನೀವು ರೌಂಡ್ ಟೇಬಲ್ ಕಾನ್ ಫರೆನ್ಸಿಗೆ ಒಪ್ಪದೆ ಕಾಂಗ್ರೆಸು ಸಂಪೂರ್ಣ ಸ್ವರಾಜ್ಯವನ್ನು ಪ ಡೆಯುವುದೇ ಅದರ ಧ್ಯೇಯವೆಂದು ತೀರ್ಮಾನಿಸಲು ಮುಂದು ವರಯುತ್ತಿದ್ದೀರೆಂದು ತಿಳಿಯಲು ವ್ಯಸನವಾಯಿತು. ಪ್ರಪಂ ಚದ ಎಲ್ಲ ಜನತಾಂಗಗಳ ಸ್ನೇಹವನ್ನು ಬಲಪಡಿಸಲು ಯತ್ನಿ ಸುವ ಬಳಲೀಯರಲ್ಲಿ ನನಗೆ ಸಂಪೂರ್ಣ ಸಹಾನುಭೂತಿ ಯುಂಟಾಯಿತು.

ಆದರೆ ನಿಮ್ಮ ಈಗಿನ ಕಾರ್ಯಕ್ರಮವು ನನ್ನನ್ನು ನಿಮ್ಮ ಕಡೆಗೆ ಒಲಿಸಿದೆ. ಏಕೆಂದರೆ—ನೀವು ದ್ವೇಷಕ್ಕೆ ಮದ್ದನ್ನು ಕಂಡು ಹಿಡಿದಿರುವಿರಿ ಮಾತ್ರವಲ್ಲ, ನೀವು ಅದನ್ನು ಮಧುರವಾ ದ ಪ್ರೇಮಕ್ಕೆ ಬದಲಾಯಿ ಸುವ ಕ್ರಮವನ್ನು ಗೊತ್ತು ಮಾಡಿ ರುವಿರಿ. ನಿನ್ನ ಚಳವಳಿಯನ್ನು ಕುರಿತು ಹೀಗಾಗಿ, ನಾನು ಒಂದು ಘನಂದ ಮತ್ತು ಉದಾತ್ತವಾದ ಪೆಟ್ಟಿಲನ್ನು ಹ ತ್ತುವಂತೆ ಆಗುತ್ತದೆ.

ನೀವು ಬ್ರಿಟಿಷರ ರಾಜ್ಯದ ವಾಯವನ್ನು ಕೊರೆದಿರು ತ್ತೀರೆಂದೆ. ಅವರ ರಾಜನೀತಿಯ ಮೂಢ ಪ್ರದರ್ಶನ—ಅಲ್ಲ, ಅವರ ರಾಜನೀತಿಯ ದಿವಾಳಿತನ—ವು ವಿಪಥವಾಗಿ ತೋರಿ ಸುತ್ತದೆ. ನಿಮಗೆ ಜಯ ಖಾಂಬಗಿವದು; ನೀವು ಕೈಕೊಂ ಡ ಮಾರ್ಗವು ಸರಿಯಾದದ್ದು—ಎಂಬುದರ ಚಿಹ್ನೆಯೇ ಇದೆ ಂದು ನಾನು ನಂಬುತ್ತೇನೆ ಸತ್ಯಾಗ್ರಹದ ಆಧ್ಯಾತ್ಮಿಕ ಆ ಧವಾ ದೈವಿಕ ಬಲವು ಜನರಿಗ್ಲುರಿಗೂ ಬೇಗನೆ ಗೊತ್ತಾಗು ವದು. ನೀವು ಇಡೀ ಇಂಡಿಯಾದೇಶವು ಸರಿಸಮ ಕಾಲಿ ದೆ ಭಂಗಕ್ಕೆ ಸಂಪೂರ್ಣವಾಗಿ ತಯಾರಾಗುವುದರ ಮೊದಲು ಆ ಚಳವಳಿಸ್ಸನ್ನು ಪ್ರಕಾಶಿಸಿದಿ. ಆದರೆ ನೀವು ಹರಿಸು ತ್ತಿರುವ ದೈವಿಕ ಶಕ್ತಿಯು ಹಿಂದೂದೇಶದ ಸ್ವಾತಂತ್ರ್ಯ ಹೋರಾಟದ ಶಕ್ತಿಗಳನ್ನೆಲ್ಲ ಕೂಡ ಕರಗಿಸದೆ ಇರದು.

ನೀವು ಈ ಸತ್ಯಾಗ್ರಹ ಚಳವಳಿಸ್ಸನ್ನು ಆರಂಭಿಸಿದ ಕೆಲವು ಜನ ವಿಶ್ವಸಿಗಳಿಗೆ ವ್ಯಾಪಾರವಿಲ್ಲವಿರಿ ಎಂದು ತಿಳಿಯಲು ನಾನು ತುಂಬಾ ಸಂತೋಷ ಪಡುತ್ತೇನೆ. ಸತ್ಯಾಗ್ರಹ ಚಳವಳಿದಲ್ಲಿ ನೀವು ಯಾವುದಕ್ಕಾಗಿ ಹೋರಾಡುತ್ತೀರೋ ಅದು ನ್ಯಾಯ ವಾಗಿರಬೇಕು. ಅಷ್ಟೇ ಅಲ್ಲ, ನೀವು ಹೋಡುವಾತಾದ್ದು ಧರ್ಮ ಯುದ್ಧವಾಗಿರಬೇಕು. ಬರೀ ಅಸಹಕಾರ ಮತ್ತು ಸಹಿಷ್ಣುತೆ ಇವು ಮಾತ್ರ ಸಾಲದು. ಸತ್ಯಪ್ರಭವೂ ಆತ್ಮ ಶ ದ್ಧಿಯೂ ಇಲ್ಲದಿದ್ದರೆ ಅವುಗಳಿಂದ ಅಪಜಯವು ದೊಂಕಬ ಹುದಲ್ಲದೆ ಜಯವು ಸಿಕ್ಕಲಾರದು. ಆದರೆ ನೀವು ತೋರಿಸಿ ರುವಂಥಾದ್ದು ಸತ್ಯಾಗ್ರಹಿಗಳಿಗೆ ಬೇಡದಿಯು ನೂರ್ಗ ವೂ ಕೈವಲ್ಲ—ಅದು ಇಡಿಯೂದ ಎಲ್ಲಾ ಭಾಗಗಳಿಗೂ ಪರಿಚ. ವಂಥ ದೈವಿಕ ಶಕ್ತಿಯನ್ನು ತಯೊರುಗಾಡುವ ದಿವ್ಯ ಯಂತ್ರ.

ಬೇರೆಯವರನ್ನು ನಿಮ್ಮ ದಾರಿಗೆ ಒಲಿಸಿಕೊಳ್ಳಬಹುದೆಂಬ ಭರವಸೆಯೇ ನಿನಗೆ ಆ ಮಹತ್ಕಾರ್ಯದಲ್ಲಿ ತೊಡಗಲು ಧೈ ರ್ಯ ಕೊಟ್ಟಿತೆಂದು ನಾನು ತಿಳಿಯುತ್ತೇನೆ. ನೀವು ಎತ್ತಿ ರುವ ಆಧ್ಯಾತ್ಮಿಕ ಮಟ್ಟಕ್ಕೆ ಜನರನ್ನು ಕರೆದುಕೊಂಡು ಹೋ ಗುತ್ತಿದ್ದೀರಿ; ದುರಭ್ಯಾಸಗಳಿಗೆ ಬಲಿಯಾದ ಕೆಲವು ಕೆಳಗೆ ಬಿದ್ದು ರಬಹುದು. ಹಾಗಾದರೆ ನಿಮಗೆ ಶಕ್ತಿಣ ಜಯ ದೊರಕಲಿಕ್ಕಿ ಲ್ಲ. ಆದರೂ ನಿಮಗೆ ಅದು ಅಪಜಯವಾಗಿ ಪರಿಣಮಿಸ ಕ್ಕಿಲ್ಲ. ಏಕೆಂದರೆ—ನೀವು ರಾಷ್ಟ್ರ ಧರ್ಮಕ್ಕಿಗೆ ಒಂದು ಹೆ ಸ ತರದ ಶಕ್ತಿಯನ್ನು ಕೊಡುತ್ತೀರಿ ಮತ್ತು ಸರ್ಕಾರದ ಬ ನನ್ನು ಕುಂದಿಸುತ್ತೀರಿ. ನಿಮ್ಮ ಅನುಯಯಿಗಳು ಕುತ ಕ್ರ ಮತ್ತು ಹಿಂಸಾ ಮಾರ್ಗದಲ್ಲಿ ಕೈ ಹಾಕದಿದ್ದರೆ ನೀವು ಯಾವ ಜನತಾಂಗವೂ ಹೊಂದದೆ ಒಂದು ಮಹತ್ತರದ ಸಾ ತಂತ್ರ್ಯವನ್ನು ಪಡೆಯುತ್ತೀರಿ.

ನೀವು ಒಕ್ಕಮಯವಾದ ಯುದ್ಧಕ್ಕೆ ಬದಲು ನೈತಿಕ ರ್ಮಯುದ್ಧ ಕ್ರಮವನ್ನು ಕಂಡು ಹಿಡಿದಿರುವಿರಿ. ಮುಂದಿನ ನರು ನಿಮ್ಮನ್ನು ಧನ್ಯ—ಪೂಜ್ಯ ಭಾವದಿಂದ ಜ್ಞಾಪಿಸಿಕೊಳ್ಳು ರಿಂದು ಹೇಳಲು ಸಂಶಯವಿಲ್ಲ. ನಿಮ್ಮ ಈಗಿನ ಜಯವು ನಿವ ನಮ್ಮತೆಯಿಂದಲೇ ಸಾಧ್ಯವಾಗುತ್ತದೆ. ನೀವು ಸ್ವಾರ್ಥಶಾಖ ನ್ನು ಕನಸಿನಲ್ಲಿಯೂ ಯೋಚಿಸುತ್ತಿಲ್ಲ

### ಶ್ರೀಮತಿ ಸಾಕಮ್ಮನವರ ಭಾಷಣ.

ಸೋಮವಾರಪೇಟೆಯ ದೊಡ್ಡ ಕಾಫಿಲ್ಯಾಂಟರಾದ ಶ್ರೀಮತಿ ಡಿ. ಸಾಕಮ್ಮನವರನ್ನು ನೈಸೂರ ಸಾಸ್ಥಾನದ ಎ ಬ್ಬಿಯಲ್ಲಿ ಒಬ್ಬ ಮೆಂಬರಾಗಿ ಆಲ್ಲಿಯ ಸರ್ಕಾರದವರು ನಿಮಿಸಿರುವರೆಂದು ಈ ಮೊದಲೇ ವಾರ್ತಾಕರಿಗೆ ತಿಳಿಸಿರಾಗಿದೆ. ಮತಿಯವರು ಸೆದರು ಎನೆಂಬ್ಲಿಯ ವಿಟಿಂಗಿನಲ್ಲಿ ಈ ತಂ ದಲ್ಲಿ ಮೊಡಿದ ಪ್ರಥಮ ಭಾಷಣದ ಸಾರಾಂಶವನ್ನು ಈ ಕೆ ಕೊಡಲಾಗಿದೆ.

ನನ್ನನ್ನು ಮಹಿಳೆಯರ ಪರವಾಗಿ ಈ ಸಭೆಯ ಮೆಂಬ ನಾಗಿ ಮೊಡಿದ್ದಕ್ಕಾಗಿ ಕ್ರೀಮಾನ್ ಮಹಾ ರಾಜರವ ನ್ನೂ, ಅವರ ಸರ್ಕಾರದವರನ್ನೂ, ಮುಖ್ಯವಾಗಿ ನನ್ನ ವಿ ನ್ ಸಾಹೇಬರವರನ್ನೂ ಮನಃಪೂರ್ವಕವಾಗಿ ವಂದಿಸು ನೆ.

ತಮ್ಮ ಭಾಷಣದಲ್ಲಿ ನನಗಿಲ್ಲ ವಿಷಯವಾಗಿ ಪ್ರೋ ನ್ಸಾಹಕರವಾದ ಮಾತುಗಳಾಡಿರುವುದಕ್ಕೆ ನಾನು ತಮಗೆ ಬ ಳ ಕೃತಜ್ಞಳಾಗಿರುತ್ತೇನೆ.

ನನಗೆ ಈ ಸಭೆಯ ಅನುಭವ ಇರುವುದಿಲ್ಲ. ತನ್ಮ ೋರಂತೆಯಾಕೆ ನಾನು ನಿಜವಾಗಿಯೂ ಈ ಸಭೆಯ ಕಾರ್ಯ ನಿಮಗಳಿಗೆ ಸಹಾಯ ಕೊಡಲಿಕ್ಕೆ ಶಕ್ತಿ ಇಮ್ಮೊಂದು ಹೇಳಲಾರೆ. ಆದರೆ ಒಂದು ವಿಷಯ ಮಾತ್ರ ಹೇಳಬಲ್ಲೆನೆಸುವದೆ—ಸ್ತ್ರೀಯ ನ್ಸಹಾಯವು ದೇಶಾಭ್ಯುದಯದ ಕಾರ್ಯಗಳಲ್ಲಿ ಪ್ರಷ್ಟ ಬೇಕ ತ್ತೆ ಮುಂದುವರಿಯುವುದು. ಈ ದೃಷ್ಟಿ ನನ್ನ ಸರ್ಕಾರದ ಸ್ಥಿಗೆ ಇರುವುದರಿಂದ ದೇಶದ ಏಳಿಗೆಯು ಚಾರ್ಮತೆ ನಡೆಯು ವುದರಲ್ಲಿ ಸಂಶಯವಿಲ್ಲ. ಇದೇ ರೀತಿ ನ್ಯಾಯ ವಿಧಾಯ ಕ ಸಭೆ, ಮೈಸೂರು ಎಕ್ಸಿಕ್ಯುಟಿವ್ ಕೌನ್ಸ್ಲ್, ಬೋರ್ಡ್ ಗಳು ಮಗ್ಯೆ ಸನುತಿಗಳಿಗೆ ಪಹಿಳೆಯರ ಪ್ರತಿನಿಧಿಗಳನ್ನು ಮೆಂ ಬರುಗಳಾಗಿ ತೆಗೆದುಕೊಂಡಿರಿ ಬಹಳ ಪ್ರಯೋಜನವಿದೆ. ಈ ರೀತಿ ಸರ್ಕಾರದವರು ಮೂಡುತ್ತಾರೆಂದು ನಂಬಿದ್ದೇನೆ

ವಿದ್ಯಾಭ್ಯಾಸ.

ಮೈಸೂರು ದೇಶದಲ್ಲಿ ಇತರ ನ್ಯಾಂತ್ಯಗಳಿಗಿಂತ ಮುಂ ಜವಾಗಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುತ್ತಾ ಬಂ ದಿದ್ದರೂ ಇನ್ನೂ ಸ್ತ್ರೀಯರು ಮುಂದುವರಿಯಲಿಲ್ಲ. ಕಾ ರಣಗಳೇನೆಂದರೆ—

(1) ಸರಸ್ಥಳದ ಹುಡುಗಿಯರು ಎಳನಿ ಮೊಡಿಲಿಕ್ಕೆ ಸರಿ ಯಾದ ವಸತಿಗಳು ಇಲ್ಲದೇ ಇರುವುದರಿಂದ ಕೆಲವರು ಕಾ ನ್ವೆಂಟ್, ಬಸವ ಕಾಲನಿ ಸ್ಕೂಲುಗಳಿಗೆ ಬಾಲಕಿಯರನ್ನು ಕ ಳುಹಿಸುತ್ತಾ ಇರುವುದಾಗಿವೆ. ಅವುಗಳು ನಮ್ಮ ಜನರಿಗೆ ಸರಿ ಹೋಗುವುದಿಲ್ಲ. ಆದಕಾರಣ ನಮ್ಮ ಪೂರ್ವ ಧರ್ಮ ಮತ್ತು ನೀತಿಗಳನ್ನು ಬೋಧಿಸುವಂತೆಯೂ, ನಮ್ಮ ಜನಗಳ ಮೇಲ್ವಿಚಾರಣೆ ಇರುವಂತೆಯೂ ಬಾಲಿಕಾ ನಿಲಯಗಳನ್ನು ಸ್ಥಾಪಿಸಲಿಕ್ಕೆ ಪ್ರೋತ್ಸಾಹ ಕೊಡಬೇಕು.

ಡಿಸ್ಟ್ರಿಕ್ಟ್‌ಗಳಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕಡಮೆ. ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗಳಲ್ಲಿಯೂ ಸರಿ ಯಾದ ವಿದ್ಯಾರ್ಥಿ ನಿಲಯಗಳನ್ನು ಬಾಲಕೀಯರಿಗೋಸ್ಕರ ವಾಗಿ ವರ್ಪಡಿಸಿ ಉದಾರವಾದ ವೇತನದ ಮೂಲಕ ಇವರಿಗೆ ಪ್ರೋತ್ಸಾಹ ಕೊಡಬೇಕು. ಇ ವರ ವಿದ್ಯಾಭ್ಯಾಸದ ಕ್ರಮದಲ್ಲಿ ಮುಖ್ಯವಾದ ಗೃಹಕೃತ್ಯ ಕ್ರಮಗಳನ್ನು ಬೋಧಿಸಬೇಕು.

ಬಹಳ ಚಿಕ್ಕ ವಯಸ್ಸಿನಲ್ಲಿ ಲಗ್ನ ಮೊಡುವ ಪದ್ಧತಿ ಸಹ ತ್ತೊಂದು ಕಾರಣ. ಬ್ರಿಟಿಷ್ ಇಂಡಿಯೊದಲ್ಲಿ ಜಾರಿಗೆ ಬ ದಿರುವ ಶಾರದಾ ಖಾಸೂನು ಅನುಸರಿಸಿ ತಕ್ಕ ಸಲಹೆಗಳನ್ನು ಕೊಡಲಿಕ್ಕೆ ಒಂದು ಕಮಿಟಿಯನ್ನು ನಿಯಾಮಿಸಲಾಗಿ ವ್ಯಾರ್ಥನೆ.

ವೈದ್ಯಕಾಯ.

ನನಗೆ ವಿಶೇಷ ಅಧಿಕಾರ ಇರತಕ್ಕದ್ದು ವೈದ್ಯಕಾಯ, ಕೈಗಾರಿಕೆ, ವ್ಯಾಪಾರ ಇವುಗಳಲ್ಲಿ. ಈ ಭಾಗದಲ್ಲಿ ಹೊ ಸ ವಿಧಾನಗಳನ್ನು ಶಾಲೆಗಳಲ್ಲಿ ಬೋಧಿಸಿ ಪ್ರಚಾರಪಡಿಸಬೇಕು. ವೈದ್ಯಕಾಯದ ಕ್ರಮಗಳು ಅಂದರೆ ತರಕಾರಿ ತೋಟ, ಹಣ್ಣು ಹಂಪಲಿನ ತೋಟ, ಹೂವಿನ ತೋಟ ಮುಂತಾದ್ದನ್ನು ಮೊಡುವುದು ಮತ್ತು ಅದರ ಉಪಯೋಗಗಳು ವಗ್ಯೆಗೆ ವಿಷ ಯಗಳನ್ನು ಹೆಂಗಸರಿಗೂ ಸಹ ಬೋಧಿಸಬೇಕು. ಈ ವಿಧಾ ನಗಳನ್ನು ತಿಳಿದುಕೊಂಡರೆ ನನ್ನ ಹೆಂಗಸರು ಈ ವಿಷಯದಲ್ಲಿ ಬಹಳ ಕೆಲಸ ಮಾಡಬಹುದು. ಅಲ್ಲದೆ ಇದು ಅವರ ಆರೋ ಗ್ಯಕ್ಕೂ ಸಹಕಾರಿ. ಹೆಂಗಸರ ಮನೆ ಕೆಲಸಗಳಾದನಂತರ ಸಿಕ್ಕಬಹುದಾದ ಬೇರಾವಷ್ಟು ಸಮಯವನ್ನು ನಿಶ್ಚ್ಯಯೋಜನ ವಾಗಿ ಕಳೆದುಕೊಳ್ಳುತ್ತಲಿದ್ದಾರೆ. ಹಳ್ಳಿಯ ಸ್ತ್ರೀಯರುಗಳಲ್ಲಿ ಬಾಲಕಿಯರಿಗೂ ಮನೆಗಳಲ್ಲೇ ನೂಡಬಹುದಾದ ಚಿಕ್ಕ ಚಿಕ್ಕ ಕೈಗಾರಿಕೆ ಕೆಲಸಗಳು, ವೈದ್ಯಕಾಯ ಮುಂತಾದ ಮೇಲ್ಕಂಡ ಕ್ರಮಗಳನ್ನು ಕಲಿಸಿ ಕೊಡುವಂತೆ ಸೂಚಿಸಬೇಕಾಗಿ ಪ್ರಾರ್ಥನೆ.

---

### ವಿತ್ತಸೇವೆಗಿಂತ ದೇಶಸೇವೆ ಮಿಗಿಲು.

ಸ್ಥಳ—ಮುಂಬಯಿ ಮಜಗಾಂ ಪೋಲೀಸ್ ಕೋರ್ಟ್

ಅಪರಾಧಿಗಳು—ಲಕ್ಷ ವಡಾಲಾ ಸತ್ಯಾಗ್ರಹಿಗಳ ವಿಚಾರಣೆ ನಡೆಯುತ್ತಿದ್ದಾಗ ಈ ಸ್ವಾರಸ್ಯವೇತವು ಕಾಣಬಂತು:

ಮೆಜಾರ ಮುದುಕ—ನ್ಯಾಯಾಧೀಶರೇ! ಆಪರಾಧಿಗ ಳಲ್ಲಿ ನನ್ನ ಮಗನೊಬ್ಬನಿದ್ದಾನೆ ನಾನು ಹಣ್ಣು ಹಣ್ಣು ಮುದುಕ, ಅವನನ್ನು ಕರೆದುಕೊಂಡು ಹೋಗುತ್ತೇನೆ.

ಜಂಗಲ್‌ವಾಲಾ—(ಅತರೇ ನ್ಯಾಯಾಧೀಶರು) ನಿನ್ನ ಮಗನನ್ನು ತೋರಿಸು.

ಶ್ರಿಯಂಬಕವಿಲ್ಲ—(ಒಬ್ಬ ಸಣ್ಣ ಹುಡುಗನು ಆಪರಾಧಿ ಗಳ ಗುಂಪಿನಿಂದ ಮುಂದೆ ಬಂದು) ನಾನೇ

ಜಂ—ನಿನ್ನಮ್ಮನ ಸಂಗಡ ಮನೆಗೆ ಹೋಗುವೆಯೋ ?

ಶ್ರಿ—ಇಲ್ಲ. (ತಂದೆಯನ್ನು ಕುರಿತು) ಅಪ್ಪಾ! ನೀ ನು ಮಹಾತ್ಮಾ ಗಾಂಧಿಯವರ ಹುಟ್ಟಿದಬನು, ನಿನ್ನ ಹಿರಿಯರನ್ನು ಕ್ಕೆರಿಸು!

ಜಂ—(ಮುದುಕನನ್ನು ಕುರಿತು) ನಿನ್ನ ಹೊಟ್ಟೆ ಬಟ್ಟೆ ಗೆ ಸಂಪಾದಿಸಿ ಹಾಕುವವರು ಯಾರು ?

ಮುದು—(ಗೊಳೋ ಎಂದಳುತ್ತ) ನನಗೆ ಯಾರೂ ದಿ ಕ್ಕಿಲ್ಲ. ಈ ಮಗನೊಬ್ಬನೇ ನನಗೆ ಆಸ್ತಿಹಾಕುವನು. ನನ ಗಿವನೊಬ್ಬನೇ ಮಗ

ಜಂ—(ವಿಶಲನನ್ನು ನೋಡಿ) ವಿನಯಸ್ಯಾ! ನಿನ್ನ ಮುದಿ ತಂದೆಯನ್ನು ಸಂರಕ್ಷಣೆ ಮಾಡುವುದು ನಿನ್ನ ಕರ್ತವ್ಯ.

ವಿಶಲ—ಸುಹಾಶಯರೇ! ನಾನು ನನ್ನ ತಂದೆಯ ಸೇವೆ ಯನ್ನು ತ್ಯಿಕರಣ ಪೂರ್ವಕವಾಗಿ ಮಾಡಿದ್ದೇನೆ ಈಗ ನನ್ನ ನೂತ್ಪಭೂಮಿಗಾಗಿ ಸೇವೆಮಾಡುವುದು ನನ್ನ ಧರ್ಮ. ಆ ದುದರಿಂದ ನಾನು ಹೊರಟಿದ್ದೇನೆ.

ಇದನ್ನು ಕೇಳಿ ನೈದ್ಯನಿಗೆ ಕಣ್ಣಲ್ಲಿ ನೀರು ಧಾರೆಧಾರೆ ಯಾಗಿ ಹರಿಯತೊಡಗಿತು. ಪಟಾಕಾಲೆಯ ಅಂತ್ಯದಲ್ಲಿ ನ್ಯಾಯಾಧೀಶರು ಏರಲನನ್ನು ಮತ್ತೆ 'ತಂದೆಯಿರುವಿಗೆ ಹೋ ಗುವೆಯಾ' ಎಂದು ಕೇಳಲು ಅವನು 'ಇಲ್ಲ'ವೆಂಬನು. ನ್ಯಾ ಯಾಧೀಶರು

"ನಿನ್ನ ತಂದೆಯ ಪೋಷಕನು ನೀನೊಬ್ಬನೆ. ನಿನ್ನ ನ್ನು ಬಂಧಿಸಿದರೆ ನಿನ್ನಪ್ಪನ ಹೊಟ್ಟೆಗಿಲ್ಲವೆ ಸಾಯುತ್ತಾನೆ"

ಎಂದು ಹೇಳಿ ಒಂದು ದಿನ ಶಿಕ್ಷೆವಿಧಿಸಿದರು.

---

### ಮಡಿಕೇರಿನಾಡು ಯೂನಿಯನ್ನಿನ ಕಮಿಟಿ ವಿಂಟಿಂಗು.

ಈ ವಿಂಟಿಂಗು ತಾ 20ರಲ್ಲಿ ನಡೆಯಿತು. ಹಾಜರಿ ದ್ದ ಮೆಂಬರುಗಳು —(1) ಮೆ. ಯಂ. ಯಂ. ಬೆಳ್ಯಪ್ಪನವ ರು (ಪ್ರೆಸಿಡೆಂಟರು,) ಕಮಿಟಿ ಮೆಂಬರು ಮೆ ಗಳಾದ (2) ಸಂಬಿಸೆಟ್ಟಿರವರಂತ ಮುದ್ದಣ್ಣನವರು, (3) ಕಿಗ್ಗಾಲು ಕಿ. ಶಾಂತ ಯ್ಯನವರ (4) ಕೊಂಗಂಡ್ರಿರ ಪಿ ಮುತ್ತಣ್ಣನವರು, (5) ಮೂಡಿಟ್ಟಿರ ತಿಮ್ಮಯ್ಯನವರು ಮತ್ತು (6) ಕೋಡಿಜಿ ಬೊ ಡ್ಡಯ್ಯನವರು (ಸೆಕ್ರೆಟರಿ) ಅಲ್ಲದೆ ಸಹಕಾರ ಪ್ರೋವಿನ್ಷಿ ಯಲ್ ಫೆಡರೇಶನಿನ ಗೌರವ ಕಾರ್ಯದರ್ಶಿ ಮೆ. ಕೋಟೇರ ಚಿಣ್ಣಪ್ಪನವರು, ಮತ್ತು ಸಂಘದ ಸುಪರ್ ವೈಸರೂ ಸಹ ಹಾ ಜರಿದ್ದರು.

(1) ಕಳೆದ ಜನರಲ್ ವಿಂಟಿಂಗಿನ ಪ್ರೊಸೀಡಿಂಗ್ಸ್ ಓದಿ ಏಕಾರ್ಡು ಮೊಡಲಾಯಿತು.

(2) ಪ್ರತೀ ಒಂದು ಯೂನಿಯನ್ನಿಗೆ ನೇರಿದ ಸಂಘೆವು ಸಂಯೋಜನೆ ಹಾಸಲು 5/ರೂ. ವೆಂತು, ಪ್ರತಿನಿಧಿಯು ಪೀಜು ಒಂದು ರೂಪಾಯಿ ಕೊಡ್ಡೆ ಯೂನಿಯನ್ ಸೆಕ್ರೆಟರಿ ಯವರಿಗೆ ಪಾವತಿನೂಡಿ ರಿಸೀತಿ ಪಡೆದುಕೊಳ್ಳುವಂತೆ ತೀ ರ್ಮಾನಿಸಲಾಯಿತು.

3 ಸಂಘಗಳನ್ನು ನೊದರ್‌ವೈಸು ಮತ್ತು ಜನರಲ್ ವಿಂ ಟಿಂಗು ಎರ್ಪಡಿಸಿ ವಿಷಯ ಬರುವ ತಿಂಗಳು ತಿಂಗಳಲ್ಲಿ ನ ಡಿಯಂತೆ ವಿಂಟಿಂಗಿನಲ್ಲಿ ತೀರ್ಮಾನಿಸಿಕೊಳ್ಳುವಂತೆ ವರ್ಪಾ ಡಿಸಲಾಯಿತು.

(4) ಸೆಂಟ್ರಲ್ ಬ್ಯಾಂಕಿನಿಂದ ಒಂದು ಶೇಂನ್ನು ಕೊಡ್ಲೆ ತೆಗೆದುಕೊಳ್ಳುವಂತೆ ತೀರ್ಮಾನಿಸಲಾಯಿತು.

(5) ಫೆಡರೇಶನಿನ ಕಾರ್ಯನಿರ್ವಾಕ ಸಮಿತಿ ಪ್ರೊಸೀ ಡಿಂಗ್ಸ್‌ನ್ನು ಓದಲಾಯಿತು. ಇದೆನ್ನು ಜಾರಿಗೆ ತರುವಂತೆ ಸುಪರ್ ವೈಸರನ್ನು ಕೇಳಿಕೊಳ್ಳಲಾಯಿತು.

(6) ಪ್ರತಿ ಸಂಘದ ಆವಿ ಟಿ ಮತ್ತು ಜನರಲ್ ವಿಂಟಿಂ ಗಿನ ನಕಲೊಂದನ್ನು ಯೂನಿಯನ್ನಿಗೂ ಮತ್ತು ಫೆಡರೇಶನ್ನು ಗೂ ಕಳುಹಿಸಿಕೊಡುವಂತೆಯೂ, ಈ ವಿಷಯ ಎಲ್ಲಾ ಸಂಘಗಳಲ್ಲಿ ತಾಕೀತು ಮೂಡುವಂತೆಯೂ ತೀರ್ಮಾನಿಸಲಾಯಿತು.

(7) ಯೂನಿಯನ್ ಬೈಲಾಗಳನ್ನು ಕನ್ನಡದಲ್ಲಿ ಅಚ್ಚು ಹಾಕಿಸಿ ಪ್ರತಿ ಸಂಘಕ್ಕೆ ಕಳುಹಿಸಿಕೊಡುವಂತೆ ಫೆಡರೇಶನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

(8) ಸುಪರ್ ವೈಸರು ಪ್ರತಿ ಸಂಘದ ಆಡಿಟ್ ಮೊಡಲಿ ಕ್ಕೆ ಹೋಗಿವಾಗ ಸುಪರ್‌ವಿಸ್ ಫೀಜು ಮತ್ತು ಯೂನಿ ಯನ್ ಪಾಸಲು ಪಾಸನ್ನು ಮೂಡಿದ್ದಾರೋ ಎಂಬ ಸಂಗತಿ ಎ ಚ್ಚರ ತೆಗೆದುಕೊಳ್ಳುವಂತೆ ಸುಪರ್ ವೈಸರನ್ನು ಕೇಳಿಕೊಳ್ಳು ಲಾಯಿತು.

(9) ರಿಜಿಸ್ಟ್ರಾರವರು ಪೆಬ್ರವರಿಯಿಂದ ನಿಸೆಂಬರಿಂ ದಿನ ಪರ್ಯಂತದಲ್ಲಿ ಫೆಡರೇಶನ್ ಮೂಲಕ ಸೆರಿಯೊದ ರೀತಿ ಯಲ್ಲಿ ಸತ್ಕಾರಮೊಡುವ ವಿಷಯ ವಿಚಾರಿಸಿ ಮೊಡಬೆಕ್ಕೆ ಈ ಯೂನಿಯನ್ ಒಪ್ಪಿಸೆಯನ್ನಿಯಿತು.

(10) ಈ ಪ್ರೊಸೀಡಿಂಗ್ಸ್ ನಕಲೊಂದನ್ನು ಫೆಡರೇಶನ್ನಿ ಗೂ, ಈ ಯೂನಿಯನ್ನಿಗೆ ಸೇರಿದ ಪ್ರತಿ ಸಂಘಕ್ಕೂ ಮತ್ತು ರಿಜಿಸ್ಟ್ರಾರರಿಗೂ ಕಳುಹಿಸುವಂತೆ ತೀರ್ಮಾನಿಸಲಾಯಿತು.

ಯಂ ಯಂ. ಬೆಳ್ಯಪ್ಪ,
(ಪ್ರೆಸಿಡೆಂಟ್.)

---

### ಕೋ-ಆಪರೇಟಿವ್ ಫೆಡರೇಶನ್ ಕಮಿಟಿ ವಿಂಟಿಂಗು.

ಈ ವಿಂಟಿಂಗು ಈ ತಾ 21ರಲ್ಲಿ ನಡೆಯಿತು. ಹಾಜರಿದ್ದ ಮೆಂಬರುಗಳು:—1 ರಾವ್ ಬಹದ್ದೂರ್ ಪಿ ವೇಣ್ಯೆಯ್ಯನವರು (ಪ್ರೆಸಿಡೆಂಟರು) 2. ಮೆ. ಕೆ. ಪಿ. ಚಿಣ್ಣಪ್ಪನವರು, (ಸೆಕ್ರೆಟರಿ) ಕಮಿಟಿ ಮೆಂಬರುಗಳು:—ಮೆ. ಗಳಾದ 3. ಸಿ. ಯನ್. ವೆಂಕಟ್ಯೆಯ್ಯನವರು, 4. ಯಂ. ಯಂ. ಬೆಳ್ಯಪ್ಪನವ ರು ಮತ್ತು 5. ಯನ್. ಶಂಕರ್ಯೆಯ್ಯನವರು.

1. ಕಳೆದ ವಿಂಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾ ಯಿತು.

2. ರಿಜಿಸ್ಟ್ರಾರರಿಗೆ ಕಳೆದ ತಾ. 12ರಲ್ಲು ಕಳುಹಿಸಿದ ಪ್ರೊಸೀಡಿಂಗ್ಸಿನ ನಕಲು ವೆ.ತ್ತು ಲೆಟರ್ ನಂಬರು 1ಕ್ಕೆ ತಹಶೀ ಲ್ ವರೆಗೆ ಜವಾಬು ಬಾರದ್ದರಿಂದ ಪುನಃ ಒಂದು ರಿಮೈಂಡ ರ್ ಕೊಡಬೇಕಾಗಿ ತೀರ್ಮಾನಿಸಲಾಯಿ ತು.

3 ಸಂಘಗಳ ಪ್ರೊಸೀಡಿಂಗ್ಸ್‌ಗಳನ್ನು ಸೀದಾ ಫೆಡರೇಶನಿ ಗೂ ತುತ್ತೊಂದನ್ನು ಯೂನಿಯನ್ನಿಗೂ ಕಳುಹಿಸುವಂತೆ ಎ ಲ್ಲಾ ಸಂಘಗಳಿಗೆ ಸರ್‌ಕ್ಯುಲರ್ ಕೊಟ್ಟು ಬರಿತೀರ್ಮಾನಿಸಿ ಲಾಯಿತು.

4. ಸೆಂಟ್ರಲ್ ಬ್ಯಾಂಕಿನ ಕಮಿಟಿ ಮತ್ತು ಜನರಲ್ ವಿಂ ಟಿಂಗುಗಳ ಪ್ರೊಸೀಡಿಂಗ್ಸ್‌ಗಳನ್ನು ಫೆಡರೇಶನ್ನಿಗೆ ಕಳುಹಿಸು ವಂತೆ ಸೆಂಟ್ರಲ್ ಬ್ಯಾಂಕನ್ನು ಕೇಳಿಕೊಳ್ಳುವಂತೆ ತೀರ್ಮಾನಿ ಸಲಾಯಿತು.

5 ಸೆಂಟ್ರಲ್ ಬ್ಯಾಂಕಿನ ಕಮಿಟಿ ಮತ್ತು ಜನರಲ್ ವಿಂ ಟಿಂಗುಗಳ ಪ್ರೊಸೀಡಿಂಗ್ಸ್‌ಗಳನ್ನು ಫೆಡರೇಶನ್ನಿಗೆ ಕಳುಹಿಸು ವಂತೆ ಸೆಂಟ್ರಲ್ ಬ್ಯಾಂಕನ್ನು ಕೇಳಿಕೊಳ್ಳುವಂತೆ ತೀರ್ಮಾನಿ ಸಲಾಯಿತು.

6 ಫೆಡರೇಶನಿಗೆ ಒಟ್ಟು ಸಂಬಳವಿರುವ ಜವಾನನನ್ನು ಸೆ ಟ್ಟಯ್ಯರ್ ತಿಂಗಳಿಂದ ಇಟ್ಟುಕೊಳ್ಳುವಂತೆ ತೀರ್ಮಾನಿಸಲಾ ಯಿತು.

7. ರಿಜಿಸ್ಟ್ರಾರವರು ಸುಪರ್‌ವೈಸರುಗಳಿಗೆ ಕೊಟ್ಟ ನಂ ಬರು 1674 ಮತ್ತ 1675ರ ಹುಕುಂನ್ನು ನೋಡಲಾಯಿತು.

ಫೆಡರೇಶನ್ ಅದನಂತರ ಸುಪರ್‌ವೈಸರುಗಳ ಪೂರ್ತಿ ವೇತ್ಲಿಚಾರಣೆ ಮತ್ತು ಅವರಿಂದ ಕೆಲಸ ತೆಗೆದುಕೊಳ್ಳುವ ಕಾರ್ಯ ಫೆಡರೇಶನಿಗೇನೇ ಇರಬೇಕಾದ್ದರಿಂದ ರಿಜಿಸ್ಟ್ರಾರರ ರು ಫೆಡರೇಶನ್ನು ಕೇಳಲಿ ಹುಕುಂಗಳನ್ನು ಕೊಡಬಾರದಾಗಿ ತ್ಕೈಂಬಾಗಿ ಕಮಿಟಿಯವರು ಅಭಿಪ್ರಾಯಪಡುತ್ತಾರೆ.

8 ಆಲ್ ಇಂಡಿಯಾ ಕೋ-ಆಪರೇಟಿವ್ ಇನ್‌ಸ್ಟಿಟ್ಯೂ ಟ್ಸ್‌ನವರ ತಾರೀಕು 24—4—30ರ ಪತ್ರವನ್ನು ಓದಲಾಯಿತು. ಸದರಿ ಕಾಗದದಲ್ಲಿ ನಮೂದಿಸಿರುವ ಸಲಹೆಗಳಿಗೆ ನನ್ನ ಒ ಪ್ಪಿಗೆ ಇದೆ ಎಂಬದಾಗಿ ರಿಜಿಸ್ಟ್ರಾರರಿಗೆ ಬರಕೊಳ್ಳುವಂತೆ ತೀರ್ಮಾನಿಸಲಾಯಿತು.

9. ಯೂನಿಯನ್ ಬೈಲಾಗಳನ್ನು ಫೆಡರೇಶನ್ ಮೂಲ ಕ 1000 ಪ್ರತ್ಯೇಕಗಳನ್ನು ಪ್ರಿಂಟು ಮೊಡಿಸಿ ಎಲ್ಲಾ ಸಂಘಗಳಿಗೆ ಸೆ ಕಳುಹಿಸಿಸುವಂತೆ ತೀರ್ಮಾನಿಸಲಾಯಿತು.

10. ಮಡಿಕೇರಿ 'ಸಾರದಾ' ಸೆಲ್ ಎಡಿಟರರವರಿಂದ ಬಂದ ತಾರೀಕು 20—6—30ರ ಪತ್ರವನ್ನು ಓದಲಾಯಿತು. ಇದರ ತೀರ್ಮಾನದ ಬಗ್ಗೆ ಇನ್ನೊಂದು ವಿಟಿಂಗಿನಲ್ಲಿ ಚರ್ಚಿಸು ವಂತೆ ತೀರ್ಮಾನಿಸಲಾಯಿತು.

11 ರಿಜಿಸ್ಟ್ರಾರರಿಗೆ ಸೆರಿಯಾದ ರೀತಿಯಲ್ಲಿ ಸತ್ಕಾರ ಮೊಡಲಕ್ಕೆ ಪ್ರತಿ ಸಂಘದಿಂದ 2 ರೂ ಬೆ ೀರೆ ವಸೂಲು ಮೊ ಡುವಂತೆಯೂ, ಈ ಹಣವನ್ನು ಸುಪರ್‌ವೈಸರ ಗಳು ವಸೂ ಲು ಮಾಡಿ ಫೆಡರೇಶನ್ ಪೈಸೆಂಬರಲಿಗೆ ತಳುಪಿಸುವಂತೆಯೂ, ಈ ಖರ್ಚಿನ ಎಲ್ಲಾ ವಿವರಗಳುಳ್ಳ ಪೈಸೆಂಬರಿಂ, ಸೆಕ್ರ ಟರಿಯವರೂ, ಮೆ ಗಳಾದ ಸಿ ಯನ್. ವೆಂಕಟ್ಯೆಯ್ಯನವ ರೂ ವೆ.ತ್ತು ಯಂ. ಯಂ. ಬೆಳ್ಯಪ್ಪನವರೂ ವೌಚರು ಮಾಡುವಂತೆಯೂ ತೀರ್ಮಾನಿಸಲಾಯಿತು.

12. ಇದೇ ಜುಲೈ ತಾ. 14ನೇ ನೇಮಾನ್ವಾರ ದಿನ ಮ ಧ್ಯಾಹ್ನ 2 ಗಂಟೆಗೆ ಕೊಡಗು ಜಮೀನ್ದಾರರ ಸಂಘದ ಹಾ ಲ್‌ನಲ್ಲಿ ಸತ್ಕಾರದ ಕೂಟವನ್ನು ಏರ್ಪಾಡು ಮಾಡುವಂತೆ ಯೂ, ಇದಕ್ಕೆ ಅನ್ಯಕ್ಕಥಿಗಳು ಕೊಡಗು ಕವಿಇಷನರ್ ಸಾ ಹೇಬರವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾ ಯಿತು.

ಪಿ ವೇಣ್ಯೆಯ್ಯ,
(ಪ್ರೆಸಿಡೆಂಟರು.)

---


## WANTED.

Candidates desuing to serve in Government Railway and Canal Departments Full particulars and Railway Fare Certificate on 2 Annas stamps; apply to—

Imperial Telegraph College,
Nai Sarak,
Delhi

4—3

## ಸೇಂದಿ ಸಾರಾಯಿ ಅಂಗಡಿಗಳ ಪಿಕೆಟಿಂಗ್.

(ಸ್ವಂತ ಖಾತ್ರಿದಾರರಿಂದ)

ಈ ತಾ. 10ರಲ್ಲಿ ಪ್ರಾರಂಭಿಸಿದ ಪೊನ್ನಂಪೇಟೆ ಸೇಂದಿ ಸಾರಾಯಿ ಅಂಗಡಿಗಳ ಪಿಕೆಟಿಂಗಿನ ಒಂದು ವಾರದ ವರದಿಯು ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿರಬಹುದೆ. ಆದರಲ್ಲಿ ವರ್ಣಿಸಿರುವಂತೆಯೇ 15 ಜನ ಸತ್ಯಾಗ್ರಹಿಗಳು ನಂತರವೂ ದಿನ ಬೆಳಿಗ್ಯೆಯೂ, ಸಾಯಂಕಾಲವೂ ರಾಷ್ಟ್ರೀಯ ಧ್ವಜ ಮತ್ತು ರಾಷ್ಟ್ರೀಯ ಗೀತೆಗಳಿಂದೊಡಗೂಡಿದ ವೈರಾಗ್ಯದಿಂದ ನಡಿಸುತ್ತಾ ಸೇಂದಿ ಸಾರಾಯಿ ಅಂಗಡಿಗಳನ್ನು ಬೆಳಿಗ್ಯೆಯಿಂದ ರಾತ್ರಿ ವರೆಗೆ ಪಿಕೆಟ್ ಮಾಡುತ್ತಾ ಬಂದರು. ತಾ. 17ರಲ್ಲಿ ಮೈ. ಜೆಪ್ಪುಡಿರ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡಿಸಲಾಯಿತು. ಮೈ. ಪಿ. ಬಿ. ಬೆಳ್ಯಪ್ಪನವರು—ಒಂದು ವಾರದ ಪಿಕೆಟಿಂಗಿನಿಂದ ಸ್ವಯಂ ಸೇವಕರಿಗೆ ಉಂಟಾದ ಅನುಭವವನ್ನೂ, ಜನ ಸಮುದಾಯದಲ್ಲಿ ಉಂಟಾದ ಮನೋಭಾವನೆಯನ್ನೂ, ಪಿಕೆಟಿಂಗಿನ ಪ್ರತಿಫಲವಾಗಿ ಕುಡಿಯು ವುದು ಕಡಿಮೆಯಾಗಿ ಸೇಂದಿ ಸಾರಾಯಿನ ಖರ್ಚು ಬಹಳ ಮಟ್ಟಿಗೆ ಕಡಿಮೆಯಾಗುತ್ತಿರುವುದನ್ನೂ ವಿವರಿಸಿ, ಕುಡುಕತನವನ್ನು ನಿಲ್ಲಿಸುವುದರಿಂದ ಹಿಂದೂಧರ್ಮದ ಉದ್ಧಾರಕ್ಕೂ ಈಗ ನಡೆಯುತ್ತಿರುವ ಸ್ವಾತಂತ್ರ್ಯದ ಮತ್ತಕ್ಕೆದ ಜಳವಳಿಕ್ಕೆ ಹೇಗೆ ಸಹಾಯ ಮಾಡಿದಂತಾಗುವುದೆಂಬದನ್ನು ವಿಷದವಾಗಿ ತಿಳಿಸಿ, ಪೊನ್ನಂಪೇಟೆಯ ನೆರ ಪೂರ್ತಿಯಲ್ಲಿ, ನಮ್ಮ ಸತ್ಯಾಗ್ರಹಿಗಳ ಗಾಯಮಸ್ಥರೂ ಕೂಡ ಸತ್ಯಾಗ್ರಹಿಗಳ ಕಲಸಕ್ಕೆ ಮಾಡುತ್ತಿರುವ ವಿಶೇಷ ಸಹಾಯಕ್ಕೆ ಆವರನ್ನು ವಂದಿಸಿದರು.

ಈ ಮಧ್ಯೆ ಪಿಕೆಟಿಂಗ್ ನಡೆಯುತ್ತಿದ್ದಂತೆಯೇ ಜಿಲ್ಲೆಯ ಸಾರಾಯಿ ಅಂಗಡಿಯ ಕಂಟ್ರಾಕ್ಟುದಾರನು(ಒಬ್ಬ ಹೆಗ್ಗಡೆಯವನು) ಎರಡು ಮೂರು ದಿನಸ ಪೊನ್ನಂಪೇಟೆ ಸೇಂದಿ ಮತ್ತು ಸಾರಾಯಿ—ಎರಡು ಅಂಗಡಿಗಳಿಗೂ ಬಂದು ಸತ್ಯಾಗ್ರಹಿಗಳ ಬೇಡಿಕೆಯನ್ನು ಕೇಳಿವೆ, ನಿಷಾ ಸೇವನೆ ಮಾಡಿದಲ್ಲಿವೆ, ಕನ್ನ ಶಾರ್ಯವನ್ನು ತೋರಲ್ ರೇಗಿಸುಗಸ್ಪೋ ಎನೋ ಎಂಬಂ' ಕು ಪ್ರಿಗಳಲ್ಲಿಯೂ ತುಂಬಿಸಿಕೊಂಡು ಎಲ್ಲರಿಗೂ ಕಾಣುಗಂತೆ ತೋರಿಸುತ್ತಾ ತೆಗೆದುಕೊಂಡು ಹೋದನು. ಹಾಗೆ ತೆಗೆದು ಕೊಂಡು ಹೋಗಿ ಸ್ವಲ್ಪ ದೂರದಲ್ಲಿ ಅವನ ಜಾತಿಯ ಕಲಸ ರಿಗೆ ಕುಡಿಸಿದನೆಂದೂ ವರ್ತಮಾನವಿದೆ. ಆದರೆ ಸತ್ಯಾಗ್ರಹಿಗಳು ಅವನು ಅಂಗಡಿಗೆ ನುಗ್ಗುವಾಗ್ಯೆ ಅನುಸಿಗೆ ನಮಸ್ಕಾರ ಮಾಡುತ್ತಿದ್ದರಲ್ಲದೆ ಅವನ ಗೋಜಿಗೆ ಹೋಗಲಿಲ್ಲ. ತನೇ ದಿನ ಅವನಲಿಯೇ ಪಿಕೆಟ್ ಮಾಡುತ್ತಿದ್ದ ಒಬ್ಬ ಸ್ವಯಂಸೇವಕನಲ್ಲಿಗೆ ಬಂದು ತಾನು ಮಹಾತ್ಮಗಾಂಧಿಯವರ ಪರಮ ಮಂಬಿಯೇ ಆವರ ಬೋಧನೆಗೆ ವಿರೋಧನಾಗಿ ಅಂಗಡಿಯಲ್ಲಿ ನಿಷಾ ಸೇವನೆ ಮಾಡಿದ್ದು ತನ್ನ ದೊಡ್ಡ ಅಸಾಧಾರಣತೆಯಲ್ಲ, ತಾನು ಬೇರೆಯವರ ಪ್ರೇರೇಪಣೆಯಿಂದ ಹಾಗೆ ಮಾಡಿದವನಲ್ಲವೆ ಅನ್ಯರಾ ಅಲ್ಲವೆಂತಲೂ, ಇನ್ನು ಮುಂದೆ ತಾನು ಹಾಗೆ ಮಾಡುವದಿಲ್ಲವೆಂತಲೂ ಅಂದು, ಹೊರಟು ಹೋದನಂತೆ! ನಂತರ ಅವನು ಅಂಗಡಿಗೆ ಬರಲೇ ಇಲ್ಲ. ಉದ್ಯೋಗಸ್ಥರಿಗೆಂದು ಪೊಲೀಸಿನವರೂ, ಜವಾನನೂ ನಾಲ್ಕೈದು ಸಾಲು ಕುಪ್ಪಿಯಲ್ಲಿ ಸಾರಾಯಿ ತೆಗೆದು ಕೊಂಡು ಹೋದದ್ದನ್ನು ಕಂಡೆನು. ಕೆಲವು ಗಾಯಮಸ್ಥರು—ದೇವರಿಗೂ, ಕಾರೋಣಗಾರ ಕೊಡಲಿಕ್ಕೆಂದೂ, ಒಲಿ ತೆಗೆಯಲಿಕ್ಕೆಂದೂ, ಔಷಧಿಗೆಂದೂ ಸಾರಾಯಿ ತೆಗೆದುಕೊಂಡು ಹೋಗಲು ದೊಡ್ಡ ಕುಪ್ಪಿ ಕಂಡವರು ಸತ್ಯಾಗ್ರಹಿಗಳ ಬೋಧನೆಯನ್ನು ಕೇಳಿ ಕಲವರು ಮಾತ್ರ ಅರ್ಧ ಯೂ ಒಂದು ಪಾವಿನಷ್ಟು ತೆಗೆದುಕೊಂಡು ಹೋದರಲ್ಲದೆ ಬಾಕಿಯವರೆಲ್ಲರೂ ಖಾಲಿ ಕುಪ್ಪಿಯೊಂದಿಗೆ ವಾಪಸು ಹೋಗುತ್ತಿದ್ದರು. ಸದಾ ಕುಡಿಯುವ ಅಭ್ಯಾಸದಲ್ಲಿದ್ದ ಕೆಲವರೂ ಕೂಡ ಪೊನ್ನಂಪೇಟೆಗೆ ಒಂದಿದ್ದರೂ ಸತ್ಯಾಗ್ರಹಿಗಳ ಸ್ವಾರ್ಧತ್ಯಾಗದ ಕೆಲಸನೆನ್ನೂ, ಮನಸು ಕರಗುವಂಥ ಅವರ ಮಕ್ಕಳುಗಳನ್ನೂ ಕೇಳಿ ಕುಡಿಯದೆ ವಾಪಸು ಹೋಗುತ್ತಿದ್ದರು.

ಹೀಗೆ ಯಾವದೊಂದು ಗಲಾಟೆ ಇಲ್ಲದೆ ಶಾಂತ ರೀತಿಯಿಂದ ಪಿಕೆಟಿಂಗ್ ಕೆಲಸವು ನಡೆಯುತ್ತಿರುವಷ್ಟರಲ್ಲಿ ಮಳೆಯು ಪ್ರಾರಂಭವಾಯಿತು. ತಾ. 20 ಮತ್ತು 21ರಲ್ಲಿ ಸು ಳೆಯು ಬೀಳುತ್ತಿದ್ದರೂ ಕೂಡ ಸತ್ಯಾಗ್ರಹಿಗಳು ಪಿಕೆಟ್ ಮಾಡುವುದನ್ನು ಮುಂದರಿಸುತ್ತಾ ಬಂದರು. ಮಳೆಯು ದೆಸೆಯಿಂದ ಗ್ರಾಮಗಳಲ್ಲಿ ವ್ಯವಸಾಯ ಕೆಲಸವು ಸರಿಯಾಗಿ ಪ್ರಾರಂಭವಾದ ಕಾರಣ ಅಂಗಡಿಗಳಿಗೆ ಕುಡಿಯಲು ಜನರು ಬರುವುದೇ ಕಡಿಮೆಯಾಯಿತು. ಅಲ್ಲಲ್ಲಿ ಮಳೆಯಲ್ಲಿಯೇ ರಸ್ತೆಯಲ್ಲಿ ನಿಂತು ಪಿಕೆಟ್ ಮಾಡುವುದರಿಂದ ಸತ್ಯಾಗ್ರಹಿಗಳ ಆರೋಗ್ಯವೂ ಕೆಡುವಾರಂಭಿಸಿತು. ಮಳೆಯಲ್ಲಿ ಪಿಕೆಟ್ ಮಾಡುವುದು ಅಸಾಧ್ಯವೆಂದು ಕಂಡು ಒಂದು ಕಾರಣ ಈ ತಾ. 22ರಲ್ಲಿ ಪಿಕೆಟಿಂಗನ್ನು ತತ್ಕಾಲ ಅಂದರೆ ಮಳೆಗಾಲವು ಶಾಂತ್ಯವಾಗುವ ವರೆಗೆ ನಿಲ್ಲಿಸಿರುವದು. ಇಲವು ಸತ್ಯಾಗ್ರಹಿಗಳು ಹರ್ತಾದಿಂದ ನೂಲು ಮಾಡುವ ಕೆಲಸವನ್ನು ಕೈಕೊಳ್ಳಲಿಕ್ಕಿರುವರು. ಮಳೆಯು ನಿಂತ ಮೇಲೆ ಈ ಸತ್ಯಾಗ್ರಹಿಗಳನ್ನೂ ಪುನಹ ಸೇರಿ ಪಿಕೆಟಿಂಗ್ ಕೆಲಸವನ್ನು ಮುಂದರಿಸುವರು ತೀರ್ಮಾನಿಸಿರುವರು.

ಪಿಕೆಟಿಂಗ್ ಪ್ರಾರಂಭಿಸುವ ಮುಂಜೆ ಸ್ವಯಂಸೇವಕರು ಗ್ರಾಮಗಳಲ್ಲಿ ನಡಿಸಿದ ವಿಟಿಂಗುಗಳಿಂದ ಬೈಸಿ ಮಂಗಳಂದ ಸೇಂದಿ ತಿಳಿಸುವುದು ಕಡಿಮೆಯಾಗಿದೆಯೆಂದೆಲ್ಲದೆ ಕಾದುವೆ ಮುಂಜಿಗೆಲ್ಲಾ ಆವಲು ಪದಾರ್ಥ ಸೇರಿಸಿದ ಪೆಡ್ಡಂತಿಯು ಒಂದು ಪಳ ವೆಟ್ಟಿಗೆ ನಿಲ್ಲಿಸಲ್ಪಟ್ಟಿದೆಯಾದೂ, ಅದರಲಾಂಶ ತಮ್ಮ ಗ್ರಾಮಗಳಲ್ಲಿಯೂ ಹಾಗೆ ವಿಟಿಂಗು ನಡಿಸಲು ಸ್ವಯಂಸೇವಕರು ಬರಬೇಕೆಂತ ವಿಟಿಂಗು ನಡಿಸದೆ ಇರುವೆ ಹಲವು ಗ್ರಾಮಸ್ಥರು ಸ್ವಯಂಸೇವಕರನ್ನು ಕೇಳಿರುವರಂತೆ ಹಾಗೆಯೇ ಪಿಕೆಟಿಂಗ್ ಪ್ರಾರಂಭವಾದ ನಂತರ ಆದರ ಒಳ್ಳೇ ಫಲಿತಾಂಶವನ್ನು ತಿಳಿದು ಹುದಿಕೇರಿ, ಶ್ರೀಮಂಗಲ, ಬಾಳೆಲೆ, ಗೋಣಿಕೊಪ್ಪಲು, ಇರಿಯೂರು. ಅಮ್ಮತ್ತಿ, ವೀರಾಜಪೇಟೆ, ನಾಪೋಕ್ಲು ಮುಂತಾದ ಕಡೆಗಳ ಜನರು ಆಲ್ಲಿಯ ಅಂಗಡಿಗಳನ್ನು ಪಿಕೆಟ್ ಮಾಡಲು ಬರಬೇಕೆಂದು ಸತ್ಯಾಗ್ರಹಿಗಳಲ್ಲಿ ಹೇಳಿಕೊಂಡಿರುವರೆಂದೂ ತಿಳಿಯು ಬರುತ್ತದೆ. ಇದರಿಂದ ನಿಷಾನಿ ಷೇಧದ ಕಾರ್ಯದಲ್ಲಿ ದೇಶಿಯರಿಗೆ ಹುಟ್ಟಿರುವ ಉತ್ಸಾಹವು ಎಷ್ಟರ ಮಟ್ಟಿಗೆ ಇದೆ ಎಂಬುದು ಗೊತ್ತಾಗುತ್ತದೆ.

ಸಂಪೂರ್ಣವಾಗಿ 11 ದಿವಸ ಪಿಕೆಟ್ ಮಾಡಿದ್ದರಿಂದಲೂ ಈ ಮೊದಲು ಏಪ್ರಿಲ್ ತಾ. 27ರಿಂದ ಜೂನ್ ತಾ. 9ರ ವರೆಗೆ ಗ್ರಾಮೂರಂತರಗಳಲ್ಲಿ ವಿಟಿಂಗು ಮಾಡಿದ್ದರಿಂದಲೂ ನಿಷಾನಿಷೇಧದ ಜಳವಳಕ್ಕೆ ಎಷ್ಟರ ಮಟ್ಟಿಗೆ ಸಹಾಯವಾಗಿದೆಯೆಂಬದನ್ನು ವಾಚಕರಿಗೆ ತಿಳಿಸುವುದು ಅವಶ್ಯವಾಗಿದೆ ಈ ತಿಳಿಸುವ ವಿಷಯಗಳು ಸಂಬಂಧಿಸಿದವರಿಗೆ ಸಂಗತಿಸಿದಂತಾಗಿದೆ. (ತಳಿದ ವಾರ ಪ್ರಕಟಿಸಿದ ಈ ಸಂಬಂಧದ ಸಂಚ್ಯೆಗಳು ಶಿ ಯೂದಲ್ಲವೆಂದು ಇತ್ತೀಚೆಗೆ ತಿಳಿಯು ಬಂತು.) ಸತ್ಯಾಗ್ರಹಿಗಳು ಗ್ರಾಮಗಳಲ್ಲಿ ವಿಟಿಂಗು ನಡಿಸ.ವ ಮುಂಜೆ ಪೊನ್ನಂಪೇಟೆ ಸೇಂದಿ ಅಂಗಡಿಗೆ ದಿನಕ್ಕೆ ಸರಾಸರಿ ಸುಮಾರು 150 ಸೇರು ಸೇಂದಿ ಒಡುತ್ತಿತ್ತು. ಆದು ಮಧ್ಯಾಹ್ನ 12 ಗಂಟೆಯೊಳಗೆ ಖರ್ತಾಗಿ ಹೋಗುತ್ತಿತ್ತು. ವಿಟಿಂಗುಗಳನ್ನು ನಡಿಸಿ ಸೇಂದಿ ಇಳಿಸುವುದನ್ನು ಬಾಕಿ ಮಾಡಬೇಕೆಂದು ಗ್ರಾಮಸ್ಥರನ್ನು ಕೇಳಿಕೊಂಡನಂತರ ದಿನಕ್ಕೆ ಸರಾಸರಿ ಸುಮಾರು 50 ಸೇರು ಸೇಂದಿ ಮಾತ್ರ ಸದರಿ ಅಂಗಡಿಗೆ ಬರುತಿತ್ತಂತೆ. ಅದು ಬೆಳಿಗ್ಯೆ 10 ಗಂಟೆಯೊಳಗೆ ಖರ್ತಾಗಿ ಹೋಗುತ್ತದೆ. ಪಿಕೆಟ್ ಮಾಡಿದ ಪ್ರಥಮ ದಿನ ಅಂಗಡಿಗೆ ಬಂದಿದ್ದ 48 ಸೇರು ಸೇಂದಿಯಲ್ಲಿ ಬರೀ 12 ಸೇರು ಮಾತ್ರ ಖರ್ತಾಯಿತು. ಆಂಗಡಿಗೆ ಬರುವ ಸೇಂದಿಯು ದಿನೇ ದಿನೇ ಕಡಿಮೆ ಆಗುತ್ತಾ ಬಂತು. ಒಂದು ಪಿಕೆಟಿಂಗಾ ತತ್ಕಾಲ ನಿಲ್ಲಿಸಿದ ತಾ. ೧೯ ರೀ ಬರೀ 12 ಸೇರು ಮಾತ್ರ ಬಂದಿತ್ತು. ಸೆರಾಸರಿ ಲೆಕ್ಕ ಹಾಕಿದಲ್ಲಿ ಅಂಗಡಿಗೆ ಬರುತ್ತಿದ್ದ ಸೇಂದಿಯು ಎಷ್ಟಿಂಗು ಗಳ ಮುಂಜೆ ದಿವಸಕ್ಕೆ 150 ಸೇರು ಇದ್ದುದು ವಿಟಿಂಗು ಗಳ ಸರ 50ಕ್ಕೆ ಇಳಿಯಿತೆ.; ಪಿಕೆಟಿಂಗ್ ಪ್ರಾರಂಭಿಸಿದನಂತರ ಆದು ಬರೀ 20 ಸೇರಿಗೆ ಇಳಿಯಿತು! ಪಿಕೆಟ್ ಮಾಡುವ ಮುಂಜೆ ಅಂಗಡಿಗೆ ಒಂದಿ ಸೇಂದಿ ಎಲ್ಲವೂ ಮಧ್ಯಾಹ್ನದೊಳಗೇನೇ ಖರ್ತಾಗಿ ಹೋಗುತ್ತಿತ್ತು. ಆದರೆ ಪಿಕೆಟಿಂಗ್ ಪ್ರಾರಂಭಿಸಿದ ನಂತರ ಸರಾಸರಿ 26 ಸೇರಿನಲ್ಲಿ ಬರೀ 9 ಸೇರು ಮಾತ್ರ ಸಾಯಂಕಾಲವೊಳಗೆ ಖರ್ತಾಗುತ್ತಿತ್ತು, ಉಳಿದದ್ದನ್ನು ಜೆಲ್ಲಪೀಕಾಗಿ ಬರುತ್ತಿತ್ತು. ಇದರಲ್ಲಿ ಗೋಧಿ ರೊಟ್ಟಿ ಮಾಡುವವನು ಹೆಚ್ಚಿನ ದಿವಸಗಳಲ್ಲಿ ದಿನಕ್ಕೆ 6 ಸೇರನ್ನೂ, ಮುಕ್ತೆಪ್ಪ ದೇವರ ಪೂಜೆಗಾರನು ವಾಡಿಕೆಯಾಗಿ 2 ಸೇರನ್ನೂ ತೆಗೆದುಕೊಂಡು ಹೋಗುತ್ತಿದ್ದರು. ಉಳ್ಳದೆ ಕೆಲವರು ಕಾಣದೆ ಸ್ವಲ್ಪ ದೂರ ತೆಗೆಸಿಕೊಂಡು ಹೋಗಿ ಕಾಡನಲ್ಲಿ ಕೂತು ಕುಡಿದದ್ದೂ ಉಂಟು. ಸ್ವಯಂ ಸೇವಕರ ನಮಸ್ಕಾರವನ್ನು ಉಲ್ಲಂಘನೆ ಮಡಿ ಅಂಗಡಿಗೆ ನುಗ್ಗಿದವರು ಬಹಳ ಕಡಿಮೆ ಸೇಂದಿಯು ಮೂಗಳಿವರಿಗೆ ಇದ್ದುದನ್ನು ನೋಡಿ ಕಂಟ್ರಾಕ್ಟುದಾರನು ದುಡ್ಡಿನ್ನುಲ್ಲದೆ ಸೇಂದಿ ಕೊಡುತ್ತೇನೆಂದು ಜನರನ್ನು ಕರೆದರೂ ಕೂಡ ಕುಡಿಯಲು ತಿರಸ್ಕರಿಸಿದವರೂ ಇದ್ದಾರೆ.

ಪಿಕೆಟ್ ಪ್ರಾರಂಭಿಸಿದ ನಂತರ ಸಾರಾಯಿಯು ಖರ್ತು ಇದಕ್ಕಿಂತಲೂ ಕಡಿಮೆಯಾಗಿತ್ತು. ಜೂನ್ 1ರಿಂದ 10ರ ವರೆಗಿನ ಲೆಕ್ಕದಲ್ಲಿ ದಿವಸಕ್ಕೆ ಸರಾಸರಿ ಸುಮಾರು 5 ಗ್ಯಾಲನ್ 2 ಕುಪ್ಪಿ ಖರ್ತಾಗಿತ್ತು; ಆಂದರೆ 10 ದಿವಸಗಳಲ್ಲಿ ಸುಮಾರು 53 ಗ್ಯಾಲನ್ ಖರ್ತಾಗಿತ್ತು. ಆದರೆ ಪಿಕೆಟ್ ಸುರುವಾದ ಮೇಲೆ ತಾ. 11ರಿಂದ 21ರ ವರೆಗೆ 11 ದಿನಸೆಗಳಲ್ಲಿ ಸುಮಾರು 12½ ಗ್ಯಾಲನ್ ಮಾತ್ರ ಖರ್ತಾಗಿದೆಯೆಂದೂ, ಆಂದರೆ ದಿವಸಕ್ಕೆ ಸರಾಸರಿ 1 ಗ್ಯಾಲನ್ 1 ಕುಪ್ಪಿ ಖರ್ತಾಯಿತೆಂದೂ ತಿಳಿಯ ಬರುತ್ತದೆ. ಈ ಲೆಕ್ಕದ ಮೇರೆ ಹೆಚ್ಚು ಕಮ್ಮಿ 5ರಷ್ಟಿ 4 ಭಾಗ ಸಾರಾಯಿ ಖರ್ತು ಕಡಿಮೆಯಾದಂತಾಯಿತು. ಈ ಖರ್ತಿನ ಹೆಚ್ಚು ಭಾಗವು ರಾತ್ರಿ 8 ಗಂಟೆಯ ಮೇಲೆ ಆಗುತ್ತಿತ್ತು. ಆಂಗಡಿಯನ್ನು ರಾತ್ರಿ 8 ಗಂಟೆಗೆ ಮುಚ್ಚಬೇಕೆಂದಿದ್ದರೂ ಕೂಡ ಹಾಗೆ ಮುಚ್ಚದೆ ಸುತರವೂ ವ್ಯಾವಹಾರಮಾಡುತ್ತಿದ್ದ ಕಾರಣ ಇಷ್ಟು ಖರ್ತಾಗಲು ಎಡೆಯಾಯಿತೆಂದರೆ ತಪ್ಪಾಗಲಾರದು. ಮೇಲೆ ಕಾಣಿಸಿರುವ ಸಂಖ್ಯೆಗಳಲ್ಲಿ ಒಂದು ವೇಳೆ ಸ್ವಲ್ಪ ಹೆಚ್ಚು ಕಮ್ಮಿ ಇರಬಹುದಾದರೂ ಕೂಡ ಪಿಕೆಟಿಂಗಿನಿಂದ ಬರಲಿ ಕುಡುಕತನವನ್ನು ಎಷ್ಟರ ಮಟ್ಟಿಗೆ ಬಿಡಿಸಬಹುದೆಂಬುದು ಗೊತ್ತಾಗುವುದಲ್ಲದೆ ಸೇಂದಿ, ಸಾರಾಯಿ ವರಿಂತಿಟನ್ನು ಬಹಳ ಮಟ್ಟಿಗೆ ಕಡಿಮೆ ಮಾಡಿ ಅಂಗಡಿಗಳನ್ನು ಮುಚ್ಚಿಸುವಂತೆ ಮಾಡಬಹುದೆಂಬದು ವಿಷದವಾಗುತ್ತದೆ.

೨೫೦ ವಿಲಾಯತಿಯ ಸಾನೂನುಗಳು ಅಡಗಿರುವ

**ಪ್ರೆಜೆಂಟ್ ಟೇಷನ್ ಬಾಕ್ಸ್**

ಎಂಬ ಹೆಟ್ಟಿಗೆ ರೂ. 3–8–0 ಕ್ಕೆ ಯಾಕ್ಕೆ ಸಿಗುವುದು.



ಈ ನಕ್ಷೆಯಲ್ಲಿ ಕಾಣುವ ಪೆಸವು ಇಂಗ್ಲಂಡಿನಲ್ಲಿ ಸಂಯೋಗದ್ದು. ಇದಕ್ಕೆ 11 ಕ್ಯಾರ್ಟಿನ ಭೂಗಾತವಾದ ಬಂಗಾರದ ಬಾಜ್ಜ್ ಚಕ್ರವರ್ತಿಯವರು ಕೊಂಡು ಸುತೋಷಪಡಬಹುದು ಮೇಲಾತ ಯೋಗ್ಯತಾಪತ್ರ (Certificate) ಕೊಟ್ಟಿರುವರು. ಇದುನೂನಿನ ವಿವರ—2 ರೋಲ್ಡ್‌ಗೋಲ್ಡ್ ಭೂಗಾರದ ಜೈಮಂಡ್ ಉಂಗುರ, 2 ಪಾಕೆಟ್ ಕನ್ನಡಿ, 1 ದಂತದ ಬಾಚಣಿಗೆ, 1 ವಿಲಾಯತಿ ಬೀಗ, 12 ಸೀಮ ಭೂಗಾರದ ಸೇಪ್ಟಿ ಪಿನ್‌ಗಳು, 24 ಜರ್ಮನ್ ಸೇಪ್ಟಿ ಪಿನ್‌ಗಳು, 9 ಪೆನ್ಸಿಲುಗಳು, 9 ಪೆನ್ನಾಗಳು, 144 ವಿಶಾಯತಿಯು ಇಂಕ್ ಮಾತ್ರೆಗಳು ಇರುವ ಬಾಟಲ್, 1 ವಿಲಾಯತಿಯು ಇಂಕ್ ಮಾತ್ರೆಗಳು ಇರುವ ಬಾಟಲ್, 1 ವಿಲಾಯತಿಯು ಪೆನಾ ಕತ್ತಿ, 49 ವಿಲಾಸ್ಟಗಳು ಇರುವ ಬಯಸ್ಕೋಪ್ ಯಾತ್ರೆ 1, 4 ಕತ್ತಿನ ಗುಂಡಿಗಳು, 4 ಶರ್ಟಿನ ಕೈ ಗುಂಡಿಗಳು, 2 ಕ್ಲಿಪ್‌ಗಳು, 1 ವಿಲಾಯತಿಯ ಸೆಂಟ್ ಬಾಟ್ಲಿ ಇಷ್ಟು ಸಾವಕಾನುಗಳು ಅಡಗಿರುವ ಪ್ರೆಜೆಂಟೇಷನ್ ಬಾಕ್ಸ್ ಎಂಬ ಪೆಟ್ಟಿಗೆಯನ್ನು ಮೇಲ್ಕಂಡ ಪಾಂಟನ್ ಪೇನಾವನ್ನು ತಂಸಿಕೊಳ್ಳುವವರಿಗೆ ಇನಾಮಾಗಿ ಕೊಡುವೆವು.

ಕ್ರಯ ಬಹುಮಾನದ ಪೆಟ್ಟಿಗೆ ಸೆಹಿತ ಪೆನಾ 1ಕ್ಕೆ ರೂ. 3–8–0

ವಿಳಾಸ—ಸಿಟಿ ಪೋರ್ಟ್,

52–49 168. ಚೈನಾ ಬಜಾರ್, ಮದ್ರಾಸ್

## ಸಿದ್ಧಕಲ್ಪ ಚಂದ್ರೋದಯ.

(Registerd)

The best Nervine Tonic & Blood Purifier & Increaser—

ಇದು ಬಹಳ ಉತ್ತಮವಾದ ರಕ್ತಶೋಧಕ, ರಕ್ತವರ್ಧಕ, ನರಗಳಿಗೆ ಬಲವನ್ನುಂಟು ಮಾಡುವ ಔಷಧಿ. ಶರೀರದಲ್ಲಿರುವ ರಕ್ತಕ್ಕೆ ನರ ವ್ಯಾಧಿಗಳನ್ನು ಗುಣವಡಿಸುವ ಶ್ರೇಷ್ಠವಾದ ಅನೇಕ ವಿಧ ಮೂಲಿಕೆಗಳೂ, ಭಸ್ಮಗಳೂ ಇದರಲ್ಲಿ ಸೇರಿ ಬದರಿಂದ ಯಾವ ವ್ಯಾಧಿಯಾದರೂ, ದ್ವಂದ್ವ ವ್ಯಾಧಿಯಾದರೂ ತೀವ್ರವಾಗಿಯೂ, ನಿರಾತಂಕವಾಗಿಯೂ, ನಿಶ್ಚೇಷವಾಗಿಯೂ ಗುಣವಾಗುವುದೆಂದು ದೃಢವಾಗಿದೆ. ಇನ್ನೂ ಅನೇಕ ಸರ್ಟಿಫಿಕೇಟುಗಳು ಬಂದಿವೆ. ಒಂದು ಸಲ ಇದನ್ನು ಉಪಯೋಗಿಸಿದವರು ಬೇರೆ ಯಾವುದನ್ನೂ ಉಪಯೋಗಿಸುವಾರರು. ಅಲ್ಲದೆ ಇದು ಬಲಹೀನತೆ, ನರಗಳ ಬಲಹೀನತೆ, ರಕ್ತಹೀನತೆ, ಕೆಟ್ಟರಕ್ತ, ಕೆಟ್ಟಿ, ನವೆ ಮೊದಲಾದ ಚರ್ಮವ್ಯಾಧಿಗಳು, ಜಠ್ಠಾಪಕ ಶಕ್ತಿ ಹೀನತೆ, ತಲೆಸುತ್ತು, ಶಿರೋಭಾರ, ಭಯ, ಉದ್ವಿಸ ಸಾಧಾರಣ ಕೆಮ್ಮು, ಕೈಯ ಕಫ ಮುಂತಾದ ಶಕ್ತಿ ಸಂಕೋಚ ಸಂಬಂಧವಾದ ವ್ಯಾಧಿಗಳು, ಆಜೀರ್ಣ, ಭೇದಿಗಳು, ತೀವ್ರಜ್ವರಿ. ನುಲಬದ್ಧತೆ, ಹೊಟ್ಟೆ ತಂಡಿ, ಉಬ್ಬರ, ಸಕ್ಕ ಮೂಲ ಹೊಟ್ಟು ಮೂಲ, ಆನಸಗುಡಿದೊಳೆ, ಧಾರಾಕರ ಆಮಶಂತ, ಮಧುಮೇಹತ್ವ, ಸುಧುವೆ ರೋಗ, ವೀರ್ಯಸ್ಖಲನ ಸ್ವಪ್ನಸ್ಖಲನ ಶೀಘ್ರಾಗಿ, ಸವಾಯಿ ಮುಂತಾದ ವ್ಯಭಿಚಾರ ವ್ಯಾಧಿಗಳು, ವಾತ, ಕೀಲುನೋವು, ಇತರ ಎಲ್ಲಾ ವಾಯು ರೋಗಗಳು, ವಾತದಿಂದ ದೇಹವೆಲ್ಲಾ ಒಂದೂ ಬೆಳೆಯುವುದು, ಸಾರ್ವತ್ರಿಕವಾತ, ದೇಹವೆಲ್ಲಾ ನೀರು ನೀರಾಗುವುದು, ಸಾರ್ವಕಾಲಿಕ ಜ್ವರ, ಕಾಡು ಜ್ವರ, ಪಲ್ಲೇರಿಯಾ, ನ್ಯೂಮೋನಿಯಾ, ವಿಷಮಶೀತ ಜ್ವರ, ಪರಣಿ ಜ್ವರ, ಸನ್ನಿಪಾತ ಜ್ವರ, ಶ್ವಾಸಕೋಶ ಉಂಟಾಗಿ ಉಬ್ಬಸ, ಇವುಗಳಿಂದ ಉಂಟಾಗಿ ಬಲಹೀನತೆ, ಸ್ತ್ರೀಯರ ನೆನುಸ್ಸು ಗರ್ಭಾಶಯ ರೋಗಗಳಿಗೆ ಬಹಳ ಉತ್ತಮವಾದದ್ದು. ಈ ವ್ಯಾಧಿಗಳು ದೀರ್ಘವಾದದ್ದಾಗಲೀ, ಹಳೇದಾಗಲಿ, ಹೊಸದಾಗಲೀ ತೀಕ್ಷ್ಣವಾಗಿ ಗುಣವಡಿಸಿ ಅಸಾಧಾರಣವಾದ ಶಕ್ತಿಯನ್ನೂ, ಮುಬಕ್ಕೆ ಕಾಂತಿಯನ್ನೂ ಉಂಟುಮಾಡುತ್ತದೆ. ಬುದ್ಧಿಶಕ್ತಿಯಿಂದ ಕಲಸ ಮಾಡುವ ವಿದ್ಯಾರ್ಥಿಗಳಿಗೂ, ಅಲಿಯರುಗಳಿಗೂ, ವ್ಯಾಯಾಮಕ್ಕೆ ಅವಕಾಶವಿಲ್ಲದವರೂ, ಎಲ್ಲರಿಗೂ ಮುಖ್ಯವಾಗಿ ಬೇಕಾದದ್ದು. ವೈದ್ಯರಿಗೆ ನೂರಕ ವಿಪತಕ್ಕಿ ಕೊಡುತ್ತದೆ.

ಬೆಲೆ 80 ಮಾತ್ರೆ ಡಬ್ಬಿ 1ಕ್ಕೆ ರೂ 10–0–0, 40 ಮಾತ್ರೆ ಡಬ್ಬಿ 1ಕ್ಕೆ 5–0–0.

**ಆಲ್ ಇಂಡಿಯಾ ಆಯುರ್ವೇದ ವೈದ್ಯಶಾಲೆ,**

4–3 ಪೋಸ್ಟ್ ಬಾಕ್ಸ್ ನಂ. 159,

411 & 412 ಮಿಂಟ್ ಸ್ಟ್ರೀಟ್, ಮದ್ರಾಸ್.

# ಕೊಡಗಿನಲ್ಲಿ ಸತ್ಯಾಗ್ರಹ.

## ಮಳೆಯು 'ಪಿಕೆಟಿಂಗಿಗೆ' ಅಡ್ಡ ಬಂತು.

**ಪೊನ್ನಂಪೇಟೆಯ 'ಪಿಕೆಟಿಂಗ್' ತತ್ಕಾಲ ನಿಲ್ಲಿಸಲ್ಪಟ್ಟಿದೆ.**
**ಸತ್ಯಾಗ್ರಹಿಗಳು ಬಹು ಶಾಂತ ರೀತಿಯಿಂದಲೂ, ಉತ್ಸಾಹದಿಂದಲೂ 'ಪಿಕೆಟಿಂಗ್' ಕೆಲಸ ನಡಿಸಿದರು.**

ಪೊನ್ನಂಪೇಟೆಯಲ್ಲಿ ಸೇಂದಿ, ಸಾರಾಯಿ ಅಂಗಡಿಗಳ ಪಿಕೆಟಿಂಗ್ ತಾ. 21ರ ವರೆಗೆ ಏನಿಂದೂ ಅಡಚಣೆ ಇಲ್ಲದೆ ನಡೆಯಿತು. 15 ಜನ ಸತ್ಯಾಗ್ರಹಿಗಳು ಎರಡಿನಂತೆ ಪೇಟೆಯಲ್ಲಿ ಮೆರವಣಿಗೆಯನ್ನು ಮಾಡಿ ಬಿಸಿಲು ಮಳೆ ಎನ್ನದೆ ಅಂಗಡಿಗಳ ಮುಂದೆ ನಿಂತು ಕುಡಿಯಬಾರದೆಂದು ಜನರಿಗೆ ಬೋಧನೆ ಹೇಳಿ ಅವರನ್ನು ವಾಪಸು ಕಳುಹಿಸುತ್ತಿದ್ದರು. ಸತ್ಯಾಗ್ರಹಿಗಳ ಬೋಧನೆಯನ್ನು ವಿಶಾಲ ಅಂಗಡಿಗಳಿಗೆ ನುಗ್ಗಿದವರು ಬಹು ಕಡಿಮೆ. ಕಂಟ್ರಾಕ್ಟುದಾರರು ವ್ಯಾಪಾರವು ಬಹು ಕಡಿಮೆಯಾಗಿ ತಮಗೆ ತುಂಬಾ ನಷ್ಟವಾಗುತ್ತಿದೆಯೆಂದು ಅಂದುಕೊಳ್ಳುತ್ತಿದ್ದರಷ್ಟೆ. ಆದರೆ ತಾ. 20ರಲ್ಲಿ ಮಳೆಯು ದೊಡ್ಡದಾಗಿ ಪ್ರಾರಂಭವಾಗಿ ಎರಡು ದಿವಸ ಮಳೆಯಲ್ಲಿಯೇ ಪಿಕೆಟು ಮಾಡಿ ವ್ಯಯಪ್ರಿಸಿದಲ್ಲಿ, ಹಾಗೆ ಮಾಡುವುದು ಅಸಾಧ್ಯವೆಂದು ಕಂಡು ಬಂದದ್ದರಿಂದ ತಾ 22ರಲ್ಲಿ ತತ್ಕಾಲ 'ಪಿಕೆಟು' ಮಾಡುವುದನ್ನು ನಿಲ್ಲಿಸಿದುದೆಂದೂ, ಮಳೆಯು ನಿಂತ ಸಂತರ ಪುನಹ ಪ್ರಾರಂಭಿಸುವರೆಂದೂ ತಿಳಿಯ ಬರುತ್ತದೆ. 11 ದಿವಸ 'ಪಿಕೆಟು' ಮಾಡಿದರ ಫಲಿತಾಂಶವು ವಿವರವಾಗಿ ಇನ್ನೊಂದು ಕಡೆ ಪ್ರಕಟಿಸಲಾಗಿದೆ

## ಒಳದೇಶ.

ಈಗ ಒಂದು ವಾರದಿಂದ ಕೊಡಗಿನಲ್ಲಿ ಮಳೆಯು ವ್ಯಾಪಕವಾಗಿದೆ. ತಾ 20ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 80/ ಇಂಚು ಮಳೆ ಬಿತ್ತು.

ಮೈ ಬಿದ್ರಂಡ ಜಿಂಗಪ್ಪನವರಿಗೆ ಆಂಡಮೂನ್ ದ್ವೀಪದಲ್ಲಿ ಎಕ್ಸ್‌ಟ್ರಾ ಅಸಿಸ್ಟೆಂಟು ಕಮಿಷನರ್ ಉದ್ಯೋಗವು ಖಾಯಂ ಆಯಿತೆಂದು ತಿಳಿದು ಸಂತೋಷ ಪಡುತ್ತೇವೆ

ಕೊಡಗಿನ ಹೊಸ ಚೀಫ್ ಕಮಿಷನರೂ, ಮೈಸೂರಿನ ರೆಸಿಡೆಂಟರೂ ಆಗಿ ಶೆಫ್ಟೆನೆಟ್ ಕರ್ನಲ್ ಆರ್. ಜೆ. ಸಿ. ಬರ್ಚಾರವರು ಈ ತಾ 23ರಲ್ಲಿ ಬೆಂಗಳೂರಿನಲ್ಲಿ ತಮ್ಮ ಉದ್ಯೋಗದ ಚಾರ್ಜನ್ನು ವಹಿಸಿಕೊಂಡಿದ್ದಾರೆ.

ಮೈ ಕಪಿ ಚಿಣ್ಣಪ್ಪನವರು 'ಲೋಕವಾಸಿ'ದ ಸಂಪಾದಕರ ಮೇಲೆ ನಡಿಸುತ್ತಿರುವ ಮಾನ ನಷ್ಟದ ಕ್ರಿಮಿನಲ್ ಮೊಖದ್ದಮ್ಮೆಯ ಆರ್ಗ್ಯುಮೆಂಟು ತಾ 24ರಲ್ಲಿ ಆಯಿತು. ಜಡ್ಜ್‌ಮೆಂಟಿಗೆ ಜುಲೈ ತಾ. 8ಕ್ಕೆ ಇಡಲಾಗಿದೆ.

ಮೈ. ಕೋದಂಡ ಯಂ. ಅಯ್ಯಪ್ಪನವರು ಜುಲೈ 1 ರಿಂದ ಮೈಸೂರು ಸಂಸ್ಥಾನದ ಚೀಫ್ ಇಲೆಕ್ಟ್ರಿಕ್ ಇಂಜಿನೀಯರಾಗಿ (ಮಹೆಜೂನ 1400 ರೂಪಾಯಿ ಸಂಬಳದಲ್ಲಿ) ನೇಮಿಸಲ್ಪಟ್ಟಿರುವರೆಂದು ತಿಳಿಸಲು ಸಂತೋಷ ಪಡುತ್ತೇವೆ

ಸಹಕಾರ ಫಡೆರೇಶನಿನ ಎಗ್ಸಿಕ್ಯುಟಿವ್ ಕಮಿಟಿ ಎಂಟಿಂಗು ಜುಲೈ ತಾ. 5ರಲ್ಲಿ ಬೆಳಿಗ್ಗೆ ಬನಶಂಕರಿಯ ಸಂಘದ ಕಛೇರಿಯಲ್ಲಿ ನಡೆಯುವುದೆಂತಲೂ, ಸೂಪರ್‌ವೈಜರ್ ಕರಬೇತಿಗೆ ಅರ್ಜಿ ಹಾಕಿದವರೆಲ್ಲರೂ ಸದರಿ ಎಂಟಿಂಗಿನಲ್ಲಿ ಹಾಜರಾಗಬೇಕೆಂತಲೂ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ತಾ. 15—7—1930ರಿಂದ ಡಿವ್ಯುಟಿ ರೆಜಿಸ್ಟ್ರರ ಕೆಲಸದಿಂದ ರಿಟೈರ್ ಆಗುವ ಮೈ ಕೆ ಎನ್ ಸುಬ್ರಾಯರವರಿಗೆ ಸಹಕಾರ ಸಂಘಗಳೆಲ್ಲವೂ ಸೇರಿ ಕೋ-ಆಪರೇಟಿವ್ ಫೆಡರೇಶನಿನ ಮೂಲಕ ತಾ. 14—7—30ರಲ್ಲಿ ಒಂದು ಟೀ ಪಾರ್ಟಿ ಕೊಡುತ್ತಾರೆಂದು ತಿಳಿಯುತ್ತೇವೆ.

ಮೈ. ಕೋದಂಡ ಲೇಟ್ ಪೂವ್ವಯ್ಯ ಖಾಯರವರ ಮಕ್ಕಳು ಶ್ರೀಮತಿಗಳಾದ ಬೊಳ್ಳಮ್ಮನವರು, ಸೀತಮ್ಮನವರು ಮತ್ತು ಪೊನ್ನಮ್ಮನವರು ಜೊಂಬಾಯಿಯಲ್ಲಿ 'ದೇಶ ಸೇವಿಕಾ' ಸಂಘದ ಮೆಂಬರುಗಳಾಗಿ ಪರದೇಶೀ ಅಂಗಡಿಗಳನ್ನು ಪಿಕೆಟ್ ಮಾಡಿಕ್ಕಿರುವದು ಸ್ತೋತ್ರಾರ್ಹವಾಗಿದೆ.

ಈ ತಿಂಗಳ ವ್ಯಾಪಾರಭಿಪ್ರಾಯ ಜೊಂಬಾಯಿಯ ಸನಿಹಸ ವಿರುವ ಪಡಾಲ ಅಪ್ಪು ಕೋರಿಯೊಳಗೆ ಜನ ಸಮುದಾಯವು ಖಾನಾನು ಭಂಗ ಮಾಡಲು ನುಗ್ಗಿದಾಗ್ಯೂ ಜೊಂಬಾಯಿಯಲ್ಲಿರುವ ನಾಲ್ಕು ಕೂಡಿತ ಮಹಾಸಭೆಯರೂ ಅನುನೊಂದಿಗೆ ಹೋಗಿ ಖಾದಿ ಟೊಪ್ಪು ತುಂಬ ಉಪ್ಪು ತಾದರೆಂದು ಕೇಳಿ ಸಂತೋಷ ಪಡುತ್ತೇವೆ.

ಬಿಂಯಂಬಲಿ ಜೀವನಿಮಿ ಕಂಪೆನಿಯ ಪಾಲಿಸಿದಾರರ್ಯಾರಾದರೂ ಸತ್ಯಾಗ್ರಹ ಚಳವಳಿಯಲ್ಲಿ ಜೈಲುವಾಸಕ್ಕೆ ಒಳಗಾದರೆ ಆ ಸಮಯದಲ್ಲಿ ಅವರು ತಪ್ಪಿ ಪ್ರೀಮಿಯಂ ಹಣ ಕಟ್ಟದೆ ಹೋದರೆ ಅವರ ಪಾಲಿಸಿಯು ರದ್ದುಪಡಿಸಲ್ಪಡದೆ ರಿಯಾಯಿತಿ ತೋರಿಸುವರೆಂದು ತಿಳಿಯ ಬರುತ್ತದೆ ಇದರ ವಿವರವು ಬರುವ ವಾರ ಪ್ರಕಟಿಸಲಾಗುವುದು.

ಸೈಮನ್ ಕಮಿಷನಿನ ರಿಪೋರ್ಟು ಈ ತಾ. 24ರಲ್ಲಿ ಪ್ರಕಟವಾಗಿದೆ. ಅದರಲ್ಲಿ ಕೊಡಗಿನ ಸರ್ಕಾರದಲ್ಲಿ ಸುಧಾರಣೆಯೇನೂ ಶಿಫಾರಸ್ಸು ಮಾಡಲ್ಪಟ್ಟಿರುವುದಿಲ್ಲ. ಅಖಿಲ ಭಾರತ ಸಹಿಯೊದ ಫೆಡರ್ ಎನಿಸಿಬ್ಲ್ಯೆಗೆ ಕೊಡಗಿನ ಕಾನ್ಸಿಲಿನವರು ಒಬ್ಬ ಪ್ರತಿನಿಧಿಯನ್ನು ಜುಪಾಯಿಸಿ ಕಳುಹಿಸಿಕ್ಕಿದಾರುದು ಮೊತ್ಯ ಇದೆ (ಈ ವಿಷಯವು ಇಂಗ್ಲಿಷ್ ಪತ್ರಿಕೆಗಳಲ್ಲಿ ಪ್ರಕಟವಾಗಲು ಬಿಟ್ಟು ಹೋಗಿದ್ದರೂ ಪರದಯ ಪುಸ್ತಕದಲ್ಲಿ ದಯೆಂದು ತಿಳಿಯುತ್ತೇವೆ)

ಜುಲೈ 1 ರಿಂದ ರಿಟೈರ್ ಆಗುವ ಮೈ ಕೊಂಗಂಡ ಅಪ್ಪಯ್ಯನವರ ಬದಲಿಗೆ ಸಬ್ ಮೇಜಿಸ್ಟ್ರೇಟರಾಗಿರುವ ಮೈ. ಕಾರಮಾಡ ಚಂಗಪ್ಪನವರು ಟ್ರೆಜರಿ ಆಫೀಸರಾಗಿಯೂ, ಮೈ ಚಂಗಪ್ಪನವರು ಈಗ ರಜೆಯಲ್ಲಿರುವದರಿಂದ ಅವರು ರಜ ತೀರಿ ಒಡುವ ವರೆಗೆ ಕರಣೀಕರಾದ ಮೈ. ಸಿ ಆರ್. ಸುಬ್ರಾಯರು ಟ್ರೆಜರಿ ಆಫೀಸರ ಚಾರ್ಜಿನಲ್ಲಿ ಇರಬೇಕಾಗಿಯೂ, ಮೈ. ಚಂಗಪ್ಪನವರ ಬದಲಿಗೆ ಮೈ ಕೀಕಿಯಂಡ ಕಾಳಪ್ಪನವರು ಸಬ್ ಮೇಜಿಸ್ಟ್ರೇಟರಾಗಿಯೂ, ಮೈ ಕಾಳಪ್ಪನವರು ಮುನ್ಸಿಫ್ ಕೆಲಸ ನೋಡುತ್ತಿರುವ ವರೆಗೆ ಮೈ ಕೂಡುಮಂಡ ಪೂಣ್ಣಪ್ಪನವರು ಸಬ್ಬೆಯ್ಯನವರು ಸಬ್ ಮೇಜಿಸ್ಟ್ರೇಟರಾಗಿ ಇಬ್ಬರೂ ಹುಳಿಯಾಗಿರುತ್ತಾರೆಂಬ ಸುದ್ದಿಯು ಕೇಳಿ ಬರುತ್ತಿದೆ.

ಜುಲೈ ತಾ 19ರಲ್ಲಿ ಸಾಮಾಜಿಕ್ಕಿರುವ ಮೈಸೂರು ಮುನ್ಸಿಪಲ್ ಕಮಿಟಿ ಚುನಾವಣೆಗೆ ಈ ಸಲದ ಮತದಾರರು ಅಯೋಧ್ಯಾವಾರಾಗಿ ನಿಂತಿರುವರು. ಕೈಕೆರೆ ಪರಿಸರದ ಒಂದು ಸ್ಥಳಕ್ಕೆ ಮೈ ಎ ಕೆ ಲೋಬೋರವರು ಮತ್ತು ಮೈಸೂರಿನ ಪರ ಶಾಲೆ 2 ಸ್ಥಳಗಳಿಗೆ ಮೈ ಮುಹಮ್ಮದ್ ಖಾನ್ ಸಾಹೇಬರಾನರವರು ಮತ್ತು ಮೈ. ಯು ಆರ್. ಅನಂತ್ ಗಳ್ಳೂರರವರು ಕೂಡುವರ ಪರವಾಗಿ ಇರುವ 3 ಸ್ಥಳಗಳಿಗೆ ಮೈ ಗಳಾದ (1) ಕಾ. ಬಾ ಪಟ್ಟಣಶೆಟ್ಟಿ ಜೀವೈಯ್ಯನವರು, (2) ಕೊಡಂದೆರ ಮಾದಪ್ಪನವರು, (3) ಕೊಡಂದೆರ ದೇವೈಯ್ಯನವರು, (4) ತೋಟಿಲ ಪೂಣ್ಣಪ್ಪನವರು, (5) ಮನೆಯವರ ಡ ಬೆಳ್ಳಪ್ಪನವರು ನುತ್ತು (6) ಮಂಡೇಟಿರ ಅಪ್ಪಯ್ಯನವರು. ಜೇರೆ ಹಿಂದುಗಳ ಪರ ಇರುವ 8 ಸ್ಥಳಗಳಿಗೆ ಮೈ ಗಳಾದ (1) ಕೆ. ಮೊಣಪಿಸುಬ್ಬಯ್ಯನವರು, (2) ಕೆ. ಎನ್. ಕಪ್ಪಯ್ಯನವರು, (3) ಕೂಪ್ಪೆಟ್ಟಿ ಶಕುಸ್ಟೆಯ್ಯನವರು, (4) ಎನ್. ಬಸಪ್ಪನವರು, (5) ಯಂ. ಸಿದ್ದಿಂಗಪ್ಪನವರು, (6) ಆರ್ ಪಾಪ್ಪಯ್ಯನವರು, (7) ಬಿ ಎಸ್. ವೀರಭದ್ರ ಸೆಬ್ಬಯವರು, (8) ವೈ ಎನ್. ನಂಜಪ್ಪ ಸಬ್ಬಿಯನವರು ಮತ್ತು (9) ಸಿ ಯಸ್. ವೀರಪ್ಪನವರು.

## ಹಿಂದೂದೇಶ.

ಹಿಂದೂದೇಶದ ಎಲ್ಲಾ ಕಡೆಗಳಲ್ಲೂ ಸತ್ಯಾಗ್ರಹ ಚಳವಳವು ಮುಂದುವರೆಯುತ್ತಾ ಇದೆ. ಸರ್ಕಾರದ ದಬ್ಬಾಳಿಕೆಯಿಂದ ಈ ಚಳವಳಕ್ಕೆ ಒಲ ಹೆಚ್ಚುತ್ತಾ ಬರುತ್ತಿದೆ.

ಕವತುವಾರಂ, ಗುಜ್ಜೆ ವಲ್ಲೇರು ಮತ್ತು ಅಂಗಲೂರು ಎಂಬ ಸ್ಥಳಗಳಲ್ಲಿ ತಕ್ಕಿಯಿಂದ ನೊಲುವಹಾಕಿದಂತೆಲೂ, ವಿಂಟಿಂಗುಗಳನ್ನು ನಡಿಸಕೂಡದೆಂತಲೂ ಸರ್ಕಾರದವರು ಹುಕುಂ ಮಾಡಿರುವರು!

ಸೈಮನ್ ಕಮಿಷನಿನ ವರದಿಯ 2ನೇ ಭಾಗವು ಈ ತಾ. 24ರಲ್ಲಿ ಪ್ರಕಟವಾಗಿದೆ ಅದು ಸಂವಿಧಾನ ರಚನೆಯ ವರ ವಿನಷ ಇಷ್ಟೆ ಇವರ ಹಿಂದೀಯ ಮುಖಂಡರೂ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ. ಎಲ್ಲರೂ ಅದನ್ನು ವಿಮರ್ಶಿಸಿ, ಖಂಡಿಸಿ ಅಭಿಪ್ರಾಯ ಕೊಟ್ಟಿರುವರು.

ಅಹ್ಮದಾಬಾದ್, ಕರಾಚಿ, ಲಾಹೋರ್ ಮೊದಲಾದ ಪಟ್ಟಣಗಳಲ್ಲಿ ಕಪ್ಪು ಬಾವಟಿಗಳಿಂದಿಗೆ ಮೆರವಣಿಗೆ ಮಾಡಿ ಸೈಮನ್ ಕವಿ ಷನಿನ ವರದಿಯ ಮೇಲೆ ಅಭ್ಯಸ್ಥಯನ್ನು ಸೂಚಿಸಿದರು ಕೆಲವು ಕಡೆಗಳಲ್ಲಿ ವರದಿಯ ನಕಲುಗಳನ್ನೆಸ ಸುಟ್ಟ ವರ್ತಮಾನವೂ ಇದೆ.

ಜೊಂಬಾಯಿಯಲ್ಲಿ ಪಿಕೆಟಿಂಗು ಬಹಳ ವಿರುವಾಗಿ ನಡೆಯುತ್ತಿದೆ ಅನೇಕ ಸತ್ಯಾಗ್ರಹಿಗಳು ಸೆರೆ ಹಿಡಿಯಲ್ಪಟ್ಟಿರುವರು ತಾ 23ರಲ್ಲಿ ಪೊಲೀಸಿನವರು ಜನರಿಗೆ ಲತ್ತಿ ಪೆಟ್ಟಿನಿಂದ ಬಿದ್ದು ಜನರಿಗೆ ಜಖಂ ಮಾಡಿದರು. ಒನರು ಫೈರ್ ಗುಂಡಿಗೆ ಬಲಿಯಾಗಿರುವರು ಪತ್ರಿಗೇಕರು ಸತ್ಯಾಗ್ರಹಕ್ಕೆ ಸಹಾಯ ಮಾಡುತ್ತಿರುವರು.

ಮಲಬಾರಿನ ಪಯ್ಯನೂರಿನಲ್ಲಿ ಸಾರಾಯಿ ಅಂಗಡಿಗಳ ಪಿಟಿಟಿಂಗ್ ಎಷ್ಟೆಯಿಡೆ ನಡೆಯುತ್ತಿದೆ ಅಲ್ಲಿಯೂ ಸತ್ಯಾಗ್ರಹಿಗಳು ದಸ್ಕಗಿರಿ ಮಾಡುತ್ತಿರುವರು ತ್ರಿವೇಂದ್ರಂ, ಅಲಪ್ಪಿ ಮುಂತಾದ ಕಡೆಗಳಲ್ಲಿ ಸುಮಾರು 23 ಸ್ವಯಂಸೇವಕರನ್ನು ದಸ್ಕಗಿರಿ ಮಾಡಿ ಜೈಲಿಗೆ ಕಳುಹಿಸಿರುವರು. ಪೆಷಾವರದಲ್ಲಿ ಸತ್ಯಾಗ್ರಹಿಗಳಿಗೆ ಮಾಡಿರುವ ಶಿಕ್ಷೆಯಿಂದ 1 ತಿಂಗಳು ಕಠಿಣ ಸಜೆ ವಿಧಿಸಲ್ಪಟ್ಟಿರುವರು

ಗಾಂಧಿ ಪೊಪ್ಪಯ್ಯ ಶಾಲಿಯವರು ಖಾನಾನು ಭಂಗವನ್ನು ಇರುವ ಸಮಾಜಸೇವೆಯ ಇಚ್ಛೆಯಿಂದ ಮೊದಲಿಸಿ, ಖಾನಾನು ಭಂಗದ ಚಳವಳವು ಅಶಾಂತಿಯನ್ನುಂಟುಮಾಡುವುದರಿಂದಲೂ ಗುಂಪುಗೂಡಿ ಮುನ್ಸಿಪಾಲಿಟಿಯೊಳಗೂ, ಒಮ್ಮೆಲು ಸುತ್ತ ಮುತ್ತಲೂ 2 ತಿಂಗಳ ಮೆಟ್ಟಿಗೆ ಯೂರೂ ಪುಟ್ಟಿಸ್ ಸ್ಟೇಷನಲ್ಲಿ ಗಾಂಧಿ ಟೊಪ್ಪಿಯನ್ನು ಧರಿಸಕೂಡದೆಂದು ಅಲ್ಲಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಹುಕುಂ ಮಾಡಿರುವರು!!

ಅಹ್ಮದಾಬಾದಿನ ಗುಜರತ್ ಕಾಲೇಜಿನ ಕೆಲವು ವಿದ್ಯಾರ್ಥಿಗಳು ಕಾಲೇಜನ್ನು ಬಿಟ್ಟು ಸತ್ಯಾಗ್ರಹ ಚಳವಳಕ್ಕೆ ಸೇರಿ, ಬಾಕಿ ಹುಡಗರನ್ನೂ ಈ ಚಳವಳಕ್ಕೆ ಸೇರಿಸಲೋಸುಗ ಸದರಿ ಕಾಲೇಜನ್ನು ಪಿಕೆಟ್ ಮಾಡುತ್ತಿರುವರು ಕಾಲೇಜಿಗೆ ವಿದ್ಯಾರ್ಥಿಗಳು ಬರುವಾಗ್ಯೆ ಸತ್ಯಾಗ್ರಹಿಗಳು ಗೇಟಿನಲ್ಲಿ ನೆಲದ ಮೇಲೆ ಮಲಗುವರು ಪೋಲೀಸಿನವರ ಸಹಾಯದಿಂದ ಇದರನ್ನು ಎತ್ತಿ ಬೇರೆ ಕಡೆ ಮಲಗಿಸಿ ಕಲವರು ಕಾಲೇಜಿಗೆ ಹೋಗುವರು. ಹೀಗೆ ಹೋಗುವಾಗಲು ಹೊಗುವಾಗಲು ಕೆಲವು ಸತ್ಯಾಗ್ರಹಿಗಳು ದಸ್ಕಗಿರಿ ಮಾಡಲ್ಪಟ್ಟಿರುವರು

ಮಂಗಳೂರಿನಲ್ಲಿ ಸಾರಾಯಿ ಅಂಗಡಿಗಳ ಪಿಕೆಟಿಂಗ್ ಬಹಳ ಉತ್ಸಾಹದಿಂದಲೂ, ವಿರುವಾಗಿಯೂ ನಡೆಯುತ್ತಿದೆ. ಹಲವು ಸ್ವಯಂಸೇವಕರು ದಸ್ಕಗಿರಿ ಮಾಡಲ್ಪಟ್ಟಿರುವರು. ಒಂದೇ ದಿವಸ 60 ಪಿಕೆಟರುಗಳು ಸೆರೆ ಹಿಡಿಯಲ್ಪಟ್ಟಿರು! ಆದರೆ ಬದಲು ಪಿಕೆಟ್ ಮಾಡಲು ಸತ್ಯಾಗ್ರಹಿಗಳು ತುಂಬುತ್ತಿರುವರು. ದಿನಾಪ್ರತಿ ಮೆರವಣಿಗೆಗಳೂ, ಎಂಟಿಂಗುಗಳೂ ನಡೆಯುತ್ತಿವೆ ಮೊನ್ನೆ ದಿನ ಮೆರವಣಿಗೆಯ ನೇತೃತ್ವವನ್ನು ಪೊಲೀಸಿನವರು ಸತ್ಯಾಗ್ರಹಿಗಳನ್ನೆ ಒಪ್ಪಿಸಿದರು ಅವರಾಗಿ ಪೊಡೆದರೆಂದಾ ಸುದ್ದಿ ಇದೆ ಅಲ್ಲಿಯ ವಿದ್ಯಾರ್ಥಿಗಳೂ ಹಲವು ಕಾಲೇಜು, ಶಾಲೆಗಳಿಗೆ ಬೀಗ ಹಾಕಿ ಮೆರವಣಿಗೆಗಳನ್ನು ಪೂರೈಸುತ್ತಿರುವರು

ಲಂಡನಿನ ಡೈಲಿ ಹೆರಾಲ್ಡ್ ಪತ್ರಿಕೆಯ ಸಂಪಾದಕರಾದ ಮೈ ಲ್ಯಾನ್ಸ್‌ಬರಿಯವರು, ಅಲ್ಲಿ ಪಬ್ಲಿಕ್ ಸಂಸ್ಥೆಯಲ್ಲಿ ಮಾಡಬೇಕಾಗಿರುವ ಬೆಲಿಸಲ್ಲಿ ಮಾಡಬೇಕಾಗಿರುವ ಮಹಾತ್ಮಗಾಂಧಿಯವರಿಗೆ ಸಂಪೂರ್ಣ ಸಹಾಯ ಕೊಡುವ ಸಲುವಾಗಿ ಭಾರತಕ್ಕೆ ಬರುತ್ತಿದ್ದಾರೆ ಎಂಬ ಸುದ್ದಿಯು ಬಂದಿದೆ. ಈ ತಾ 27ರಲ್ಲಿ ಜೆನಿವಾದಲ್ಲಿ ಸಾಮಾಜಿಕ್ಕಿರುವ ಲೀಗ್ ಆಫ್ ನೇಷನ್ಸ್ ಸಭೆಯಲ್ಲಿ ಭಾರತದ ಪರವಾಗಿ ಮಾತನಾಡಲು ಅವರು ಹೋಗುವರೆಂದು ತಿಳಿಯ ಬರುತ್ತದೆ. ಅವರು ಭಾರತಕ್ಕೆ ಬಂದ ಮೇಲೆ ಸತ್ಯಾಗ್ರಹ ಚಳವಳವು ನಿಲ್ಲಿಸಲ್ಪಟ್ಟು ರಾಜಕೀಯ ತೀರ್ಮಾನವಾಗಲು ಸಾಧ್ಯವಾಗುವುದೆಂದು ಹೇಳಿದರು.

## ಪತ್ರವ್ಯವಹಾರ.

**ಚಾತ್ಮಿದಾರರು ಪಡುವ ಅಧಿವ್ಯಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]**

### ಮುಸಲ್ಮಾನರ ವೈ. ಯಂ ಯು. ಎ ಸಂಘ.

ಈ ತಾ. 19ರಲ್ಲಿ ಈ ಸಂಘದ ಒಂದು ಪಬ್ಲಿಕ್ ವಿಷಯದ ಮೇಲೆ ಉಪನ್ಯಾಸವು ಆಯಿತು. ಮೈ. ಅಬ್ದುಲ್ ಅಲಿಮ್ ಸಾಹೇಬರವರು ಸಾಧ್ಯಾನೆಯ ಗೀತೆಯನ್ನು ಹಾಡಿದರು. ಮೈ ಅಬ್ದುಲ್ ರಜಾಕ್ ಸಾಹೇಬರು ಮುಸಲ್ಮಾನರ ಹಿಂಸ್ಥಿತಿಯನ್ನು ವಿವರಿಸಿ ಮುಸಲ್ಮಾನರಲ್ಲಿ ವಿದ್ಯಾವನ್ನು, ಸತ್ಪಾಥಿಸಲಸನ್ನು, ದೇಶಾಭಿಮಾನವನ್ನೂ ಹುಟ್ಟಿಸಲಿಕ್ಕೆ ಈ ಸಂಘವು ಉಪನ್ಯಾಸ ಮಾಲೆಳ ಪ್ರಯತ್ನಿಸುತ್ತದೆ. ಮಡಿಕೇರಿ ಮುಸಲ್ಮಾನರು ಈ ಸಂಸ್ಥೆಯ ಮೆಂಬರುಗಳಾಗಿ ಇದಕ್ಕೆ ಉತ್ತೇಜನ ಕೊಟ್ಟು ಪ್ರೋತ್ಸಾಹಿಸಲೆ ಬೇಕೆಂದು ಕೇಳಿಕೊಂಡರು. ಮೈ. ಎಂ. ಬಾ ಸಿದ್ದೀಕರವರು "ಇಸ್ಲಾಂ ಮತ್ತು ಹೆಂಗಸರ ಹಕ್ಕು" ಎಂಬ ವಿಷಯದಲ್ಲಿ ಒಂದು ವಿಶಿಷ್ಟವಾದ ಉಪನ್ಯಾಸವನ್ನು ಮಾಡಿ ಕೇಳಿದ್ದವರಿಗೆ ಸಂತೋಷವನ್ನುಂಟು ಮಾಡಿದರು. ಇಸ್ಲಾಂ ಮತವು ಹೆಣ್ಣಿಗೆ ಒದಗಿಸಿರುವ ಮುಂತಾದ ಹಕ್ಕುಗಳನ್ನು ಸ್ಪಷ್ಟವಾಗಿ ವಿವರಿಸಿದರು. ಮುಸಲ್ಮಾನ ಸ್ತ್ರೀಯು ಒಬ್ಬ ಮನೆಯ ಯಜಮಾನಸ ಸ್ಥಾನವನ್ನು ಪಡೆದಿರುವಳು. ಆಸ್ತಿಯಲ್ಲಿ ಸ್ತ್ರೀಯರಿಗೆ ಪಾಲು ಇತ್ತು. ಆಯಿಷಾ, ಸತ್ಯಭಾಮ ಮೊದಲಾದ ಸ್ತ್ರೀಯರು ಯುದ್ಧ ಮಾಡಿರುವುದನ್ನು ಉದಾಹರಿಸಿ ಹೆಂಗಸರು ಸ್ವತಂತ್ರರಾಗಿ ವರ್ತಿಸಲು ಇಸ್ಲಾಂ ಮತವು ಅಡ್ಡಿ ಬರುವುದಿಲ್ಲವೆಂದು ತೋರಿಸಿದರು. ಸಭೆಯಲ್ಲಿ ಸುಮಾರು ೩೦೦ ಜನ ಸ್ತ್ರೀಯರು ಹಾಜರಿದ್ದರು. ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಲು ಅವಕಾಶವಿತ್ತು. ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರಗಳನ್ನು ಕೊಡಲಾಯಿತು. ಸಭೆಯು ಬಹಳ ಯಶಸ್ವಿಯಾಗಿ ನಡೆಯಿತು. ಸಭೆಯಲ್ಲಿ ಸುಮಾರು ೩೦೦ ಜನ ಸ್ತ್ರೀಯರು ಹಾಜರಿದ್ದರ

ಈ ಮಧ್ಯೆಬಂದುವಿನ ನಾಲ್ಕು ಕಡೆಗಳಲ್ಲಿ ಗೀತೆಯ ಗಾ ತ್ರವೆಲ್ಲವೂ ರಚಿತವಾಗಿದೆ. ಧೃತಿ, ಜ್ಞಾನ ಇವೇ ಮುಂತಾ ದವು ಅದರ ಸುತ್ತು ಮುತ್ತಲಿನ ತಾರಾಮಂಡಲದಂತೆ ಸಜ್ಜು ಗೊಳಿಸಲ್ಪಟ್ಟಿವೆ. ಎಲ್ಲಿ ದೇಹವುಂಟೋ ಅಲ್ಲಿ ಕರ್ಮವಿ ದ್ದೇ ಇದೆ. ಅದರಿಂದ ಯಾವನೂ ಮುಕ್ತನಲ್ಲ, ಆದರೂ ಶರೀ ರವನ್ನು ಪ್ರಭುವೆಂದಿರವನ್ನಾಗಿ ಮಾಡಿ ಅದಂ ಮೂಲಕ ಮು ಕ್ತಿಯನ್ನು ಗಳಿಸಬಹುದು. ಇದನ್ನು ಎಲ್ಲಾ ಧರ್ಮಗಳೂ ಸ್ಪಷ್ಟ ತಿಪಾದಿಸುತ್ತವೆ ಪರಂತು ಎಲ್ಲಾ ಕರ್ಮದಲ್ಲಿ ಸ್ವಲ್ಪ ದೋಷ ವು ಇದ್ದೇ ಇರುತ್ತದೆ. ಮುಕ್ತಿಯೊದಗೋ ನಿರ್ದೋಷಪ ರಿ ಗೆ ಸಾಧ್ಯ. ಹಾಗಾದರೆ ಕರ್ಮ ಬಂಧನದಿಂದ ಅರ್ಥಾತ್ ದೋಷಸ್ಪರ್ಶದಿಂದ—ವಿನೋಚನೆಯೆಂತು? ಇದಕ್ಕೆ ಉತ್ತ ರವನ್ನು ಗೀತೆಯು ನಿಶ್ಕಾಮಕರ್ಮ ಶಬ್ದಗಳಲ್ಲಿ ಕೊಟ್ಟಿದೆ—ನಿಷ್ಕಾಮಕರ್ಮದಿಂದ ಯಜ್ಞಾರ್ಥವಾಗಿ ಕರ್ಮಗೈದು ಕ ರ್ಮಫಲವನ್ನು ಕೃಷ್ಣಾರ್ಪಣ ಮಂ ಡಿ, ಅಂದರೆ ಮನ, ಬುದ್ಧಿ, ಶರೀರಗಳನ್ನು ಈಶ್ವರನಲ್ಲಿ ಹೋಮಮಾಡಿ' ಎಂದು.

ಆದರೆ ನಿಷ್ಕಾಮವು, ಕರ್ಮಫಲತ್ಯಾಗವು, ಕೇವಲ ಬಾ ಯಿ ಪೂತಿನಿಂದಲೇ ಉಂಟಾಗುವದಿಲ್ಲ. ಇದು ಕೇವಲ ಬು ದ್ಧಿಯ ಸ್ಪರ್ಶಕ್ಕಾಗಲ್ಲ. ಇದು ಹೃದಯ ಪೂರ್ವನಿಂದಲೇ ಉತ್ಪನ್ನವಾಗ ಬೇಕು. ಈ ತ್ಯಾಗ ಶಕ್ತಿಯನ್ನು ಹುಟ್ಟಿಸುವ ದಕ್ಕೆ ಜ್ಞಾನವು ಬೇಕು. ಒಂದು ರೀತಿಯ ಜ್ಞಾನವನ್ನು ಐ ನೀಕ ಪಂಡಿತರು ಗಳಿಸುತ್ತಾರೆ. ವೇದವೇ ಮುಂತಾದವು ಅವರಿಗೆ ಕಂಠಗತವಾಗಿರುತ್ತವೆ, ಪರಂತು ಅವರಲ್ಲಿ ಹೆಚ್ಚು ಮಂದಿ ಭೋಗಾದಿಗಳಲ್ಲಿ ಲೀನಸಾಗಿರುತ್ತಾರೆ ಜ್ಞಾನದ ಅ ತೀಕ್ಷಕವು ಶುಷ್ಕ ವಾಗಿರುತ್ತದೆ. ಇದರಲ್ಲಿ ರೂಪಗೆಳ್ಳದಂತೆ ಗೀತಾ ಕಾರರು ಜ್ಞಾನದ ಜೊತೆಗೆ ಭಕ್ತಿಯನ್ನು ಸೇರಿಸಿ ಅನಕ್ಕೆ ಪ್ರ ಧಮಸ್ಥಾನವನ್ನು ಕೊಟ್ಟಿದ್ದಾರೆ. ಭಕ್ತಿಯಿಲ್ಲದ ಜ್ಞಾನವು ಕೆಲಸಕ್ಕೆ ಬಾರದು. ಇದಕ್ಕಾಗಿ ಹೇಳಿದ್ದಾನೆ 'ಭಕ್ತಿಕ ಠೋ, ಕೋಜ್ಞಾನಿ ಮಿಲ ಹೀ ಜಾಯಗಾ' (ಭಕ್ತಿಯಿಂದ ಲೂ ಜ್ಞಾನವು ದೊರೆತೇ ದೊರೆಯುವುದು) ಎಂದು. ಆದರೆ ಭಕ್ತಿಯು 'ಶಕ್ತಿಯಲಗಿನ ಮೇಲೆ ಹಿಡುಮಂತೆ.' ಆದುದರಿಂದ ಗೀತಾಕಾರರು ಭಕ್ತಿಯ ಲಕ್ಷಣಗಳನ್ನು ಸ್ಥಿತಪ್ರಜ್ಞನ ಲಕ್ಷಣಗ ಳಂತೆಯೆ ವರ್ಣಿಸಿದ್ದಾರೆ.

ತಾತ್ಪರ್ಯವೇನಾದರೆ—ಗೀತೆಯ ಭಕ್ತಿಯು ಮಂಕನ ನೆರಕೆಯಲ್ಲ, ಅಂಧ ಶ್ರದ್ಧೆಯಲ್ಲ. ಗೀತೆಯಲ್ಲಿ ವರ್ಣಿತ ವಾದ ಆಚಾರಗಳಿಗೆ ಸಾಮಾಜಿಕ್ಯೆಯ ಅಥವಾ ಕ್ರಿಯೆಯ ಸಂಬಂಧವು ಇಲ್ಲ. ಯಾವ ವಿಶಿಷ್ಟಗೆಳನ್ನೂ, ಆಘ್ರ್ಯಾದಿ ವಾಹನಗಳನ್ನೂ ಭಕ್ತನು ಅಗತ್ಯವಾಗಿ ಉಪಯೋಗಿಸಿಲಿ ಅ ದರೆ ಭಕ್ತಿಯ ಲಕ್ಷಣಗಳು ಅವಲ್ಲ. ಯಾವನು ಪ್ರಾಣಕೊಟ್ಟು ರನ್ನೂ ದ್ವೇಷಿಸುವದಿಲ್ಲವೋ, ಯಾರು ಕರುಣೆಯ ಭಾಂ ಡಾರವಾಗಿರುವನೋ, ಮಮತಾರಾಹಿತ್ಯನೋ, ನಿರಹಂಕಾರ ನೋ, ಯಾರಿಗೆ ಸುಖ ದುಃಖಗಳೂ, ಶೀತೋಷ್ಣಗಳೂ ಸಮ ನಸ್ಸೋ, ಯಾರು ಕ್ಷಮಾಶೀಲನೋ, ಯಾವಲ್ಲಿ ಸಂತೋಷದಿಂ ದಿರುವನೋ, ಯಾರ ನಿಶ್ಚಯವು ಎಂದಿಗೂ ಕದಲುವುದಿಲ್ಲವೋ, ಯಾರು ಮನಸ್ಸನ್ನೂ, ಬುದ್ಧಿಯನ್ನೂ ಈಶ್ವರನಿಗೆ ಅರ್ಪಿಸಿರು ವರುವನೋ, ಯಾರನ್ನು ಕಂಡರೆ ಜನರು ಹೆದರುವದಿಲ್ಲವೋ, ಯಾರು ಹರ್ಷ ಶೋಕ ಭಯಾದಿಗಳಿಂದ ಮುಕ್ತನಾಗಿರುವ ನೋ, ಯಾರು ಪವಿತ್ರನೋ, ಯಾರು ಕಾರ್ಯದಕ್ಷನಾಗಿದ್ದ ರೂ ತಟಸ್ಥನಾಗಿರುವನೋ, ಯಾರು ಶುಭಾಶುಭವನ್ನು ತ್ಯ ಜಿಸಿರುವನೋ, ಯಾರು ಶತ್ರುಮಿತ್ರರಲ್ಲಿ ಸಮಭಾವವಿಡುವ ನೋ, ಯಾರಿಗೆ ಸೊನಾಪಮೊಸಗಳು ಸಮವೋ, ಯಾರಾ ಸ್ಮುತಿಯಿಂದ ಉಲ್ಲಾಸವಾಗಲಿ, ನಿಂದೆಯಿಂದಗ್ಲಾನಿಯು ಉಂಟಾ ಗದಿರುವೆಯೋ, ಯಾರು ಮೌನಧಾರಿಯೋ, ಯಾರಿಗೆ ಏ ಕಾಂತವು ಪ್ರಿಯ ವಾಗಿರುವದೋ, ಯಾರು ಸ್ಥಿರಬುದ್ಧಿಯುಳ್ಳ ವನೋ ಅವನೇ ಭಕ್ತನು ಈ ಭಕ್ತಿಯು ಅನೆಕ್ಕರಾದ ಸ್ತ್ರೀ ಪುರುಷರ ಪಾಲಿಗೆ ಸೇರಿದುದಲ್ಲ.

ಲೌಕಿಕ ಕಲ್ಪನೆಯಲ್ಲಿ ಭಕ್ತನೆಂದರೆ ಪುರುಷ ಜ್ಞಾನವಿ ಲ್ಲದ ಮುಂಕ ಜಪಮಾಲೆಯನ್ನು ಹಿಡಿದು ಜಪ ಮಾಡುವವನು ಸೇವಾಕರ್ಮ ಮಾಡಿದರೂ ಅವನ ಜಪ ನವು ಕೊಡತಕಾಗಿ ಹೋಗುತ್ತದೆ ಆದುದುರಿಂದ ಅವನು ಭೋಜನ ಮಾಡು ತಾದ ಭೋಗಗಳನ್ನು ಭೋಗಿಸುವಾಗ ದೊತ್ತ ಮಾಲೆಯನ್ನು ತೆಗೆದಿಡುತ್ತಾನೆ. ಹಿಟ್ಟು ಬೆಸುವದಕ್ಕಾಗಲಿ ತೋಗಿಗೆ ಸೇವಾ ಶುಶ್ರೂಷೆಗೆ ಮಾಡಿವದಕ್ಕಾಗಲಿ ಎಂದಿಗೂ ಇಲ್ಲ.

ಇವರೆಲ್ಲ ವರ್ಗದ ಜನರಿಗೂ ಗೀತೆಯು ಸ್ಪಷ್ಟವಾಗಿ ಹೇಳಿದೆ "ಕರ್ಮವಿಲ್ಲದೆ ಯಾವ ಸಿದ್ಧಿಯೊದಗಿಲ್ಲ, ಜ ನಕನಾದಿಗಳು ಕೂಡ ಕರ್ಮ ಮಾ ಲಕವೇ ಜ್ಞಾನನಿಗಳಾದರು. ನಾನು ಕೂಡ ಅಲಸ್ಯರಹಿತನಾಗಿ ಕರ್ಮ ಮಾಡುತ್ತಾ ಇರುದಿದ್ದರೆ ಈ ಲೋಕಗಳೆಲ್ಲಾ ನಷ್ಟವಾಗುವವು ಎಂದು. ಹೀಗಿದ್ದ ಮೇಲೆ ಇನ್ನು ಜನರ ವಿಷಯದಲ್ಲಿ ಹೇಳಬೇಕಾದುದೇನು?

ಇಲ್ಲಿ ಫಲತ್ಯಾಗವೆಂದರೆ ತ್ಯಾಗಿಗೆ ಫಲವು ಲಭಿಸುವದಿ ಲ್ಲವೆಂದು ಯಾರೂ ತಿಳಿದುಕೊಳ್ಳಬಾರದು ಈ ಅರ್ಥಕ್ಕೆ ಗೀ ತೆಯಲ್ಲಿ ಎಲ್ಲಿಯೂ ಸ್ಥಾನವಿಲ್ಲ. ಫಲತ್ಯಾಗವಾದರೆ, ಫಲ ದ ಸಂಬಂಧವಾಗಿ ಅಸಕ್ತಿಯ ಅಭಾವವೆಂದರ್ಥ. ವಾಸ್ತವ್ಯ ವಾಗಿಯೂದರೋ ಫಲತ್ಯಾಗಿಗೆ ಸಾತಿಶಯವು ಹೆಚ್ಚು ಫಲವು ದೊರಕುತ್ತದೆ. ಗೀತೆಯ ಫಲತ್ಯಾಗದಲ್ಲಿ ಅಸೀಮ ಶ್ರದ್ಧೆ ಯ ಪರೀಕ್ಷೆಯೂ ಅಡಗಿರುತ್ತದೆ. ಯಾವ ಮನುಷ್ಯನು ಪ ರಿಣಾಮವನ್ನು ಕುರಿತು ಯೋಚಿಸಿರುತ್ತಾನೋ ಅವನು ಅ ನೇಕ ಬಾರಿ ಕರ್ಮ, ಕರ್ತವ್ಯ ಪ್ರಷ್ಠನಾಗುತ್ತಾನೆ. ಇದ ರಿಂದ ಅವನು ಅಧೀರನಾಗುತ್ತಾನೆ ಇದರಿಂದ ಅವನು ಕ್ರೋಧವಶನಾಗುತ್ತಾನೆ ಮತ್ತು ಅವನು ಮೂಢನು ಜೋ ಗ್ಯವಲ್ಲದುದನ್ನು ಮಾಡತೊಡಗುತ್ತಾನೆ. ಬುನು ಕರ್ಮ ದಿಂದ ಮತ್ತೊಂದರಲ್ಲಿಯೂ, ಮತ್ತೊಂದರಿಂದ ಮಗದೊಂದ ರಲ್ಲಿಯೂ ಸುವರ್ತನಗೆಗುತ್ತಾ ಹೋಗುತ್ತಾನೆ. 'ನ ಕ.

---

# ಮೊತ್ತಮೊದಲ ಪ್ರೀತಿಯ ಪತ್ರ.

(ಚಿ ಕ್ಕ ಕ ಥೆ.)

("ಹಿಂಪಿ ಹ್ಯಾಗಳಿವಿ" ಯಿಂದ ಅನುವಾದ)

ಅವನು ಪ್ರತಿ ದಿನ ಬೆಳಿಗ್ಯೆ ಎರಡು ಘಳಿಗೆ ರಾತ್ರಿ ಇರು ವಾಗಲೇ ಎದ್ದು ಪಟ್ಟಣದ ಹೊರಗೆ ಸುತ್ತಾಡಿಕ್ಕೆ ಹೋಗಿ ನೂ ಯೆ ರೀದಯವಾಗುವಷ್ಟರಲ್ಲಿ ಕೊಣಾ ಬೆರಂಡಿತ್ತು ಮನೆಗೆ ಕಲಪುತ್ತಿದ್ದನು ಅವನ ಹೆಸರು ಮಹೇಶ. ಅವನು ಬಹಳ ಶಾಂತ ಪ್ರಕೃತಿಯ ಒಬ್ಬ ಯುವಕನಾಗಿದ್ದನು. ಅವನಿಗೆ ವೃರ್ಥವಾಗಿ ವಾದವಿವಾದದಲ್ಲಾಗಲೀ ಹುಡುಗರ ಗುಂಪಿನಲ್ಲಿ ಸೇರುವದರಲ್ಲಾಗಲೀ ಆಭಿರುಚಿ ಇರಲಿಲ್ಲ. ಕಾಲೇಜಿಗೆ ತ ಲಪುಪೊಡನೆ ತನ್ನ ಸ್ಥಾನದಲ್ಲಿ ಸುಮ್ಮನೆ ಕೂತುಕೊಳ್ಳುತ್ತಿ ದ್ದ ಉಪಾಧ್ಯಾಯರ ಬೋಧನೆಯನ್ನು ತೀಳಿ ತಿಳಿದು ಕೊಳ್ಳುವದರಲ್ಲಿ ಮಗ್ನನಾಗಿರುತ್ತಿದ್ದನು. ವಿರಾಮ ಸಮ ಯ ದೊರೆಯಾಗ ಹೂವಿನ ತೋಟದ ಯಾವದಾದರೂ ಗಿಡದ ಬುಡದಲ್ಲಿ ಯೋಚಿಸುತ್ತಾ ಕೂತುಕೊಳ್ಳುತ್ತಿದ್ದನು. ಅವನಿ ಗೆ ಸಟ್ಟದ ಶಾಲೆಕ ನೃತ್ಯದಲ್ಲಾಗಲೀ, ಸಭಾ ಸಮಾಜದಲ್ಲಾಗ ಲೀ ಎನೂ ಸಂಬಂಧವಿರಲಿಲ್ಲ. "ಅವನು ಕಾಲೇಜ್' ಬಿಟ್ಟ ವ ಡನೇ ಮನೆಗೆ ಸೀದಾ ಹೋಗಿ ತನ್ನ ಹಿಮ್ಮನ ಕೊಠಡಿಯೊಳ ಗೆ ನುಗ್ಗಿ ಜಾಗಿಲುಗಳನ್ನು ಮುಚ್ಚಿಕೊಳ್ಳುತ್ತಿದ್ದನು ಅ ವನ ಮನಸಾಯವಿಗೆ ಸಮ ಹೆಸ್ಸಾಗಿ ನೋಡಲಿಕ್ಕೆ ಸಿಕ್ಕುತ್ತಿರಲಿ ಲ್ಲ ಸಿತ್ಯಕರ್ಮ, ಭೋಜನ ಮುಂತಾದ ಸಮಯದಲ್ಲಿ ಮಾ ತ್ರ ನೋಡಬಹುದಿತ್ತು. ಅವನಿಗೆ ಪುಮುಲೆಯೆಂಗಿತ್ತು. ವಿ ವಸೆಕೂಂದಾವರ್ಷ ಪತ್ರಿಗೆ ಭೇಟಿಯೂಗುತ್ತಿದ್ದನು. ಅನು ಗೆ ಯಾರಾದರೂ ಮಿತ್ರರಿದ್ದರೆ, ಯಾರಲ್ಲಾದರೂ ನಗುತ್ತಾ ಮಾತಾಡುತ್ತಿದ್ದನಾದರೆ, ಅಥವಾ ಯಾರ ಮೂಕನ್ನಾದರೂ ಪ್ರೇಮದಿಂದ ಕಳಕುತ್ತಿದ್ದನಾದರೆ ಅಂದು ಅವನ ಪತ್ರದು ಮೂ ತ್ರ. ಅವನು ಯಾರನ್ನೂ ತನ್ನ ಮಿತ್ರನನ್ನಾಗಿಯಾಗಲೀ ಶತ್ರುವಾಗಿಯೂಗಲೀ ಭಾವಿಸುತ್ತಿರಲಿಲ್ಲ. ಆವರೆ ಬೇರೆ ಅ ನೇಕ ಜನರು ಅವನನ್ನು ಪ್ರಿಯಮಿತ್ರನಂತೆ ಪ್ರೀತಿಸುತ್ತಿದ್ದರು. ಅವನ ಸಹವಾಸಗಳು ಅವನನ್ನು ಗುರುವಿನಂತೆ ನೋಡುತ್ತಿದ್ದ ರು. 'ಎಲ್ಲಾ ವಿಷಯಾಸಾಗಳಲ್ಲೂ ಅವನನ್ನು ಮುಖ್ಯಸ್ಥನ ನ್ನಾಗಿ ಮಾಡಿಕೊಳ್ಳುತ್ತಿದ್ದರು ಮತ್ತು ಯಾವ ಹೊಸ ಕೆಲಸ ತನ್ನಾದರೂ ಅವನ ಅನುಮತಿ ಇಲ್ಲದೆ ಮಾಡುತ್ತಿರಲಿಲ್ಲ. ಕಾಲೇಜಿನ ಪ್ರಿನ್ಸಿಪಾಲರೂ ಮತ್ತು ಪ್ರೊಫೆಸರುಗಳೂ ಅವನ ನ್ನು ವಿಶೇಷವಾಗಿ ಪ್ರೀತಿಸುತ್ತಿದ್ದರು. ಅವನ ಸನ್ನುವಾವ ಮತ್ತು ಸವಿಯಾದ ನೋಟಗಳನ್ನು ಕೇಳಲು ಎಲ್ಲರೂ ಕುತೂಹ ಲರಾಗಿರುತ್ತಿದ್ದರು. ಊರಲ್ಲೆಲ್ಲಾ ನಿಶ್ಚಯ ಅವನ ವಿಷ ಯವನ್ನು ಕೂಲಂಕಷ ಅವನ ನಡವಿಯನ್ನು ಹಿಂಬಾಲಿಸು ವಂತೆ ಎಲ್ಲರೂ ತಮ್ಮ ಹುಡುಗ, ಹುಡುಗಿಯರಿಗೆ ಹೇಳುತ್ತಿ ದ್ದರು. ಮನೆಯ ಹೊರಗಿನವರು ಹೇಗೆ ಅವನನ್ನು ಗೌರವ ದಿಂದಲೂ, ಪ್ರೇಮದಿಂದಲೂ ಕಾಣುತ್ತಿದ್ದರೋ ಹಾಗೆಯೇ ಮನೆಯಲ್ಲೂ ಅವನ ತಾಯಿ ತಾಯಿಗಳ ಮಾತಿನಂತೆ ನಡೆಕೊ ಳ್ಳುವ ಸುಪುತ್ರನಾಗಿದ್ದನು. ಅವನ ಈ ಪರಿಸಿತ ಜೀವನದಿ ದಲ್ಲಿ ಯಾರಲ್ಲೂ ಚಾಗವಾಡಿಲ್ಲ, ಮನಸು ಕೆಡಿಸಿಕೊಳ್ಳಲಿ ಲ್ಲ. ಹೆಚ್ಚೇನು ಹೇಳುವದು, ಒಳ್ಳೇ ಸಾಧುವಾಗಿದ್ದನು, ಅ ನಂತರ ಸಂಧ್ಯಾ, ಸನ್ಯಾಸಿ ಇತ್ಯಾದಿ ಪವಿತ್ರ ನಾಮಗಳಿಂದ ಅವನನ್ನು ಕರೆಯುತ್ತಿದ್ದರು.

ಅವರೆ ಮಹೇಶನು ಉಡುಪಿಸಲ್ಲಿ ಪಾಶ್ಚಾತ್ಯ ರೀತಿಯ ಸ್ವಸ್ಥಸೆನಿಸಿದ್ದನು. ಅವನ ತಂದೆ ಇನ್ನೂ ಪೆಕ್ಕರ ಪ್ರಭುವಾಗಿ ಳು ಹೇಗೆ ಪಾಶ್ಚಾತ್ಯನಾಗಲೇಕತೆಯ ಅಂಧ ಅನುಗಾಮಿಯಾ ಗಿದ್ದನೋ ಹಾಗೆಯೇ ಅವನ ಎಲ್ಲಾ ಪಂವಾದವರನ್ನೂ ನೂಡಿಟ್ಟಿದ್ದನು. ಚಿಕ್ಕ ವ್ಯಾಯದಿಂದಲೇ ಮಹೇಶನಿಗೆ ಜೇ ಟ್ಸ್, ಬೂಟ್ಸ್, ಟೈ, ಕಾಲರ್ ಮುಂತಾದ್ದನ್ನು ತೊಡಿಸಿ ಚೇತ ವಿಧದಲ್ಲೂ ಪಾಶ್ಚಾತ್ಯ ನಂಗಲೇಕತೆಯಲ್ಲಿ ಪ್ರೀತಿ ಹುಟ್ಟು ವಂತೆ ಪ್ರಯತ್ನಿಸಿದ್ದನು. ತಂದೆಯ ಈ ಬೋಧನೆಗಳನ್ನು ಪ ಸಪೂರ್ತಿಯಿಂ ಸ್ವೀಕರಿಸಿದ್ದನೋ ಅಥವಾ ನಿಸ್ಸಹಾಯಕತೆಯ ಫಲದಿಂದ ಬಿತ್ಸಲ್ಪಟ್ಟಿದ್ದನೋ ಅವನಾ ತಂದೆಯ ಮೇಲಿನ ಭಯದಿಂದಾಗಲೀ ಸ್ವೀಕರಿಸಿದ್ದನೋ ಖಂಡಿತ ಗೊತ್ತಿಲ್ಲ.

ಇತ್ತಲಿಂಗಿ ದೇಶದಲ್ಲಿ ನೈತಂತ್ರ್ಯ ಸಂಗ್ರಾಮ ಸುರು ವಾದದಿಂ ನಂತ ಅವನು ಬಹಳ ಬದಲಾಗುತ್ತಿದ್ದನು. ಕಾಂಗ್ರೆಸ್ಸಿ ನ ಪರವಾಗಿ ನಡೆಯುವ ನಿಷೇಧಿಗಳಲ್ಲಾದರೂ ಪಾಲ್ಗೊಂಡಿದಿ ಇ ಪ್ಪತ್ತೆಂಟಿಗೆ ಹಾಜರಾಗುತ್ತಿದ್ದ ಇಪ್ಪತ್ತೊಂಬತ್ತಿಲ್ಲಿ. ಕಾಂಗ್ರೆಸ್ಸಿ ನ ಎಲ್ಲಾ ಮೆರವಣಿಗೆಗಳಲ್ಲೂ ದರ್ಶಕನಾಗಿ ನೇರುತ್ತಿದ್ದನು. ಲೈಬ್ರರಿಗೆ ಹೋಗಿ ಎಲ್ಲಾ ಪತ್ರಿಕೆಗಳನ್ನೂ ಸಂಪೂರ್ಣವಾಗಿ ಓದುತ್ತಿದ್ದನು. ಅವನ ನಮಸಲಿಗೆಳ್ಳಲ್ಲಿಗೂ, ಸಂಪೂರ್ಣ

ಕಾಲೇಜು ಪ್ರಿನ್ಸಿಪಾಲರು ಸೊಂಗೆ ಕೆಲವು ವಿದ್ಯಾರ್ಥಿಗಳು ಅಲ್ಲಿನ ಆಫೀಸಿಗೆ ಸುತ್ತುತ್ತಿದ್ದರು ಇಷ್ಟರಲ್ಲೇ ಮಹೇಶನು ಅವನ ಮೈಯ್ಯಲ್ಲಿ ತಲೆಯಿಂದ ಕಾಲು ಸುಡಿಗೆ ಹರಿವಿ ಒಣ್ಣದ ಬಿದ್ದರ್ ಬಟ್ಟೆ ಇತ್ತು ಇಂಗ್ಲಿಷ್ ಮೀಸೆಯು ಕ್ರಾಪ್ ಕೂದಲು ಇರಲಿಲ್ಲ. ಹ್ಯಾಟಿನ ಸ್ಥಳದಲ್ಲಿ ಗಾಂಧಿ ಟೋಪಿ ಇತ್ತು. ಕೋಟು, ಕಾಲರ್ ಟೈ ಬದಲಿಗೆ ಕಸೆ ಶುಡುತವತ್ತ. ಕರಾಯಿ ಬದಲಿಗೆ 4 ಮೊಳದ ಪಂಚೆ ಇತ್ತು, ಬರೀ ಕಾಲು ಬಿದ್ದರ್ ಮೊತ್ತವಲ್ಲದೆ ಸನ್ಯಾಸಿಯರ ಉಡುಪಿನ ಒಣ್ಣವಾಗಿತ್ತು. ಹೊರಗೆ ವಿದ್ಯಾರ್ಥಿಗಳ ಗುಂಪು ಕೂಡಿತು

ಪ್ರಿನ್ಸಿಪಾಲರು ಕೇಳುತ್ತಾರೆ—'ಮಹೇಶ, ಇದೇನು ಅವತಾರ?" ಮಹೇಶನು ಗಂಭೀರ ಧ್ವನಿಯಿಂದ ಉತ್ತರ ಕೊಟ್ಟನು—"ಸ್ವಾಮೀ, ನನ್ನ ಪ್ರಿಯ ಭಾರತ ಭೂಮಿಗಾಗಿ ಸನ್ಯಾಸವನ್ನು ಹೆಹಿಸಿದ್ದೇನೆ"

ಪ್ರಿನ್ಸಿಪಾಲ್—ಇದಕ್ಕೆ ಇನ್ಸ್‌ಪೆಕ್ಟರ್ ಸಾಹೇಬರು (ಮಹೇಶನ ತಂದೆ) ಏನೂ ಅಡ್ಡಿ ಮಾಡಲಿಲ್ಲವೇ ಮಹೇಶ—ನಮ್ಮ ಪ್ರಿಯ ಜನನೀ ಜನ್ಮ ಭೂಮಿಯ ಕೂಗು ಕೇಳಿದ ನಂತರ ಯಾರ ಅಡ್ಡಿಯೂ ತನ್ನನ್ನು ತಡೆಯಬಾರದು

ಎಲ್ಲರೂ ಮೌನರಾಗಿ ಆಶ್ಚರ್ಯಭರಿತರಾದರು. ಸಹವಾಸಿಗಳಲ್ಲಿ ಕೆಲವರು, "ಮಹೇಶ ಏನು ಕಾಲೇಜ್ ಬಿಟ್ಟು ಬಿಡುತ್ತೀಯೋ?" ಎಂತಲೂ ಇನ್ನು ಕೆಲವರು, 'ಏನು ನೀನು ಕಾಂಗ್ರೆಸ್ ಸತ್ಯಾಗ್ರಹಿಗಳ ಪಟ್ಟಿಗೆ ಹೆಸರು ಕೊಡುತ್ತೀಯೋ' ಎಂತಲೂ ವಿನೋದೋ ಕೇಳಿದರು ಮಹೇಶನು ಉತ್ತರ ಕೊಡುವ ಬದಲು ಕಣ್ಣಿನಿಂದ ನೀರು ಸುರಿದನು ಒಂದಾವರ್ತಿ ಕಣ್ಣಿನ ನೀರು ವರಸಿ ಎಲ್ಲರಿಗೂ ಹೀಗೆಂತ ಉತ್ತರ ಕೊಟ್ಟನು "ನನ್ನ ಪ್ರಿಯ ಬಾಂಧವ ಮೂತಿಗಾಗಿ ಏನಾದರೂ ಮಾಡಬೇಕಾಗಿ ಬಂದಲ್ಲಿ ಮಾಡುತ್ತೇನೆ. ನಿಮ್ಮಲ್ಲಿ ಒಂದು ಮಾತು ಹೇಳಲಿಕ್ಕಾಗಿ ಬಂದಿದ್ದೇನೆ ನಿಮ್ಮ ಜನ್ಮ ಭೂಮಿಯ ಮೊರೆಯ ಕಡೆಗೆ ಕಿವಿಗೊಡಿ. ಅನುಕೂಲ ತಪ್ಪಿದರೆ ಹಿಂದಿನಿಂದ ಪತ್ರಾತ್ಸಾಪ ಪಡಬೇಕಾದೀತು" ಎಲ್ಲರೂ ಮೌನಗ್ರಸ್ಥರಾದರು.

ಈ ದಿನ ಮಹೇಶನು ಮನಸನ್ನು ಬದಲಾಯಿಸದೆ ಇದ್ದ ವ್ಯಕ್ತಿ ಕಾಲೇಜಿನಲ್ಲಿ ಇರಲಿಲ್ಲ. ಗಂಟೆಯೂಗುವ ಮುಂಚೆಯೇ ಮಹೇಶನು ಕಾಲೇಜಿನಿಂದ ಹೊರಟು ಹೋಗಿದ್ದದನ್ನು ನೋಡಿ ಎಲ್ಲರಿಗೂ ಇನ್ನೂ ಆಶ್ಚರ್ಯವಾಯಿತು

. . —

ಇನ್ಸ್‌ಪೆಕ್ಟರ್ ಪ್ರಭು ದಯಾಳು ಕಠಿಣ ಸ್ವರದಿಂದ ಹೇಳುತ್ತಾನೆ—"ಮಹೇಶ, ನಿನ್ನ ಕ್ಷೇಮವನ್ನು ಯೋಚಿಸಿ,ನರಾದರೆ ಈಗಲಾದರೂ ನಿನ್ನ ಬಿದ್ದರನ್ನು ಬಿಚ್ಚಿ ದಿನಾಡಿ, ಕಾಲೇಜಿಗೆ ಹೋಗು, ನಿನಗೆ ಕಾಲೇಜಿಗೆ ಹೋಗಲು ಮನಸಿಲ್ಲದಿದ್ದರೆ, ಬೇಕಾದ ಸಂಪಕ್ಕು ಇದೆ ಮನೆಯಲ್ಲೇ ಕೂತು ತಿಂದು ಕೊಂಡಿರಬಹುದು ನೀನು ನನ್ನ ಅಜ್ಞೆಯನ್ನು ವಿಾರಿದರೆ, ನೀನು ನನ್ನನ್ನು ನಿನ್ನ ತಂದೆಯಂತೆ ಭಾವಿಸದಿದ್ದರೆ ನಿನ್ನನ್ನೂ ನನ್ನ ಮಗನೆಂತ ಭಾವಿಸುವದಿಲ್ಲ ನೆನ್ನ ಮನಸಿಗೆ ಬಂದಂತೆ ಮಾಡಿಯೇನು ನನ್ನ ಸಮಸ್ತ ಆಸ್ಮಿಯನ್ನೆಲ್ಲಾ ಮಗಳಿಗೆ ಒಡ್ಡಿ ಕೊಟ್ಟುಬಿಡುತ್ತೇನೆ ಆಗ ನೀನು ಅನ್ನಕ್ಕಾಗಿ ಭಿಕ್ಷಾರ್ತಿ ಮಾಡಬೇಕಾದೀತು." ಮಹೇಶನ ಕ್ಷಣ್ಣಿನಿಂದ ಕಣ್ಣೀರು ಬಿಕ್ಕು. ಅವನು ಬಹಳ ಸಮೆತ್ತಿಯಿಂದ ಹೀಗೆಂತ ಜವಾಬು ಕೊಟ್ಟನು "ತಮಗೆ ಸಮಸ್ತ ಅಧಿಕಾರವಿದೆ. ಇಷ್ಟ ಬಂದಂತೆ ಮಾಡಬಹುದು. ಇಷ್ಟವಿರುವವರಿಗೆ ಬರೆದು ಕೊಡಬಹುದು ನಿಮ್ಮ ಸಂಪತ್ತಿಗೆ ನನ್ನನ್ನು ಅಧಿಕಾರಿಯಾಗಿ ಮಾಡಿ ಎಂಥ ನಾನು ನಿಮ್ಮನ್ನು ಕೇಳುವದೂ ಇಲ್ಲ. ಅದರ ಮೇಲೆ ನನಗೆ ಸ್ವಲ್ಪವೂ ಆಸೆ ಇಲ್ಲ. ನನ್ನ ಪ್ರಿಯ ಭಾರತ ಮಾತೆಗಾಗಿ ನೆಗುವದಕ್ಕಿಂತ ಆಳುವದೇ ಶ್ರೇಯಸ್ಕರವೆಂತ ಭಾವಿಸುತ್ತೇನೆ ಜನನೀ ಜನ್ಮ ಭೂಮಿಯನ್ನು ಸುಖಿಯನ್ನಾಗಿ ಮಾಡುವ ಬಗ್ಯೆ ಅನ್ನಕ್ಕಾಗಿ ಭಿಕ್ಷಾರ್ತಿ ಮಾಡಬೇಕಾಗಿ ಬಂದರೆ ಅದಕ್ಕಿಂತ ಸೌಭಾಗ್ಯ ಬೇರೆ ಏನಿದೆ?

ನನಗಾದರೂ ನಿಮ್ಮ ಅತುಲ ಸಂಪತ್ತಿಗಿಂತಲೂ ವಿಶಾಲ ಸಾಮ್ರಾಜ್ಯಕ್ಕಿಂತಲೂ ಪವಿತ್ರ ಭಾರತ ಭೂಮಿಗಾಗಿ ಹುಕು ಬಟ್ಟಿ ಹಾಕಿಕೊಂಡು ಶೈತರ ಮನೆ ಬಾಗಿಲಿಗೆ ಸುತ್ತಿ ಭಿಕ್ಕದಿಂದ ಜೀವಿಸುವದೇ ಮೇಲೆಂತ ತೋರುತ್ತದೆ. ನೇತೋದ್ಧಾರಕ್ಕಾಗಿ ಪಡುವ ದುಃಖದಲ್ಲಿ ಸುಖಕ್ಕಿಂತಲೂ ಹೆಚ್ಚಾದ ಆನಂದವಿದೆ ಇನ್ಸ್‌ಪೆಕ್ಟರ್ ಸಾಹೇಬರು ಹುಲ್ಲು ಕಡಿದರು ಮಹೇಶನು ಅಲ್ಲಿಂದ ಹೊರಟು ಹೋದನು

. .

ಮಹೇಶನ ತಾಯಿಯು ಆಕಸ್ಮಿಕವಾಗಿ ಹೇಳಿದಳು-ಮಗನೇ ನಿನ್ನ ತಂದೆಗೆ ಯಾಕೆ ಇಷ್ಟು ದುಃಖ ಕೊಡುತ್ತೀಯೋ? ಅವರ ಮಾತು ಯಾಕೆ ಕೇಳುವದಿಲ್ಲ? ಅವರು ಎಷ್ಟೊಂದು ದುಃಖಪಡುತ್ತಿದ್ದಾರೆ! ಅವರು ಸರ್ಕಾರಿ ನೌಕರರಾಗಿದ್ದಾರೆ ನೀನು ಈ ಅವಮಾನದಲ್ಲಿ ಸೇರಿದರೆ ಅವರ ಕುಲಸ್ಥಕ್ಕೆ ಹಾನಿ ಬರುತ್ತದೆ ಸ್ವಲ್ಪ ಆಲೋಚಿಸಿ, ಯೂವ ನೌಕರಿಯಂದ ನಮಗೆ ಇರುವ ಈಗಿನ ಅಲ್ಪ ಸ್ವಲ್ಪ ಅನುಕೂಲಗಳಿವೆಯೋ ಅವೆಲ್ಲಾ ಹೋದರೆ ನಾವು ಬದುಕುವದು ಹೇಗೆ?" ಮಹೇಶನ ಕಣ್ಣಿನಲ್ಲಿ ನೀರು ತುಂಬಿತು ಅವನು ದೀನ ಸ್ವರದಿಂದ ಜವಾಬು ಕೊಟ್ಟನು. "ಅಮ್ಮಾ, ನನ್ನ ಭಾರತಾಂಬೆಯ ಕೊಗಿನ ಮುಂದೆ ಯಾರ ಮಾತು ಕಿವಿಗೆ ಕೇಳಿಸುವುದಿಲ್ಲ. ನನ್ನ ಜನನೀ ಜನ್ಮ ಭೂಮಿಯ ಒಂದು ಮುದ ಸ್ವರದ ಮುಂದೆ ಎಲ್ಲ ಕೋಲಾಹಲವೂ ಅಡಗಿ ಹೋದಂತೆಯೇ ನನಗೆ ತೋರುತ್ತದೆ. ಆದರಲ್ಲಿ ನನ್ನ ಯುವಕ ಹೃದಯದಲ್ಲಿ ಇನ್ನೂ ರಕ್ತವಿರುವ ಸಮಯವಾಗಿದೆ. ನಿನ್ನ ಮಗನೆಂದು ಯಾರನ್ನು ಕರೆಯುತ್ತೀಯೋ ಅವನ ಮುಂದೆ ಸಾವಿರಾರು ನಗಾರಿಗಳನ್ನು ಬಾರಿಸಿದರೂ ಮೊಳ್ಳ ಬೂಮಿಯ ಕೂಗಿನ ಮುಂದೆ ಏನೂ ಕೇಳಿಸುವದಿಲ್ಲ. ಅನ್ಯಾ ನೀನು ನನ್ನನ್ನು ಒಪ್ಪಿಸಲಿಕ್ಕೆ ಬರುವಂತೆ ಯೇ ತಂದೆಯವರನ್ನೂ ಸ್ವಲ್ಪವಾದರೂ ಒಪ್ಪಿಸಲಿಕ್ಕೆ ಯಾಕೆ ಪ್ರಯತ್ನಿಸುವುದಿಲ್ಲ? ನಿನ್ನ ಸ್ವಲ್ಪ ಸ್ವಾರ್ಥತೆಗಾಗಿ ಸರಸ್ವ ಹಿಂದೂಸ್ಥಾನಕ್ಕೆ ಅಮಂಗಲ ಮಾಡಬೇಡಿ ಆದರು ಏನೂ ನೋಡುವದಿದ್ದರೂ ನನ್ನ ಕರ್ತವ್ಯದ ದಾರಿಗೆ ಅಡ್ಡಿ ಬರದಿರಲಿ ' ಮಹೇಶನ ತಾಯಿ ಮೌನಳಾಗಿ ಹೋದಳು ಅವಳ ಮನಸು ಕರಗಿತು ಹೃದಯದಲ್ಲಿ ಕಳವಳ ಹುಟ್ಟಿತು ಕಿವಿಯಲ್ಲಿ ಯಾರದೋ ಕೂಗು ಮಂದ ಮುಂದವಾಗಿ ಕೇಳಲು ಪ್ರಾರಂಭಿಸಿತು

ತನ್ನ ಪತ್ನಿಯನ್ನು ನೋಡದೆ ಇದ್ದ ದಿನವಿಲ್ಲದಿದ್ದ ಮಹೇಶನನ್ನು ಈಗ ಎಷ್ಟೋ ದಿನಗಳ ನಂತರ ಕಷ್ಟದಿಂದ ನೋಡಲು ಪತ್ನಿಗೆ ಒಂದಾವರ್ತಿ ಅನುಕೂಲ ದೊರಕಿತು ಮಹೇಶನ ಕೊರಡಿಯನ್ನು ಪ್ರವೇಶಿಸಿದ ಒಡನೆಯೇ ಅವನ ಒಟ್ಟಿಯನ್ನು ಹಿಡಿದು ಬಹಳ ಪ್ರೇಮದಿಂದ ಹೇಳಿದಳು —"ಮೂವನವರಿಗೆ ಯಾಕೆ ಇಷ್ಟು ವ್ಯಸನ ಕೊಡುತ್ತೀರಿ? ಅವರ ಮೂತಿನ ಮುಂದೆ ನಿಮ್ಮ ಹರವನ್ನು ಬಿಟ್ಟರೆ ಏನು ಕೆಟ್ಟದ್ದಾದೀತು? ಪ್ರಪಂಚದಲ್ಲಿ ತಂದೆ ತಾಯಿಯರಿಗಿಂತ ದೊಡ್ಡದೇನು ಇಲ್ಲ ಯೂವನಗಳೂ ಅವರ ಅಜ್ಞೆಗೆ ಬಳಿಪಟ್ಟು ಇದ್ದರೆ ಸಂತಾನಕ್ಕೆ ಮಂಗಲವಾದೀತು. ನೋಡಿ, ಮೂವನವರು ತನ್ನ ಸಕಲ ಸಂಪತ್ತನ್ನು ಅತ್ಸಿಗೆಯವರಿಗೆ ಬಿಡಿಯಲಿಕ್ಕಾಗಿ ಸ್ವಾಂಪು ಕಾಗದ ತಂದು ಬಿಟ್ಟಿದ್ದಾರೆ ನಿಜ್ಞ ಮೂತಿಗಾಗಿ ತಮ್ಮ ಸರ್ವಸ್ವವನ್ನು ಯಾಕೆ ತಳಕೊಳ್ಳುತ್ತೀರಿ?' ಮಹೇಶನು ಪ್ರೇಮದಿಂದ ಪತ್ನಿಯ ಕೈ ಹಿಡಿದುಕೊಂಡು ಹೇಳುತ್ತಾನೆ—"ನೀನು ಸಹ ನನ್ನನ್ನು ಅಧೋಮುಖವಾಗಿ ಎಳೆಯುತ್ತೀಯೋ? ತಂದೆಯವರು ನನಗೆ ಜನ್ಮ ಕೊಟ್ಟವರೆಂತಲೂ ತಾಯಿಯವರು ನನ್ನನ್ನು ಹೆತ್ತು ತನ್ನ ಹಾಲನ್ನು ಕೊಟ್ಟು ನನ್ನನ್ನು ಪಾಲಿಸಿ ಪೋ

(2ನೇ ಪುಟದಲ್ಲಿ ಮುಂದುವರಿಯುವುದ )


## ಪ್ರಸಿದ್ಧ ಪತ್ರಿಕೆ.

ಈಗ ಅನೇಕ ವರ್ಷಗಳಿಂದ ವೀರರಾಜೇಂದ್ರಪೇಟೆಯಲ್ಲು ಕೋಜ್‌ಬಾವ ಮನ್ನಾಮ್ಮೆಯಿನ್ ಸಾಹೇಬ್ ಎಂಬ ಹೆಸರಿನಲ್ಲು ನಡೆಯುತ್ತಿರುವ ಜವುಳ ಅಂಗಡಿಯು ಇನ್ನು ಮುಂದೆ ಕೋಜ್‌ಬಾವು ಮನ್ನಾಮ್ಮೆಯಿನ್ ಸಾಹೇಬ್ ಅಂಡ್ ಬ್ರದರ್ ಎಂಬ ಹೆಸರಿನಲ್ಲು ನಡೆಯುವುದಾಗಿಯೂ, ಕೋಜ್‌ಬಾವು ಮನ್ನಾಮ್ಮೆಯಿನ್ ಸಾಹೇಬರ ಸೆದಾ ಅಂಗಡಿಯು ಮತ್ತು ಆದಕ್ಕೆ ಸಂಬಂಧ ಪಟ್ಟ ಲೇಣಾದೇಣಾದಾರರು ಇದರಂತೆಯೇ ತಮ್ಮ ತಮ್ಮ ಲಿಪ್ಪುಗಳನ್ನು ಒದಲಾಯಿಸಬೇಕಾಗಿಯೂ, ಲೇಣಾದೇಣಗಳನ್ನು ಹೊಸ ಹೆಸರಿನಿಂದ ನಡೆಯುವ ಅಂಗಡಿಯಲ್ಲು ನಡಿಸತಕ್ಕ ದ್ದಾಗಿಯೂ ಇದರಿಂದ ಸಮಸ್ತರಿಗೂ ತಿಳಿಸಲಾಗಿದೆ

ಕೋಜ್‌ಬಾವು ಮನ್ನಾಮ್ಮೆಯಿನ್
3—3 ಸಾಹೇಬ್.

## IMMEDIATELY WANTED.

Agents and Canvasers throughout Coorg province to work out Bengal Insurance and Real Property Co, Ltd, on a salery of Rs 50/- per mensem and also some bonus and commission on guaranteed business or very liberal commission and bouns.

For Agency term apply to—

M S Ayappa
Chief Agent For The Bengal
Insurance & Real Property Co, Ltd,
2—1 School Road, Mercara, Coorg


## ಕನ್ನಡಿಗರಲ್ಲಿ ವಿನ್ನಹ.

ಕನ್ನಡಿಗರ ಕೂಟದ ಜ್ಯೋತಿಷ್ಯ ಶಾಖೆಯು ಶಿಲನೆಯ ಹುಟ್ಟು ಹುಬ್ಬವು ಬರುವದರೊಳಗೆ ಜ್ಯೋತಿಷ್ಯಕ್ಕೆ ಒದಗಿದ ಕುಮ್ಮುಗಳಲ್ಲಿ ಒಂದಾದ ಸಾಯನ ನಿರ್ಣಯವನ್ನು ಸಂಪೂರ್ಣವಾಗಿ ಆರಿತುಕೊಂಡು ನಮ್ಮ ಕನ್ನಡಿಗರಲ್ಲಿ ಫಲ ಜ್ಯೋತಿಷ್ಯಕ್ಕೆ ನಿರಯನ ಪದ್ಧತಿಯೇ ಸತ್ಯವಿ ಶ್ರೇಯವೆಂದೂ ಸಾರಿ ಹೇಳಿತು

ಈ ಎರಡನೆಯ ವರ್ಷದಲ್ಲಿ ಇನ್ನೊಂದು ಕಾರ್ಯ ಮಾಡಲೇಬೇಕಾಗಿದೆ ಈಗ ಭಾರತೀಯ ಜ್ಯೋತಿಷ್ಯ ಪೈವತ್ಯ, ಪೈತ್ಯ ಎಂಬ ಎರಡು ಪಂಗಡಗಳಾಗಿ ದಿನ ದಿನಕ್ಕೆ ವರ್ಧಿಸಲ್ಪಡುತ್ತಿರುವದು. ಇವರಲ್ಲಿ ಏಕ್ಯ ಉಂಟಾಗುವಂತೆ ಮಾಡುವದೇ ಈ ಕಾರ್ಯಯುವ ಈ ಆಗಸ್ಟ್ ತಿಂಗಳ ೨೬ನೇ ತಾರೀಕಿನಿಂದ ಕ್ರಿಸಗಿನೆಯ ತಾರೀಕಿನ ವರೆಗೆ ಹುಟ್ಟಿದ ತಿಶುಗಳ ಜಾತಕ ದೊರೆತರೆ ಈ ಕಾರ್ಯವು ಕೈಗೂಡಬಹುದು ಆದ್ದರಿಂ ಅವಧಿಯಲ್ಲಿ ತವು-ಗಾಗಲೀ, ತಮ್ಮ ಗುರುತಿನವರಿಗಾಗಲೀ ಕ್ಕಳು ಜನಿಸಿದರೆ ಆ ಸಂಗತಿಯನ್ನು ತಿಶು ಹುಟ್ಟಿದ ಯೆಡನೆ ನಮಗೆ ದಯವಿಟ್ಟು ತಿಳಿಸಬೇಕೆಂದು ವಿನಯ ವ್ಯಾರ್ಥಿಸುವೆವು

ಶ್ರೀಮಜ್ಜಾಯಕ್ಕ ವಿಶ್ವರು ವರ್ಷ ಆಯುಸ್ಸು ಕ್ಷಾವಬ ಕೃಷ್ಣ ೧೩

ಕಾರ್ಯದರ್ಶಿ,
ಕನ್ನಡಿಗರ ಕೂಟದ ಜ್ಯೋತಿ
ಶ
ಧಾರವ


## NOTICE.

Wanted before 31st August, 1930 applicat for the post of Ayurvedic Doctor at Bh mandla under the Coorg District Board Rs 50/—per mensem Only holders of diplo of a recognised college need apply

G W Priestley
3—2 President, Dt Board
Mercara, Coorg

## ಬೇಕಾಗಿದೆ.

ತಿಂಗಳಿಗೆ ರೂಪಾಯಿ ಜಿಂರಿಂದ ೭೫ರ ನ

ಸಂಬಳದ ಮೇಲೆ ಇಬ್ಬರು

ಏಜಂಟರು ಮೂತ್ಯ

(ಇಡೀ ಕೊಡಗಿಗೆ)

ಇವರೊಡನೆ ಪತ್ರವ್ಯವಹಾರ ಬೆಳಸಿರಿ—

**The Karnataka Trading C**

Post Box 3563.
4—1 Girgaon Bombay

## For Sale.

A Coffee Estate of 90 acres block, on which 67 acres are coffee, there is pepper oranges also and a good Bunglow too

Apply to —

"M"
C/o The Manager,
4—3 "Kodagu" Mercara


## ಔದ್ಯೋಗಿಕ ಶಿಕ್ಷಣ.

### ದಿ ಕರ್ನಾಟಕ ಟೀಲರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂಡರ್ ಆವೆ ಕತ್ತರಿಸುವ ಮತ್ತು ಟೀಲರಿಂಗ ಅಂಡೆ ಹೊಲಿಯುವ ಸರಸ್ವತ್ರಶಿಕ್ಷಣ ಕೊಡುತ್ತೇವೆ ಫಕ್ಕ ಕಟಿಂಗ ಮುದತ ಎರಡು ತಿಂಗಳ ಮತ್ತು ಟೀಲರಿಂಗ ಮುದತ ಮೂರು ತಿಂಗಳ ಈ ಪ್ರಕಾರ ಎಮ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ಕ ಕಟಿಂಗ ಫೀ (ಎವತ್ತೈದು) ರೂಪಾಯಿ ಮತ್ತು ಟೀಲರಿಂಗ ಫೀ ೧೦೫ (ಹದಿನೈದು) ರೂಪಾಯಿ. ಶಿಕ್ಷಣವನ್ನು ಕನ್ನಡ ವರಾಠಿ ಮತ್ತು ಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಜನ್ಸಿನ ಪಿಂಗಳಿಗಾ ಕನಿಷ್ಠ ಅರವತ್ತು ರೂಪಾಯಿ ಗಳಿಸಬಲ್ಲನು ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸವ ಕ್ಷರೂ ಒಂದು ಆಣೆ ಪೋಸ್ಟ್ ಟಿಕೀಟು ಕಳುಹಿಸಬೇಕು.

ಆರ್. ಬಿ. ಮುಧೋಳಕರ,
ಫರ್ಸ್ಟಕ್ಲಾಸ್ ಡಿಪ್ಲೋಮಿಸ್ಟ್ ಪ್ರಿನ್ಸಿಪಾಲ,
52—3 ಧಾರವಾ

# ಕೊಡಗಿನಲ್ಲಿ ಸತ್ಯಾಗ್ರಹ.

## ವೀರಾಜಪೇಟೆಯಲ್ಲಿ ಪಿಕೆಟಿಂಗ್ ಪ್ರಾರಂಭ.

## ಸತ್ಯಾಗ್ರಹಿಗಳ ಮೆರವಣಿಗೆ ಮತ್ತು ಸಾರ್ವಜನಿಕ ಮೀಟಿಂಗು.

**ನಿಷೇಧಾಜ್ಞೆಗೆ ಜನರಲ್ಲಿ ವಿಶೇಷ ಉತ್ಸಾಹ ಮತ್ತು ಪಿಕೆಟಿಂಗಿಗೆ ಸುಂಬಾ ಸಹಾನುಭೂತಿ.**

ಕೊಡಗಿನ ಸತ್ಯಾಗ್ರಹ ಮಂಡಳಿಯವರು ಈ ಮೊದಲೇ ಹಸ್ತ ಪತ್ರಿಕಗಳನ್ನು ಹಂಚಿದ್ದಂತೆ 13 ಸ್ವಯಂ ಸೇವಕರು ಈ ತಾ. 27ನೇ ಬುಧವಾರ ವೀರಾಜಪೇಟೆಯಲ್ಲಿ ಗಡಂಗದ ಪಿಕೆಟಿಂಗ್ ಪತ್ರಾಂಥಿಸಿದರು. ಮಧ್ಯಾಹ್ನ 1 ಗಂಟೆಗೆ ವರ್ಕೌಟ್ ಒಳಿಯಂದ ರಾಷ್ಟ್ರೀಯ ಧ್ವಜದೊಡನೆ ಮೆರವಣಿಗೆ ಹೊರಟು, ರಾಷ್ಟ್ರೀಯ ಗೀತೆಗಳನ್ನು ಹಾಡುತ್ತಾ, ಜೈಲಿನಲ್ಲಿರುವ ಹಿಂದೀ ಮುಂದಾಳುಗಳ ಹೆಸರಿನಲ್ಲಿ ಜಯಘೋಷ ಮಾಡುತ್ತಾ ಬೀದಿಗಳಲ್ಲೆಲ್ಲಾ ಸುತ್ತಿದರು. ಮೆರವಣಿಗೆಯು ಗಡಂಗನನ್ನೂ, ನಾಡು ಕಚ್ಚೇರಿಯನ್ನೂ ದಾಟಿದಾಗ್ಯೆ ಅಲ್ಲಿಂ ಎರಡೆರಡು ಸ್ವಯಂ ಸೇವಕರನ್ನು ಪಿಕೆಟ್ ಮಾಡಲು ನಿಲ್ಲಿಸಿ ರೀಡಿಂಗ್ ರೂಮ್ ಒಳ ತಲಪಿದಾಗ್ಯೆ ಅಲ್ಲಿಯ ಚಿಕ್ಕ ಮೈದಾನದಲ್ಲಿ ಮೆ. ಅಬ್ದುಲ್ ಗಫೂರರವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ಮಾಡಲಾಯಿತು. ಸತ್ಯಾಗ್ರಹಿಗಳು ರಾಷ್ಟ್ರೀಯ ಧ್ವಜ ಗೀತೆಯನ್ನು ಹಾಡಿದ ಮೇಲೆ ಮೆ ಪಿ ಎ ಚಿಕ್ಕಪ್ಪನವರು—'ಪಿಕೆಟಿಂಗ್'ನ್ನೂ, ಹಿಂದೂ ದೇಶದ ಸ್ವರಾಜ್ಯ ಹೋರಾಟವನ್ನೂ ಕುರಿತು ಭಾಷಣ ಮಾಡಿದರು ಮೀಟಿಂಗಿನ ಅಂತ್ಯದಲ್ಲಿ ಸತ್ಯಾಗ್ರಹ ಫಂಡಿಗೆ ಸ್ವಲ್ಪ ಚಂದಾ ಹಣವೂ ಜಮೆಯಾಯಿತು. ತಾ. 28ನ್ನಿಯೂ ನಾಡು ಕಚ್ಚೇರಿ ಪೂರ್ತ ಗಡಂಗವು ಪಿಕೆಟ್ ಮಾಡಲ್ಪಟ್ಟವು. ಸಾರಾಯಿ ವಾಸ್ ತೆಗೆಯಲು ಬರುವವರ ಸಂಖ್ಯೆಯು ಬಹಳ ಕಡಿಮೆ ಯಾಗಿದೆ ಬಂದವರಲ್ಲಿಯೂ ಕೂಡ ಕೆಲವರು ವಾಸು ತೆಗೆದವರ ವಾಸನು ಹೋಗಿಯುವರು. ವಾಸು ತೆಗೆದವರಲ್ಲಿ ಕೆಲವರು ಅದನ್ನು ಹರದು ಬಿಸಾಡಿದ ವರ್ತಮಾನವೂ ಇದೆ ಪಿಟಿಷನ್ ರೈಟರುಗಳು ವಾಸಿಗೆ ಅಪ್ಲಿಕೇಶನ್ ಒರೆಯಲು ತಿರಸ್ಕರಿಸುತ್ತಾ, ನಿಷೇಧಾಜ್ಞೆಯ ಪ್ರಯತ್ನಕ್ಕೆ ಸಹಾಯ ಮಾಡುತ್ತಿರುವರು ಇಡೀ ವಿಷಯ ವರಣವೇ 'ಪಿಕೆಟಿಂಗ್' ಕಾರ್ಯಕ್ಕೆ ಸಹಾನುಭೂತಿಯಳ್ಳದ್ದಾಗಿದೆ. ಗಡಂಗದಲ್ಲಿ ಜನರು ಸಾರಾಯಿ ತೆಗೆದುಕೊಂಡು ಹೋದದ್ದು ಬಹಳ ಕಡಿಮೆಯಾಗಿದೆ ಬುಧವಾರ ಸಾರಾಯಿ ಅಂಗಡಿಗಳನ್ನು 'ಪಿಕೆಟ್' ಮಾಡದೆ ಹೋದರೂ ಅವುಗಳಲ್ಲಿ ಬಹುಮ ಅರ್ಧಕ್ಕೆ ಇಳಿದಿತ್ತಂತೆ ಪಿಕೆಟಿಂಗ್ ಕಾಂತ ರೀತಿಯಿಂದ ನಡೆಯಿತಾ. ಇದೆ. ಪೊಲೀಸಿನವರ ಗಸ್ತಾಟಮೇನೂ ಇರಲಿಲ್ಲ.

## ಒಳದೇಶ.

ಕೊಡಗು ಎಮಿನೆಂಟ್ಸ್‌ರ ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೀಟಿಂಗು ಸೆಪ್ಟೆಂಬರ್ ತಾ. 7 ರಲ್ಲು ವೀರಾಜಪೇಟೆ ಪಬ್ಲಿಕ್ ಸ್ಕೂಲ್ ಹೆಡ್‌ಮಾಸ್ಟರ್ ಮೆಹಡಿಯಲ್ಲಿ ನಡೆಯುತ್ತೆ.

ಮುಂದಿನ ವರ್ಷದ ಕಳಿಯುನ್ನು ಮುಂಡಿಗೆ 180 ರೂ. ದರದ ಕ್ರಯದಲ್ಲಿ ಕೊಂಡುಕೊಳ್ಳುವ್ಕಾಗಿ ನರ್ತಮಾನವಿದೆ ಯೂಲಕ್ಕಿಗೆ ಮಣಕ್ಕೆ 30 ರೂ. ದರದ ಬೆಲೆಯೂ ಇದೆಯೆಂತ ತಿಳಿಯ ಒಂದಿದೆ.

ಈ ವಾರ ಕೊಡಗಿನಲ್ಲಿ ಎಲ್ಲಿಯೂ ಮಳೆಯೇ ಇಲ್ಲ. ಈ ವರ್ಷ ಮಳೆಯು ಬಹಳ ಕಡಿಮೆಯಾದ್ದರಿಂದ ಆನೇಕ ಕಡೆಗಳಲ್ಲಿ ಹೆಚ್ಚಾಗಿ ಕೆಗ್ಗಟ್ಟುನಾಡು ತಾಲೋಕಿನಲ್ಲಿ ಗದ್ದೆಗಳು ನಾಟಿಯಾಗದೆ ಬಾಕಿ ಇದೆ. ಅಲ್ಲದೆ ನಾಟಿಯಾದ ಗದ್ದೆಗಳು ಒಣಗುತ್ತಿವೆ.

ಮಡಿಕೇರಿ ವೇದಾಂತ ಸಂಘದವರು ಕಳೆದ ತಾ 24ರ ದ್ದು ಶ್ರೀ ಕೃಷ್ಣ ಜಯಂತಿ ಉತ್ಸವವನ್ನು ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಮೆ ಬಿಡ್ಡಮಾನೆ ಅತ್ಯಾತಾನ. ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಡೆಸಿದರು. ಇದರ ವಿವರವು ಇನ್ನೊಂದು ಕಡೆಯಲ್ಲಿ ಪ್ರಕಟಿಸಲಾಗಿದೆ.

ಕೊಡಗು ಇಂಡಿಯನ್ ಕಾಫಿ ಪ್ಲಾಂಟರುಗಳ ಸೊಸೈಟಿಯ ಒಂದು ವಿಶೇಷ ಜನರಲ್ ಮೀಟಿಂಗು ಕಳೆದ ತಾ. 14 ರಲ್ಲು ನಡೆದು ಕೋಟಿಗಳ ಕೆಲಸಕ್ಕೂಸ್ಕರ ಹಣ ಇಲ್ಲದವರಿಗೆ ಸಾಲ ಕೊಡಲು 50 ಸಾವಿರ ರೂಪಾಯಿ ಸರ್ಕಾರದಿಂದ ಸಾಲ ಕೇಳಬೇಕೆಂತ ತೀರ್ಮಾನವಾಗಿದೆಯೆಂಗಿ ತಿಳಿಯುತ್ತೇವೆ.

ಕುಂಬಾರ ಗಡಿಗೆ ಗ್ರಾಮದ ಅಕ್ಕಾಲಿ ಅಣ್ಣಾಚಾರಿಯು ತನ್ನ ಅಣ್ಣ ತಮ್ಮಾಚಾರಿಯನ್ನು ಆಹಾರದಲ್ಲಿ ವಿಷ ಹಾಕಿ ಕೊಂದನೆಂಬ ತಕ್ಕೀಲಿನ ಕುರಿತು 22, 23 ನೇ ತಾರೀಕುಗಳಲ್ಲಿ ಸೆಶನ್ ಕೋರ್ಟಿನಲ್ಲಿ ವಿಚಾರ ನಡೆದು ಅಪರಾಧಿಗೆ ಜೀವ ಮಾನ ಪರಿಯಂತ ದ್ವೀಪಾಂತರದ ಶಿಕ್ಷೆ ವಿಧಿಸಲಾಗಿದೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ವೆಂಕಟಂಗಿಯವರ ವಿಟ್ಠಲಭಾಯಿ ಪಟೇಲರು, ಡಾಕ್ಟರ್ ಅನ್ಸಾರಿಯವರು, ಪಂಡಿತ ಮಾಳವೀಯರು ಮುಂತಾದ ಮುಂದಾಳುಗಳು ದಸ್ತಗಿರಿ ಮಾಡಲ್ಪಟ್ಟದ್ದಕ್ಕಾಗಿ ವೀರಾಜಪೇಟೆಯಲ್ಲಿ ಈ ದಿನ ಹರತಾಳವು ಆಚರಿಸಲ್ಪಡುವದೆಂದೂ, ಸ್ವಯಂ ಸೇವಕರಿಂದ ಮೆರವಣಿಗೆಯು ನಡಿಸಲ್ಪಡುವದೆಂದೂ ತಿಳಿಯುತ್ತೇವೆ.

ಮೆ. ಪುಟ್ಟಿಚಂಡ ಬಿ. ಕಾರ್ಯಪ್ಪನವರು ಆಫ್ರಿಕಾಕ್ಕೆ ವಿನೋ ಉದ್ಯೋಗಕ್ಕಾಗಿ ಹೋಗಿದ್ದಿವರು ಕೆಲವು ಇತರ ಯುವಕರೊಡನೆ ಸತ್ಯಾಗ್ರಹ ಕೆಲಸದಲ್ಲಿ ಭಾಗ ತೆಗೆದುಕೊಳ್ಳಲು ಬೊಂಬಾಯಿಗೆ ಒಂದಿದ್ದರಾಗಿಯೂ, ಅಲ್ಲಿ ಕಾಂಗ್ರೆಸ್ ವರ್ತಮಾನ ಸಂಗ್ರಹದ ಹಸ್ತ ಪತ್ರಿಕೆಯನ್ನು ಹಂಚುತ್ತಿದ್ದುದಕ್ಕಾಗಿ ಅವರಿಗೆ 8 ದಿನ ಸಜೆ ತಿಕ್ಷೆ ವಿಧಿಸಲಾಗಿದೆಯೆಂತಲೂ ತಿಳಿಯ ಒಂದಿದೆ. ಕೊಡಗಿನವರಲ್ಲಿ ಇವರೇ ಪ್ರಥಮ ರಾಜಕೀಯ ಕೈದಿಗಳಾಗಿರುವರು.

ಮಿಸೆಸ್ ಕೋಟೆರ ಚಿಣ್ಣಪ್ಪನವರು ನಿಷಾ ನಿಷೇಧ ಪಾರಿ ಪ್ರಚಾರ ವಗ್ಗೆರೆ ವಿಷಯ ಸೆಪ್ಟೆಂಬರ್ ತಾ. 15ರಂದು ಪಿಕೆಟ್ ಮಾಡಲು ಹೊಂಡುವುದರಿಂದ ಕೊಡಗಿನ ದೇರೆ ಮಹಿಳೆಯರೂ ಸಹ ಈ ವಿಷಯದಲ್ಲಿ ಭಾಗಿಗಳಾಗಬೇಕಾಗಿ ಆಪೇಕ್ಷಿಸಲು ಮಾಡಿಕೊಂಡಿದ್ದು ಇನ್ನೊಂದು ಕಡೆ ಪ್ರಕಟವಾಗಿದೆ ದೇಶದ ಒಳ್ಳೆಯ ಕೆಲಸಕ್ಕಾಗಿ ಇವರು ಹೊರಡಿದುದರಿಂದ ಇನ್ನೂ ಅನೇಕ ಮಹಿಳೆಯರೂ ಸಹ ಅವರ ಜೊತೆ ಸೇರಿ ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ.

ಕೊಡಗು ದೇಶಕ್ಕೆ ಪ್ರತ್ಯೇಕ ಪ್ರಜಾ ಜವಾಬ್ದಾರಿ ಸರಕಾರವನ್ನು ಕೊಡಬೇಕೆಂತಲೂ, ಇಂಡಿಯಾ ದೇಶಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡಬೇಕೆಂತಲೂ ದೇಶದ ಎಲ್ಲಾ ಪಂಗಡದವರು ಇಗ್ಗುಟ್ಟಿನಿಂದ ಕೇಳುವ ಬಗ್ಗೆ ಸೆಪ್ಟೆಂಬರ್ ತಾರೀಕು 21 ರಲ್ಲಿ ಮಡಿಕೇರಿಯಲ್ಲಿ ಜವಿನ್ನಾರರ ಸಂಘದ ಹಾಲ್‌ನಲ್ಲಿ ಒಂದು ಸಭೆ ನಡಸಬೇಕೆಂತ ಯೋಚಿಸಲಾಗಿದೆಯೆಂತಲೂ ಆ ಸಭೆಗೆ ಜವಿನ್ನಾರರ ಸಂಘ, ಹೊಸ ಎಂಜಿನ್ನಾರರ ಸಂಘ ಮತ್ತು ಕೊಡವ ಸಭೆ ಈ ಮೂರು ಸಂಸ್ಥೆಗಳಿಂದ ಪ್ರತಿಯೊಂದರಿಂದಲೂ ಏಳೇಳು ಜನ ಪ್ರತಿನಿಧಿಗಳನ್ನೂ, ಗೌಡ ಸಭೆಯಿಂದ ಏದು ಪ್ರತಿನಿಧಿಗಳನ್ನೂ, ಮುಸಲ್ಮಾನರ ಮತ್ತು ಲಿಂಗಾಯತ ಪರವಾಗಿ ಇಬ್ಬರಿಬ್ಬರನ್ನೂ ತಾ. 10—9—30ನೆ ವಳಗೆ ನೇಮಿಸಿ ಹೆಸರು ಕಳುಹಿಸಬೇಕೆಂತಲೂ, ಮೆ. ಬಿದ್ದಂಡ ಯಂ. ಕಾರ್ಯಪ್ಪನವರು ಪತ್ರಗಳನ್ನು ಆಮೂಲ ಸಭೆಯ ವರಿಗೆ ಬರೆದಿರುತ್ತಾರಾಗಿ ತಿಳಿದು ಬಂದಿದೆ

## ಹಿಂದೂದೇಶ.

ಮಧ್ಯಪ್ರಾಂತ್ಯದ ಕೆಲವು ಕಡೆಗಳಲ್ಲಿಯೂ ಉತ್ಕರ್ಷಸ್ಥಿತಿ ಜೆಲ್ಲೆಯ ತಿಕ್ಕಿ ತಾಲೋಕಿನಲ್ಲಿಯೂ ಪೋಲೀಸ್ ಜಾನಾನಿನ ಜೋರಾಗಿ ಭಂಗ ನಡಿಯುತ್ತಿರಲಿದೆ.

ವೇಕಾವರದ ಕುರಿತು ಪಟೇಲ್ ಕಮಿಟಿಯು ಬರೆದ ರಿಪೋರ್ಟನ್ನು ಪ್ರಕಟಿಸಿದ ಅಲ್ಲಹಾಬಾದಿನ ಪ್ರಿಂಟಿಂಗ್ ಪ್ರೆಸ್ಸಿನಿಂದ 3000 ರೂ. ಜಾಮೀನ್ ಕೇಳಿದ್ದಾರೆ

ಪೂನಾ ಮುನ್ಸಿಪಾಲಿಟಿಯ ಪ್ರೆಸಿಡೆಂಟರು ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರೂ ಆಗಿದ್ದರು. ಅವರನ್ನು ಸರ್ಕಾರವು ಹಿಡಿದು 3 ತಿಂಗಳು ಸಜಕ್ಕೂ, 500 ರೂ ಜುಲುಮಾನೆಗೂ ಗುರಿ ಪಡಿಸಿದೆ.

ಪಂಡಿತ ಮೋತಿಲಾಲ್ ನೆಹರೂರವರು ಯರವಾಡ ಜೈಲಿನಿಂದ ವಾಪಸು ಅಲ್ಲಹಾಬಾದಿಗೆ ಹೋಗುವಾಗ್ಗೆ ಜ್ವರ ಬಂದು ಕೆಣ ರಾಯಿಲೆಯಲ್ಲಿ ದ್ದಾರೆಂದೂ, ಈಗೆ ಸ್ವಲ್ಪ ವಾಸಿ ಇದೆಯೆಂದೂ ವರ್ತಮಾನ ಒಂಜೆ

ಕಾಂಗ್ರೆಸ್ಸಿನ ಹಂಗಾಮಿ ಪ್ರೆಸಿಡೆಂಟರಾದ ಅಬ್ಬಾಸ್ ಕ ಅವರು ಅಜಾದರನ್ನು ಸೆರ್ಕಾರವು ನೆರೆ ಹಿಡಿದಿದೆ. ಇವರ ಮೇಲೆ ಮೊಬದಮ್ಮೆ ವಿಚಾರಣೆಯೂ ಆಗಲಿಲ್ಲ. ಇವರು ಡಾಕ್ಟೆ ರ್ ಅನ್ಸಾರಿಯವರನ್ನು ತಕ್ಕಿಲ ಪ್ರೆಸಿಡೆಂಟರಾಗಿ ನೇಮಿಸಿದ್ದಾರೆ. ಅಜಾದರಿಗೆ ತಿಕ್ಷೆಯಾಗುವಾಗ ನುಂದಿನ ಪ್ರೆಸಿಡೆಂಟರನ್ನು ನೇಮಿಸುತ್ತಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವೀಟಿಂಗು ಈ ತಾ. 27ರಲ್ಲಿ ದೆಲ್ಲಿಯಲ್ಲಿ ನಡೆಯುತ್ತಿದ್ದಾಗ್ಯೆ ಅದರ ಮೊಬುಗಳಾದ ಡಾಕ್ಟರ್ ಅನ್ಸಾರಿ, ವಿಟ್ಠಲಭಾಯಿ ಪಟೇಲ್, ಪಂಡಿತ ಮದನಮೋಹನ ಮಾಳವೀಯರೇ ಮೊದಲಾದ (ಮಿಸಸ್ ನೆಹರು ಮತ್ತು ಮೆಹಬ್ಬಾರವರ ವಿನಾಯಿಸಿ ಬಾಕಿ) ಎಲ್ಲರೂ ದಸ್ತಗಿರಿ ಮಾಡಲ್ಪಟ್ಟಿರುವರೆಂದು ವರ್ತಮಾನ.

ಜೊಂಬಾಯಿಯಲ್ಲಿ ಒಂದು ಭಾಷಣದಲ್ಲಿ ಸರ್ ಪಿ. ಸಿ. ರೇಯವರು—ಬಂಗಾಳದಲ್ಲಿ ಪಗಡೇತೀ ಸಿಗರೇಟ್‌ಗಳನ್ನು ಪೂರ್ತಿಯಾಗಿ ದಿಬ್ಬಿರುತ್ತಾರೆಂತಲೂ, ಅದರ ಬದಲು ಬೀಡಿಯನ್ನೇ ಉಪಯೋಗಿಸುವದರಿಂದ ಸರಾಕಾರು ಜನರಿಗೆ ಒಬ್ಬಿದ್ದಿಲ್ಲರು ಬೀಡಿ ಮೂಡುವ ಕಸುಬು ದೊರತು ದಿನಸಕ್ಕೆ ಒಂದು ರೂಪಾಯಿ ಯಿಗಿಂತ ಹೆಚ್ಚು ಸಂಪಾದಿಸುತ್ತಿದ್ದಾರೆ ಎಂತ ವಿವರಿಸಿದರು.

ರೌಂಡ್ ಟೇಬಲ್ ಕಾನ್‌ಫರೆನ್ಸ್‌ನು (ಚತ್ತಗೋಲ್ಮೆ) 1931ನೇ ಇ್ವಮ ವರೆಗೆ ಮುಂದಿನಪದಕ್ಕಂತ ಮೆ. ಚಿಂತಾಮಣಿಯವರು 'ಲೀಡರ್' ಪತ್ರಿಕೆಯಲ್ಲಿ ಬರೆದಿದ್ದಾರೆ ಕಾಂಗ್ರೆಸ್ಸಿನ ಮುಂದಾಳುಗಳಿಗೂ, ಸರಕಾರ್ತಾ ನಡೆಯುತ್ತಿರುವ ರಾಜಿ ಮಾತುಗಳಿಗೆ ಬೇಕಾದಷ್ಟು ಸಮಯ ಕೂಡಲಿಕ್ಕಾಗಿ ರೌಂಡ್ ಟೇಬಲ್ ಕಾನ್‌ಫರೆನ್ಸ್‌ನನ್ನು ಮುಂದರಿಸಲು ಅಧಿವ್ಯಾಯ ಕೂಟ್ಟಿರುವದಾಗಿದೆ ಇದಕ್ಕೆ ಜೊಂಬಾಯಿ ವೇಪಡ ಲೀಟ್‌ಗಳು ವಿರೋಧವಿದ್ದಾರೆ.

ತಾ. 25ನ್ನಿ ಕಲ್ಕತ್ತಾ ಪೋಲೀಸ್ ಕಮಿಷನರು ಮಧ್ಯಾಹ್ನ 11 ಗಂಟೆಗೆ ಆಫೀಸಿಗೆ ಹೋಗುತ್ತಿದ್ದಾಗ ಅವರ ಕಾರಿನ ಮೇಲೆ ಎರಡು ಬಾಂಬುಗಳು ಬಿದ್ದವು ಸವಿಾಪದಲ್ಲೇ ಒಬ್ಬ ಘಾಯವಾಗಿ ಬಿದ್ದಿದ್ದವನು ಈಚೆಗೆ ಸಕ್ಕನು ಇವನ ಸ್ವಾಧೀನದಲ್ಲಿ ಎರಡು ಬಾಂಬುಗಳೂ, ಒಂದು ತುಂಬಿದ ರಿವಾಲ್ವರೂ ಇದ್ದವು. ಇನ್ನೊಬ್ಬ ಓತಿ ಕೋಗುವನನ್ನೂ ಹಿಡಿಯಲ್ಪಟ್ಟಿದ್ದಾನೆ ಇವನೊಬ್ಬ ಲಾ ಕಾಲೇಜಿನ ವಿದ್ಯಾರ್ಥಿಯಂತ ಹೇಳಿದ್ದಾನೆ ಚಿತ್ತಗಾಂಗಿನ್ನಲ್ಲಿ ಪೂಡು ನಡಿಸಿದ ಗಂಗಿಗೆ ಸೇರಿದವರಿಂದಲೇ ಈ ಕಾರ್ಯಸಡೆದಿರಬೇಕೆಂತ ಊಹಿಸಲಾಗಿದೆ ಅನೇಕರನ್ನು ದಸ್ತಗಿರಿ ಮಾಡುತ್ತಿದ್ದಾರೆ

ಮೆ ಜಯಕರವರು ಮುಂದಾಗಿ ಸಿಮ್ಲಾಕ್ಕೆ ಹೋಗಿ ವೈಸರಾಯರಿಗೆ ಭೇಟಿ ಕೊಟ್ಟರು ಈಗ ಸರ್ ತೇಜ್ ಬಹದ್ದೂರ್ ಸಪ್ರೂರವರು ಸಹ ಅಲ್ಲಿಗೆ ಹೋಗಿ ವೈಸರಾಯರೊಂದಿಗೆ ಇವರಿಬ್ಬರೂ ತಾರೀಕು 25ರಲ್ಲಿ 4 ಗಂಟೆ ವರೆಗೆ ಸಂಭಾಷಣೆ ನಡಿಸಿದರು ಪುನಃ ತಾರೀಕು 26ರಲ್ಲಿ ಸಂಭಾಷಣೆಯನ್ನು ಮುಂದರಿಸುತ್ತಾರೆ. ಫಲಿತಾಂಶ ಇನ್ನೂ ಗೊತ್ತಿಲ್ಲ ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲರುಗಳ ಸೆಂಗಡವೂ ಜಯಕರವರು ಸಂಭಾಷಣೆ ನಡಿಸುತ್ತಿದ್ದಾರೆ. ಈ ಸಂಭಾಷಣೆಯಿಂದ ವೈಸರಾಯರು ವಿನಹ ಸರಕಾರದ ಇತರ ಅಧಿಕಾರಿಗಳು ರಾಜಿಗೆ ಅಡ್ಡಿ ಕರುವದರಲ್ಲೇ ಇದ್ದಾರೆಂತ ವರ್ತಮಾನ ವಿದೆ

ಪೇಕಾವರದಲ್ಲಿ ಸತ್ಯಾಗ್ರಹ ವ್ಯಾಪಾರವಾದ ಸಮಯದಲ್ಲಿ ಪೊಲೀಸಿನವರೂ, ಮಿಲಿಟರಿಯವರೂ ಗುಂಡು ಹೊಡೆದು ಆನೇಕರನ್ನು ಕೊಂದರೆಂಬ ವಿಷಯ ಕುರಿತು ಕಾಂಗ್ರೆಸಿನ ಪರವಾಗಿ ಶ್ರೀ ಏ ಜೆ ಪಟೇಲರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯು ತನಿಖೆ ನಡಿಸಿ ಒಂದು ವರದಿಯನ್ನು ಬರೆದರು ಆ ವರದಿಯನ್ನು ಸರ್ಕಾರದವರು ವಜ್ಜು ಗೊಳು ಹಾಕಿದ್ದಾರೆ ಆದ್ದರಿಂದ ಪೈಲ್ವೇ ಮೂಲಕ ಕಳುಹಿಸಿದ ಪುಸ್ತಕಗಳನ್ನೆಲ್ಲ ಸಹ ಪೈಲ್ವೇ ಅಧಿಕಾರಿಗಳು ಪುಸ್ತಕಗಳನ್ನು ವಿಳಾಸದಾರರಿಗೆ ತಲುಪಿಸಲೇ ಇಲ್ಲ. ಸರ್ಕಾರದವರು ಒಂದು ಕಮಿಟಿಯನ್ನು ಇದೇ ಬಗ್ಗೆ ನೇಮಿಸಿದ್ದರು. ಆದರೆ ನೌಲೆ ಸರ್ಕಾರದ ಆಫೀಸ್ರಾಯ ಸಹ ಕೊಡಶಾಯಿತು. ಹೀಗಿರುವಾಗ ಜನರ ಪರವಾಗಿ ನೇಮಿಸಲ್ಪಟ್ಟ ಕಮಿಟಿಯ ವರದಿಯನ್ನು ಪ್ರಕಟವಾಗಲು ಸದರಿ ಕಮಿಟಿಯ ವರದಿಯು ಪ್ರಕಟವಾಗಿ ಬಿಡನೆ ಇದ್ದುದಕ್ಕೆ ದೇಶದ ಎಲ್ಲಾ ಕಡೆಯಿಂದಲೂ ಆಕ್ಷೇಪಣೆಯು ಹೊರಬಿದೆ

## ಕೊಡಗಿನ ಸುಶಿಳಾ ಸಹೋದರಿಯರಲ್ಲಿ ವಿನಂತಿ.

ಮಹಾತ್ಮಾ ಗಾಂಧಿಯವರು ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ತೊಡಿದ ಸತ್ಯಾಗ್ರಹ ಯುದ್ಧವು ತಮಗೆಲ್ಲರಿಗೂ ತಿಳಿಯದ ವಿಷಯವಲ್ಲ.

ಹಿಂದೂದೇಶದ ಬೊಂಬಾಯಿ, ಕ್ಷಲ್ಕತ್ತಾ, ಅಲ್ಲಹಾಬಾದ್, ಪಂಜಾಬು ಮೊದಲಾದ ಸ್ಥಾನಿಕ್ಯಗಳ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಸಹ ಸ್ತ್ರೀಯರೇ ವಹಿಸಿಕೊಂಡು ಮುಂದಾಳುಗಳಾಗಿ ನಿಂತು ಕೆಲಸ ಮಾಡುತ್ತಿರುವುದು ತಮ್ಮೆಲ್ಲರಿಗೂ ತಿಳುವಳಿಕೆಗೆ ಬಂದಿರಬಹುದು. ಭಾರತಖಂಡದ ಸ್ತ್ರೀಯರಲ್ಲಿ ಸಾಧ್ವಿಮಣಿ ಎನ್ನಿಸಿಕೊಂಡ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷರಾಗಿದ್ದ ಶ್ರೀಮತಿ ಸರೋಜಿನಿ ದೇವಿಯವರೂ ಇನ್ನು ಅನೇಕ ವಾನ್ಯಮುಖ್ಯ ನಾಯಿಕರು ಸಹಿಯೆಯರೂ ನನಗಾಗಿ ಭಾರತ ಮಾತೆಯ ಉದ್ಧಾರಕ್ಕಾಗಿ ಕಾರಾಗೃಹವಾಸವನ್ನನು ಭವಿಸುತ್ತಿರುವರು

ಈ ಸಮಯದಲ್ಲಿ ಕೊಡಗಿನ ಸ್ತ್ರೀಯರಾದ ನಾವುಗಳು ನಿದ್ರಿಸುತ್ತಿರುವುದು ಸರಿಯಲ್ಲ. ಮಹಾತ್ಮಾ ಗಾಂಧಿಯವರು ಜೈಲಿಗೆ ಹೋದಾಗ ಸ್ತ್ರೀಯರಾದಲೇ ಧೈರ್ಯ ಬಂತವು ಉದ್ಧಾರವಾಗಿ ವುದೊಂದೂ, ಅವರೆಲ್ಲರೂ ಈ ಸಮಯದಲ್ಲಿ ಸ್ವತಂತ್ರ್ಯ ಪ ಪಳೆದ್ದು ಭಾಗಿಗಳಾಗಬೇಕೆಂದೂ ಹೇಳಿ ಅವರ ಮೇಲೆ ಒಂದು ದೊಡ್ಡ ಭಾರವನ್ನಿಟ್ಟಿರುತ್ತಾರೆ ಕೊಡಗಿನಲ್ಲಿ ಕಾಂತರೀತಿಯ ಪಿಕೆಟಿಂಗ್ ಚಳವಳಿಯು ನನ್ನ ಸತ್ಯಾಗ್ರಹ ಸಹೋದರರುಗಳಿಂದ ನಡೆಸಲ್ಪಡುತ್ತಿರುವುದೂ ಅದರಿಂದ ದೇಶಕ್ಕೆ ಆಗುತ್ತಿರುವ ಪ್ರಯೋಜನವು ಒಡನೆ ಎಲ್ಲರಿಗೂ ತಿಳಿಯುವುದು. ಪುರುಷರು ಕುಡಿಕರಾಗಿಯೂ ಕುಟುಂಬದಲ್ಲಿ ಸ್ತ್ರೀಯರ ಬಗ್ಗೆ ಹೇಗಿರ ಬೇಕೆಂದೂ ಅವರಿಗೆ ಬುದ್ಧಿ ಹೇಳಿ ಅವರ ಮೇಲೆ ಒಂದು ದೊಡ್ಡ ಭಾರವನ್ನಿಟ್ಟಿರುತ್ತಾರೆ ಕೊಡಗಿನಲ್ಲಿ ಕಾಂತರೀತಿಯ ಪಿಕೆಟಿಂಗ್ ಚಳವಳಿಯು ನನ್ನ ಸತ್ಯಾಗ್ರಹ ಸಹೋದರರುಗಳಿಂದ ನಡೆಸಲ್ಪಡುತ್ತಿರುವುದೂ ಅದರಿಂದ ದೇಶಕ್ಕೆ ಆಗುತ್ತಿರುವ ಪ್ರಯೋಜನವು ಒಡನೆ ಎಲ್ಲರಿಗೂ ತಿಳಿಯುವುದು. ಪುರುಷರು ಕುಡಿಕರಾಗಿಯೂ ಕುಟುಂಬದಲ್ಲಿ ಸ್ತ್ರೀಯರ ಬಗ್ಗೆ ಹೇಗಿರ ಬೇಕೆಂದೂ ಎಲ್ಲಾ ಸಹೋದರಿಯರಿಗೂ ತಿಳಿದೇ ಇದೆ ಪಿಕೆಟಿಂಗ್ ಚಳವಳಿಗೆ ಹಿಂದೂದೇಶದ ಇತರ ಕಡೆ ಹೆಚ್ಚಾಗಿ ಸ್ತ್ರೀಯರೇ ನಡಿಸುತ್ತಿದ್ದಾರೆ ಈ ಸಮಯದಲ್ಲಿ ನಾವೂ ಸಹ ನನ್ನ ಸತ್ಯಾಗ್ರಹ ಸಹೋದರರುಗ ಪಿಕೆಟಿಂಗಾ ವಿಷಯದಲ್ಲಿ ಸಹಾಯ ಮಾಡಿದ್ದರೆ ಕೊಡಗಿನ ಸ್ತ್ರೀಯರಿಗೆ ಬಹಳ ಅಪೇಕ್ಷಿತಾಯುಂಟಾಗುವುದು. ಸತ್ಯಾಗ್ರಹಿ ಸಹೋದರರಿಗೆ ಪಿಕೆಟಿಂಗಿಗೆ ಸುಖಾಯ ಸೂಚಿಸಲು ನಾವು ಈ ಸೆಪ್ಟೆಂಬರು ತಾ. 15 ರಂದು ಹೊರಡುತ್ತೇವೆ

ದೇಶದ ಮಳೆಮಯ ಈ ಕಾಲಕ್ಕೆ ಸೇರಿಬ್ಬೆ ಪಡುವರು ದುಯುವುದು ಕೂಡಲೇ ನನಗೆ ಬರೆಯಬೇಕಾಗಿ ಕೋರುತ್ತೇವೆ ಇವರಲ್ಲಿ ಸಿಕ್ಕಿದ ನಂತರ ಊಟ ಉಪಚಾರ ವಗ್ಗೆ ರೆಗೆ ತಕ್ಕ ವ್ಯವಾಡು ಮಾಡಬೇಕಾಗಿದೆ. ಪ ಹಣವು ಸೆ ಹೋದರರೆಲ

### ಶ್ರೀ ಕೃಷ್ಣ ಜಯಂತಿ ಉತ್ಸವ.

ಈ ತಿಂಗಳ 24ನೇ ಆದಿತ್ಯವಾರ ಪುಡಿಕೇರಿ ವೇದಾಂತ ಸಂಘದವರು ಶ್ರೀಕೃಷ್ಣನ ಜನ್ಮೋತ್ಸವವನ್ನು ಬಹು ವಿಜೃಂಭಣೆಯಿಂದ ಮಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ನಡೆಸಿದರು. ವಿದ್ಯಾವಾಚಸ್ಪತಿ ಓ.ಟ್ಟಮನೆ ಅತ್ಯಾರಾಮ ಶಾಸ್ತ್ರಿಗಳು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಕಾರ್ಯಕ್ರಮ ಪಟ್ಟಿಯಲ್ಲಿ ನಮೂದಿಸಿದ್ದಂತೆ 3 ಗಂಟೆಗೆ ಸರಿಯಾಗಿ ಭಜನೆಯು ಪ್ರಾರಂಭವಾಗಿ 3--30ರ ವರೆಗೆ ನಡೆಯಿತು. ಆನಂತರ ಮೆ. ನರವಂಡ ಕುಟ್ಟಪ್ಪ ಬಿ. ಎ. ಯವರು ಶ್ರೀ ಕೃಷ್ಣನ ಚರಿತ್ರೆಯನ್ನು ಕುರಿತು ಸ್ವಾರಸ್ಯವಾಗಿ ಭಾಷಣಮಾಡಿದರು. 5ರಿಂದ 5--30ರ ವರೆಗೆ ಮೆ. ಪಿ. ಕೆ. ಸುಬ್ಬಾರಾಯರವರು ಗೋಪಿಕಾ ಗೀತೆಯನ್ನು ಮಧುರ ಸ್ವರದಿಂದ ಹಾಡಿ, ಸಭಿಕರನ್ನು ಉಲ್ಲಾಸಗೊಳಿಸಿದರು. ಅನಂತರ ಅಧ್ಯಕ್ಷರು ಮಾಡಿದ ಭಾಷಣದ ಸಾರಾಂಶ.

ಗವೂರೋಪನಿಷತ್ತನ್ನು ಮಾಡುವಾಗ ಅಧ್ಯಕ್ಷರು, ಶ್ರೀ ಕೃಷ್ಣನು ಅವತಾರವನ್ನೆತ್ತಿರುವ ಕಾಲದಲ್ಲಿ ಭಾರತೀಯ ಆರ್ಯರ ಸಾಮಾಜಿಕ ಪರಿಸ್ಥಿತಿಯು ಒಂದೆಡೆ ಬಾಹ್ಯಿಕ ಸುಖದ ಮತ್ತು ಇನ್ನೊಂದೆಡೆ ನಿಸ್ಸತ್ವ ಹೊರ್ಗದ ಪರಮಾವಧಿಯನ್ನು ಹೇಗೆ ಹೊಂದಿತ್ತು,, ಒಂದಕ್ಕೊಂದು ವಿರುದ್ಧವಾದ ಇವೆರಡೂ ಮಾರ್ಗಗಳ ಮಧ್ಯ ಬಿಂದುವಿನ ಮೇಲೆ ಸಾಮಾಜವನ್ನು ತಂದು ನಿಲ್ಲಿಸುವುದು ಹೇಗೆ ಅವಶ್ಯವಾಗಿತ್ತು ಮತ್ತು ಆ ಕಾರ್ಯವನ್ನು ಶ್ರೀ ಕೃಷ್ಣನು ಗೀತೋಪದೇಶದಿಂದ ಹೇಗೆ ಸಾಧಿಸಿದನು ಇವೇ ಮೊದಲಾದ ಸಂಗತಿಗಳನ್ನು ವಿವರಿಸಿ ಮುಂದೆ ಹೇಳಿದುದೇನಂದರೆ:--" ಶ್ರೀ ಕೃಷ್ಣನ ಚರಿತ್ರೆಯ ನಿಜವಾದ ರಹಸ್ಯವನ್ನರಿಯದೆ ನಿರ್ಮಲವಾದ ಅವನ ಜೀವನದ ಮೇಲೆ ಹಲವರು ಒಂದೆರೆಡು ಕಲಂಕಗಳನ್ನು ಹೊರಿಸುವುದುಂಟು. ಗೋಪಿಕಾ ಸ್ತ್ರೀಯರನ್ನು ಶ್ರೀ ಕೃಷ್ಣನು ದುರುಪಯೋಗಿಸಿದನು, ಅನಿರೊಡನೆ ನಿಂದ್ಯ ಸಂಬಂಧವನ್ನು ಬೆಳೆಸಿದನು ಎಂಬದಾಗಿ ಒಂದು ಆರೋಪಣೆ. ಈ ಆರೋಪಣೆಯನ್ನು—ವೌರಾಣಿಕ ದೃಷ್ಟಿಯಿಂದ ಅಲ್ಲ,—ಐತಿಹಾಸಿಕ ದೃಷ್ಟಿಯಿಂದ ಒರೆಗಲ್ಲಿಗೆ ಹಚ್ಚಿದರೆ ಅದು ಸುಳ್ಳೆಂದೇ ಕಾಂಡು ಬರುತ್ತದೆ. ಶ್ರೀ ಕೃಷ್ಣನ ಜೀವಮಾನ ಕಾಲದಲ್ಲಿ ಈ ಆರೋಪಣೆಯು ಹುಟ್ಟಿರಲಿಲ್ಲ. ಎಂದರೆ—ಶ್ರೀ ಕೃಷ್ಣನಿಗೂ ಗೋಪಿಕೆಯರಿಗೂ ಇಂಥಹ ನಿಂದ್ಯ ಸಂಬಂಧವು ಇರಲೇ ಇಲ್ಲ. ಹರಿವಂಶವೆಂಬ ಮಹಾಭಾರತದ ಖಿಲಪರ್ವವು ಶ್ರೀ ಕೃಷ್ಣನ ಚರಿತ್ರೆಯನ್ನು ಏತಿಹಾಸಿಕ ದೃಷ್ಟಿಯಿಂದ ಕೊಡುತ್ತದೆ. ಆದರಲ್ಲಿ ಈ ಸಂಬಂಧದ ಮಾತೇ ಇಲ್ಲ. ಇದೊಂದು ಕಾರಣವೆ. ಇನ್ನೊಂದು ಕಾರಣವೇನಂದರೆ—ದ್ರೌಪದಿಯ ವಸ್ತ್ರಾಪಹರಣದ ಸಮಯದಲ್ಲಿ ಶ್ರೀ ಕೃಷ್ಣನನ್ನು ಗೋಪಿ ಜನರಿಗೆ ಪ್ರೀಯನಾದವನು ಎಂದು ಹೇಳಿದ್ದಾಳೆ. ಎಂದರೆ ದೀನನಾದ ಅಬಲೆಯರನ್ನು ಭಗ್ನಿ ದೃಷ್ಟಿಯಿಂದ ಉದ್ಧರಿಸಿದವನು ಎಂಬ ಅರ್ಥದಿಂದ ಅವನ ಹೆಸರನ್ನು ಎತ್ತಿದ್ದಾಳೆ. ರಾಜ ಸಭೆಯಲ್ಲಿ ವಸ್ತ್ರಾಪಹರಣದಂತಹ ಧರ್ಮ ಸಂಕಷ್ಟದ ಸಮಯದಲ್ಲಿ, ಜಾಂಘಾಗಿದ್ದರೆ ಆ ಶ್ರೀ ಕೃಷ್ಣನ ನೆನಪು ದ್ರೌಪದಿಗೆ ಆಗುತಿತ್ತೇ? ಒಂದು ವೇಳೆ ನೆನಪಾದರೂ ಆ ಧರ್ಮ ಸಂಕಷ್ಟದಲ್ಲಿ ಅವನ ಹೆಸರನ್ನು ಅನಳು ಎತ್ತುತ್ತಿದ್ದಳೇ? ಒಂದು ವೇಳೆ ಎತ್ತಿದ್ದರೂ ಅದು ಸ್ವಯೋಜನಕ್ಕೆ ಬೇಳುತ್ತಿತ್ತೇ? ಆ ದುದರಿಂದ ಈ ಆರೋಪಣೆಯು ಸುಳ್ಳು. ಮೂರನೆಯ ಕಾರಣವೇನಂದರೆ—ಶ್ರೀ ಕೃಷ್ಣನಿಗೆ ರಾಜಸೂಯ ಯಾಗದಲ್ಲಿ ಅಗ್ರ ಪೂಜೆಯ ಮಾನನನ್ನು ಕೂಟ್ಟಾಗ ಶಿಶುಪಾಲನು ಶ್ರೀ ಕೃಷ್ಣನ ಎಲ್ಲಾ ದೋಷಗಳನ್ನು (ಹಾಗಾದವು, ಅಲ್ಲವಾದವೂ ಕೂಡ) ಎತ್ತಿ ಎತ್ತಿ ಹೇಳಿದ್ದಾನೆ. ಆ ಸಂದರ್ಭದಲ್ಲಿ ಅವನ ಬಾಯಿಯಿಂದ ಈ ವಿಷಯವಾಗಿ ಒಂದೇ ಒಂದು ಮಾತು ಕೂಡ ಹೊರಬಿಟ್ಟಿಲ್ಲ. ಶ್ರೀ ಕೃಷ್ಣನಿಗೂ, ಗೋಪಿಕೆಯರಿಗೂ ಅಂತಹ ನಿಂದ್ಯ ಸಂಬಂಧವು ಇದ್ದುದಾದರೆ ಸೊಕ್ಕಿದ ಬಾಯಿಯ ಶಿಶುಪಾಲನು ಅದನ್ನು ಹೇಳದೆ ಇರುತ್ತಿದ್ದನೇ? ಈ ಮೂರು ಕಾರಣಗಳಲ್ಲದೆ ಪ್ರಬಲವಾದ ಕಾರಣವನ್ನು ತೋರಿಸುವ ದಾದರೆ ಭಗವದ್ಗೀತೆಯಲ್ಲಿ ಸ್ವಯಂ ಶ್ರೀ ಕೃಷ್ಣನೇ "ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನ ಮಾತ್ಮನಃ| ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್"|| ಎಂದು ಕಾಮವು ನರಕದ ದ್ವಾರವು, ಅದನ್ನು ಸರ್ವಥಾ ಬಿಡಬೇಕು ಎಂದು ಉಪದೇಶಿಸಿ, ತಾನೇ ಅಂತಹ ಕೆಲಸವನ್ನು ಮಾಡಿರುವನೇ? ಸಾಧಾರಂಂ—ಈ ಆರೋಪಣೆಯು ಏತಿಹಾಸಿಕ ದೃಷ್ಟಿಯಿಂದ ನೋಡುವಾಗ ತೀರಾ ಸುಳ್ಳಾಗಿದೆ. ೮—೯ನೆಯ ಶತಮಾನದ ಸಮಯದಲ್ಲಿ ಭಾಗವತ ಗ್ರಂಥವು ಹುಟ್ಟಿವಾಗ ಅದರಲ್ಲಿ ಅದಕ್ಕಿಂತ ಕೊಂಚ ಮೊದಲು ವಿಷ್ಣು ಪುರಾಣ ರಚನಾ ಕಾಲದಲ್ಲಿ ಈ ತರಹದ ನಿಂದೆಯು ಹೆಚ್ಚಿರಬಹುದಲ್ಲದೆ ಮುಂಚೆ ಇದ್ದಿಲ್ಲ. ಆದುದರಿಂದ ರಾಸಕ್ರೀಡೆಯೆ ಮೊದಲಾದುದು ಕೀಳಾಲ ಕವಿ ಕಲ್ಪಿತವಾಗಿದೆ.

ಶ್ರೀ ಕೃಷ್ಣನ ಮೇಲೆ ಕವಿಟ ಯಿದ್ದ ಇನ್ನೊಂದು ಆರೋಪಣೆಯು ಹೇಗಿರಬಹುದೆಂದು ಇದೂ ಸೂತ ತಳೆಗೇರಿಸಿ ತನದ್ದಾಗಿದ. ಉದಾಹರಣಾರ್ಥವಾಗಿ ದಿಗ್ಮೀಣವಧೆಯನ್ನೇ ತೆಗೆಕೊಳ್ಳೋಣ. ದ್ರೌಣಿ ಅಶ್ವತ್ಥಾಮನ ವಿದ್ಯೆಯನ್ನರಿಯದ ಪಾಂಚಾಲರ ಪೀಲೆ ಅಸ್ತ್ರ ಸ್ಪಯೋಗವನ್ನು ಮಾಡಿ ಅನೇಕ ಸಾವಿರ ಜನರನ್ನು ಹಿಂದೆ ಮುಂದೆ ನೋಡದೆ ಸಂಹರಿಸುತ್ತಿದ್ದನು. ಯುದ್ಧನೀತಿಯ. ಮೇರೆಗೆ ಇದು ತಪ್ಪು. ಅಸ್ತ್ರ ತಿಳಿದವರೊಡನೆಯೇ ಅಸ್ತ್ರಯುದ್ಧವಲ್ಲದೆ, ಅನ್ಯ ತಿಳಿಯದವರೊಡನೆಯಲ್ಲ. ಈ ನಿಯಮವನ್ನೆಲ್ಲ ಲೆಕ್ಕಿಸಿ ದ್ರೌಣಾಚಾರ್ಯನು ಎಲ್ಲರ ಸಂಹಾರ ಮಾಡುತ್ತಿದ್ದನು. ಅಂಥವನನ್ನು ಕೊಲ್ಲಲು 'ಅಶ್ವತ್ಥಾಮನು ಸತ್ತನು' ಎಂದು ಯುಧಿಷ್ಠಿರನಿಂದ ಶ್ರೀ ಕೃಷ್ಣನು ಸುಡಿಸಿದನು. ಈ ಸಂದರ್ಭದಲ್ಲಿ ಕೃಷ್ಣನು ಸತ್ಯಕ್ಕೆ ಸರ್ವಸ್ವನಾಶ, ವಿವಾಹ, ಗೋಹತ್ಯೆ ಮೊದಲಾದ ದೊಡ್ಡ ಅಪವಾದಗಳಿವೆ ಎಂಬುದನ್ನು ಯುಧಿಷ್ಠರನಿಗೆ ತೋರಿಸಿದನು. ಕೃಷ್ಣನ ಈ ಕೃತ್ಯವು ಕಪ್ಪೆಂದು ಯಾವ ನೀತಿ ಶಾಸ್ತ್ರವೂ ಹೇಳಲಾರದು. ದ್ರೋಣಾಚಾರ್ಯನೇ ಮೊದಲಾಗಿ ಅನ್ಯಾಯದ ಹಾದಿಯನ್ನು ಹಿಡಿದು ತನ್ನ ಮರಣವನ್ನು ತಯೂರಿಸಿಕೊಂಡಿದ್ದಾನೆ ಇಂತಹ ಸಂದರ್ಭದಲ್ಲಿ ಎಂದರೆ ಎದುರುಗಡೆಯವನನ್ನು ಹಾದಿಕಪ್ಪಿ ನಡೆದು ಸರ್ವಸ್ವ ನಾಶವನ್ನು ಮೊದುವಾಗ ಅಕ್ಷ ರಕ್ಷಣಾರ್ಥ' ಸಕ್ಕಕ್ಕೂ, ಅಪಂಗೆಗೂ, ನೀತಿ ಶಾಸ್ತ್ರೆಜ್ಞರು ಅಪವಾದಗಳನ್ನು ಹೇಳಿದ್ದಾರೆ. ಇದಕ್ಕೆ ನಾಸ್ತಿಕ್ಯ ದೇಶದ ಚರಿತ್ರೆಯೆಳಗಿಂದ ಕೂಡ ಉದಾಹರಣೆಗಳನ್ನು ಎತ್ತಿ ಹೇಳಬಹುದು. ಇರಲಿ, ಶ್ರೀ ಕೃಷ್ಣನ ಚರಿತ್ರೆಯು ಸಂಪೂರ್ಣ ಪರಿಶುದ್ಧವಾಗಿದೆ ಅದರ ಮೇಲೆ ಯಾವ ಕಲಂಕವೂ ಇಲ್ಲ. ಅವನ ಜನ್ಮತ್ಯಯು ಈ ಮೇರೆಗೆ ಹೇಗೆ ಅದರ್ಶಪ್ರಾಯವೋ, ಅವನ ತತ್ವಜ್ಞಾನವೂ ಹಾಗೆಯೇ ಸರ್ವ ಶ್ರೇಷ್ಠವಾಗಿದೆ. ಇ ವೆರಡನ್ನೂ ಎಲ್ಲರೂ ವ್ಯಾಸಂಗದಿಂದ ತಿಳಿಕೊಳ್ಳಬೇಕಾಗಿದೆ."

ತದನಂತರ ಶ್ರೀ ಕೃಷ್ಣ ನಾಮಾವಳ್ಯತರ ಪುಸ್ತಕಗಳು ಪಂಜಲ್ಲುಟ್ಟು ಎಲ್ಲರಿಂದಲೂ ನಾಮಾವಳ್ಯತವು (chorus) ಹಾಡಲ್ಪಟ್ಟಿತು. ಇದಾದನಂತರ ವೇದಾಂತ ಸೊಸೈಟಿಯ ಪೈಸ ಜೆಂಟರಾದ ಮೆ. ಜನ್ನಿರ ಕುಶಲಪ್ಪ ಬಿ. ಎ. ಯವರು ಸಂಘದ ಪರವಾಗಿ ಸಭಿಕರನ್ನೂ, ಉಪನ್ಯಾಸಕರನ್ನೂ, ಗೀತಾಕಾರರನ್ನೂ, ವಂದಿಸಿ ಈ ದಿನದ ಅಧ್ಯಕ್ಷರು ತಮ್ಮ ಅಮೂಲ್ಯವಾದ ಕೆಲಸಗಳನ್ನು ಬಿಟ್ಟು ನಮಗೆ ರಸಭರಿತವಾದ ಭಾಷಣಾದನ್ನು ಮಾಡಿದ್ದರಿಂದ ಅವರಿಗೆ ತುಂಬಾ ವಂದಿಸಿ ಅವರು ಕೊಡಗಿನ ಹೊರ ವ್ಯಾಂಶ್ಯವರಾದರೂ ಇಲ್ಲಿ ನಮ್ಮ ಮಧ್ಯದಲ್ಲಿ ಇದ್ದುಕೊಂಡು ಆಗಾಗ' ನಮಗೆ ತತ್ವವಿಚಾರದಲ್ಲಿ ಬೋಧನೆ ಕೊಡುತ್ತಿರುವುದು ನಮ್ಮ ಪುಣ್ಯವೆಂದೂ, ಅವರು ನಮ್ಮ ಮಧ್ಯದಲ್ಲಿ ರತ್ನಪ್ರಾಯರಾಗಿರುವರೆಂದೂ ಹೇಳಿದರು. ಮತ್ತು ನಮ್ಮ ಮಹಮ್ಮದೀಯ ಸಹೋದರರು ಈ ದಿನ ನಮ್ಮ ಜೊತೆಯಲ್ಲಿ ಮಿಳಿತವಾಗಿ ಈ ಉತ್ಸವದಲ್ಲಿ ಭಾಗಿಗಳಾದ್ದರಿಂದ ಅವರನ್ನೂ ತುಂಬಾ ನಂದಿಸುತ್ತೇನೆ ಎಂದು ಹೇಳಿದರು. ಈ ಳೆದ ವಾರ ಶ್ರೀ ಕೃಷ್ಣನ ಜನ್ಮ ದಿನವನ್ನು ಮೈಸೂರಿನಲ್ಲಿ ಆಚರಿಸಿದಾಗ ಅಲ್ಲಿನ ಮಹಮ್ಮದೀಯ ಸಹೋದರರು ಮಿಳಿತವಾಗಿ ಶ್ರೀ ಕೃಷ್ಣನ ಜೀವಚರಿತ್ರೆಯನ್ನು ಕೂಡ ಒಬ್ಬ ಮಹಮ್ಮದೀಯ ಸಹೋದರರು ಭಾಷಣ ಮಾಡಿದ ವಿಷಯವನ್ನು ನೆನಪಿಸಿ, ಹಾಗೆಯೇ ನಮ್ಮ ಭಿನ್ನಾಭಿಪ್ರಾಯಗಳು ಹೋಗಬೇಕಾದರೆ ಇನ್ನು ಮುಂದೆ ನಾವು ಕೂಡ ಅವತಾರ ಪುರುಷರಾದ 'ಅಲ್ಲಾ'ರನರ ಜನ್ಮ ದಿನವನ್ನು ಆಚರಿಸಬೇಕೆಂದೂ ಹೇಳಿದರು ಈ ದಿನದ ಉತ್ಸವಕ್ಕೆ ಮಡಿಕೇರಿಯ ಎಲ್ಲಾ ಮಹನೀಯರಿಗೂ ಆಮಂತ್ರಣವಿತ್ತರೂ ಬಲೇ ವಿದ್ಯಾರ್ಥಿಗಳೇ, ಕೆಲಸಕ್ಕೆ ಬಾರದವರಂತು ಭಾವಿಸಿಲ್ಲವಲ್ಲ ಪೂತ್ರ ಭಾಗಿಗಳಾಗಿರುವುದು ತುಂಬಾ ವ್ಯಸನಕರವೆಂದು ಮುಂತಾಗಿ ಮಾತಾಡಿದರು. ಆ ಮೇಲೆ ಮಂಗಳಾರತಿ ಮತ್ತೆ ಪ್ರಸಾದ ವಿನಿಯೋಗವಾದನಂತರ 7--15 ಕ್ಕೆ ಸಭೆಯು ಭಂಗವಾಯಿತು.

---

### ಪತ್ರವ್ಯವಹಾರ.

ಚಾತ್ಮಿಗಾರರು ಪಡುವ ಅಭಿಪ್ರಾಯಗಳಿಗೆ ಸತ್ಯಕಾರ್ಯರು ಜವಾಬ್ದಾರರಲ್ಲ. ಸಂ.]

ಪರೂಕ್ಷ್ಯರ್ !

ಎಂದೂ ಕಾಣದ್ದು---ಬಿದಿನೋಡಿ—ಇಂದು ಕಂಡಿತು.

ಇದೇ ತಿಂಗಳು 14ನೇ ಗುರುವಾರ ಬೆಳಿಗ್ಗೆ ಸುಮಾರು 7½ ಗಂಟೆ ಸಮಯಕ್ಕೆ ನನ್ನ ಧರ್ಮಪತ್ನಿಯಲ್ಲಾ ಒಬ್ಬರಿಗೆ ಖಾಯಿಲೆ ಇದ್ದುದರಿಂದ ನಾಡು ಔಷಧಿ ತರುವ ಉದ್ದೇಶ ನಮ್ಮ ಮನೆಯಿಂದ ಪೇಟೆಯ ಬಿಕ್ಕಿನಲ್ಲು ಒಬ್ಬ ಮಿತ್ರರ ಮನೆಗೆ ಹೋದೆನು. ಹೋಗಿ ಕೂತುಕೊಳ್ಳುವ ಮೊದಲೇ ಅವರ ಮನೆಗೆ ಪತ್ನಿಯಕ್ಕೆ ಬಸ್ಸು ಹೊರಡುವ ಶಬ್ದ ಕೇಳಿಸಿತು. ಆದಾ ಶಬ್ದ ಕೇಳಿಸಿದ ಜಾಗವು ದೊಡ್ಡ ಅರಣ್ಯ. ಇಲ್ಲಿ ಬಸ್ಸಾಗಲೀ ಆ ಧನವಾ ಕಾರಾಗಲೀ ಜರುವ ಹಾಗೆ ರಸ್ತೆ ಇಲ್ಲ. ರಸ್ತೆ ಇರುವದು ಅತ್ತಕಡೆಗೆ. ಹಾಗಾದರೆ ಇದೇನು ಶಬ್ದ ಎಂಬುದಾಗಿ ಗಾಬರಿ ಮತ್ತು ಸಿಟ್ಟಾರು ಕೂಡಿ ಯೋಚಿಸುತ್ತಿರುವಷ್ಟರಲ್ಲಿ ಅವರ ಗಿನ್ನೆ ಕರೆಯು ಕಾಡಿನ ಸನಿಹ ಅಂದರೆ 2 ಫರ್ಲಾಂಗ್ ದೂರದಲ್ಲಿ ಬಹಳ ಶಬ್ದವು ಹೊರಟಿಯಿತು. ಇದು ಏನು ಲಕ್ಷ್ಯವೆಂದು ನಾವಿಬ್ಬರು ಮನೆಯಿಂದ ಹುಟ್ಟಿಗೆ ಇಳಿದು ನೋಡುವಾಗ್ಗೆ ಅತ್ಯಂತ ಶಬ್ದ ಹೊರಯುವದು ಆಕಾಶದಲ್ಲು ಕೇಳಿಸಿತು. ಮೇಲಕ್ಕೆ ನೋಡ ವಾಗ್ಗೆ ಒಂದು ದೊಡ್ಡ ಹದ್ದಿನ ಆಕಾರದಲ್ಲು ನಮ್ಮ ಮೇಲೆ ಆಕಾಶದಲ್ಲು ಬರುತ್ತಿತ್ತು. ಇದು ಏನೆಂಬುದು ನಮಗೇನಾದರೂ ಗೊತ್ತೇ! ಯಾವಾಗಲಾದರೂ ನೋಡಿದ್ದೇವೋ! ಇಲ್ಲ. ಅಲ್ಲಿ ಗಿನ್ನೆ ಹೊಡುತ್ತಿದ್ದ ಒಬ್ಬನು ಇದು ವಿಮಾನವೆಂದು ಹೇಳಿದನು. ಅವರು ವೈಸಾ ಯಲ್ಲು ದಶರ ಹೆಚ್ಚಕ್ಕೆ ಹೋಗಿದ್ದಾಗ್ಗೆ ಕಂಡ ನೆನಪಿನಿಂದ ಅವನಿಂದ ನಮಗೆ ವಿಮಾನವೆಂದು ತಿಳಿಯಿತು. ಅದು ಶ್ರೀಮಂಗಲ ನಾಡು ಕಡೆಗಿರಬಹುದೆಂದು ಪೂರ್ವಕ್ಕೆ ಆದರೆ ಈಶಾನ್ಯೆದಿಕ್ಕಿಗೆ ಹೋಯಿತು. ಇದನ್ನು ಶ್ರೀಮಂಗಲನಾಡಿನ ಅನೇಕರು ಕಂಡಿರಬಹುದು. ಇದೇ ವಿಮಾನವು ಬಾ. 13ನೇ ಬುಧವಾರ ಸಾಯಂಕಾಲ 4 ಗಂಟೆ ಸಮಯದಲ್ಲು ಪೂರ್ವದಿಂದ ಪಶ್ಚಿಮಕ್ಕೆ ಹೋದದ್ದಾಗಿ ಕಂಡವರು ಹೇಳುತ್ತಾರೆ. ಈ ವಿಮಾನವು ಗುರುವಾರ ದಾಟಿದ ದಿನ ಎಂದೂ ಕಾಣದ ಈ ಆಶ್ಚರ್ಯವು ಇಂದು ನಮ್ಮ ಮನೆ ಮೇಲೆ ಕಂಡದ್ದಕ್ಕೆ ತುಂಬಾ ಆನಂದ. ಇದನ್ನು ನೋಡಿದ ಪ್ರತಿಯೊಬ್ಬರೂ ತಮಗೆ ನೆಟ್ಟಗೆ ಆಕಾಶದಲ್ಲು ಹೋಯಿತು' ಎಂಬದಾಗಿ ಹೇಳುತ್ತಾರೆ. ಜಾಗಾದರೆ ಅದು ಎಷ್ಟು ಎತ್ತರದಲ್ಲು ಹೋಗಿರಬಹುದೆಂಬುದು ವಾಚಕ್ಕರ್ಲೇ ಊಹಿಸಿ ನೋಡಿ.

ಪ್ರತ್ಯಕ್ಷ ನೋಡಿದ ಯಸ್. ಯನ್. ಯನ್.

---

### ತೊಟ್ಟಿಲು ತೂಗಾಡುವ ತಾಯಿ.

ಪ್ರತಿ ಜನಾಂಗದ ಏಳಿಗೆಗೂ ಮತ್ತು ಸುಸಿದ್ಧತೆಗೂ ಸ್ತ್ರೀಯರೇ ಕಾರಣಭೂತರಾದ್ದರಿಂದ ಎಲ್ಲಾ ಜನಾಂಗದವರೂ ಸ್ತ್ರೀಯರಿಗೆ ತಕ್ಕ ವಿದ್ಯೆಯನ್ನು ಕೊಡುವದು ಗಂಡಸರ ಕರ್ತವ್ಯವಾಗಿದೆ. ಲೋಕದ ಪೆಕರುವಾಸಿಯನ್ನು ಪಡೆದ ಯಾವನಾದರೂ ಶ್ರೇಷ್ಠ ಮನುಷ್ಯನನ್ನು "ನಿನ್ನ ಪ್ರಾಯು ಬ್ಯುತನವು ಯಾರಿಂದ ಲಭಿಸಿತು" ಎಂದು ಪ್ರಶ್ನಿಸಿದರೆ ಆತನು "ನನ್ನ ತಾಯಿಯಿಂದ" ಎಂದು ಸಂದೇಹವಿಲ್ಲದೆ ಹೇಳುವನು ಜಗಪ್ರಸಿದ್ಧವಾದ "ಥೋಮಸ್ ಕಾರ್ಲೈಲ್" Thomas carlyle ಎಂಬ ಕವಿಯು ಪರಲೋಕವಸ್ಥೆದಿವ ವೇಳೆಯಲ್ಲಿ ಆತನ ಜಬ್ಬಾನೊಬ್ಬ ಸ್ನೇಹಿತನು "ನಿನಗೆ ಏನು ಬೇಕೆಂದು ವಿಚಾರಿಸಲು ಆತನು 'ನನ್ನ ತಾಯಿ ನನಗೆ ಬೇಕು' ಎಂದನು. ಆದುದರಿಂದ ಮಗನ ಏಳಿಗೆಗೆ ತಾಯಿಯೇ ಮುಖ್ಯ ಪ್ರೇರಣಾಕಾರಿಯೂ, ಜನಾಂಗದ ಏಳಿಗೆಗೆ ಸ್ತ್ರೀಯರೇ ಮೆಟ್ಟಾಗಿರುತ್ತಾರೆಂಬುವುದಕ್ಕೆ ಯಾರೂ ಸಂಶಯ ಪಡಲಾರರು. ಧನದಿಂದ ತುಂಬಿ ತುಳುಕುತ್ತಿದ್ದ, ಅಥವರೆ ದ್ರವ್ಯದಲ್ಲಿ ಕುಬೇರನಿಗೆ ಸಮಾನನೆನಿಸಿಕೊಂಡಂಥ ಎಷ್ಟೋ ಕುಮಾರರು ತಮ್ಮ ತಾಯಂದಿಯರ ಅಜಾಗ್ರತೆಯಿಂದ ಬಕ್ಕ ಕರಾಗಿಯೂ, ಎಷ್ಟೋ ಬಡ ಕುಮಾರರು, ಅಂದರೆ ಧನದಲ್ಲಿ ಕುಚೇಲನಿಗೆ ಸಮಾನನೆನಿಸಿಕೊಂಡರೂ ತಮ್ಮ ನಿಪುಣೆ ತಾಯಂದಿಯರ ಸಹಾಯದಿಂದ ಲೋಕವ್ಯಸಿದ್ಧರೆನ್ನಿಸಿಕೊಂಡ ವಿಷಯವನ್ನು ವಾಚಕ ಮಹಶೀಯರು ಅಲ್ಲಗೆಳೆಯಲಾರರು"

ತಾಯಿಯರೆನ್ನುವ ಈ ಸ್ತ್ರೀಯರ ಭಾರವು ಅಮೂಲ್ಯವಾದುದರಿಂದ ಅವರಿಗೆ ತಕ್ಕ ವಿದ್ಯೆಯು ಅನಶ್ಯಕ.

ವಿದ್ಯೆಯನ್ನು ಪಡೆದ ಸ್ತ್ರೀಯು ಮನೆಯನ್ನು ಅವಳ ನಿರ್ದೇಯ ಕಾರ್ಯತೆಯಿಂದ ಹೊಳಪೇ. ಳ ತನ್ನ ಗಂಡನಿಗೂ ಮತ್ತು ಪುತ್ರ ಪುತ್ರಿಯರಿಗೂ ಸಹಾ ಏಕಾರಿಯಾಗಿ ಗೃಹಕೃತ್ಯಗಳನ್ನು ನಿಪುಣತೆಯಿಂದ ನಡೆಸಲು ಶಕ್ತಳಾಗುವಳಾಗಿ-ವಳು. ನನ್ನು ಪುಟ್ಟ ದೇಶದ ಕೊಡಗು ಮಹಿಳೆಯರು ವಿದ್ಯೆಯನ್ನು ಪಡೆಯಲು ಹೆಚ್ಚು ಬದ್ಧಕಾಂಕ್ಷರಾಗಿಲ್ಲದೆ ಇರುವುದರಿಂದಲೇ ನಾವು ಲೋಕದ ನಾಗರೀಕ ತನದಲ್ಲಿ ಎಷ್ಟೋ ಗಾವುದ ಹಿಂದೆ ಬಿದ್ದಿರುತ್ತೇವೆ. ಎಷ್ಟರ ವರೆಗೆ ಈ ಅವಸ್ಥೆಯು ನೆಲೆಗೊಂಡಿರುವುದೋ ಅಷ್ಟರ ವರೆಗೆ ನಮ್ಮ ದೇಶವು ಯೋಗ್ಯ ರಾದ ಮತ್ತು ಸರ್ವ ಅತ್ಯ ಸಂಪನ್ನದಿಂದ ಸೇರಿದ ಪೌರ್ಯರನ್ನು ಪಡೆಯಲು ಅರ್ಹರಲ್ಲವೆಂದೇ ಭಾವಿಸಬೇಕು ಆದುದರಿಂದ ಪ್ರತಿ ಜನಾಂಗದ ಉದ್ಧಾರಕ್ಕೂ, ಸಂಪತ್ಕಿಗೂ ಸ್ತ್ರೀಯರೇ ಕಾರಣರು.

ಸ್ತ್ರೀಯರು ವಿದ್ಯೆ ಪಡೆದರೆ ತಮ್ಮ ತಲೆಯನ್ನು ಸಂಪಿಗೆ ಗ್ರಂಥವೆಂಬೀ ಪೊದಲಾದ ಸುವಾಸನೆಯ ತೈಲದಿಂದ ತೃಂಗಳಿಸಲು ನಿಪುಣೆಯರಾಗುವರೆಂದೂ, ಹೆಚ್ಚಾಗಿ ಪಾತ್ರೆಪಾತ್ರಗಳ ದಾರಿಯನ್ನು ಅವಲಂಬಿಸಿ ತಮ್ಮ ನಿಜಸ್ಥಿತಿಯನ್ನು ಮರೆತು ವಿಷಯವರೆಂದೂ ಅನೇಕರು ಊಹಿಸಬಹುದು. ಇದು ಕೇವಲ ತಪ್ಪು.

ಗಂಡನು ಹೊರಗಿನ ತೆಲಸವನ್ನು ಜರುಗಿಸಿ ಮನೆಯನ್ನೆ ವಿನೋದನೆ ಆತನ ಸೊಗದ ಪ್ರೀತಿ ಭಾವದಿಂದ ಆಡುವ ವಿಧಾನವನ್ನೂ, ತನ್ನ ಪ್ರೇಮ ಮಕ್ಕಳಿಗೆ ವಿದ್ಯೆ, ಆಟ ಪಾಠಗಳನ್ನು ಯಾವ ರೀತಿಯಲ್ಲಿ ಹೇಳಿಕೊಡಬೇಕೆಂಬ ಮಾರ್ಗವನ್ನೂ ಕಲಿಸುವುದೇ ವಿದ್ಯೆ. 'ತಂಥಾ ಮಟಿಳೆಯರು ಮೇಲಿನ ರೀತಿಯನ್ನು ಅನುಸರಿಸುವುದೇ ಆದರೆ ಅವರಿಂದ ಜನಿಸಿದ ಪುತ್ರರು ನಾಗರೀಕರು ಎಂದೆನ್ನಿಸಿಕೊಳ್ಳುವರೆಂಬುವುದಕ್ಕೆ ಯಾವ ಸಂದೇಹವೂ ಉಂಟಾಗಲಾರದು. ಏಕಂದರೆ—" A mother's heart is a child's schoolroom " ಯಾವನು ಹೆದಾಕೆಯ ಅಂಕುರವನ್ನು ತನ್ನ ಪತ್ನಿಗೆ ತೋರಿಸುವನೋ ಆಗ್ಯೆ ಆ ಬಳಿಕ ನಮ್ಮ ಹೆದರು ಅಂಧಾ ತರದಲ್ಲಿ ಮಗ್ನಳಾಗುವಳು. ಧೈರ್ಯದ ಚಿತ್ತೆಗಳನ್ನು ಯಾವಾಗ ಹೇಳುವನೋ ತಕ್ಷಣವೇ ಅವಳೂ ಸಹ ಧೈರ್ಯವನ್ನು ಅವಲಂಬಿಸುವಳು. ಯಾವಾಗ ಅವಳು ವಾಡುವ ಕೃತ್ಯಗಳಿಗೆ ವಿರೋಧದಾಪತ್ತು ಅನುಭವಿಸುವ ಮಾತುಗಳನ್ನು ಹೇಳುವನೋ ಆವಾಗಲೇ ಅವಳು ಧೈರ್ಯ ತಪ್ಪಿ ಗಂಡನಿಗೆ ಸಹಾಯಕಳೆನಿಸಿಕೊಳ್ಳುವದರ ಬದಲು ಎಲ್ಲಾ ನಿಧದಲ್ಲ

ಕಾಗಳಾಗಿಯೂ, ಗೃಹ ಕೃತ್ಯಗಳನ್ನು ಸಾಂಗವಾಗಿ ನಡೆಸುವಂಥ ಶಕ್ತಿಯುಳ್ಳವಳಾಗಿಯೂ, ಅವಳಪ್ಪಕ್ಕೆ ಅಲೌಕಿಕ ಸಮಯ ಶಕ್ತಿಯನ್ನು ಪಡೆದು ಎಲ್ಲರಿಗೂ ನೀಲ್ಸಂಕ್ಯಯಾಗಿ ತಾಣಿಸಿಕೊಳ್ಳುವಲೆಂಬುವುದಕ್ಕೆ ಯಾರೂ ಸಂಕಯಪಡಲಾರರು ಈ ವಿಚಾರಗಳು ವಿದ್ಯೆಯನ್ನು ಗಳಿಸಿದ ಮಹಿಳೆಯ ಕರ್ತವ್ಯದಲ್ಲಿ ಅಂಕುರಿಸುವವೇ ವಿನಹ ವಿದ್ಯೆಯನ್ನು ಪಡೆಯದ ಸ್ತ್ರೀಯರಲ್ಲಿ ಎಂದಿಗೂ ನಾಟಲಾರವು ಅಂಧಾ ವಿದ್ಯೆಯನ್ನು ಹೊಂದಿದ ಸ್ತ್ರೀಯು ತನ್ನ ಸಕಲ ಕೆಲಸಗಳಲ್ಲಿಯೂ ಪ್ರವೀಣತೆ ಯಿಂದೆನ್ನಿಸಿಕೊಳ್ಳುವಳು. ವಿದ್ಯೆಯ ಸಾರವನ್ನು ಅರಿಯದವಳಾದರೋ ತನ್ನ ಗೃಹ ಕೃತ್ಯದ ಕೆಲಸವನ್ನು ಅರಿಯದಿದ್ದು ಒಂದೊಂದು ವೇಳೆ ಗಂಡನನ್ನು ಕುರಿತು "ಪ್ರಾಣಪ್ರೀತಿಯ ರೇ ಈ ದಿನ ಏನು ಅಡುಗೆ ಮಾಡಲಿ? ಚಾರು ಮಾಡಲೇ, ಹುಪ್ಪಿಟ್ಟು ಮಾಡಲೋ" ಎಂದು ಕೇಳುವ ಸಂದರ್ಭವು ಹುಟ್ಟುವುದು ಇದು ಯಾವುದರ ಫಲಿತಾಂಶವೆಂದು ವಾಚಕ ಮಹಾನೀಯರೇ ಊಹಿಸಬಹುದು ಅದುದರಿಂದ ಎಲ್ಲರೂ ಒಮ್ಮನಸ್ಸಿನಿಂದ ಸ್ತ್ರೀಯರಿಗೆ ಶಕ್ಯ ವಿದ್ಯೆಯನ್ನು ಕೊಡುವುದೇ ನಮ್ಮ ಭಾರವು. ಯಾಕಂದರೆ— The hand that rocks the cradle rules the world" ಅಂದರೆ— ತೊಟ್ಟಿಲು ತೂಗುವ ಕೈಯೇ ರಾಜ್ಯವನ್ನಾಳುತ್ತದೆ ಎಂಬ ಇಂಗ್ಲಿಷ್ ನಾಣ್ಣುಡಿಯು ನಿಜವಾದದ್ದು.

ಯಂ. ಜಿ ಕೃಷ್ಣಾಲಪ್ಪ
ಈಸ್ಟ್ ಆಫ್ರಿಕದ ತೊಡಗ


## WANTED.

Influential and honest men to work as Agents in every Taluk in Coorg, South Canara, Wynad &, Malabar Districts, for the Star of India Industrial & General Assurance Company Ltd on a fixed salary of Rs 40/—per mensem with bonus & commission.

Apply to –

V. Chandriah Naidu
District Organiser,
The Star of India Industrial &
General Assurance Co, Ltd
Mercara

## ಬೇಕಾಗಿದಾರೆ.

ಕೊಡಗು, ದಕ್ಷಿಣ ಕನ್ನಡ, ಮಲಬಾರು ಮತ್ತು ನಮ್ಮ ನಾಡು ನಿಪ್ಪತ್ತೈದು ತಾಲೂಕುಗಳ ಪ್ರತಿಯೊಂದು ತಾಲೂಕಿನಲ್ಲಿಯೂ 'ಸ್ಟಾರ್ ಆಫ್ ಇಂಡಿಯಾ ಇಂಡಸ್ಟ್ರಿಯಲ್ ಮತ್ತು ಜನರಲ್ ಎಸ್ಯುರೆನ್ಸ್ ಕಂಪೆನಿಯ ಏಜೆಂಟರಾಗಿ ತಿಂಗಳಿಗೆ 40 ರೂ. ಸಂಬಳದಲ್ಲಿ ಬೋನಸ್ ಮತ್ತು ಕಮಿಷನಿನ ಸಮೇತ ಕಾರ್ಯ ಮಾಡಲು ಪ್ರಮಾಣಿಕತನದ ಮತ್ತು ಜನರಲ್ಲಿ ಮಾತು ನಡೆಯುವ ಜನರು ಬೇಕಾಗಿದ್ದಾರೆ

ಪಿ ಚೆಂದ್ರು ಯ್ಯ ನಾಯಿಡು,
ಡಿಸ್ಟ್ರಿಕ್ಟ್ ಆರ್ಗನೈಜರು,
ದಿ ಸ್ಟಾರ್ ಆಫ್ ಇಂಡಿಯಾ,
ಇಂಡಸ್ಟ್ರಿಯಲ್ & ಜನರಲ್ ಎಸ್ಯುರೆನ್ಸ್
ಕಂಪೆನಿ ಲಿಮಿಟೆಡ್,
12—5. ಮಡಿಕೇರಿ.

## ಸಣ್ಣ ಹುಡುಗರ ಸಲುವಾಗಿ

# ಡೋಂಗರೆ

ಇವರ

# ಬಾಲಾಮೃತ

ವನ್ನು

ಕೊಡುವುದರಿಂದ

ನಿಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,
52—42 ಗಿರಿಗಾಂವ, ಮುಂಬಯಿ.

## ಜಿಪರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

### ೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೂರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಜಾಡ್ಯ ರಕ್ತ ಪಿತ್ತ, ಒಳ ಬ್ಯಾಡ, ಮೂಲ ಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.—ಕ್ಯಾಪ್ಸುಲ್ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ 7—0—0

### ೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಋತುನ್ಯಾನವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು ಸೊಂಟ ನೋವು, ಸುತಾಸ ಹೀನತೆ, ಮೋಟು, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮುಂತಾದ ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಎಚ್ಚರದಿಂದ ಗುಣ ಪಡಿಸುವುದು ಅಶೋಕಾರಿಷ್ಟವು ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಂಗ ಆರೋಗ್ಯವನ್ನು ಒದಗಿಸಿ, ಸಂತೋಷವನ್ನುಂಟುಮಾಡಿಸಿರುವವು

ಕೈಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ 2 ಆ. 4,
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ 6 ಆ. 4

### ೩. ಮಲೇರಿಯಾ ನಿವಾರಣೆ.

ದಿನ ವಿಟ್ಟು ಒರುವ ಜ್ವರ, ಮರೆ ಜ್ವರ, 2 ಯೂ 3 ದಿವಸಕ್ಕೊಮ್ಮೆ ಸಾರಿ ಒರುವ ಜ್ವರ ಸಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಒರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ತುಂಬಿ ಮೊಡತ್ತಿದೆ ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

### ೪. ಮೇಹ ಕುರಾರಿ. ಇದು ಮೂತ್ರಸ್ಥಾನದಿಂದ

ಕೆಂಪು, ಬಿಳಿದು, ಹುಣಿದಿಯಂತೆ ಹೋಗತಕ್ಕ ಕೀಪನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ
೨ 2—8—0 3ಕ್ಕೆ ರೂ 7

### ೫. ಏಳ್ಬಿ ಭೇದಿ ಗುಟಿಕೆ. ಅಮೀಬಸನ್ನು

ಉಂಟುಮಾಡುವ ಸುಲು ವೀರಚಕ ಬಾಟ್ಲಿ 1ಕ್ಕೆ 0—12—0
ಆಣೆ 3 ಬಾಟ್ಲಿಗಳಿಗೆ 2—2—0

ಸಂಶಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು ಕೆಲಬಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
12—9 ರತ್ನಪೀಠಿ, ಮಂಗಳೂರು, ದ. ಕನ್ನಡ.

# ಎಂ. ಎಸ್. ಶಿವಪ್ಪ ಅಯ್ಯರ್ & ಕಂಪೆನಿ

## ಹಾಗೂ ಪ್ಯೂನಿಯಂ ವ್ಯಾಪಾರಿಗಳು, ಮೈಸೂರು.

4 ಕ್ಯಾರೆಟ್ ಥಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಟುಂಡೋಬಸೂ ಆದ ಪೌಂಟನ್‌ಪೆನ್‌ಗಳು.

| | | |
|---|---|---|
| ಪರಲ್ಫ್ ವಂಡರ್ ಪೌಂಟನ್‌ಪೆನ್ 1ಕ್ಕೆ | ರೂ. | 3 0 0 |
| " ಬಿಗ್ ಬ್ಯಾರೆಲ್ ಪೆನ್ 1ಕ್ಕೆ | | 3 3 0 |
| " ಸ್ಕ್ರ್ಯೂ ಕ್ಯಾಪ್ ಪೆನ್ 1ಕ್ಕೆ | | 3 8 0 |
| " ಎಗ್ ಬ್ಯಾರೆಲ್ ಸ್ಕ್ರ್ಯೂ ಕ್ಯಾಪ್ ಮಾಡಲ್ ಕಲರ್ ಪೌಂಟನ್‌ಪೆನ್ 1ಕ್ಕೆ | | 3 14 0 |
| " ಮಾಡಲ್ ಕಲರ್ ಸ್ಕ್ರ್ಯೂ ಕ್ಯಾಪ್ ಪೌಂಟನ್‌ಪೆನ್ 1ಕ್ಕೆ | | 4 2 0 |
| " ಸೆಲ್ಫ್ ಫಿಲ್ಲಿಂಗ್ ಮಾಡಲ್ ಆಫ್ಥರ ಪೈಪ್ರೆವೂನ್ ಕಲರ್ ಪೌಂಟನ್‌ಪೆನ್ 1ಕ್ಕೆ | | 5 8 0 |
| ಸಿಸ್ಟಲ್ ಪೌಂಟನ್‌ಪೆನ್ 1ಕ್ಕೆ | | 10 8 0 |
| ಪೆನ್ 1ಕ್ಕೆ | | 14 6 0, & 20 10 0 |
| ಬೋರ್ಡ್ ಪೌಂಟನ್‌ಪೆನ್ 1ಕ್ಕೆ | | 3 8 0, & 3 12 0 |
| ಪೌಂಟನ್ ಪೆನ್ 1ಕ್ಕೆ | | 6 4 0, & 6 12 0 |
| ಮೆನ್ ಪೌಂಟನ್ ಪೆನ್ 1ಕ್ಕೆ | | 8 2 0, & 8 10 0 |

ಪ್ಲಿಂಪೀಸ್‌ಗಳು.

| | |
|---|---|
| ಸ್ಯಾಟ್ಯಿಂಡ್ ಇರುವ ಸೆಣ ಪ್ಲಿಂಪೀಸ್ 1ಕ್ಕೆ | 3 6 0 |
| ಜರ್ಮನ್ ಮೇಡ್ ಸೆಣ್ಣ ಪ್ಲಿಂಪೀಸ್ 1ಕ್ಕೆ | 2 2 0 |
| ಲಿಗಲಿಯೂ ಅಲಾರಂ ಪ್ಲಿಂಪೀಸ್ 1ಕ್ಕೆ | 6 9 0, & 6 15 0 |
| ಲಿಗಲಿಯೂ ಸಣ್ಣಸೈಜಿನ ಅಲಾರಂ ಪ್ಲಿಂಪೀಸ್ 1ಕ್ಕೆ | 7 2 0 |
| ಲಿಗಲಿಯೂ ಅಲಾರಂ ಸೆಣ್ಣ ಪ್ಲಿಂಪೀಸ್ ರೇಡಿಯಂ ಹೈಲಿನಸ್ 1ಕ್ಕೆ | 8 10 0 |
| ವಿನ್‌ಜೆನ್ ಅಲಾರಂ ಪ್ಲಿಂಪೀಸ್ 1ಕ್ಕೆ | 9 6 0 |
| ವಿನ್‌ಟೆನ್ ಅಲಾರಂ ಸ್ಯಾಟ್ಯಿಂಡ್ ಇರತಕ್ಕೆ ಪ್ಲಾಟಿನಂ ಯಾದ ಪ್ಲಿಂಪೀಸ್ 1ಕ್ಕೆ | 13 4 0 |
| ಜಾಕ್ಸಿಯೂ ಒಂದೋಜಸ್ಸೂ ಆದ ಸಾಕೆಟ್ ವಾಚ್ 1ಕ್ಕೆ | 5 10 0 |
| ಡಿಫೋ ನಮೂನೆಯಲ್ಲಿ ಎಲ ಹಾರ್ಡ್ ಕಂಪೆನಿಯ ಸಾಕಟ್ ವಾಚ್ 1ಕ್ಕೆ | 12 4 0 |
| ನಿಕ್ಕಲ್ ಕೇಸ್ ಸಿಲಿಂಡರ್ ಮೂವ್‌ಮೆಂಟ್ ಸಾಧಾರಣ ಕೆರಪಿನ ವಾಚ್ 1ಕ್ಕೆ | 5 4 0, 7 8 0, 10 0 0 & 12 8 0 |

ಜಲ್ದಿನ ಮೂಡಿಸಿರುವ ನಮೂನೆ ಅಂದವಾದ ಟೇಬಲ್ ಪ್ಲಿಂಪೀಸ್ 1ಕ್ಕೆ 3—6—0 ಪೋಸ್ಟೇಜು ಆಕಾಯದ.

ಮನಿಯಾರ್ಡರ್ ರವಾನಿಸುವ ವಿಳಾಸ.—ಎಂ. ಎಸ್ ಶಿವಪ್ಪ ಅಂಡ್ ಬ್ರದರ್ಸ್.
52—15 ಪ್ಯಾಟೆಂಟಿಯಂ ವ್ಯಾಪಾರಿಗಳು, ಮೈಸೂರು.

## ಪ್ರಕಟಣೆ.

**ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕ್,**
**ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್**
**ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.**

| | ರೂ. |
|---|---|
| ಶೇರ್ ಬಂಡವಾಳ | 50,000 |
| ವಸೂಲಾದ ಶೇರ್ ಮೊಬಲಗು | 23,160 |
| ಜಮೂಬಂದ ರೇವಣಾತಿ | 2,16,472 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಕ್ಕಾಗ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ನೆರ್ಪಕ್ಕೊಂದಾವರ್ತಿ ಕೊಲ ಪರೀಟಿನ್ ರಿಜಿಸ್ಟ್ರಾರರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

| | |
|---|---|
| ಪೈಸಿಡೆಂಟರು, | ಟ್ರಿಜರರ್ |
| ಕೋದಂಡ ಅಯ್ಯನವರು, | ಮನೆಯಪ್ಪಂಡ ಬೆಳ್ಯಪ್ಪ |
| ರಾವ್ ಬಹದ್ದೂರ್. | ನವರು. |

ಸೆಕ್ರೆಟರಿ

ಸಿ. ಯಚ್. ವೆಂಕಯ್ಯನವರು, ಬಿ.ಎ;ಬಿ.ಎಲ್;

ಕಾರ್ಯಕ್ಷ 1—7—1930.

---

## ನೋಟೀಸು.

ಈ ಕೆಳಕಾಣಿಸಿದ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಹಿಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಸೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಸೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಸೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಮರೆನಾಡು—ಮೆ. ಕೀಕೆರ ಅಯ್ಯಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಮುಂಡೇಪಂಡ ಸೋಮೆಯ್ಯನವರು, (ಪಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.

ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,

ಅಮ್ಮತ್ತಿ—ನಿಡ್ವಾಳುರು—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯಯ್ಯನವರು,

ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ ಈ ತಿತಿಮತ್ತಿ—ಮೆ. ಜೆ. ಮಾದಯ್ಯಯ್ಯನವರು,

ಸಂಟಿಕೊಪ್ಪ—ಮೆ. ಅಪ್ಪಚೆಟ್ಟೀರಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಸೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

---

## ಮೊರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ಪಾವತಿ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಳಗುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡದಲ್ಲಿ ಎಂದು ಪಾವತಿ ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾವಾ ಫಾರಮುಗಳೂ, ನಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮೊರಾಟಕ್ಕಿವೆ. ಮೇನೇಜರ್,

"ಕೊಡಗು" ಮಡಿಕೇರಿ.

---

12 bore Victor Cartridges Rs. 10/- Per 100

**Mahomedally-Noorbhoy.**

**ARMS & AMMUNITION MART.**

321 Abdul Rehman Street.

53 49 **BOMBAY.**

---

**ಭರತಖಂಡದ ಜೀವವಿಮೆ ಕಂಪನಿಗಳಲ್ಲಿ ಅತ್ಯಂತ ದೊಡ್ಡದಾದ**

## ಓರಿಯಂಟಲ್ ಜೀವವಿಮೆ ಕಂಪೆನಿಯ

ಪ್ರತಿವರ್ಷವೂ ನಿವ್ವಳ ವಾರ್ಷಿಕ ಆದಾಯದ ಹಂಚಿಕೆಯು ಅದೇ ಡಿಸೆಂಬರ್ 31ನೇ ತಾರೀಕಿನಲ್ಲಿ ಕೊಡಲ್ಪಡುತ್ತೆ.

ಕಳೆದ ಮೂರು ಸಾರಿ ಅಂದಾಜು ಮಾಡಲ್ಪಟ್ಟಾಗ ಇದ್ದ ಉತ್ಪತ್ತಿಯಾದ ವಿವರ

1921ರಲ್ಲಿ 21½ ಲಕ್ಷ ರೂಪಾಯಿಗಳು.
1924ರಲ್ಲಿ 53½ ,, ,,
1927ರಲ್ಲಿ 78 ,, ,,

**ಜೀವನಾಂತ್ಯದ ವಿಮೆಗಳ ಮೇಲೆ ಕೊಟ್ಟಿ ಬೋನಸುಗಳು.**

1921ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ. | 1927ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 25 ರೂ.
1924ರಲ್ಲಿ ,, ,, ,, 22½ ,,

ಈ ವರ್ಷದಲ್ಲಿ ದಾಖಲಾಗುವ ಪಾಲಿಸಿಗಳಿಗೂ ಇನ್ನು 1930ನೇ ಇಸವಿ ಡಿಸೆಂಬರ್ 31ನೇ ತಾರೀಕಿನಲ್ಲಿ ಆದಾಯದ ಹಂಚಿಕೆಯು ಕೊಡಲ್ಪಡುತ್ತೆ.

ಆದುದರಿಂದ ನೀವು ಓರಿಯಂಟಲ್ ಕಂಪೆನಿಯ ಪಾಲಿಸಿದಾರರಾಗುವುದರಲ್ಲಿ ಹೇರಳ ಲಾಭವುಂಟು.

**ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.**

**ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.**

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು:—

ಓರಿಯಂಟಲ್ ಬಿಲ್ಡಿಂಗ್ಸ್, ಯಂ. ವಿ. ಮುತ್ತುಕೃಷ್ಣ ನಾಯಡು,
ಸೌತ್ ಪೇರೇಡ್, ಬೆಂಗಳೂರು. 52—34 ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

---



ಕಾರ್ಡ್ ಬರೆದರೆ ರುಜಿನ ಕ್ಯಾಟಲಾಗು ಮೂಲಿಯಾಗಿ ಕಳುಹಿಸಲ್ಪಡುವುದು.

ಕೋವಿಗಳು, ಕತ್ತಿಗಳು, ಬರ್ಚಿಗಳು, ತೋಟಿಗಳು, ಕೇಪ್ಸುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

**GOOLAMHUSAIN ALLIBHOY & SONS,**
**Largest Importers of Firearms and Ammunition**
**Cheapest priced firm in India,**
24—4 **210 Abdul Rehman Street, BOMBAY.**

---

ಕ್ಷರೆ ಮಾಡಿರಿ! ಕ್ಷರೆ ಮಾಡಿರಿ!!

THE UNITED KARNATAK INSURANCE COMPANY LTD., DHARWAR.

## ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಧಾರವಾಡ.

(ಗವರ್ನಮೆಂಟಿನೇ ಇಸವಿಯ ಹಿಂದುಸ್ಥಾನದ ಕಂಪೆನಿಯು ಏನೇ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.)

### ಏಜಂಟರು ಬೇಕು.

ಕನ್ನಡ ನಾಡಿನಲ್ಲಿ ಕನ್ನಡಿಗರ ಧನಸಹಾಯದಿಂದ ಸ್ಥಾಪಿಸಲ್ಪಟ್ಟ ಮತ್ತು ಕನ್ನಡಿಗರಿಂದೆ ನಡೆಸಲ್ಪಟ್ಟ ಈ ಮೊದಲನೇ ಕಂಪೆನಿಗೆ ತೀರುಗಳನ್ನು ಮೂರುವರತ್ತೂ, ವಿಮೆಯ ಕೆಲಸವನ್ನು ತಂದು ಕೊಡುಸುವದಕ್ಕೂ ಎಲ್ಲಾ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು ವಿಮೆಯ ಕೆಲಸವನ್ನು ಗ್ಯಾರಂಟಿ ಮಾಡಿಪಡಲ್ಲಿ ವಿಶೇಷ ಸವಲತ್ತುಗಳು ಕೊಡಲ್ಪಡುವವು. ಕನ್ನಡಿಗರೇ ತೀರ್ಮನೇ ನಮ್ಮ ಕೆಲಸವನ್ನು ಕೈಕೊಂಡು ಅಭಿವೃದ್ಧಿಪಡಿಸಿಕೊಳ್ಳಿರಿ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Huilgolkar,
ಸೆಕ್ರೆಟರಿ.

26—14 ಯು. ಕ. ಇ. ಕ. ಲಿ. ಧಾರವಾಡ.

---

Printed & published by P. L. Belliappa at "Kodagu" Press, Mercara for "Kodagu" Ltd.

# ಕೊಡಗು.

"KODAGU" OFFICE MADIKERI.

In no. delivery please return to

ಸರ್ವೇಷ ಧೂತದಯಯಮಾವಿದಾ ನೀತಿಪ್ರಯುಕ್ತ ಸಾ। ಜಕ ಮುತೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ।

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦ | ಮಡಿಕೇರಿ, ಸನ್ ೧೯೩೦ನೇ ಇಸವಿ ಸೆಪ್ಟಂಬರ್ ತಾರೀಕು ೫ನೇ ಶುಕ್ರವಾರ. | ಸಂಚಿಕೆ ೧೪



Telephone — 3145

By Appointment to H. E. The Governor of Madras.

Telegrams — "PRECIOUS"

Cups, Rs. 6, and upwards



CUPS.
MEDALS.
SHIELDS.
CASKETS.

Medals, Rs. 1–8–0 and upwards

V. SUBRAMANIA IYAR.
JEWELLER.

Post Box No., 423, Tripliacne,

*Illustrated Catalogue Free on Application,*

52–50 MADRAS.

NITRATE OF SODA

The best and cheapest form of N trogen for plants Highly concentra'ed and immediately available Nothing l ke it to make plants grow.

ಚಿ ಲಿ ಯ ನ್ ನೈ ಟ್ರೇ ಟ್ ಆ ಫ್ ಸೂ ೀ ಡಾ

ಗಿಡಗಳಿಗೆ ಅತ್ಯವಿರುವ ನೈಟ್ರೋಜನ್ ತೆತ್ಯುತ್ತಮ ರೀತಿಯಿಂದಲೂ, ಅತಿ ಸುಲಭ ಬೆಲೆಯಲ್ಲಿಯೂ ಸಿಕ್ಕು ಥಾಮ್ಯ ಬಹಳ ಬಲವಾದ್ದು ಮತ್ತು ತಕ್ಕಾಲ ಸಿಕ್ಕುವಂಥಾದು ಗಿಡಗಳು ಬೆಳೆಯಲಿಕ್ಕೆ ಇದರಷ್ಟು ಸಹಾಯ ರಿಯಾದ್ದು ಬೇರೆ ಯಾವದೂ ಇಲ್ಲ

ನ್ ಕಂಪರ ಅಂಡ್ ಕಂಪೆನಿ, ಸೌಥಮರ್ ರೋಡು ಪೂನ

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ಧರ್ಮೋರ್ಧವಾಗಿ ಹಾಯುವ ಪತ್ರಿಕೆಗಳು ಇಗ್ಲೆರೆಗಳಿಗೆ ಈ ಕೆಳಗಿನ ವಿಳಾ ತಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ ಇಂಡಿಯನ್ ಏಜೆನೆಶನ್, ಪೋ ಬಾ ನಂ 469 ಕಲ್ಕತ್ತಾ

(2) ಮಿಸ್ಟರ್ ಯಂ ಯಂ ಬೆಳ್ಯಪ್ಪ, ಚಿಲಿಯನ್ ನೈಟ್ರೇಟ್ ಕಮಿಟಿ, ಮಡಿಕೇರಿ

24—18

ಕಟುಕಷಾಯ ಮಲೆಯಾಳಿಗಳಿಗೆ—ಇದು ಇಂಜಿಷ್ಟನ್ ಮತ್ತು ಕ್ವಿನೀನು ಸೇವಿಸಿದಂತೆ ಗುಣವಾಗದಿರುವ ಚಳಿ ಜ್ವರ ದಿಂದ ಆಗುವ ಜ್ವರ ೩—೫ ದಿವಸಕ್ಕೊಮ್ಮೆ ಇಂದ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಳಿಗೆ ಮೋಹದಿಂದ ಬರುವ ಜ್ವರಗಳಿಗೆ ಈ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0 3ಕ್ಕೆ ರೂ 4—0—0 6ಕ್ಕೆ ರೂ 7—8—0 12ಕ್ಕೆ ರೂ 14




ಜಂದನಾಸವ—ಇದು ಪ್ರಮೇಹ ರೋಗಕ್ಕೆ ಕೈಕಂಡ ಮಾತ್ರೆ' ಪಾನಕವಾಗಿ ಹೋಗುವದು, ಮೂತ್ರಕೋಶದ ಉರಿ ಮೂತ್ರ ಹಿಂಡಿಗೆ ಉರಿ ಮೂತ್ರನಾಳದಲ್ಲಿ ಹುಣ್ಣು ವಿಶ್ರ ಹೊಯ್ಯುವಾಗ ಉಂಟಾಗುವದು ಮೂತ್ರ ನಾಳದಿಂದ ನೀರು ಬರು ವದು, ಮೂತ್ರದಲ್ಲಿ ಧಾತು ಹುಡಿ ಹೋಗುವದು ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಲ್ಲದಿರು ವದು ದೇಹದಲ್ಲಿ ಉರಿ ಉಂಟಾಗಿ ಸ್ವೇದಾನ್ನಕ್ಕೆ ಮೂತ್ರ ನಾಳದಲ್ಲಿ ಹುಣ್ಣು ಆಗುವ ನೋವು ಇತ್ಯಾದಿ ಪರಮ ರೋಗಿಗಳಿಗೆ ಪರಮ ರೋಗಿಗಳಿಗೆ ಬಹಳ ಬಾಟ್ಲಿ 1 3 6ಕ್ಕೆ ರೂ 1—4—0 3—8—0 6—12—0

ಕೋಮುನಾಸಿನಿ:—ಈ ಔಷಧಿಯನ್ನು ಮೂಗಿನಲ್ಲಿ ಳಲು ಮ್ಮೆಯಲ್ಲಿ ಕೋಮುವಿರುವ ಧಾಗಿಕ್ಕೆ ಹುಣ್ಣಲು ಕೋಮುವ ಉಡುವಿ ಪೀ ಮು ಡಬ್ಬ 1ಕ್ಕೆ 6ಆಕೆ 3ಡಬ್ಬಿಗಳಿಗೆ ರೂ 1 1 ಡಬ್ಬಿಗೆ 3—8—0

ಮನೋಜ್ಞಾಸಿನಿ ಕ್ಷೀಲ:—ಕಲಿನೋವ್ತ, ತಲೆನೋವು, ತಲೆಭಾರಗುವದು ಕಲಿವುಗಿ, ಕಣ್ಣುರಿ ಸಿವಿಯಿಂದ ಕೀವು ಸೋರುವದು ಕಿವುಡು ಳಿಸು ಸೋವು, ಅಪಸ್ಮಾರ ಕ್ಕೆ ಬಾಧರಿರುವದು ನೆನಪು ಕಡಿ ಕುಂದಿಹೋಗುವದು ಇವಳಸ್ಸಿಲ್ಲ ಖಂಡಿತ ಗುಣಮಾಡುತ್ತದೆ ಉ ಹುವ ಔಷಧಮ್ಮ ಖಿಲ್ಲಿಸಿ ಗಿತ್ತವಾಗಿರುವ ತೊಡಸನ್ನು ಬೆಳೆಯಿಸಿ ಕೊಡಲಿಗೆ ಸಾಂದರ್ಯವನ್ನೂ ಹೊಳಪನ್ನು ಕೊಟ್ಟು ಆಕಾಲಕ್ಕೆ ಕಣ್ಣಾಗು ತೊಡಲಮ್ಮ ಸಡಿಲು ತೊಡಲು ಇಲ್ಲದ ಸ್ಥಳದಲ್ಲಿ ಹೊಸ ತೊಡಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0- ತೊಡಲು ಡಿಕ್ಕ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ನಮ್ಮ ಔಷಧಾಲಯದಲ್ಲಿ ಸಿಗುವವು.

ವಿಳಾಸ—ಮನೋಜ್ಞಾಸಿನಿ ಕಂಪೆನಿ, 9. ಮಂಗಳೂರು.

52—25

## ಬಾಲಾರ್ಕಮಧು.

ನಮ್ಮ ಮಕ್ಕಳ ಸ್ವಾಸ್ಥ್ಯವನ್ನು ನೋಡಬೇಕಾದರೆ ಅಮೃತ ಗುಣವಳ್ಳ ಬಾಲಾರ್ಕಮಧುವನ್ನು ಕೊಡಿರಿ ಮಕ್ಕಳು ರೋಗ




ಸೀಡಿರಾಗಿ ಎಲ್ಲೇ ಸ್ಟೆ ಡಾಗಿಸ್ಟೆರೂ ಇದೊಂದೆ ಒಂದು ತೀರ ಸ್ವಾಸ್ಥ್ಯ ಯೂ ಬಲವೂ ಎನಿಸಿದೆ ದಿನ ಏ ಕ್ಕೆ ಆರೋಗ್ಯವೂ ತಪ್ಪದೆ ಹೆ ಚ್ಚುವದು ಇದು ಮಧುರವಾಗಿದೆ ಚಿಕ್ಕ ವ ಕ್ಕರು ಆನಂದದಿಂದ ಸೇವಿಸುತ್ತಾರೆ ಸೀಸೆ 1 ಕ್ಕೆ 12 ಆಣೆ ಟಿ ಪಿ 9 ಆಣೆ

52—41 ಯಂ. ವಿ. ಪ್ರಸಾದಿಕ್ಕ ಔಷಧಾಲಯ, ಶೀಮೊಗ್ಗಾ. (ಮೈಸೂರು ಸೀಮೆ)

# ಕೊಡಗು.

ಸರ್ ೧೯೪೦ನೇ ಇಸವಿ

ಸೆಪ್ಟೆಂಬರ್ ಪಾ. ೫ನೇ ಶುಕ್ರವಾರ.


## ಸರ್ಕಾರದ ದಬ್ಬಾಳಿಕೆ.

ವೈಸರಾಯರು ಕಾಂಗ್ರೆಸ್ಸನವರೊಂದಿಗೆ ರಾಜಿ ಮಾತು ನಡಿಸುತ್ತಿರುವಾಗ ವೈಸರಾಯರ ಸರ್ಕಾರವು ದಬ್ಬಾಳಿಕೆಯು ದಾರಾಯಲ್ಲಿ ಮುಂದುವರಿಯುತ್ತಲೇ ಇದೆ. ಕಾಂಗ್ರೆಸಿನ ಹಂಗಾಮಿ ವೈಸಿಡೆಂಟರಾಗಿದ್ದ ಮೌಲಾನಾ ಅಬುಲ್ ಕಲಾಮ್ ಆಜಾದರನ್ನು ದಸ್ತಗಿರಿ ಮಾಡಿದ ಸ್ವಲ್ಪ ಕಾಲದಲ್ಲೇ ಡಿಲ್ಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮಿಟಿಂಗು ಆಗಕ್ಕಿದ್ದಿತ್ತು. ಡಿಲ್ಲಿ ಸರ್ಕಾರವು ವರ್ಕಿಂಗ್ ಕಮಿಟಿಯನ್ನು ಬಿನಾನೂಸಿಗೆ ವಿರೋಧವಾದ ಸಭೆ ಎಂತ ಆರ್ಡರ್ ಮಾಡಿ ವರ್ಕಿಂಗ್ ಕಮಿಟಿ ಮಿಟಿಂಗಿಗೆ ಸೇರಿದ್ದ ಗಂಡಸರಾದ ಸಭಿಕರನ್ನೆಲ್ಲಾ ದಸ್ತಗಿರಿ ಮಾಡಿ ಇಟ್ಟರು. ಸ್ತ್ರೀ ಸಭಿಕರನ್ನು ಮಾತ್ರ ಬಿಟ್ಟರು. ದಸ್ತಗಿರಿಯಾದ ಸಭಿಕರಿಗೆ ಆರಾರು ತಿಂಗಳ ಸಾದಾ ಸಜವೂ ವಿಧಿಸಲಾಯಿತು. ಈ ಶಿಕ್ಷೆಗೆ ಜನಪ್ರಿಯರಾದ ಡಾಕ್ಟರ್ ಅನ್ಸಾರಿ, ಪಂಡಿತ ಮದನ ಮೋಹನ ಮಾಳವೀಯರು, ಎಂಬಿಗಳಾದ ಪೈಸಿಡೆಂಟರಾಗಿ ವಿಶೇಷ ಧೈರ್ಯವನ್ನೂ, ಬುದ್ಧಿ ಕುಶಲತೆಯನ್ನೂ ತೋರಿಸಿದ್ದ ಸರ್ದಾರ್ ವಲ್ಲಭಭಾಯಿ ಪಟೇಲರ ಅಣ್ಣ ವಿ. ಜೆ. ಪಟೇಲರೇ ಮೊದಲಾದ ಹತ್ತು ಜನರು ಗುರಿಯಾಗಿರುತ್ತಾರೆ.

ವರ್ಕಿಂಗ್ ಕಮಿಟಿಯನ್ನು ಖಾನೂನಿಗೆ ವಿರೋಧವಾದ ಸಭೆ ಎಂತ ಡಿಲ್ಲಿ ಸರ್ಕಾರವು ಮಾತ್ರವಲ್ಲ, ಬೊಂಬಾಯಿ, ಒಂಗಾಳ, ಮದ್ರಾಸ್ ಮಧ್ಯಪ್ರಾಂತ್ಯಗಳೇ ಮೊದಲಾದ ಇತರ ಸರ್ಕಾರಗಳೂ ಸಹ ಮಾಡಿವೆ. ಇದರಿಂದ ಈ ಕೆಲಸವು ಸ್ವಾಂತೀಕ ಸರ್ಕಾರಗಳ ಸ್ವಂತ ಜವಾಬ್ದಾರಿಯಿಂದಲ್ಲ. ಇಂಡಿಯಾ ಸರ್ಕಾರದ ಹುಕುಮಿನಿಂದಲೇ ಆಗುತ್ತಿರುವದೆಂತ ಸ್ಪಷ್ಟವಾಗುತ್ತದೆ. ವರ್ಕಿಂಗ್ ಕಮಿಟಿಯವರು ಏನು ತೀರ್ಮಾನ ಮಾಡುತ್ತಿದ್ದಾರೆಂತ ತಿಳಿಯುವ ಮೊದಲೇ ಆ ಕಮಿಟಿಯ ಸಭಿಕರನ್ನು ತಿಕ್ಷ್ಣಿಸಿದ್ದು ನ್ಯಾಯವಲ್ಲ. ಆ ಕಮಿಟಿಯವರು ಕಾಜೆ ಶಾಶ್ವಗಳನ್ನು ಚರ್ಚಿಸಲೂ ಬಹುದಾಗಿತ್ತು. ವೈಸರಾಯ್‌ರವರ ಆರ್ಡರ್ ಇರ್ದಿನರು ರಾಜಿಯೊತಾತಾಯಿತು? ಸರ್ಕಾರವು ತಾನು ಕೈಕೊಂಡ ದಬ್ಬಾಳಿಕೆಯನ್ನು ಮುಂದೆ ಸಾಗಿಸುಕ್ಕಲೇ ಇಂಬಿಕೆಂತ ನಿಶ್ಚಿಸಿರುವಂತೆ ತೋರುತ್ತದೆ. ಇಂಥಾ ಕಾರ್ಯಗಳಿಂದ ಸರ್ಕಾರದ ಗೌರವ ಹೆಚ್ಚುತೆಂತ ಅಧಿಕಾರಿಗಳು ನಂಬುತ್ತಾರೋ ಏನೋ, ಜನಲ್ಲಂತೂ ಸರ್ಕಾರದ ಮೇಲೆ ಗೌರವ ಹೆಚ್ಚುವ ಬದಲು ಇನ್ನಷ್ಟು ಮನಸ್ತಾಪ ಹೆಚ್ಚುವುದರಲ್ಲಿ ಸಂಶಯವಿಲ್ಲ.

ಸ್ತ್ರೀ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡಿದ ತೀರ್ಮಾನಗಳು ಖಾನೂನಿಗೆ ವಿರೋಧವಾದವು ಅಲ್ಲವೆಂತ ಕೋರ್ಟುಗಳಲ್ಲಿ ವೈಸರಾಗಿವೆ. ಅವರು ಘೋಷಿಸಿದ ತೀರ್ಮಾನಗಳನ್ನು ಜಾರಿಗೆ ತರುವುದಲ್ಲಿ ಖಾನೂನು ಭಂಗವಾದರೆ ಹಾಗೆ ಖಾನೂನು ಭಂಗ ಮಾಡುವವರನ್ನು ತಿಕ್ಷ್ಣಿಸುವದಕ್ಕೆ ಯಾರೂ ಆಕ್ಷೇಪಣೆ ಮಾಡಲು ಕಾರಣವಿಲ್ಲ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯನ್ನು ಖಾನೂನಿಗೆ ವಿರೋಧವೆಂತ ಸರಕಾರವೇ ಹುಕುಂ ಮಾಡಿ ಕೂಡಲೇ ಆ ಕಮಿಟಿಯ ಮೆಂಬರುಗಳನ್ನು ದಸ್ತಗಿರಿ ಮಾಡುವದೂ ಅಕ್ರಮವೆಂತ ಯಾರಿಗೆ ತಾನೇ ತೋರದು?

ಸರಕಾರವು ಸ್ವಲ್ಪ ಶಾಂತತೆಯನ್ನು ತಾಳ್ದಿದ್ದರೆ ಏನೂ ಮನಸ್ತಾಪಕ್ಕೆ ಕಾರಣವಿರುತ್ತಿರಲಿಲ್ಲವೆಂತ ಬೊಂಬಾಯಿಯಲ್ಲಿ ಕೊನ್ನೆ ನಡೆದ ಒಂದು ವಿಷಯದಿಂದ ತಿಳಿಯುತ್ತದೆ. ಬೊಂಬಾಯಿ ಪಟ್ಟಣದ ಒಂದು ಮೈದಾನದಲ್ಲಿ ಸ್ವಯಂಸೇವಕರು ಸೇರಿ ರಾಷ್ಟ್ರಧ್ವಜಕ್ಕೆ ವೆಂದನ್ನೆ 1ನೇ ತಾರೀಕಿನಲ್ಲಿ ಅಧಿವಂದನೆ ಸಲ್ಲಿಸಬೇಕೆಂತ ಬೊಂಬಾಯಿಯ ಕಾಂಗ್ರೆಸ್ ಮಂಡಾಳಿಗಳು ನಿಶ್ಚಿಸಿದವು. ಆದರೆ ಸರಕಾರದ ಅಧಿಕಾರಿಗಳು ಸದರಿ ಮೈದಾನದಲ್ಲಿ ವೈದ್ಯಸೇವಕರು ಸಾಲುಗಟ್ಟಿ ನಿಲ್ಲಲಾಗದು, ಕವಾಯಿತ್ತು ಮಾಡಲಾಗದು ಎಂತ ಆಜ್ಞೆ ಹುಕುಂ ಮಾಡಿದರು. ಆದ್ದರಿಂದ ಕಾಲ್ಪಡೆಯ ಸ್ವಯಂಸೇವಕರಿಗೆ ಪುನಃ ಮೈಸೂರಿಗೆ ಪಟ್ಟು ಬೀಳುತ್ತದೆಂತ ಎಲ್ಲರೂ ನಿಶ್ಚಿಸಿಕೊಂಡಿದ್ದರು. ಆದರೆ ಕೆಲವು ಮುಖಂಡರು ಸರಕಾರದ ಅಧಿಕಾರಿಗಳನ್ನು ಭೇಟಿ ಮಾಡಿ ಸ್ವಯಂಸೇವಕರು ಸೂಚಿಸಲು ನಿಶ್ಚಿಸಿದ ಕಾರ್ಯವನ್ನು ಮಾಡಲು ಬಿಟ್ಟರೆ ನಿಸು ತೊಂದರೆಯಾಗಲಿಲ್ಲವೆಂತ ತಿಳಿಸಿದರು. ಈ ಪ್ರೋದ್ಘೋಷಣೆಯನ್ನು ಅಧಿಕಾರಿಗಳು ಅಂಗೀಕರಿಸಿದರು. ರಾಷ್ಟ್ರಧ್ವಜಾಭಿವಂದನೆಯು ನಿರಾತಂಕವಾಗಿ ನಡೆದೇ ನಡೆಯಿತು. ಆ ನೆಪದಲ್ಲಿ ಮಾಡಲು ಇತ್ತು ಜನರು ನೆರೆದಿದ್ದರೂ ಸಹ ಏನೊಂದು ಘೋರ ಪ್ರಕಾರಗಳಲ್ಲಿ. ಸರಕಾರದವರು ತಮ್ಮ ಹುಕುಮನ್ನು ಜಾರಿ ಮಾಡಲು ಶಿಕ್ಷಿಸಿದ್ದರೆ ಅನಾವಶ್ಯಕವಾಗಿ ನೂರಾರು ಜನರಿಗೆ ಪೆಟ್ಟಾಗಿ ಕೆಲವರ ಜೀವನಾಶ ಸಹ ಆಗುವ ಸಂಭವವಿತ್ತು. ಇದರಿಂದಲೇ ಜನರ ಮನಸು ನೋಯುವಂತೆ ಪೋಲೀಸಿನವರು ವರ್ತಿಸುವುದು ಜನರು ಪುಂಡು ಮಾಡಿದ್ದರಿಂದ ಅಲ್ಲ. ಸರಕಾರದವರೇ ಅವಶ್ಯವಿಲ್ಲದ ಗೌರವಕ್ಕೆ ಕೊರತೆಯಾಗುವ ಹುಕುಮುಗಳನ್ನು ಮಾಡಿ ಅವನ್ನು ಉಲ್ಲಂಘನೆ ಮಾಡಿದರೆಂಬ ಕಾರಣದಿಂದ ಸ್ವಯಂಸೇವಕರ ಮೇಲೂ, ಇತರರ ಮೇಲೂ ಅತಿಗಳಿಂದ ಹೊಡೆಯುವರು. ಬೊಂಬಾಯಿಯ ಈದಿನ ವರ್ತನೆಯಿಂದ ಶಾಂತತಾಭಂಗವು ಯಾವ ರೀತಿಯಿಂದಲೂ ಆಗದಿರುವದನ್ನು ನೋಡಿಯಾದರೂ ಸರಕಾರವು ಇನ್ನು ಮೇಲೆ ಅವಶ್ಯವಿಲ್ಲದ ಸುತುಮುಗಳನ್ನು ಮಾಡದಿದ್ದರೆ ಜನರಿಗೂ, ಸರಕಾರಕ್ಕೂ ಬರುವ ಪೆಟ್ಟಿನ ತೊಂದರೆಗಳು ಇಲ್ಲವಾದಾವು.

ಹಿಂದೂಸ್ಥಾನದಲ್ಲಿರುವ ಯೂರೋಪಿಯನರು ಇತ್ತೀಚೆಗೆ ಹಿಂದೀಯರ ರಾಜಕೀಯ ಧ್ಯೇಯಕ್ಕೆ ನಿಂಪೂರ್ಣವಾಗಿ ವಿರೋಧಿಸಲು ನಿಶ್ಚೈಸಿರುವಂತೆ ತೋರಿ ಬರುತ್ತದೆ. "ಕಾಂಗ್ರೆಸಿನ ಕ್ರಾಂತಿಕಾರೀ ಚಳವಳಿವನ್ನು ನಿರ್ಮೂಲ ಮಾಡಿದ ವಿನಹ ಹಿಂದೂಸ್ಥಾನಕ್ಕೆ ಯಾವ ರೀತಿನ ಸುಧಾರಣೆಯನ್ನೂ ಕೊಡಬಾರದೆಂಬ ಅಧಿಸ್ಯಾಯವನ್ನು ಕೆಲವು ಕಡೆಯಲ್ಲಿ ಯೂರೋಪಿಯನರು ಸೂಚಿಸಿರುತ್ತಾರೆ. ವೈಸರಾಯರು ಮಾಡುವ ರಾಜಿ ಪ್ರಯತ್ನಕ್ಕೆ ಹಿಂದೂಸ್ಥಾನದಲ್ಲಿರುವ ಯೂರೋಪಿಯನರು ಏನೇನೂ ಸಹಾಯಕರವಾಗುವಂತೆ ಕಾಣುವದಿಲ್ಲ ಈ ತರದಲ್ಲಿ ಯೂರೋಪಿಯನರ ಬಧಿಸ್ಯಾಯವು ಒದಗಿಬಂದ ರಿಂದ ನಿಮ್ಮೊಂದಿ ಯೂರೋಪಿಯನ್ನರಲ್ಲಿ ತುಂಬಾ ನೆಮೋಧಾನ ಉಂಟಾಗಿದೆಯಂತೆ. ನಿಮ್ಮೂದಲ್ಲಿ ಇರುವ ಯೂರೋಪಿಯನರು ಹೆಚ್ಚಾಗಿ ಆಫೀಸರುಗಳೇ. ಸುಮ್ಮೂದಲ್ಲಿ ವೈಸ್ರಾಯ್ ಉಂಟಾಯಿತೆಂತ ಬಂದ ವರ್ತಮಾನದಿಂದ ಯೂರೋಪಿಯನರು ಕಾಂಗ್ರೆಸ್ಸಿಗೆ ವಿರೋಧವಾಗಿ ನಿಲ್ಲಲು ಆಳರನೇರೇ ಕಾರಣ ರೋ ಎಂಬ ಸಂಶಯ ಬರುತ್ತದೆ. ಆಳರನೇರ ಈ ಮನೋಭಾವವೇ ಸರ್ಕಾರದ ದಬ್ಬಾಳಿಕೆಗೆ ಕಾರಣವೆಂತ ತೋರುತ್ತದೆ.

ಹಿಂದೂಸ್ಥಾನದಲ್ಲಿ ಈಗ ನಡೆಯುತ್ತಿರುವ ಹೋರಾಟವು ಬರೀ ಹೋರಿಕೆದಲ್ಲ. ಹಿಂದೀಯರು ತಮ್ಮ ದೇಶದಲ್ಲಿ ತಾವೇ ಯಜಮಾನರಾಗಿರಬೇಕಂತ ಮಾಡಿರುವ ದೃಢ ನಿಶ್ಚಯದಿಂದ ಈ ಹೋರಾಟವು ನಡೆಯುತ್ತಿದೆ ಎಂಬದು ಇನ್ನೂ ಯೂರೋಪಿಯನರಿಗೂ, ಸರ್ಕಾರಕ್ಕೂ ತಿಳಿಯದಿರುವದು ಆಶ್ಚರ್ಯವಾಗಿದೆ. ತಮ್ಮ ಸ್ವಯೋಜನಕ್ಕಾಗಿ ಹಿಂದೂಸ್ಥಾನವನ್ನು ಆರ್ಥಿಕವಾಗಿ ಬಿಟ್ಟುಕೊಂಡಿರುವುದರಿಂದ ಸುಲಭವಲ್ಲ ಇಂಗ್ಲಿಷರು ಹಿಂದೂಸ್ಥಾನವನ್ನು ಬಿಟ್ಟು ಕೊಡುವುದು ಸಾಧ್ಯವಿಲ್ಲ. ಆ ದ್ದರಿಂದ ತಮಗೆ ಹಿಂದೀಯ ಸೋಭಾವವು ತಿಳಿದೂ ತಿಳಿಯದಂತೆ ವರ್ತಿಸುವದಾಗಿರಬೇಕು. ಆದರೆ ಸರ್ಕಾರವು ದಬ್ಬಾಳಿಕೆಯಿಂದ ಹಿಂದೀಯರ ಸೋಧರಾಷ್ಟವು ಕಡಿಮೆಯಾಗುವಂತಿಲ್ಲ. ಸ್ವೆರಾಜ್ಯ ಸಾಧನೆಯಾಗುವ ವರೆಗೆ ಹೋರಾಟವು ಕಡಿಮೆಯಾಗುವ ಸಂಭವವೂ ಇಲ್ಲ.

## ಕೊಡಗಿನಲ್ಲಿ ಸತ್ಯಾಗ್ರಹ.

### ವೀರಾಜಪೇಟೆಯಲ್ಲಿ ಪಿಕೆಟಿಂಗ್,

(ಸ್ವಂತ ಪತ್ರಿಕಾವಾರಂತಿ)

ಕಳೆದ ಏಪ್ರಿಲ್ ತಿಂಗಳಿಂದ ಜೂನ್ ತಿಂಗಳ ವರೆಗೆ ಕಿಗ್ಗಟ್ಟುನಾಡು ತಾಲೂಕು, ಆನಮ್ಮತ್ತಿನಾಡು ಮತ್ತು ಎಡೆನಾಲ್ಕನಾಡಿನ ಪೂರ್ವಭಾಗದ ಗ್ರಾಮಗಳಲ್ಲೆಲ್ಲಾ ಸುತ್ತಿ ವಿಷಯಗಳನ್ನು ನಡಿಸಿ, ನಿವಾಸನಿಷೇಧ ಮತ್ತು ಖಾದಿ ಪ್ರಚಾರದ ಕೆಲಸಗಳನ್ನು ಮಾಡಿ, ಜೂನ್ 10 ರಿಂದ 22 ರ ವರೆಗೆ ಪೊನ್ನಂಪೇಟೆಯ ನೇಂದಿ, ಸಾರಾಯಿ ಅಂಗಡಿಗಳನ್ನೆದುರು ಪಿಕೆಟ್ ಮಾಡಿದ ಕೊಡಗಿನ ಸತ್ಯಾಗ್ರಹ ಮಂಡಳಿಯವರ ಧೈರ್ಯದ ವಿಜಯವು ಈ ಮೇದಲೇ ಪ್ರಕಟವಾದದ್ದು ವಾಚಕ ಮಹಾಶಯರಿಗೆ ತಿಳಿಯದ್ದೆಲ್ಲ. ಮಳೆಗಾಲದ ದೆಸೆಯಿಂದ ಈ ಕಾರ್ಯವು ತತ್ಕಾಲ ನಿಲ್ಲಿಸಲ್ಪಟ್ಟಿತ್ತು.

Medals, Rs. 1-8-0 and upwards.

Telegrams:— 'PRECIOUS'.

CUPS. MEDALS. SHIELDS. CASKETS.

V. SUBRAMANIA IYAR.
JEWELLER.

Post Box No., 423, Tripliacne,

*Illustrated Catalogue Free on Application.*

52—51 MADRAS.



ಕಾರ್ಡು ಬರೆದರೆ ಈಗಿನ ಕ್ಯಾಟಲಾಗು ಮೂಫಯೂಗಿ ಕಳಿಸಲಾಗುವದು.

ಕೋವಿಗಳು, ಕತ್ತಿಗಳು, ಬರ್ಚಿಗಳು, ತೋಟಿಗಳು, ಕೇಪ್ಸುಗಳು, ಮದ್ದು ಗುಂಡು ಮೊದಲಾದ ಸಾಮಾನುಗಳು ಬಹು ಕಡಿಮೆ ದರದಲ್ಲಿ ಖರೀದಿಯಾಗುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.
24—6

ಕಟುಕಷಾಯ ಮಲೆಜ್ವರಕ್ಕೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸುವದಕ್ಕಿಂತಲೂ ಬಹುವಾಗಿರುವ ಮಲೆ ಜ್ವರ ವನ್ನು ತಿಳಿಯುವ ಜ್ವರ, 3—೪ ದಿವಸಕ್ಕೊಂದು ಸಾರಿ ಬರುವ ಜ್ವರ, ಪದಗಿ ಬರುವ ಜ್ವರ ಮತ್ತು ಚ್ಯರಗತ್ತೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿಯಾಗಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ ೪—೦—0, 6ಕ್ಕೆ ರೂ 7—8—0, 12ಕ್ಕೆ ರೂ 14

ಜೀರ್ಣಕಾಸವ:—ಇದು ಪ್ರಮೇಹ ಮುಖ್ಯ ಕೃಷ್ಣ, ಮುಖ್ಯ ಪಕ್ಷವಾಯುವಿಗೆ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಕೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ದಾತು, ಹುರಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಕಪಿಮಲಕ್ಕೆ ಸಾಮರ್ಥ್ಯವಿಲ್ಲದಿರುವುದು, ಬೇಸಿಲ್ಲ ಉರಿ, ಜಾಸೂರಿಕೆ, ನೈಸರ್ಗಿಕ್ಕೆ, ಮೂತ್ರ ನಾಳದಲ್ಲಿ ಹುಣ್ಣುವ ನೋವು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—4—0 3—8—0, 6—12—0




ದೋಮನಾಶಿನಿ:— ಈ ಹುಡಿಯನ್ನು ಸೀಸೆಯಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಥಾಗಕ್ಕೆ ಹಚ್ಚಲು ರೋಮವು ಉಮರಿ ಬೀಳುತ್ತದೆ. ಸೀಸೆ 1ಕ್ಕೆ 6 ಆಣೆ, 3ಕ್ಕೆ ಗೆಗೆ ರೂ 1, 2 ಡಜನಿಗೆ 3—9—೦

ಮುಶೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವದು, ಕಲಿವಿರಿ, ಕಡ್ಡಿ ಕಿವಿಯಿಂದ ಕೀವು ಸೋರುವುದು ಕಿವುಡು ಕಿವಿ, ಕಿವಿ ನೋವು, ಅಪಸ್ಮಾರ ಸಿಡಿ ಬಾಧೆಯಿರುವದು, ನೆನಪು ಶಕ್ತಿ ಕುಂದಿಹೋಗುವದು. ಇವುಗಳೆಲ್ಲ ಖಂಡಿತ ಗುಣವಾಗುವುದಕ್ಕೆ ಉ ಯೋಗಿಸಿ ತಲೆಯನ್ನು ತಂಪಾಗಿರುವ ತಲೆದಿಂಬನ್ನು ಬೆಳಿಯಿಸಿ ತಲೆಯಲಿಗೆ ಸಂಬಂಧವಿಲ್ಲದ ಬೇರೆಯವರ ತಲೆಯನ್ನು ಉಪಯೋಗಿಸಬಾರದು. ತಲೆಯನ್ನು ತಪ್ಪದೆ ಕೂದಲು ಇಲ್ಲದ ಸ್ಥಳದಲ್ಲಿ, ಮೊಣಕಾಲಿನ ಹುಟ್ಟಿನಲ್ಲಿ ತಲೆಯನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0 ಮೂರು ದೊಡ್ಡ ಸೀಸೆಗೆ ರೂ 2, 3 ಸೀಸೆಗೆ 5—8—0

ವೀಣಾ—ಮುಶೋಲ್ಲಾಸಿನಿ ಔಂಷಿಸ್,
52—26 ಕಟುಕಾಗು ಕಲಿ ಸೋಪಿ, 9. ಮಂಗಳೂರು.

## ಬಾಲಾರ್ಕಮದು.

ನಮ್ಮ ಮಕ್ಕಳ ಸಾಂತರ್ಯವನ್ನು ನೋಡಬೇಕಾದರೆ ಅಮ್ಮಂದಿರ ಗುಂಡಿಗೆಯಲ್ಲಿ ಬಾಲಾರ್ಕಮಧುವನ್ನು ಕೊಡಿರಿ ಮಕ್ಕಳು ಹೋಗ




ಸಿಂಡಿಸಲಾಗಿ ಎಷ್ಟೇ ಕ್ವೀಣವಾಗಿದ್ದರೂ ಇದರಿಂದ ಬಯ ವೇಗ ಪುಷ್ಟಿಯೂ, ಒಲವೂ ಬರುವದು ದಿನ ದಿನಕ್ಕೆ ಆರೋಗ್ಯವೂ ತಂಪೂ ಹೆಚ್ಚುವದು ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ ಸೀಸೆ 1ಕ್ಕೆ 12 ಆಣೆ, ೪ ಪೈ. 9 ಆಣೆ.

52—42 ಯಂ. ವಿ. ಪ್ರಸಾದಿಕ್ಕ ಔಷಧಾಲಯ, ಶಿವಮೊಗ್ಗಾ, (ಮೈಸೂರು ಸೀಮೆ.)

# ಕೊ ಡ ಗು.

ಸ ೧೯೩೦ನೇ ಇಸವಿ
ಸೆಪ್ಟೆಂಬರ್ ತಾ. ೧೨ನೇ ಶುಕ್ರವಾರ.

## ರಾ ಜಿ ಪ್ರಯತ್ನ
ನಿಷ್ಫಲವಾಯಿತು.

ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಾಗಿ ಈಗ ನಡಿಯುತ್ತಿರುವ ಹೋರಾಟವನ್ನು ನಿಲ್ಲಿಸುವ ಬಗ್ಗೆ ಮೋಡಿಟೇಟ್ ಮುಂಡಾಳುಗಳಲ್ಲಿ ಇಬ್ಬರಾದ ಸರ್‌ತೇಜ್ ಬಹದ್ದೂರ್ ಸಪ್ರು ಮತ್ತು ಶ್ರೀ. ಜಯಕರವರೂ ವೈಯಕ್ತಿಕ ಮಾಡಿದ್ದೂ ಆ ಬಗ್ಗೆ ಬೈದಿಗಳಾಗಿರುವ ಸಂಡಿತ ಮೋತಿಲಾಲ್ ನೆಹರೂ, ಜವಾಹರ್‌ಲಾಲ್ ನೆಹರೂ ಸಹ ಯಿವರಾದ ಜೈಲಿನಲ್ಲಿರುವ ಮಹಾತ್ಮ ಗಾಂಧಿಯವರ ಬಳಿಗೆ ಸಂಭಾಷಣೆಗೆ ಹೋದದ್ದೂ ಮತ್ತು ರಾಜಿ ಪ್ರಯತ್ನಕ್ಕೆ ಹೊರಟವರು ವೈಸರಾಯರ ಸಂಗಡ ಆಗಿಂದಾಗ್ಗೆ ಸಂಭಾಷಣೆ ನಡಿಸಿದ್ದೂ ವಾರ ವಾರ ಬರುತ್ತಿದ್ದ ವರ್ತಮಾನ ಸಂಗ್ರಹದಿಂದ ನಮ್ಮ ವಾಚಕರಿಗೆ ತಿಳಿದಿದೆ. ಆದರೆ ಅವರ ಸಂಭಾಷಣೆಯು ಏನೇಂಬದು ಈ ವರೆಗೂ ಸಂಪೂರ್ಣವಾಗಿ ಗುಟ್ಟಾಗಿತ್ತು. ಈ ವಾರ ರಾಜಿ ಸಂಧಾನವು ಸಫಲವಾಗಲಿಲ್ಲವೆಂತ ಸಂಧಾನಕಾರರು ತಿಳಿಸಿ ಆ ಸಂಬಂಧವಾಗಿ ನಡೆದ ಪತ್ರವ್ಯವಹಾರವನ್ನು ಪ್ರಕಟಿಸಿದ್ದಾರೆ. ಆದರ ಕೆಲವು ಭಾಗವನ್ನು ನಾವೂ ಬೇರೆ ಕಡೆ ಪ್ರಕಟಿಸಿದ್ದೇವೆ.

ರಾಜಿ ಸ್ಪಷ್ಟವಾಗಿ ನಿಷ್ಫಲವಾಯಿತೆಂಬದಕ್ಕೆ ವ್ಯಸನವಾಗಿದೆ ಇರದು. ಆದರೆ ಆಗುವ ರಾಜಿಯು ಹಿಂದೂಸ್ಥಾನದ ಗೌರವ ಉಳಿಯುವಂಥಾದ್ದಾಗಿರಬೇಕೆಂತ ಪ್ರಬ್ಯಾತ ಬೈದಿಗಳಾದ ಮಹಾತ್ಮ ಗಾಂಧಿಯವರೇ ಮೊದಲಾದವರು ಹೇಳಿದ ಮಾತಿಗೆ ಆತ್ಮಗೌರವವುಳ್ಳ ಯಾವ ಹಿಂದೀಯನಾದರೂ ಒಪ್ಪಲೇ ಬೇಕು. ಮೋಡಿಟೇಟ್ ಪಕ್ಷದವರೂ ಸಹ ಹಿಂದೂಸ್ಥಾನದ ಗೌರವಕ್ಕೆ ಹಾನಿಬರುವ ರಾಜಿಗೆ ಒಪ್ಪಲಾರರು. ಆದರೆ ವೈಸರಾಯರ ಮೊಕುಗಳಿಂದ ಹಿಂದುಸ್ಥಾನಕ್ಕೆ ಗೌರವ ದೊರೆಯುವಂಥಾ ರಾಜಿ ಆದೀತೆಂತ ಅವರು ಅಂದರೆ ಮೋಡಿಟೇಟ್ ಪಕ್ಷದವರಾದ ಸಂಧಾನಕಾರರು ನಂಬಿರುವಂತೆ ಕಾಣುತ್ತದೆ.

ವೈಸರಾಯರ ಪತ್ರದಿಂದಲೂ, ಸಂಭಾಷಣೆಯಿಂದಲೂ, ಇಂಡಿಯಾ ಸರಕಾರದ ವರ್ತನೆಯಿಂದಲೂ ಹಿಂದೀಯರ ಧ್ಯೇಯವಾದ ಸ್ವಾತಂತ್ರ್ಯವು ಈ ರಾಜಿಯಿಂದ ಸ್ವಾಸ್ಥ್ಯವಾಗುವಂತೆ ತೋರಿ ಬರುವಿಲ್ಲ. ರಾಜಕೀಯ ರಚನೆಯಲ್ಲಿ ಹಿಂದೂಸ್ಥಾನಕ್ಕೆ ಮನಸು ಬಂದಾಗ ಬ್ರಿಟಿಷ್ ಸಾಮ್ರಾಜ್ಯವನ್ನು ಬಿಟ್ಟು ಪೂರ್ತಿ ಸ್ವತಂತ್ರವಾಗುವ ಹಕ್ಕು ಇದೆ ಎಂಬದಾಗಿ ನಮ್ಮೂ ದಿಸಬೇಕೆಂತ ಕಾಂಗ್ರೆಸಿನವರು ಕೇಳಿದ್ದರಲ್ಲಿ ವಿನೂ ಅಕ್ಷೇಪಣೆ ಕಾಣುವಿದಿಲ್ಲ. ಡೊಮಿನಿಯನ್ ಸ್ಟೇಟಸ್ ಎಂದರೆ ಸಾಮಂತ ಸ್ವರಾಜ್ಯವೂ ಕೂಡಲೇ ಕೊಡಲಾಗುತ್ತದೆ, ಅಂಥಾ ಸಾಮಂತ ಸ್ವರಾಜ್ಯ ರಚನೆಯನ್ನೇ ಚರ್ಚಿಸುವದು ಎಂತ ಭರವಸೆ ಕೊಟ್ಟ ವಿನಹ ರೌಂಡ್ ಟೇಬಲ್ ಕಾನ್‌ಫರೆನ್ಸ್ (ಚಕ್ರಗೋಷ್ಠಿ) ನಿಂದ ಪ್ರಯೋಜನವಾಗಲಾರದೆಂತ ಮಹಾತ್ಮಗಾಂಧಿ ಮುಂತಾದವರು ಕಳೆದ ವರ್ಷ ನವಂಬರಿನಲ್ಲಿ ಪ್ರಕಟಿಸಿದ ಆಭಿಪ್ರಾಯಕ್ಕೆ ಸರ್ ತೇಜ್‌ಬಹದ್ದೂರ್ ಸಪ್ರುರವರೂ ಸಹ ಸೈನ್ ಹಾಕಿದ್ದಾರೆ. ಪೂರ್ತಿ ಸ್ವತಂತ್ರರಾಗುವ ಹಕ್ಕು ಡೊಮಿನಿಯನ್ ಸರಕಾರಗಳಿಗೆ ಇದ್ದೇ ಇದೆ. ಆದ್ದರಿಂದ ಸ್ವತಂತ್ರರಾಗುವ ಹಕ್ಕು ಕೊಡಬೇಕೆಂತ ಕಾಂಗ್ರೆಸ್ ಮುಂದಾಳುಗಳು ಕೇಳಿದ್ದರಿಂದ ಹಿಂದೂಸ್ಥಾನಕ್ಕೆ ಕೊಡುವ ಸ್ವರಾಜ್ಯವು ಡೊಮಿನಿಯನ್ ಸ್ಟೇಟಸಿಗಿಂತ ಕಡಿಮೆಯೂಗಬಾರದೆಂಬ ಭರವಸೆ ದೊರಿಯಲಿಕ್ಕಾಗಿಯೇ ಆಗಿದೆ. ಈ ಕರತ್ತನ್ನು ಚಕ್ರ ಗೋಷ್ಠಿಗೆ ಮುಂದಾಗಿ ಒಪ್ಪಿಕೊಳ್ಳಲಾಗುವದಿಲ್ಲವೆಂತ ವೈಸರಾಯರು ಹೇಳಿರುತ್ತಾರೆ.

ಸೈನ್ಯದ ಮೇಲೆ, ಆರ್ಥಿಕ ವಿಚಾರಗಳ ಮೇಲೆ ಸಹ ಅಧಿಕಾರವಿರುವ ಸ್ವರಾಜ್ಯ ಕೊಡಲೇ ಕೊಡಲಾಗುತ್ತದೆಯೆಂತಲೂ, ಆ ಹಕ್ಕನ್ನು ವಹಿಸಿಕೊಳ್ಳುವ ಸನುಯದಲ್ಲಿ ಅಗಬೇಕಾದ ಭವ್ಯತೆಗಳನ್ನು ಮತ್ತೆ ಚಕ್ರಗೋಷ್ಠಿಯಲ್ಲಿ ಚರ್ಚಿಸುವದು ಎಂತಲೂ ವೈಸರಾಯರು ಸರ್ಕಾರವು ತಿಳಿಸಬೇಕೆಂತ ಪಂಡಿತ ಮೋತಿಲಾಲರು ಮೆ ನ್ಸ್ರೋಕೋರಬಲ್ಲಿ ಅಭಿಪ್ರಾಯ ಕೊಟ್ಟಿದ್ದು, ಅದರಂತೇನೇ ಈಗ ಪ್ರಕಟವಾದ ಪತ್ರವ್ಯವಹಾರದಲ್ಲೂ ಕಾಂಗ್ರೆಸಿನವರು ಕೇಳಿರುವರು. ಇದಕ್ಕೆ ವೈಸರಾಯರು ಎಂದೆಲ್ಲ ಉತ್ತರದಲ್ಲಿ ಹೇಳಿದ್ದಿಲ್ಲೇ ಹೇಳಿದ್ದಾರೆ. "ಹಿಂದೂಸ್ಥಾನಕ್ಕೆ ಒಬ್ಬಜ್ಞಾಬಯನ್ನು ವಹಿಸಿಕೊಳ್ಳಲು ಕೆಲ್ಲ ಇದೆಯೆಂದು ತೋರಿದ್ದರಿಂದ ಬಜ್ಞಾಬಳಲ್ಲಿ ತಮ್ಮ ಅಡಳಿತವನ್ನು ತತ್ವವೇ ನಡಿಸಿಕೊಳ್ಳುವ ಪಕ್ಷ ಸ್ಥಿತಿಯು ನಾವು ಸಮ್ಮಿತಿಯಾಗುವ ಸಹಾಯ ಮಾಡುತ್ತೇವೆ. ಜಾಗ ಬವಾಜ್ಞಾಬಿಗೆ ವಹಿಸಲು ಸಾಧ್ಯವಿಲ್ಲದೆ ಬಜ್ಞಾಬಗಳು ಜಡಿವು, ಅವುಗಳಿಗೆ ಏನು ವಿಚಾರಿಸಿ ಮಾಡಬೇಕಾದು ಎಂಬನ್ನಗಳನ್ನು ಚಕ್ರ ಗೋಷ್ಠಿಯಲ್ಲಿ ಚರ್ಚಿಸಬಹುದು, ಆಸ್ಯೋನ್ಸ್ ಸಾಧನೆಯಿಂದ ಕೆಲಸ ಮಾಡಿದರೆ ಒಗ್ಗಟ್ಟಿಗೆ ಬರುವದು ಸಾಧ್ಯವಾಗಿರಬಹುದು." ಎಂತ ವೈಸರಾಯರು ಬರೆದಿದ್ದಾರೆ. ಈ ಮೊತುಗಳಲ್ಲಿ ನಿಜವಾಗಿಯೂ ಹಿಂದೂಸ್ಥಾನದ ಧ್ಯೇಯದ ಕಡೆಗೆ ಸಹಾನುಭೂತಿ ಇದೆಯೂ ಕ ತೋರುತ್ತದೆ. ಆದರೆ ಹಿಂದೆ ಚಕ್ರವರ್ತಿಗಳೂ, ಸ್ಟೇಟ್ ಸೆಕ್ರೆಟರಿಗಳೂ, ವೈಸರಾಯರುಗಳೂ ಹೇಳಿದ ಮೊತುಗಳನ್ನು ಗಮನಿಸಿ ತೀರಿದ ನಂತರ ಬ್ರಿಟಿಷ್ ಸರಕಾರವೂ, ಇಂಡಿಯಾ ಸರಕಾರವೂ ನಿರಾಕರಿಸಿದ ಉದಾಹರಣೆಗಳು ಹಿಂದೆ ಎಷ್ಟೋ ಇವೆ. ಆದ್ದರಿಂದ ಬರೇ ಸವಿ ಮೊತುಗಳಿಂದ ನಾವು ತೃಪ್ತರಾಗಲಶಕ್ಯವು. ಬ್ರಿಟಿಷ್ ಸರಕಾರದ ವಾಗ್ದಾನವೇ ಬೇಕೆಂತ ಕಾಂಗ್ರೆಸಿನವರೂ ಕೇಳಿರುವ ನ್ಯಾಯವಾಗಿದೆ.

ಏನಾನೂನು ಭಂಗವನ್ನು ನಿಲ್ಲಿಸಿದರೂ, ಜನರು ಸ್ವಂತ ಉಪ್ಪನ್ನು ಮಾಡಿಕೊಳ್ಳುವುದನ್ನೂ, ಸರದೇಶೀ ಬಟ್ಟೆ ಮತ್ತು ನಿಷಾ ಪದಾರ್ಥಗಳ ವ್ಯಾಪಾರವನ್ನು ಸರಕಾರವೇ ನಿಲ್ಲಿಸಿದ್ದರೆ ಪಿಕೆಟ್ ಮಾಡುವುದನ್ನು ನಿಲ್ಲಿಸಲಿಕ್ಕಾಗುವುದಿಲ್ಲವೆಂತ ಕಾಂಗ್ರೆಸಿನವರ ಶರತ್ತಾಗಿದೆ. ಇದಕ್ಕೆ ವೈಸರಾಯರು ಒಪ್ಪಲಿಲ್ಲ. ಈ ಎರಡು ವ್ಯಾಪಾರಗಳು ನಿಲ್ಲುವುದು ದೇಶದ ನೈತಿಕ, ಧಾರ್ಮಿಕ ಮತ್ತು ಆರ್ಥಿಕ ದೃಷ್ಟಿಯಿಂದ ಅನಿಷ್ಟವಾಗಿದೆ. ನಿಷಾ ಸೇವನೆಯಿಂದ ಆಗುವ ಹಾನಿಯನ್ನು ವಿವರಿಸಬೇಕಾಗಿಲ್ಲ. ಪರದೇಶೀ ಬಟ್ಟೆ ವ್ಯಾಪಾರ ನಿಲ್ಲಿಸಿದರೆ ಕೈನೂಲು, ಕೈಮಗ್ಗದ ಕಸುಬು ಹೆಣ್ಣಾಗಲೇ ಬೇಕು ಈ ಕ ಸಬಿನಿಂದ ಕೆಲಸವಿಲ್ಲದ ಗರೀಬ ಜನರಿಗೆ ಅನ್ನ ದೊರಕುವ ಉಪಾಯವಿದೆ. ಸರ್ಕಾರವು ಹಿಂದೂಸ್ಥಾನದರ ಹಿತಕ್ಕಾಗಿ ನಡಿಸಲ್ಪಡುತ್ತಿರುವುದಾದರೆ ಈ ಕರತ್ತುಗಳನ್ನು ವೈಸರಾಯರು ಒಪ್ಪಬಹುದಿತ್ತು. ಅಥವಾ ಶಾಂತ ರೀತಿಯಿಂದ ಪಿಕೆಟ್ ಮಾಡಬಹುದೆಂತಶರರೂ ಹೇಳಬಹುದಿತ್ತು. ಸ್ವದೇಶೀ ತತ್ವವು ಇಂಗ್ಲಿಷ್ ಜನರಿಗೆ ತಿಳಿಯದ್ದಲ್ಲ, ಅವರು ಸ್ವದೇಶೀ ವ್ಯವಹಾರವನ್ನು ಕೈಕೊಂಡದ್ದರಿಂದಲೇ ಭವರ ಜನಾಂಗವು ಈಗ ಇರುವ ಉನ್ನತ ಸ್ಥಿತಿಗೆ ಬಂದಿರುವದಾಗಿದೆ.

ಉಪ್ಪಿನ ಸುಂಕ ತೆಗೆದು ಹಾಕಬೇಕೆಂತಲೂ, ಹಾಗೆ ತೆಗೆದು ಹಾಕದಿದ್ದರೆ ಜನರು ಸ್ವಂತ ಉಪ್ಪು ಮಾಡಿಕೊಳ್ಳುವುದನ್ನು ನಿಲ್ಲಿಸಲಿಕ್ಕಾಗುವುದಿಲ್ಲವೆಂತ ಕಾಂಗ್ರೆಸಿನವರು ಹೇಳಿರುತ್ತಾರೆ. ಉಪ್ಪಿನ ಸುಂಕದ ಬದಲಿಗೆ ಬೇರೆ ಉತ್ಪತ್ತಿ ತೋರಿಸಿ ಕೊಡುವ ಭಾರ ಜನರ ಮೇಲೆ ವೈಸರಾಯರು ಹಾಕಿರುತ್ತಾರೆ. ಮಹಾತ್ಮರು ವೈಸರಾಯರಿಗೆ ಕೊಟ್ಟ 11 ಶರತ್ತುಗಳಲ್ಲಿ ಉಪ್ಪಿನ ಸುಂಕ, ನಿಷಾ ಸೇವನೆಯಿಂದ ಬರುವ ಉತ್ಪತ್ತಿ ಸಹ ಹೋದರೆ ಸರ್ಕಾರದ ಖರ್ಚಿ ಸಹ ಕಡಿಮೆ ಮಾಡಬೇಕೆಂತ ನೊದಲೇ ಸೂಚಿಸಿದ್ದರು. ಇದನ್ನು ವೈಸರಾಯರು ಗಣನೆಗೆ ತೆಗೆದುಕೊಳ್ಳದ್ದರಿಂದಲೇ ಕಾಂಗ್ರೆಸ್ ಮುಂಡಾಳುಗಳು ಸರ್ಕಾರದ ಮನಸ್ಸು ಬದಲಾಗಿಲ್ಲವೆಂತ ನಂಬಲು ಕಾರಣವಿದೆ. ಸ್ವರಾಜ್ಯ ಸರ್ಕಾರವು ಕೂಡಲೇ ಸ್ಥಾಪಿಸವಾದರೆ ಸರ್ಕಾರಕ್ಕೆ ಪ್ರಜಾ ಜನರಿಂದ ಕಷ್ಟವಿಲ್ಲದೆ ದೊರೆಯಬಹುದಾದಷ್ಟು ಉತ್ಪತ್ತಿಯಿಂದ ಸರ್ಕಾರದ ಖರ್ಚನ್ನು ನಡಿಸಿಕೊಂಡು ಹೋಗಲು ಎರ್ಪಡಿಸಿಕೊಳ್ಳುತ್ತದೆ. ಆದ್ದರಿಂದ ಉಪ್ಪಿನ ಸುಂಕದ ಬದಲಿಗೆ ಬೇರೆ ಸರಮಾನವನ್ನು ತೋರಿಸಬೇಕೆಂತ ಹೇಳಿದ್ದರಿಂದ ಬ್ರಿಟಿಷ್ ಸಾಮ್ರಾಜ್ಯದ ಪ್ರಯೋಜನಕ್ಕಾಗಿ ಈ ದೇಶದ ಆಡಳಿತ ನಡಿಸಲ್ಪಡುತ್ತಿರಬೇಕೆಂತಲೂ, ಅದಕ್ಕಾಗಿ ಆಗುತ್ತಿರುವ ಅಪಾರ ಖರ್ಚನ್ನು ನಿಲ್ಲಿಸಲಿಕ್ಕಾಗುವುದಿಲ್ಲವೆಂತಲೂ ತೀರ್ಮಾನವಾಯಿತು.

ಸತ್ಯಾಗ್ರಹಿಗಳನ್ನೂ, ಅನಹಕಾರದ ಬೈದಿಗಳನ್ನೂ, ಹಿಂಸಾದಾರಿಯಿಂದ ಹಿಡಿದವರನ್ನು ವಿನಾಯಿಸಿ ಬಿಡುಗಡೆ ಮಾಡಬೇಕೆಂತ ಕಾಂಗ್ರೆಸಿನವರು ಕೇಳಿದ್ದಕ್ಕೆ ವೈಸರಾಯರು ಹಿಂದೆ ಮುಂದೆ ನೋಡದೆ ಒಪ್ಪಬೇಕೆತ್ತು. ಸ್ವಾತಂತ್ರ್ಯ ಸಂಪಾದನೆಗಾಗಿಯೇ ಹೋರಾಟ ನಡಿಸಿದ್ದಕ್ಕಾಗಿ ಬಂದಿವಾಸಕ್ಕೆ ಹೋದವರನ್ನು ಸ್ವಾತಂತ್ರ್ಯ ಕೊಡುವ ಮೊತುಗಳಾದು ವರಗೆ ಬಿಡುಗಡೆ ಮಾಡದಿರಲು ಏನೂ ಕಾರಣವಿಲ್ಲ. ಇಂಥಾ ಬೈದಿಗಳನ್ನು ಬಿಡುವದಿಲ್ಲವೆಂತ ಹೇಳುವದಿಲ್ಲ. ಈ ಬಾಬಿನಲ್ಲಿ ವ್ಯಾಪಾರಿಕ ಸರಕಾರಗಳಿಗೆ ಯುಕ್ತ ಕಂಡಂತೆ ಮಾಡಬೇಕಾಗುತ್ತದೆಯೆಂತಲೂ ಧಾರಾಳ ಬುದ್ಧಿಯನ್ನು ತೋರಿಸುವಂತೆ ವ್ಯಾಪಾರಿಕ ಸರಕಾರಗಳಿಗೆ ಹೇಳಬಹುದೆಂತ ಪೂರ್ತಿ ವೈಸರಾಯರು ಹೇಳಿರುತ್ತಾರೆ. ವ್ಯಾಪಾರಿಕ ಸರಕಾರಗಳಿಂದ ನ್ಯಾಯ ದೊರಕಿಸಿಕೊಡಲು ವ್ಯಾಪಾರಿಕ ಸರಕಾರಗಳ ಈ ವರೆಗಿನ ವರ್ತನೆಯಿಂದ ಭರವಸೆ ತೋರುವದಿಲ್ಲ.

ಈ ಹೋರಾಟದಲ್ಲಿ ಸರಕಾರಿ ಕೆಲಸ ಬಿಟ್ಟ ಆಫೀಸರ ಡಿಸ್‌ಮಿಸ್ ಆದವರಿಗೆ ಆಫೀಕ್ಕೆಸಟ್ಟರೆ ಕೆಲಸ ಕೊಡಬೇಕೆಂತ ಕೇಳಿದ್ದಕ್ಕೆ ಕೊಟ್ಟ ಉತ್ತರವೂ ತೃಪ್ತಿಕರವಾಗಿಲ್ಲ. ರಾಜಭಕ್ತಿಯನ್ನು ತೋರಿಸಿದವರನ್ನು ಕೆಲಸದಿಂದ ಬಿಡಿಸಿ ಹಳಬರಿಗೆ ಕೂಡಬೇಕಾದಲ್ಲಿ ಈ ಕರತ್ತನ್ನು ಜಾರಿಮಾಡಲಾಗುವದಿಲ್ಲವಂತೆ! ದೇಶಭಕ್ತಿಗಾಗಿ ಕೆಲಸಬಿಟ್ಟಾಗ ಅವರ ಬದಲಿಗೆ ಕೆಲಸವನ್ನು ನಡಿಸಲು ಒಪ್ಪಿದವರೆಲ್ಲರೂ ರಾಜಭಕ್ತರೇ. ಹಾಗಾದರೆ ಕೆಲಸ ಬಿಟ್ಟವರಿಗೆ ಪುನಃ ಕೆಲಸ ಕೊಡುವ ಸಂಭವ ತೋರುವದೇ ಇಲ್ಲ. ಈ ಬಾಬಿನಲ್ಲಿ ವೈಸರಾಯರು ಬರೆದ ಒವಾಬು ಇನ್ನೂ ಸಿದ್ಧವಾಗಿಲ್ಲವಂತೆ ಇರಬಹುದು.

ಹಿಂಸಾಮಾರ್ಗವಾದ ತಕ್ಕೀರಿಯುಗಳಿಗೆ ತಿಕ್ಕೆ ಹೊಂದಿದವರ ರಿಮೇಲೆ ನೆಲ ಪುನಃ ನ್ಯಾಯವಾದ ಕೋರ್ಟುಗಳಲ್ಲಿ ವಿಚಾರಣೆ ನಡಿಯಬೇಕೆಂತ ಕಾಂಗ್ರೆಸ್ ಮುಂಡಾಳುಗಳು ಹೇಳುವದರಲ್ಲಿ ನ್ಯಾಯವಿದೆ. ಈ ಚಳವಳಿದ ಸಮಯದಲ್ಲಿ ಕೋರ್ಟುಗಳಲ್ಲಿ ನಡದ ವಿಚಾರಣೆಗಳು ತೃಪ್ತಿಕರವಾಗಿಲ್ಲವೆಂತ ಎಷ್ಟೋ ಸಾರಿ ಪ್ರತ್ಯಕ್ಷವಾಗಿ ತಿಳಿಯುತ್ತದೆ.

ರಾಜಿ ಪ್ರಯತ್ನವು ಸಫಲವಾಗದ್ದಕ್ಕೆ ಆಶಾಭಂಗವಾದರೂ ಉಪ್ಪು ಸ್ವಲ್ಪ ಸುಧಾರಣೆ ದೊರತೀತೆಂಬ ಆಸೆಯಿಂದ ಈಗಿನ ಚಳವಳಿಯನ್ನು ಕಾಂಗ್ರೆಸಿನ ನಾಲಕ್ಕಾರು ಮುಂಡಾಳು ನಿಲ್ಲಿಸಿದರೆ ಚಳವಳದಲ್ಲಿ ಕಷ್ಟಕ್ಕೆ ಗುರಿಯಾದ ದೇಶಭಕ್ತರೂ, ಕಾಂಗ್ರೆಸ್ ಮಹಾಸಭೆಯೂ ಒಪ್ಪಲಾರದು. ಸ್ವಲ್ಪ ರಿಯಾಯ್ತಿಗಳು ಸಿಕ್ಕಬಹುದೆಂತ ಕಳೆದ ಆಗಸ್ಟೋ ಕಾಂಗ್ರೆಸಿಗಿಂತ ಮೊದಲೇ ವೈಸರಾಯರು ತಿಳಿಸಿದ್ದರು. ದರೆ ಹಿಂದೂಸ್ಥಾನದ ನಿಜವಾದ ಯಜಮಾನಿಕೆಯು ಹಿಂದೀಯರೇ ನಡಿಸಲು ಹಕ್ಕಿರುವುದು. ಅದನ್ನು ಸಂಪಾದಿಸದ ಪ್ರಯತ್ನವಲ್ಲವೆಂತ ಕಾಂಗ್ರೆಸಿನಲ್ಲಿ ನಿಶ್ಚೈಸಿ ಈ ಹೋರ ಜನ ಚಳವಳನ್ನು ಪ್ರಾರಂಭಿಸಿದ್ದಾರೆ. ಬ್ರಿಟಿಷ್ ಜನಾಂಗವು ಹಿಂದೂ ಸ್ವಾತಂತ್ರ್ಯವನ್ನು ತನ್ನ ಮನೆಯ ಸ್ವಯೋರ್ಜಿತ ಆಸ್ತಿಯೆಂತ ಭಾವಿಸಿಕೊಂಡಿದೆ. ಅದನ್ನು ಬಿಟ್ಟುಕೊಡಬೇಕಾದರೆ ಹಿಂದೀಯರು ಈಗ ಪಟ್ಟ ಕಷ್ಟವು ಸಾಲದೆಂತ ಕಾಂಗ್ರೆಸ್ ಮುಂದಾಳುಗಳು ಹೇಳುವದು ಸ್ವಾಭಾವಿಕವಾಗಿದೆ. ಗುಲಾಮಗಿರಿಯಲ್ಲಿದ್ದ ಬೇರೆ ಎಷ್ಟೋ ಜನಾಂಗಗಳು ಪಡುಗಡೆ ಹೊಂದಬೇಕಾದರೆ ಬಹುಕಾಲದವರೆಗೆ ಅಪಾರ ಕಷ್ಟ ಸಹಿಸಿದ್ದಾರೆಂತ ಚರಿತ್ರೆಯಿಂದ ಕಂಡುಬಂದಿದೆ. ಹಾಗಿರುವಾಗ ಬರೇ 5 ತಿಂಗಳ ಹೋರಾಟದಿಂದ ಪೂರ್ತಿ ಸಫಲವಾಗುವದು ಸಾಧ್ಯವಿಲ್ಲ. ಮಹಾತ್ಮರ ಆಹಿಂಸಾಯುಕ್ತವಾದ ಚಳವಳದಿಂದ ಹಿಂಸಾಮಯವಾದ ಕ್ರಾಂತಿಗಿಂತ ಬೇಗನೆ ಜಯವಾಗುತ್ತದೆಂಬದಾಗಲಿ ಸಂಶಯವಿಲ್ಲ. ಆದರೆ ಅಹಿಂಸಾ ದಾರಿಯನ್ನೇ ಹಿಡಿದು ಪರಾತರ ಚಳವಳ ನಡಿಸುತ್ತಿರಬೇಕಷ್ಟೆ. ಹಿಂದೂಸ್ಥಾನದ ಸರ್ವ ಜನರಿಗೂ ಸರಿಯಾದ ಜಯವನ್ನು, ಧೈರ್ಯವನ್ನೂ ದೇವರು ದಯಪಾಲಿಸಲೆಂತ ಪ್ರಾರ್ಥಿಸುತ್ತೇವೆ.

## ಜಮಾನ್ದಾರರ ಸಂಘದ ಕಮಿಟಿ ವಿಷಯ.

ಈ ವಿಷಯವು ಈ ತಾ. 7ರಲ್ಲು ವೀರಾಜಪೇಟೆ ಶಾಖಾ ಭಂಡಾರದ ಮಹಡಿಯಲ್ಲಿ ನಡೆಯಿತು. 10 ಕಮಿಟಿ ಮೆಂಬರುಗಳು ಹಾಜರಿದ್ದರು. ಖಾಯಂ ಪ್ರೆಸಿಡೆಂಟರಾದ ಮೆ. ಸಿ. ಯನ್. ವೆಂಕಟ್ಟಯ್ಯನವರು ಅಧ್ಯಕ್ಷರಾಗಿದ್ದರು

1. ಮೆ. ಚಂಗಂಡ ಕುಟ್ಟಪ್ಪನವರ ಮರಣಾನಂತರ ಸಂಘವು ವಿಪತ್ತಿಗೀಡಾಗಿದೆ. ಆವರ ಕುಟುಂಬಕ್ಕೆ ಸಂಘವು ಸಹಾನುಭೂತಿಯನ್ನು ತಿಳಿಸುತ್ತದೆ ಎಂಬ ರಠಾವು ಸರ್ವ ಸಮ್ಮತದಿಂದ ಅಂಗೀಕಾರವಾಯಿತು.

2 ಕಳೆದ ಎಸ್ಪಿಲ್ ತಿಂಗಳಿಂದ ಆಗೊಸ್ತು ತಿಂಗಳು ಅಖೈರು ವರೆಗಿನ ಸಂಘದ ಜಮ ಮತ್ತು ಖರ್ಚಿನ ಲೆಕ್ಕವು ಒಪ್ಪಮಂಜೂರು ಮಾಡಲಾಯಿತು.

3. ಪ್ರೊವಿನ್ಶಿಯಲ್ ಕೋಪರೇಟಿವ್ ಫೆಡರೇಶನಿಗೆ ಸಂಘದ ಕಟ್ಟಡದ ಒಂದು ರೂಮನ್ನು ಬಾಡಿಗೆಗೆ ಕೊಡಬೇಕೆಂಬ ಬರಕ್ಕೂಂದ ಪತ್ರವು ಓದಲಾಯಿತು.

ಆವರ ಪತ್ರದ ಪೇರೆ ಒಂದು ರೂಮನ್ನು ಈ ಮೊದಲ ಕೊಟ್ಟಿರುವುದಕ್ಕೆ ಸಂಘವು ಒಪ್ಪುವುದಕ್ಕೆ. ಅಲ್ಲದೆ ತಿಂಗಳಿಗೆ 3 ರೂಪಾಯಿ ದರದಲ್ಲಿ ಬಾಡಿಗೆ ನಿಶ್ಚೈಸಬೇಕೆಂತ ತೀರ್ಮಾನವಾಯಿತು.

4 ಮೆ. ಯನ್. ಮುದ್ದಪ್ಪನವರ ರಾಜೀನಾಮೆಯನ್ನು ಓದಿ ಅಂಗೀಕರಿಸಲಾಯಿತು.

ಆವರ ಬದಲಿಗೆ ಮುಡಿಕೇರಿಯಲ್ಲಿರುವ ಮೆ. ಕೆ. ಯಂ ಮಹ್ಮದ್‌ಗೌನ್‌ರವರನ್ನು ಮೆಂಬರಾಗಿ ಆರಿಸಿಕೊಳ್ಳಲು ತೀರ್ಮಾನವಾಯಿತು.

ಮೆ. ಚಂಗಂಡ ಕುಟ್ಟಪ್ಪನವರ ಬದಲಿಗೆ ವೆ. ಬೈಚೆಟ್ಟಿರ ಅಚ್ಚಯ್ಯನವರನ್ನು ಕಮಿಟಿ ಮೆಂಬರಾಗಿ ತೆಗೆದುಕೊಳ್ಳಲು ತೀರ್ಮಾನವಾಯಿತು.

5 ಮೆ ಬಿ. ಯಂ. ಕಾರ್ಯಪ್ಪನವರು ಸರ್ವಾಧ್ಯಕ್ಷರ ವಿಷಯವೊಂದನ್ನು ನಡಿಸಬೇಕೆಂತಲೂ, ಅನಕ್ಕೆ ಸಂಘದಾಯ ಎಳು ಜನ ಪ್ರತಿನಿಧಿಗಳನ್ನು ಕಳುಹಿಸಬೇಕೆಂತಲೂ ಬರೆದ ಪತ್ರ ಓದಲಾಯಿತು.

ಈ ಕಾನ್‌ಫರೆನ್ಸಿಗೆ ಯಾವ್ಯಾವ ಸಂಸ್ಥೆಗಳಿಂದ ಎಷ್ಟು ಪ್ರತಿನಿಧಿಗಳುತ್ತಾರೆಂಬುದನ್ನು ತಿಳಿಸುವಂತೆಯೂ, ಸಂಘದ ಪ್ರತಿನಿಧಿಗಳ ಸಂಖ್ಯೆಯು ಹೆಚ್ಚಿರುವಂತೆ ನೋಡಬೇಕೆಂಬಂತೂ, ಕಾನ್‌ಫರೆನ್ಸಿನಲ್ಲಿ ಚರ್ಚೆಗೆ ಬರುವ ವಿಷಯಗಳನ್ನು ಯಾವ ರೀತಿಯಿಂದ ತೀರ್ಮಾನಿಸಲಾಗುತ್ತದೆಂಬದನ್ನು ತಿಳಿಯಬೇಕೆಂತಲೂ, ಕಾನ್‌ಫರೆನ್ಸಿನಲ್ಲಿ ಚರ್ಚೆಯಾಗುವ ವಿಷಯಗಳ ಬಗ್ಗೆ ಕಾರ್ಯಪ್ಪನವರ ಕಾಗದದಲ್ಲಿ ಸೂಕ್ತವಾಗಿರುವ ಸೂಚನೆಯೊಂದಿಗೆ ಸಂಘದ ಅಭಿಪ್ರಾಯವನ್ನು ತಿಳಿಸಬೇಕೆಂತಲೂ ಸಹ ಮೆ. ಕಾರ್ಯಪ್ಪನವರಿಗೆ ಜವಾಬು ಬರೆಯಬೇಕೆಂತ ತೀರ್ಮಾನವಾಯಿತು.

ಮೆ. ಕಾರ್ಯಪ್ಪನವರಿಂದ ಬರುವ ಜವಾಬು ಈ ಕೆಳಗಿನ ಉಪಕಮಿಟಿಗೆ ತೃಪ್ತಿಯೂದರೆ ಆವರೇ ಕಾರ್ಯಪ್ಪನವರು ಸಭೆಗೆ ವಿಸುವ ಸಭೆಗೆ ಪ್ರತಿನಿಧಿಗಳಾಗಿ ಹೋಗಬಹುದೆಂತಲೂ, ಹೆಚ್ಚಿನ ವ್ಯತ್ಯವಿದ್ದರೆ ಹೆಚ್ಚಿನ ಸಂಖ್ಯೆ ಪ್ರತಿನಿಧಿಗಳನ್ನು ಇವರೇ ಜಮಾನಿಯಸು ಬಹುದೆಂತಲೂ ತೀರ್ಮಾನಿಸಲಾಯಿತು.

(1) ಮೆ: ಗಳಾದ ಸಿ ಎನ್. ವೆಂಕಟ್ಟಯ್ಯನವರು, (2) ಕೆ. ಪಿ ಚಿಣ್ಣಪ್ಪನವರು, (3) ಐ ಸಿ ಸುಬ್ಬಯ್ಯನವರು, (4) ಬಿದನಂಡ ಕಾರ್ಯಪ್ಪನವರು, (5) ಪಿ ಜಿ. ಮುದ್ದ

## ರಾಜಿಸನ್ಮುಂಧದೆ ಪತ್ರವ್ಯವಹಾರ.

ಶ್ರೀ. ಜಯಕರ್ ಮೆಕ್ಕ ನೆರ್ ತೇಜ್‌ಬಹದೂರ್ ಸಪ್ರೂರವರು ಮಹಾತ್ಮ ಗಾಂಧಿ ಮತ್ತು ಸರ್ಕಾರವನ್ನು ಯುವಾಡ ಜೈಲಿನಲ್ಲಿ ಜುಲೈ 23–24 ನೇ ತಾರೀಕುಗಳಲ್ಲಿ ಸಂದರ್ಶಿಸಿದ್ದಗ ಮಹಾತ್ಮ ಗಾಂಧಿಯವರು ಶ್ರೀ ಪಂಡಿತ ಮೋತಿಲಾಲ್ ನಹರೂರವರಿಗೂ ಮತ್ತು ಶ್ರೀ ಜವಾಹಿರ್‌ಲಾಲ್ ನೆಹರೂರವರಿಗೂ ಕೊಟ್ಟ ಅಭಿಪ್ರಾಯಗಳ ಸಾರಾಂಶವಾಕ್ಯ:—

(1) ಹಿಂದೂಸ್ಥಾನಕ್ಕೆ ಪೂರ್ಣ ಸ್ವರಾಜ್ಯ ಸಿಕ್ಕುವ ಸಂಬಂಧದಲ್ಲಿ ಮೂಡಬೇಕಾದ ಶಾಶ್ವತಿಕ ವಿಷಾದಿಯಗಳ ವಿಷಯ ಮೊತ್ತ ಚಕ್ರಗೋಷ್ಠಿಯಲ್ಲಿ ಜಿಜ್ಞಾಯೂಗುವದಾದರೆ ನನ್ನ ಅಕ್ಷೇಪಣೆಯಿಲ್ಲ. ಯೂರೋಪಿಯನ್ ಪೂರ್ಣ ಸ್ವಾತಂತ್ರ್ಯಕ್ಕರ ಮೊತ್ತನ್ನು ಎತ್ತಿದರೆ ಅವನ್ನು ಚರ್ಚಿಸಿಕೊಂಡಿರುತ್ತ ಹೇಳುತಾರದು. ಚಕ್ರಗೋಷ್ಠಿಯ ರಚನೆಯ ವಿಷಯ ನನಗೆ ಪೂರ್ತಿ ನವೂಧಾನವಾದ ವಿಷಯ ಕಾಂಗ್ರೆಸ್‌ನಿಯರು ಅದಕ್ಕೆ ಹೋಗಲು ನಾನು ಬಿಸ್ಸಲಾರೆ.

(2) ಕಾಂಗ್ರೆಸಿಗೆ ಚಕ್ರಗೋಷ್ಠಿಯ ವಿಷಯದಲ್ಲಿ ತೈ ಸ್ಪಿಯಾದರೆ ಸವಿನಯ ಖಾನೂನುಭಂಗವನ್ನು ನಿಲ್ಲಿಸಬೇಕು ಅಂದರ ಖಾನೂನುಭಂಗ ಮೂಡಬೇಕೆಂತಲೇ ಮೂಡುವ ಖಾನೂನುಭಂಗ ಮೊತ್ತ ನಿಲ್ಲಿಸುಹುದು. ಆದರೆ ಪರದೇಶೀ ಬಟ್ಟೆಯ ವ್ಯಾಪಾರ ಮತ್ತು ನಿಷಾ ಸದಾರ್ಥಗಳ ವ್ಯಾಪಾರಗಳನ್ನು ಸರಕಾರವೇ ನಿಲ್ಲಿಸಿದ್ದರೆ ಇವುಗಳ ಅಂಗಡಿಯ ಮುಂದೆ ಶಾಂತ ರೀತಿಯಾದ ಪಿಕೆಟಿಂಗ್ ಮೂಡುವದನ್ನು ನಿಲ್ಲಿಸಲಾಗುವದಿಲ್ಲ. ಜನರು ಉಪ್ಪು ತಯಾರುಮಾಡುವದನ್ನು ನಿಲ್ಲಿಸಲಾಗುವದಿಲ್ಲ. ಉಪ್ಪಿನ ಖಾಸಗಿನಲ್ಲಿ ಶಿಕ್ಷಾಭಂಗಗಳನ್ನು ತೆಗೆದು ಹಾಕಬೇಕು. ಸರಕಾರ ಉಪ್ಪಿನ ಕೋಟೆಗಳ ಮೇಲೆ ದಾಳಿ ಮಾತ್ರ ನಡಸುವುದಿಲ್ಲ. ಈ ವಿಷಯವನ್ನು ರಾಜಿ ತೀರ್ಮಾನದ ಶರತ್ತಾಗಿ ತೆಗೆದುಕೊಳ್ಳಬೇಕೆಂತಲ್ಲವಾದರೂ ಪರಿಣಾಮಗ ಮೂಲಕ ಒಪ್ಪಂದವಿಂಬೇಕು

(3) (ಅ.) ಖಾನೂನು ಭಂಗದ ಜಳಪಾಸನ್ನು ನಿಲ್ಲಿಸಿದ ಕೂಡಲೇ ಎಲ್ಲಾ ಸತ್ಯಾಗ್ರಹ ಸಂಬಂಧದ ಖೈದಿಗಳನ್ನು ಬಿಡಬೇಕು. ಹಿಂಸೆ ಮೂಡಿದ ಖೈದಿಗಳನ್ನು ಮೊತ್ತ ವಿನಾಯಿನ ಬಹುದು

(ಆ) ಉಪ್ಪಿನ ಖಾನೂನು, ಪೈಸ್ ಆರ್ಡ್ ಮತ್ತು ರೆವಿನ್ಯೂ ಖಾನೂನು ಮೇರೆ ಸರಕಾರದವಗ ತೆಗೆದುಕೊಂಡ ಎಲ್ಲಾ ಸೊತ್ತುಗಳನ್ನು ವಾಪಸು ಕೊಡಬೇಕು.

(ಇ) ಶಿಕ್ಷೆಗೆ ಗುರಿಯಾದ ಎಲ್ಲಾ ಸತ್ಯಾಗ್ರಹ ಖೈದಿಗಳಿಂದ ವಸೂಲ್ ಮಾಡಿದ ಜುಲುಮಾನೆಗಳನ್ನು ವಾಪಸು ಕೊಡಬೇಕು. ಪೈನ್ ಆಕ್ಟಿನ ಮೇರೆ ತೆಗೆದುಕೊಂಡ ಜಮೀನು ಮತ್ತು ಪಣಗಳನ್ನು ಸಹ ವಾಪಸು ಕೂಡಬೇಕು.

(ಈ) ಎಲ್ಲಾ ಸರಕಾರಿ ನೌಕರರೂ ಗ್ರಾಮ ಆಡಳಿತಾಧಿಕಾರಿಗಳು ಸಹಿತ ರಾಜೀನಾಮೆ ಕೊಟ್ಟಿದ್ದರೂ, ಡಿಸ್‌ಮಿಸ್ ಆಗಿದ್ದರೂ ಪುನಃ ಕೆಲಸಕ್ಕೆ ಸೇರಲು ಅವಿಕ್ಷೆ ಸಲ್ಲರೆ ಕಲಸಕ್ಕೆ ಕೊಡಬೇಕು ಅನುಕಂಪಾದ ಸಂಬಂಧವಾದ ಎಲ್ಲವರಿಗೂ ಈ ಶರತ್ತುಗಳು ಅನ್ವಯಿಸಬೇಕು.

(ಉ) ಪೈಸ್‌ರಾಯರ ಎಲ್ಲಾ ಆರ್ಡಿನೆನ್ಸ್‌ಗಳೂ ರದ್ದಾಗಬೇಕು.

ಈ ಶರತ್ತುಗಳೆಲ್ಲಾ ಮೂರ್ತಾಡಿಗೆ ಒಳಪಡಬಹುದು ಯಾಕೆಂದರೆ—ಜೈಲಿನ ಒಳಗೆ ಇರುವವರಿಗೆ ಹೊರಗೆ ನಡಿಯು ತ್ತಿರುವ ವಿದ್ಯಮಾನಗಳ ಮೇಲೆ ಅಭಿಪ್ರಾಯ ಕೊಡಲು ಪಕ್ಕೆಲ್ಲವೆಂತ ನಾನು ಭಾವಿಸುತ್ತೇನೆ ಜಳವಳ ಸಂರ್ಧಾದಿರ್ದಾಗ ನಾನು ಕೊಡಬಹುದಾದ ಅಭಿಪ್ರಾಯಗಳಿಗಿಂತ ಕೊಡಬಹುದಾದವನ್ನು ತೂಕ ಆ ಅಭಿಪ್ರಾಯಗಳಿಗೆ ಕೊಡಲು ಸಾಧ್ಯವಲ್ಲ. ಈ ಪತ್ರವನ್ನು ಪಂಡಿತ ಮೋತಿಲಾಲ್ ನೆಹರೂ, ಜವಾಹಿರ್‌ಲಾಲ್ ನಹರೂ, ವಲ್ಲಭಭಾಯಿ ಪಟೇಲ್ ಮತ್ತು ಇತರ ಜಳವಳದ ನಾಯಂದಾಯಗಳಿಗೂ ತೋರಿಸಿಹುದು. ಪತ್ರಿಕೆಗಳಲ್ಲಿ ಏನೂ ಬರಕೂಡದು. ಈಗ ವೈಸ್‌ರಾಯರುಗೂ ಇವನ್ನು ತೋರಿಸುವರದು. ಈ ಶರತ್ತುಗಳು ಆಂಗೀಕರವಾಗುವ ಸಂಭವವಿದ್ದರೆ ನಾನು. ಬೈಲಿನಿಂದ ಹೊರಗೆ ಹೋದಾಗ ನನ್ನಲ್ಲಿ ಬೇರೆ ಏನಾದರೂ ಸೂಚನೆಗಳನ್ನು ಕೊಡಲು ಇದ್ದರೆ ನಾನು ರೌಂಡ್‌ಟೇಬಲ್ ಕಾನ್‌ಫರೆನ್ಸಿಗೆ ಹೋದೆನು. ಮತ್ತು ಹಾಗೆ ಹೋಗಬೇಕಾದರೆ ಹೋಗ ವ ಪ್ರತಿನಿಧಿಗಳು ತಮ್ಮೊಳಗೆ ಚರ್ಚಿಸಿ ಒಗ್ಗಟ್ಟಿಗೆ ಬರಬೇಕು. ಯಾವ ಸ್ವರಾಜ್ಯ ರಚನೆಯಲ್ಲಾದರೂ ನನ್ನ ಅನ್ನೊಂದು ಶರತ್ತುಗಳನ್ನು ಜಾರಿಮಾಡಿಕೊಳ್ಳಲು ಸಾಧ್ಯವಿದೆಯೋ ಎಂಬದನ್ನು ನೋಡಿ ನಾನು ಒಪ್ಪಿಗೆ ಕೊಟ್ಟೀನಷ್ಟೆ.

ಮೇಲ್ಕಂಡ ನೋಡಣಾ ಪತ್ರದೊಡನೆ ಶ್ರೀ. ಪಂಡಿತ ಮೋತಿ ಲಾಲ್ ನೆಹರೂರವರಿಗೆ ಮಹಾತ್ಮ ಗಾಂಧಿಯವರು ಬರೆದ ಪತ್ರ--ನನ್ನ ಸ್ಥಿತಿಯು ಕಷ್ಟದ್ದಾಗಿದೆ ಜೈಲ್ ಗೋಡೆಗಳ ಹೊರಗೆ ನಡಿಯುತ್ತಿರುವ ವಿದ್ಯಮಾನಗಳ ಮೇಲೆ ಅಭಿಪ್ರಾಯ ಕೊಡಲು ನನ್ನ ಸ್ವತಂತ್ರಿಕ ಗುಣದಿಂದಲೇ ಖಂಡಿತ ತೀರ್ಮಾನ ಕೊಡಲು ಸಾಧ್ಯವಿಲ್ಲ. ನನಗೆ ಸಮಾಧಾನವಾಗಬಹುದಾದ ಸೂಚನೆಗಳನ್ನು ಜತಳ ಬರಬೇಕು ತಮಾಲಿನ ನನ್ನ ಸ್ನೇಹಿತರೊಂದಿಗೆ ಕೂಡಿದ್ದೇನೆ ವೆ. ನ್ನೊಕೂಂಬಂಗೆ ಯೋ ವ ಅಭಿಪ್ರಾಯ ಕೊಡಲಕ್ಕಾ ಮನಸ್ಸಾರಲಿಲ್ಲ. ನಿಮ್ಮ ಸಂಗಡ ಜತೆಯಾಗಿ ಜೈಲಿನಲ್ಲಿ ಇರುವವರಿಗೆ ಹೊರಗೆ ನಡಿಯು ತ್ತಿರುವ ವಿದ್ಯಮಾನಗಳ ಮೇಲೆ ಅಭಿಪ್ರಾಯ ಕೊಡಲು ಪಕ್ಕೆಲ್ಲವೆಂತ ನಾನು ಭಾವಿಸುತ್ತೇನೆ ಜಳವಳ ಸಂರ್ಧಾದಿರ್ದಾಗ ನಾನು ಕೊಡಬಹುದಾದ ಅಭಿಪ್ರಾಯಗಳಿಗಿಂತ ಕೊಡಬಹುದಾದವನ್ನು ತೂಕ ಆ ಅಭಿಪ್ರಾಯಗಳಿಗೆ ಕೊಡಲು ಸಾಧ್ಯವಲ್ಲ. ಈ ಪತ್ರವನ್ನು ಪಂಡಿತ ಮೋತಿಲಾಲ್ ನೆಹರೂ, ಜವಾಹಿರ್‌ಲಾಲ್ ನಹರೂ, ವಲ್ಲಭಭಾಯಿ ಪಟೇಲ್ ಮತ್ತು ಇತರ ಜಳವಳದ ನಾಯಂದಾಯಗಳಿಗೂ ತೋರಿಸಿಹುದು. ಪತ್ರಿಕೆಗಳಲ್ಲಿ ಏನೂ ಬರಕೂಡದು. ಈಗ ವೈಸ್‌ರಾಯರುಗೂ ಇವನ್ನು ತೋರಿಸುವರದು. ಈ ಶರತ್ತುಗಳು ಆಂಗೀಕರವಾಗುವ ಸಂಭವವಿದ್ದರೆ ನಾನು. ಬೈಲಿನಿಂದ ಹೊರಗೆ ಹೋದಾಗ ನನ್ನಲ್ಲಿ ನಾನಿಗೆ

ತ್ಯದೆ. ನವಿನಯ ಖಾನೂನು ಭಂಗದಿಂದ ದೇಶಕ್ಕೆ ಕೆಡಕಾಗಿ ದೆಯೆಂತಾಗಲೀ, ಅದನ್ನು ಈಗ ಕೈಗೊಳ್ಳಬಾರದಿತ್ತೆಂತಾಗಲೀ, ನ್ಯಾಯಕ್ಕೆ ವಿರೋಧವಾದದ್ದೆಂತಾಗಲೀ ನೀವು ಮತ್ತು ವೈ ಸರಾಯರೂ ಪಡುವ ಅಭಿಪ್ರಾಯಕ್ಕೆ ನಾವು ಒಪ್ಪುವದಿಲ್ಲ. ಇಂಗ್ಲಿಷ್ ಚರಿತ್ರೆಯನ್ನು ನೋಡಿದರೆ ರಕ್ತಪಾತದ ಕ್ರಾಂತಿ ಗಳು ಎಷ್ಟೋ ಕಾಣಬರುತ್ತವೆ ಅಂಥಾ ಕ್ರಾಂತಿಗಳನ್ನು ಇಂಗ್ಲಿಷರು ಕೊಂಡಾಡುತ್ತಾರೆ. ನಾವೂ ಹಾಗೆಯೇ ಮಾಡ ಲು ನಮಗೆ ಕಲಿಸಿರುತ್ತಾರೆ. ಹಿಂದೂಸ್ಥಾನದ ಈಗಿನ ಶಾಂ ತ ರೀತಿಯ ಕ್ರಾಂತಿಯನ್ನು ವೈಸರಾಯರಾಗಲೀ, ಬುದ್ಧಿಯು ಳ್ಳ ಯಾವ ಇಂಗ್ಲಿಷ್ ಮನುಷ್ಯನೇ ಆಗಲೀ ದೂರುವದು ಯು ಕ್ತವಲ್ಲ. ಆದರೆ ಅಂಥಾ ಆಕ್ಷೇಪಣೆ ಇರುವವರೊಂದಿಗೆ ನಾವು ವಾದಿಸಲು ಅಪೇಕ್ಷಿಸುವದಿಲ್ಲ. ಈ ಚಳವಳಿಕ್ಕೆ ಸ ಮುದಾಯದಿಂದ ದೊರೆತ ಅದ್ಭುತ ಸಹಾನುಭೂತಿಯೇ ಈ ಚಳವಳದ ಅವಶ್ಯಕತೆಯನ್ನು ಪ್ರತ್ಯಕ್ಷಗೊಳಿಸುತ್ತದೆ. ತತ್ಕಾ ಲ ಖಾನೂನುಭಂಗದ ಚಳವಳವನ್ನು ನಿಲ್ಲಿಸುವದು ಅವಶ್ಯವೆಂ ಕಾದರೆ ಅದನ್ನು ನಿಲ್ಲಿಸಲು ನಾವೂ ಒಪ್ಪುತ್ತೇವೆ. ಆದಾವ ಶ್ಯವಾಗಿ ನಮ್ಮ ಗುಡಿಸರು, ಹೆಂಗಸರು, ಮಕ್ಕಳನ್ನು ಜೈಲಿ ಗೂ, ಲಠಿ ಪೆಟ್ಟಿಗೂ ಇನ್ನೂ ಕಠಿಣ ಕಷ್ಟಗಳಿಗೂ ಗುರಿಪಡಿ ಸಲು ನಾವು ಇಷ್ಟಪಡುವದಿಲ್ಲ. ಗೌರವ ಯುಕ್ತವಾದ ರಾಜಿಗೆ ಹೇಗೆ ಸಾಧ್ಯವೆಂಬದನ್ನು ನಾವು ಜೆನ್ನಾಗಿ ಯೋಚಿ ಸುತ್ತೇವೆಂತ ನಿಮಗೆ ಭರವಸೆ ಕೊಡುತ್ತೇವೆ. ಆದರೆ ಅಂಥ ರಾಜಿಯು ಇನ್ನೂ ದೃಷ್ಟಿಗೋಚರಕ್ಕೆ ಬರುವದಿಲ್ಲ. ಇಂ ಗ್ಲಿಷ್ ಅಧಿಕಾರಿಗಳ ಸಮೂಹದಲ್ಲಿ ಹಿಂದೂಸ್ಥಾನಕ್ಕೆ ಯಾವ ದು ಒಳ್ಳೇದೆಂಬದನ್ನು ನಿರ್ಣೈಸುವ ಹಕ್ಕು ಹಿಂದೀಯರಿಗೆ ಇ ದೆಯೆಂಬ ಅಭಿಪ್ರಾಯವು ಇಟ್ಟಿದ ನೋಜನೆ ಇನ್ನೂ ತೋರಿ ಬರುವದಿಲ್ಲ. ಒಳ್ಳೇ ಅಭಿಪ್ರಾಯಗಳನ್ನು ಸೂಚಿಸಿ ಆಡುವ ಮಾತುಗಳಲ್ಲಿ ನಮಗೆ ಅಪನಂಬಿಕೆಯಿದೆ. ಆದರೆ ಅಂಥ ರಾಜಿಯು ಇನ್ನೂ ದೃಷ್ಟಿಗೋಚರಕ್ಕೆ ಬರುವದಿಲ್ಲ. ಇಂ ಗ್ಲಿಷ್ ಅಧಿಕಾರಿಗಳ ಸಮೂಹದಲ್ಲಿ ಹಿಂದೂಸ್ಥಾನಕ್ಕೆ ಯಾವ ದು ಒಳ್ಳೇದೆಂಬದನ್ನು ನಿರ್ಣೈಸುವ ಹಕ್ಕು ಹಿಂದೀಯರಿಗೆ ಇ ದೆಯೆಂಬ ಅಭಿಪ್ರಾಯವು ಇಟ್ಟಿದ ನೋಜನೆ ಇನ್ನೂ ತೋರಿ ಬರುವದಿಲ್ಲ. ಒಳ್ಳೇ ಅಭಿಪ್ರಾಯಗಳನ್ನು ಸೂಚಿಸಿ ಆಡುವ ಮಾತುಗಳಲ್ಲಿ ನಮಗೆ ಅಪನಂಬಿಕೆಯಿದೆ. ಈ ನ್ಯಾಚೀನ ದೇ ಶದ ಜನರನ್ನು ಇಂಗ್ಲಿಷರು ಬಹು ಕಾಲದಿಂದ ತಮ್ಮ ಪ್ರ ಯೋಜನಕ್ಕೆ ಉಪಯೋಗಿಸುತ್ತಾ ಬಂದದ್ದರಿಂದ ಹಿಂದೀ ಜನ ರಿಗೆ ಸಂಧವಿಸುತ್ತಿರುವ ರಾಜಕೀಯ, ಆರ್ಥಿಕ, ಮತ್ತು ನೈ ತಿಕ ಹಾನಿಗಳನ್ನು ತಿಳಿದುಕೊಳ್ಳಲು ಶಕ್ತಿ ಇಲ್ಲದಂತೆ ಮಾಡಿ ದೆ. ಹಿಂದೂಸ್ಥಾನದವರಿಗೆ ಅವಶ್ಯವಿರುವದು ಹಿಂದೀಯರ ಬಿ ನ್ನು ಮೇಲಿಂದ ಇಂಗ್ಲಿಷರು ಇಳಿದು ಈ ವರೆಗೆ ಇಂಗ್ಲಿಷರಿಂದ ಹಿಂದೀಯರಿಗೆ ಆದ ಕೆಡಕಿಗಾಗಿ ತಕ್ಕ ಪರಿಹಾರ ಕೊಡಬೇ ಕೆಂಬ ಇಂಗ್ಲಿಷರಿಗೆ ಇನ್ನೂ ತೋರುವದೇ ಇಲ್ಲ—ನಿಮ್ಮ ಅಭಿಪ್ರಾಯವು ದೇರೆ ಇರಬಹುದು. ಚಕ್ರಗೋಷ್ಠಿಯಲ್ಲಿ ಸೇರಬಹುದಾದಷ್ಟು ಇಂಗ್ಲಿಷ್ ಮನೋಭಾವವು ಬದಲಾಗಿ ದೆಯೆಂತ ನೀವು ಸಂಬುಕ್ತೀರಿ. ನಮಗೆ ಈ ಆಡಚಣೆಗಳಿದ್ದರೂ ನಮ್ಮಿಂದ ಶಕ್ತಿ ಇರುವಷ್ಟು ನಟ್ಟಿಗೆ ನಿಮ್ಮೊಡನೆ ಸಹಕ ರಿಸಲು ತಯಾರಿದ್ದೇವೆ.

ನಿಮ್ಮ ಸ್ನೇಹಬಾಳ್ಕೆಯಾದ ಪ್ರಯತ್ನಕ್ಕೆ ಈ ಕೆಳಗಿನ ಶ ರತ್ತುಗಳನ್ನು ಕೊಡಲು ನಮಗೆ ಸಾಧ್ಯವಿದೆಯಷ್ಟೆ.

ನಿಮಗೆ ವೈಸ್‌ರಾಯರು ಒರೆದ ಪತ್ರವು ಸ್ಪಷ್ಟವಾಗಿಲ್ಲ. ವರ್ಕಿಂಗ್ ಕಮಿಟಿಯನ್ನೂ, ಅಬಿಲ ಭಾರತ ಕಾಂಗ್ರೆಸ್ ಕ ಮಿಟಿಯನ್ನೂ ಕೇಳದೆ ಜವಾಬ್ದಾರಿ ಯುಕ್ತವಾದ ಜವಾಬನ್ನು ಕೊಡಲು ಸಾಧ್ಯವಿಲ್ಲ. ಈ ಕೆಳಗಿನ ಶರತ್ತುಗಳನ್ನು ಅಂಗೀ ಕರಿಸದೆ ಯಾವ ತೀರ್ಮಾನವೂ ನಮಗೆ ಪ್ರಯೋಜನಕಾರಿಯು. (ಅ) ಬ್ರಿಟಿಷ್ ಸಾಮ್ರಾಜ್ಯದಿಂದ ಮನಸು ಬಂದಾಗ ಬಿಟ್ಟು ಹೋಗುವ ಹಕ್ಕನ್ನು ನಮೂದಿಸಬೇಕು. (ಆ) ಹಿಂದೂಸ್ಥಾ ನದ ಮಿಲಿಟರಿ, ಆರ್ಥಿಕ ಸಂಬಂಧವಾದ ಎಲ್ಲಾ ಹಕ್ಕುಗಳೂ ಮತ್ತು ಗಾಂಧೀಜಿಯವರ 11 ಶರತ್ತುಗಳು ಸಹ ಇರುವ ಪ್ರ ಜಾಪ್ರಭುತ್ವವನ್ನು ರಾಷ್ಟ್ರೀಯ ಸರಕಾರವಾಗಬೇಕು. (ಇ) ರಾಷ್ಟ್ರೀಯ ಸರಕಾರಕ್ಕೆ ನ್ಯಾಯತೀರ್ಪರ ಬ್ರಿಟಿಷರ ಹಕ್ಕುಗಳನ್ನೂ, ಒಯಿಯತಿಗಳನ್ನೂ ಸರಕಾರಿ ಸಾಲಸಹಿತ ಆ ಜವಾಯಿಸಲು ಸ್ವತಂತ್ರ ನ್ಯಾಯಾಧೀಶರ ತೀರ್ಪಿಗೆ ಬಿಡುವ ಹಕ್ಕು ಹಿಂದೂಸ್ಥಾನಕ್ಕೆ ಇರಬೇಕು.

ವರತಾ—ಹಿಂದೂಸ್ಥಾನದ ಹಿತಕ್ಕಾಗಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರಕುವಾಗ ಯಾವ ಯಾವ ಬಾಬಿನಲ್ಲಿ ಎಷ್ಟು ಕಾಲ ವೀನೇನು ಭದ್ರತೆಗಳು ಬೇಕೆಂಬದನ್ನು ಹಿಂದೀ ಮುಖಂ ಡರೇ ನಿಶ್ಚೈಸಬೇಕು.

(2) ಈ ಶರತ್ತುಗಳು ಬ್ರಿಟಿಷ್ ಸರಕಾರಕ್ಕೆ ಒಪ್ಪಿಗೆಯಾ ಗಿ ಹಾಗೆಯೇ ಪ್ರಕಟಮಾಡಿದರೆ ಖಾಯಿದೆ ಭಂಗವನ್ನು ನಿಲ್ಲಿ ಸಲು ವರ್ಕಿಂಗ್ ಕಮಿಟಿಯನ್ನು ನಾವು ಕೇಳಿಕೊಳ್ಳುತ್ತೇವೆ. (ಈ ಸಂಬಂಧವಾಗಿ ಗಾಂಧಿಯವರು ಜೇಳಿದ ಶರತ್ತುಗಳು ಇ ಲ್ಲಿಯೂ ಕೊಟ್ಟಿದೆ.)

(3) ಖಾಯಿದೆ ಭಂಗವನ್ನು ನಿಲ್ಲಿಸಿದೆ ಕೂಡಲೇ ಸತ್ಯಾ ಗ್ರಹಿ ಖೈದಿಗಳನ್ನೆಲ್ಲಾ ಬಿಡಬೇಕು. ಹಿಂಸೆ ನಡಿಸಿದವರನ್ನು ಬಿಡಬೇಕೆಂತ ಇಲ್ಲ--(ಈ ಸಂಬಂಧದಲ್ಲಿ ಮಹಾತ್ಮ ಗಾಂಧಿ ಯವರು ಜೇಳಿದ ಇತರ ಶರತ್ತುಗಳು ಸಹ ಇವೆ)

(4) ಚಕ್ರಗೋಷ್ಠಿಯಲ್ಲಿ ಕಾಂಗ್ರೆಸಿನ ಪ್ರತಿನಿಧಿಗಳು ಎ ಷ್ಟು ಜನರಿಬೇಕೆಂಬ ವಿಷಯಗಳನ್ನು ಮೀಲ್ಕಂಡ ವಿಷ ಯಗಳ ಮೇಲೆ ತೀರ್ಮಾನ ಸಿಕ್ಕಿದ ಮೇಲೆ ನಿಶ್ಚೈಸಬಹುದು

ನಿಮ್ಮ ಪ್ರಿಯರಾದ,
ಮೋತಿಲಾಲ್ ನಹರು,
ಯಂ. ಕೆ. ಗಾಂಧಿ.
ಸರೋಜಿನಿನಾಯಿಡು,
ವಲ್ಲಭಭಾಯಿ ಪಟೇಲ್.
ಬೈರಾಮದಾಸ್ ದೌಲತ್‌ರಾಮ್,
ಸೈಯದ್ ಮಹಮದ್,
ಜವಾಹರ್‌ಲಾಲ್ ನೆಹರು.

ಈ ಪತ್ರವನ್ನು ಸಂಧಾನಗಾರರು ವೈಸರಾಯರಿಗೆ ಕಳುಹಿ ಸಿದ್ದಕ್ಕೆ ಕಾಂಗ್ರೆಸ್ ಮುಂದಾಳುಗಳ ಕರತ್ತುಗಳ ಮೇಲೆ ಚರ್ಚಿ ಸಲು ಸಾಧ್ಯವಿಲ್ಲವೆಂತ ವೈಸರಾಯರು ಜೇಳಿ ಆರ್ಡಿನೆನ್ಸ್‌ಗ ಳನ್ನು ಮಾಡಬಹುದೆಂತಲೂ, ಖೈದಿಗಳನ್ನು ಬಿಡುವ ವಿಷಯ ದಲ್ಲಿ ಪ್ರಾಂತೀಕ ಸರಕಾರಗಳಿಗೆ ದಯ ತೋರಿಸುವಂತೆ ಜೇಳಬಹುದೆಂತಲೂ ವೈಯರ ಜವಾಬು ಕೊಟ್ಟರು. ಸಂಧಾನ ಗಾರರು ವೈಸರಾಯರೊಡನೆ ಸಂಭಾಷಿಸಿದ್ದರಲ್ಲಿ ಈ ಕೆಳಗಿನ ಅಂಶಗಳೂ ತಿಳಿದು ಬಂತಂತ ತಿಳಿಸಿದ್ದಾರೆ—ಚಕ್ರಗೋಷ್ಠಿಯ ಲ್ಲಿ ಪೂರ್ಣ ಸ್ವಾತಂತ್ರ್ಯದ ಚರ್ಚೆ ತರಲು ಆಡ್ಡಿ ಇಲ್ಲ. ಆದ ರೆ ಇಂಡಿಯಾ ಸರಕಾರವೇ ಈ ಬಾಬಿನಲ್ಲಿ ಜವಾಬು ಕೊಡಬೇ ಕೆಂತಾದರೆ ಆಗುವದಿಲ್ಲವೆಂತ ಜೇಳಬೇಕಾಗುತ್ತದೆ. ಈ ವಿಷ ಯವನ್ನು ಚಕ್ರಗೋಷ್ಠಿಯಲ್ಲಿ ಚರ್ಚೆಗೆ ತರುತ್ತಾರೆಂತ ಮಾ ತ್ರ ತಿಳಿಸಬಹುದು.

ಇಂಡಿಯಾ ಸರಕಾರದ ಸಾಲವನ್ನು ಯಾವದನ್ನು ಕೊ ಡುವದಿಲ್ಲವೆಂಬ ಮಾತಿಗೆ ಒಪ್ಪಲಾಗುವದಿಲ್ಲ. ಆದರೆ ಈ ವಿಷಯವನ್ನು ಚಕ್ರಗೋಷ್ಠಿಯಲ್ಲಿ ತರಲು ಆಡ್ಡಿ ಇಲ್ಲ. ಉ ಪ್ಪಿನ ಸುಂಕವನ್ನು ತೆಗೆದು ಹಾಕಲು ಆಗುವದಿಲ್ಲ. ಕಾಂಸ್ಟಿ ಟ್ಯೂಯೆಂಟ್ ಅಸೆಂಬ್ಲಿಗಳಲ್ಲಿ ಈ ಆದಾಯದ ಒದಲಿಗೆ ಬೇರೆ ಉತ್ಪತ್ತಿಯ ದಾರಿ ತೋರಿಸಿದರೆ ಈ ಸುಂಕವನ್ನು ಬಿಡುವ ಯೋಚನೆ ಮಾಡಬ ಹುದು. ಬಡವರಿಗೆ ಆರ್ಥಿಕ ಸಹಾಯ ಹೇಗೆ ಮಾಡಬಹು ದೆಂಬದಕ್ಕೆ ಮುಖಂಡರನ್ನು ಕರೆಸಿ ಯೋಚಿಸಬಹುದು. ಪಿ ಕೆಟ್ ಮಾಡುವವರಿಂದ ಬೇರೆಯವರಿಗೆ ತೊಂದರೆಯಾದರೆ ಖಾ ನೂನು ಮೇರೆ ಜಾರಿ ಮಾಡಲಾದೀತು. ಹಿಕೆಟಿಂಗ್ ಆರ್ಡಿನೇ ನ್ಸ್ ಮೂತ್ರ ರದ್ದು ಪಡಿಸಬಹುದು. ಕೆಲಸ ಬಿಟ್ಟವರಿಗೆ ಕೆಲಸ ಕೊಡುವ ಬಾಬಿನಲ್ಲಿ ರಾಜಭಕ್ತ ಜನರನ್ನು ಕೆಲಸದಿಂದ ಬಿಡಿ ಸಬೇಕಾಗಿ ಬಂದಲ್ಲಿ ಸಾಧ್ಯವಿಲ್ಲ. ಉತ್ಪಾಹದಲ್ಲಿ ತಲೆ ತಿ ರುಗಿ ಬಿಟ್ಟವರನ್ನು ಮೂತ್ರ ಕೆಲಸಕ್ಕೆ ಕೆಗೆದುಕೊಳ್ಳುವ ಯೋ ಚನೆ ಮಾಡಬಹುದು. ಪೈಸ್‌ಗಳನ್ನೂ, ಜಾತಿಮಾನು ಹೂಣಗ ನ್ನೂ ವಾಪಸು ಕೊಡುವ ಬಾಬು ಕಷ್ಟದ್ದಲ್ಲ. ದಿವನ್ಯಾ ಖಾ ನೂನು ಮೇರೆ ಹರಾಜಾದ ಸೊತ್ತುಗಳ ವಿಷಯದಲ್ಲೂ, ಜು ಲುಮನೆಗಳ ವಿಷಯದಲ್ಲೂ ಕಷ್ಟಗಳಿವೆ. ದಯವಿಂದ ಯೋಚಿಸಬಹುದು.

ಇದರ ಮೇಲೆ ಪಂಡಿತ ಮೋತಿಲಾಲ್ ಮತ್ತು ಜವಾಹಿ ರ್‌ಲಾಲ್ ನೆಹರೂರವರು ಮಹಾತ್ಮ ಗಾಂಧಿಯವರಿಗೆ ಬರೆದ ಪತ್ರದಲ್ಲಿ ಹೀಗೆನ್ನುತ್ತಾರೆ—ವೈಸರಾಯರ ಕಾಗದದ ರೀತಿ ಯಿಂದಲೂ, ವರ್ಕಿಂಗ್ ಕಮಿಟಿ ಮೆಂಬರುಗಳನ್ನು ಪುನಃ ಸೆರೆ ಹಿಡಿದದ್ದರಿಂದಲೂ ರಾಜಿಯಾಗಬೇಕೆಂತ ಸರಕಾರಕ್ಕೆ ಅಧಿಪ್ರಾ ಯವಿಲ್ಲವೆಂಬದು ಸ್ಪಷ್ಟವಾಗುತ್ತದೆ. ಈ ದಸ್ಕತಿನಿಂದ ನಾವು ಆ ಕ್ಷೇಪಿಸುವದಿಲ್ಲ. ಅದರಿಂದ ಬಳ್ಳೆಯದೇ ಆಯಿತು' ರಾಜಿ ಮಾಡಲು ಶಕ್ತಿ ಇರುವ ಸಭಿಕರನ್ನು ಮುಚ್ಚಿದರೆ ರಾಜಿ ಬೇ ಕೆಂತ ಸರಕಾರಕ್ಕೆ ಇಲ್ಲವೇ ಇಲ್ಲವೆಂತ ಗೊತ್ತಾಗುತ್ತದೆ. ದೇಶದ ಹೋರಾಟ ನಡೆಯುತ್ತಲೇ ಇರದೇಕು. ದೇಶಕ್ಕಾ ಗಿ ನೂತಾಡಲು ಹಕ್ಕಿರುವವರೆಲ್ಲರೂ ಹಿಂದೂಸ್ಥಾನದ ಜೈ ಲುಗಳಲ್ಲಿ ತುಂಬ ಬೇಕು. ವೈಸರಾಯರ ಉತ್ಸಹವು ಕೈ ಪ್ಪಿಯಾಗಿಲ್ಲವೆಂತ ಖಾಖುವಾರು ವಿವರಿಸಿರುತ್ತಾರೆ.

ಅನಂತರ ಸಂಧಾನಗಾರರು ಮಹಾತ್ಮ ಗಾಂಧಿ ಮುಂತಾ ದವರೊಡನೆ ಪುನಃ ಚರ್ಚಿಸಿದ ಮೇಲೆ ಮಹಾತ್ಮಾ ಗಾಂಧಿ, ಶ್ರೀ. ಸರೋಜಿನಿನಾಯಿಡು, ಸರ್‌ದಾರ್ ವಲ್ಲಭಭಾಯಿ ಪಟೇಲ್ ದೌಲತ್‌ರಾಮ್ ಸಹ ನೇರಿ ಒಂದು ಜವಾಬನ್ನು ಕೊಟ್ಟ ರು. ಅದರ ಸಾರಾಂಶವೇನೆಂದರೆ—ವೈಸರಾಯರ ಪತ್ರ ದಿಂದ ಪಂಡಿತ ಮೋತಿಲಾಲರು ಸ್ಪೊಕೋಬರಿಗೆ ಜೇರೆ ಶ ರತ್ತುಗಳೇನೂ ಒಪ್ಪಿಕೊಂಡಂತಾಗುವದಿಲ್ಲ. ಬ್ರಿಟಿಷ್ ಸಾ ಮ್ರಾಜ್ಯವನ್ನು ಬಿಡುವ ಹಕ್ಕು ಕೊಡಬಾಗುವದಿಲ್ಲವೆಂತ ಜೇಳಿ ದ್ದಾರೆ. ಈ ಹಕ್ಕನ್ನು ಇಲ್ಲದೆ ರಾಜಕೀಯ ರಚನೆಯು ಯಾ ರಿಗೂ ಒಪ್ಪುಗೆಯಾಗಲಾರದು. ಆದ್ದರಿಂದ ಕಾಂಗ್ರೆಸಿನ ಜೇ ರಾಟವು ನಡೆಯುತ್ತಲೇ ಇರಬೇಕು. ಉಪ್ಪಿನ ಸುಂಕದ ವಿ ಷಯದಲ್ಲಿ ನಾವು ಕೇಳಿರುವ ರಯಾಯಿತಿಗೆ ಕೊಟ್ಟ ಜವಾಬಿ ನಿಂದ ಯಾರ ಕಷ್ಟವಿಂದ ನಿನ್ನೂದ ಕವಿಯಲ್ಲಿ ಸರಕಾರಕ್ಕೆ ಕೂತುಕೊಳ್ಳಲಿಕ್ಕೆ ಸಾಧ್ಯವಿದೆಯೋ ಆಂಥವರ ಕಷ್ಟವನ್ನು ಸ ರಕಾರವು ತಿಳಿದೇ ಇಲ್ಲವೆಂತ ಗೆಡೆತ್ತಾಗುತ್ತದೆ. ನೀರು, ಗಾಳಿಯಷ್ಟೇ ಬಡವರಿಗೆ ಅವಶ್ಯವಿರುವ ಉಪ್ಪನ್ನು ಮಾಡಿಕೊ ಳ್ಳುವ ಹಕ್ಕಿಗಾಗಿ ನಿರಪರಾಧಿಗಳ ರಕ್ತ 5 ತಿಂಗಳಿಂದ ಚಲ್ಲು ತ್ತಿದ್ದರೂ ಶೈತರ ಹಕ್ಕು ಸಿಕ್ಕದಿರುವಾಗ ಮುಖಂಡರ ವಿ ಟಿಂಗಿನಿಂದ ಸಿಕ್ಕುವದು ಸಾಧ್ಯವಿಲ್ಲ. ಉಪ್ಪಿನ ಆದಾಯಕ್ಕೆ ಬದಲಾಗಿ ಬೇರೆ ಉತ್ಪತ್ತಿ ತೋರಿಸಬೇಕೆನ್ನುವದು ಇನ್ನೂ ನೋವಿನ ಸಂಗತಿ. ಶೈತರನ್ನು ಆಯುವಷ್ಟು ದೊಡ್ಡ ಖರ್ಚಿ ನ ಆಡಳಿತವನ್ನು ಎಂದೆಂದೂ ಇಟ್ಟುಕೊಳ್ಳಲು ಸರಕಾರವು ನಿ ಶ್ಚೈಸಿರುವಂತೆ ಕಾಣುತ್ತದೆ. ಪ್ರಪಂಚದ ಎಲ್ಲೆಲ್ಲಿಯೂ ಜನ ರ ಒಪ್ಪಿಗೆ ಇಲ್ಲದ ಖಾನೂನಿಗೆ ವಿರೋಧವಾಗಿ ನಡೆದರೆ ಸರ ಕಾರವು ಶಿಕ್ಷಿಸುವದಿಲ್ಲ. ಸರಕಾರಕ್ಕೂ, ರೈತರಿಗೂ ಇರು ವ ಮತಭೇದವು ಹೋಗುವ ಸಂಧವ ಕಾಣುವದಿಲ್ಲ.

ಆಕ್ರಮಣಗವಾಗಬೇಕಾದ ಅವಶ್ಯವಿಲ್ಲ. ಸ್ವಾತಂತ್ರ್ಯ ಕ್ಕಾಗಿ ದೃಢಸಂಕಲ್ಪದಿಂದ ಕಾಂಗ್ರೆಸಿನ ಹೋರಾಟವು ನಡಿ ಯುತ್ತಲಿದೆ. ಜನತಾಗವು ಉಪಯೋಗಿಸುವ ಅಹಿಂಸಾ ಆ ಸ್ತ್ರದ ಒಲವು ಸರಕಾರಕ್ಕೆ ಇನ್ನೂ ತಿಳಿದಿಲ್ಲ. ಕೆಲವು ತಿಂಗ ಳುಗಳ ಕಷ್ಟಸಹನೆಯಿಂದ ಸರಕಾರದ ಮನೋಭಾವನೆಯನ್ನು ಬ ದಲಾಯಿಸಲು ಸಾಧ್ಯವಾಗದೆ ಇರುವೆದರಲ್ಲಿ ಆಶ್ಚರ್ಯವಿಲ್ಲ. ನ್ಯಾಯವಾದ ಯಾವ ಹಕ್ಕಿಗೂ ವಿರೋಧ ನಿಲ್ಲಲು ಕಾಂಗ್ರೆ ಸ್ ಉದ್ದೇಶಿಸುವದಿಲ್ಲ. ಇಂಗ್ಲಿಷರ ಮೇಲೆಯೂ ಕಾಂಗ್ರೆ ಸ್ಸಿಗೆ ನಿಷ್ಪುರವಿಲ್ಲ. ಆದರೆ ಬ್ರಿಟಿಷರ ಸಹಸಂಬಂಧದ ಮೇ ಲಧಿಕಾರವನ್ನು ಕಾಂಗ್ರೆಸ್ಸಿಗೆ ಶಕ್ತಿ ಇರುವಷ್ಟು ಮಟ್ಟಿಗೆ ವಿ ರೋಧಿಸುತ್ತದೆ. ಅಹಿಂಸೆಯನ್ನು ದೇಶವು ಬಿಡದಿದ್ದರೆ ಹಿಂ ದೂಸ್ಥಾನದ ಆ ಕಾಂಕ್ಷೆಯು ಶೀಘ್ರದಲ್ಲೇ ಕೈಗೂಡುತ್ತದೆ. ಖಾನೂನುಭಂಗದ ಮೇಲೆ ಸರಕಾರವು ಕಠಿಣ ಬೈಗಳಗಳನ್ನು ಉಪಯೋಗಿಸಿದರೂ ಸಹ ಜಯವಾಗುವದರಲ್ಲಿ ಸಂಶಯವಿಲ್ಲ

ಸಂಧಾನಗಾರರ ನ್ಯಾಯೋಚಿತ್ಯಾಗದ ಪ್ರಯತ್ನಕ್ಕೆ ವಂದಿ ಸಿ ಕಾಂಗ್ರೆಸಿನವರೊಡನೆ ರಾಜಿಸಂಧಾನದ ಕಾಲ ಇನ್ನೂ ಬಂ ದಿಲ್ಲ. ಇನ್ನಾದರೂ ರಾಜಿಗೆ ಸಮಯ ಒಂದಾಗ ಕಾಂಗ್ರೆ ಸ್ ಮುಂದಾಳುಗಳು ನಿಮ್ಮನ್ನು ನೋಡಬಹುದು.

---


# ಬೇಕಾಗಿದೆ.

ತಿಂಗಳಿಗೆ ರೂಪ್ಯ ೫೦ರಿಂದ ೬೫ರ ವರೆಗೆ

ಸಂಬಳದ ಮೇಲೆ ಇಬ್ಬರು

ಏಜಂಟರು ಮೂತ್ರ

(ಇಡೀ ಕೊಡಗಿಗೆ)

ಇವರೊಡನೆ ಪತ್ರವ್ಯವಹಾರ ಬೆಳಸಿರಿ—

**The Karnataka Trading Co.,**
Post Box 3563,
4—3 Girgaon Bombay 4


---

Coorg District Magistrate's Office,
Mercara, dated the 5th September 1930.

## NOTICE.

In modification of this office notice dated 18—8—1930, it is notified that a reward of Rs. 500,'—is offered to any person or persons who may give information leading to the discovery of the crimes in F. I. R. No. 50 dated 12—8—'30 of the Sidapur Police Station (i e, the murder of Devang Yengtamma and others in Chikkanalli)

Sd/ K. CHENGAPPA,
District Magistrate.

---


# ಔದ್ಯೋಗಿಕ ಶಿಕ್ಷಣ.

## ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜು

## ಧಾರವಾಡ ಮೂರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅಳವೆ ಕತ್ತರಿಸುವ ಮತ್ತು ಟೀಲರಿಂಗ ಅಂದರೆ ಅರಿವೆ ಹೊಲಿಯುವ ಸಂಪೂರ್ಣಶಿಕ್ಷಣ ಕೊಡುತ್ತೇವೆ. ಫಕ್ಕ ಕಟಿಂಗ ಮುಂತಾ ಎರಡು ತಿಂಗಳ ಮತ್ತು ಟೀಲರಿಂಗ ನುಡಿತ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ಕ ಕಟಿಂಗ ಫೀ ೫೦ (ಏವತ್ತೈದು) ರೂಪಾಯಿ ಮತ್ತ ಟೀಲರಿಂಗ ಫೀ ೧೫೧ (ಹದಿನೈದು) ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂ ಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಷಾನ್ನವ ಪ್ರಕಾ ತಂಗಳಾ ಕನಿಷ್ಠ ಅರವತ್ತು ರೂಪಾಯಿ ಗಳಿಸುಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸವಿಸ್ತರವೂ ಆಥವಾ ಒಂದು ಆಣೆ ಪೋಸ್ಟ್ ಟಿಕೀಟು ಕಳುಹಿಸಬೇಕು.

ಆರ್. ಬಿ. ಮುಧೋಳಕರ,
ಫರ್ಸ್ಟಕ್ಲಾಸ್ ಡಿಪ್ಲೋಮಿಸ್ಟ್ ಪ್ರಿನ್ಸಿಪಾಲ,
ಧಾರವಾಡ.

# ಕೊಡಗಿನಲ್ಲಿ ಸತ್ಯಾಗ್ರಹ.

## ಹುದಿಕೇರಿ ಸಾರಾಯಿ ಅಂಗಡಿ ಪಿಕೆಟಿಂಗ್.

ಸಾರಾಯಿ ಖರ್ಚು ಬಹಳ ಕಡಿಮೆ.

ಕೊಡಗಿನ ಸತ್ಯಾಗ್ರಹಿಗಳು ವೀರಾಜಪೇಟೆ ಮತ್ತು ಗೋಣಿಕೊಪ್ಪಲು ಗಡಿಗಳಲ್ಲಿ ಪಿಕೆಟಿಂಗನ್ನು ತಾ. 4ರಲ್ಲಿ ನಿಲ್ಲಿಸಿ, ತಾ. 5ರಲ್ಲಿ ಹುದಿಕೇರಿಗೆ ಒಂದು ಅಲ್ಲಿಯ ಸಾರಾಯಿ ಅಂಗಡಿಯನ್ನು ತಾ 6ರಿಂದ ಪಿಕೆಟ್ ಮಾಡಿಕ್ಕಿರುವರೆ ದಿನಂಪ್ರತಿ ಪಿಕೆಟಿಂಗಿಗೆ ಮೊದಲು ಪೇಟೆಯಲ್ಲಿ ಮೆರವಣಿಗೆಯು ನಡಿಸಲ್ಪಡುತ್ತಿದೆ. ಸಾರಾಯಿದ ಬರ್ಜ್ ಒಳಗೆ ಕಡಿವೆಯಾಗಿದೆ. ತಾ. 7ರಿಂದ ಮಳೆಯು ಜೋರಾಗಿರುವದರಿಂದ ಗ್ರಾಮಗಳಲ್ಲಿ ಸ್ವಚಾರ ಕೆಲಸ ನೂಡಲು ಸಾಧ್ಯವಾಗಲಿಲ್ಲ. ಮಳೆಯದರೂ ಕೂಡ ಪಿಕೆಟಿಂಗ್ ಶಾಂತ ರೀತಿಯಿಂದ ಎಡೆಬಿಡದೆ ನಡಿಯುತ್ತಿದೆ. ಈ ಮೊದಲು ಪ್ರಕಟಿಸಿದ 13 ಸ್ವಯಂ ಸೇವಕರಲ್ಲದೆ ಈ ಳಿಗಿನ ಮಹಾಜನರು ಸ್ವಯಂ ಸೇವಕರಾಗಿ ಪಿಕೆಟಿಂಗ್ ಕೆಲಸಕ್ಕೆ ಸೇರಿಸುವರು ಮ ರಾ ಶ್ರಿ ಗಳಾದ (14) ಜೊಟ್ಟಾಳಿಯಮ್ಮನ ಅಪ್ಪುವಯ್ಯನವರು, (15) ಕೀಕೆರ ಸುಬ್ಬಯ್ಯನವರು, (16) ಮುಕ್ಕಾಟಿರ ಪೂವಯ್ಯನವರು, (17) ಚಿಮ್ಮಂಡ ಗಣಪತ್ಯಿಯವರು, (18) ಕೂಡೇಗಂಡ ಜಿ. ಕಾರ್ಯಪ್ಪನವರು, (19) ಮುಳಿಂಡ ಚಂಗಪ್ಪನವರು, (20) ಜೊಟ್ಟಿಕಾಳಪಂಡ ಅಪ್ಪಣ್ಣನವರು, (21) ಕಾಳೇಂಗಡ ಚಿಣ್ಣಪ್ಪನವರು, (22) ಬೊಜ್ಜಂಗಡ ಬೋಪಯ್ಯನವರು ಮತ್ತು (23) ಕೈದಿಲೆರ ಮಾಚಯ್ಯನವರು

### ಒಳದೇಶ.

ತಾ. 7ರಿಂದ 9ನೆ ವರೆಗೆ ಹುದಿಕೇರಿ ಕಡೆ ಮಳೆಯು ಜೋರಾಗಿ ಹೊಡೆಯಿತು

ಕೊಡಗಿನ ಎಗ್ಸಿಕ್ಯುಟಿವ್ ಇಂಜೀನೀಯರ್ ಮೆ ಬ್ಯಾರೆ ಟ್ರೊವರು ಅಕ್ಟೋಬರ್‌ನಲ್ಲಿ ಈ ದೇಶದಿಂದ ವರ್ಗವಾಗಿ ಹೋಗುತ್ತಾರೆಂತ ವರ್ತಮಾನ

ಸತ್ಯಾಗ್ರಹಿಗಳು ವೀರಾಜಪೇಟೆಯಿಂದ ಹುದಿಕೇರಿಗೆ ಒರುತ್ತಿದ್ದಾಗ್ಗೆ ದಾರಿಯಲ್ಲಿ ಕುಶಾಲಪುರದಲ್ಲಿ ರಾಷ್ಟ್ರೀಯ ಧ್ವಜಾಭಿವಂದನೆಯನ್ನು ಮಾಡಿದರು

ತಾರೀಕು ೨ನೇ ರಾತ್ರಿ ಮಡಿಕೇರಿ ಗಣಪತಿ ಬೀದಿಯಲ್ಲಿ ಮೊಪಿಳ್ಳೆಯರ ಎರಡು ಪಂಗಡಗಳೊಳಗೆ ಹೊಡೆದಾಟವಾಗಿ ಸಿಮೂರು 24 ಜನರಿಗೆ ಘಾಯವಾಗಿದೆ ಪೊಲೀಸ್ ತನಿಖೆ ನಡಿಯುತ್ತಲಿದೆ

ಮೆ ಬಿ ಯಸ್. ಶ್ರೀನಿವಾಸಮೂರ್ತಿ ಬಿ ಎ ಯವರು ಲಂಡನ್ ಚೇಂಬರ್ ಆಫ್ ಕಾಮರ್ಸ್ ಸೀನೀಯರ್ ಆಕೌಂಟೆನ್ಸಿ ಪರೀಕ್ಷೆಯಲ್ಲಿ, ತೇರ್ಗಡೆಯೊಗಿರುತ್ತಾರೆಂತ ತಿಳಿದು ಸಂತೋಷ ಪಡುತ್ತೇವೆ

ಈ ವಾರ ದೇಶದ ಎಲ್ಲಾ ಕಡೆಗಳಲ್ಲಿಯೂ ಚೆನ್ನಾಗಿ ಮಳೆಯಾಗಿದೆ ಮಡಿಕೇರಿಯಲ್ಲಿ ಈ ತಾ ೪ರಿಂದ ಇಂದಿನ ವರೆಗೆ 7.09 ಇಂಚು ಮಳೆಯಾಗಿದೆ ಜೋರಾಗಿ ಮಳೆ ಬಿದ್ದ ತಾ 8–9–30ರಲ್ಲಿ 1.70 ಇಂಚು ಆಗಿತ್ತು

ಮಡಿಕೇರಿಯಲ್ಲಿ ಶಂಕರ್ ವಿಠ್ಠ್ ಒಸ್ಸ್ ಎಜೆಂಟ್ ಮೆ ಪಿ ಎ ಬೆಳ್ಯಪ್ಪನವರು ಚರಖಾ, ತಕ್ಲೆ ಮತ್ತು ಹತ್ತಿ ಸಹ ಮಾರಾಟ ಮಾಡುತ್ತಿದ್ದಾರೆ ಈಗಾಗಲೇ ಅನೇಕ ಆರ್ಡರ್‌ಗಳಿಗೆ ಕಯೂರಾದ ನೂಲನ್ನು ಇವರು ಕೊಂಡುಕೊಳ್ಳುತ್ತಾ ರಾಗಿಯೂ ತಿಳಿಯುತ್ತೇವೆ.

ಶ್ರೀ. ಮಂತಂಡ ಮಂದಣ್ಣನವರು ಸತ್ಯಾಗ್ರಹ ಚಳವಳಕ್ಕೆ ಹಿನ್ನುತ್ತ ಕೊಟ್ಟರೆಂಬ ತಕ್ಷೀರಿಗಾಗಿ ಉತ್ತರ ಕೆನ್ನಡಜಿಲ್ಲೆಯ ಅಂತೋಲದಲ್ಲಿ ತಾ 8ನ್ನಿ 7 ತಿಂಗಳು ಕಠಿಣ ಸಜೆ ಶಿಕ್ಷೆಗೆ ಗುರಿಪಡಿಸಲ್ಪಟ್ಟಿರುವರು ಇವರು ಅನೇಕ ವರ್ಷಗಳಿಂದ ಹಿಂದೂಸ್ಥಾನಿ ಸೇವಾದಳದಲ್ಲಿದ್ದು ದೇಶ ಸೇವೆ ಮಾಡಿದವರಾಗಿದ್ದಾರೆ

ಮೂರ್ನಾಡು ಆಟದ ಮೈದಾನದಲ್ಲಿ ತಾ 3–8–30ರಲ್ಲಿ ಪಾಂಡಂಡ ಮುತ್ತಣ್ಣನವರಿಗೆ ಜಗಿನಿಯಿಂದ ಒಂದು ಹಣವ ಚೀಲ ಸಿಕ್ಕಿರುವರಾಗಿಯೂ ಅದನ್ನು ಕಳೆದುಕೊಂಡ ವರು ಅದರ ನಿಶಾನಿಯನ್ನು ತಪಶೀಲ್ ತಿಳಿಸಿ ಮೂಲವನ್ನು ವಾಪರು ಪಡೆದುಕೊಳ್ಳಬಹುದಾಗಿಯೂ, ತಪ್ಪಿದರೆ ಪೊಲೀಸಿಗೆ ಹಾಜರು ಪಡಿಸುತ್ತಾರೆಂತಲೂ ತಿಳಿಸಿರುತ್ತಾರೆ.

ಈ ತಾ 20ರಲ್ಲಿ ಸಶಕಾರಿ ಫೆಡರೇಶನಿನ ಎಗ್ಸಿಕ್ಯುಟಿವ್ ಕಮಿಟಿ ವಿಶೇಷ ಮಧ್ಯಾಹ್ನ 1ಗಂಟೆಗೆ ಆಗುತ್ತಾಂದೂ, ತಾ 15ರಿಂದ ಸುಪರ್‌ವೈಜರ್ ಕಲಸಕ್ಕೆ ಉನೇದುವಾರರಾಗಿರುವೆನೆ ರಿಗೆ ಟೈಪಿಂಗ್ ಕ್ಲಾಸ್ ತೆರೆಯಲಾಗುವುದೆಂದೂ, ತಾ 27, 28 ರಲ್ಲಿ ಎಲ್ಲಾ ಸುಪರ್‌ವೈಜರುಗಳು ಪೆಶೇರೆನ್ ಆಫೀಸಿಗೆ ಬಂದು ಎಂದು ದಿನ ತನ್ನ ಕೆಲಸ ಕುರಿತು ಇನ್ಸ್‌ಸ್ಟ್ರಕ್ಷನ್ ತೆಗೆದುಕೊಳ್ಳಬೇಕೆಂದಾಗಿ ಎಲ್ಲರಿಗೂ ಬರೆದಿರುತ್ತಾರೆಂದೂ, ಫೆಡರೇಶನ್ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ತಾ 31–8–30ರಲ್ಲಿ ಕೊಡಗು ಜೊಂಬಾಯಿ ಅಸೋಸಿಯೇಶನಿನವರು ಕೈಲ್ ಮೂಹೂರ್ತದ ಹಬ್ಬ ನಡಿಸಲು ವಿಷ್ಣಿಂಗ್ ಮಾಡಿದಾಗ ದೇಶದಲ್ಲಿ ನಡಿಯುತ್ತಿರುವ ಜಳವಳಕ್ಕಾಗಿಯೂ, ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ನಡಿಸುತ್ತಿರುವ ಹೋರಾಟಕ್ಕೆ ಸಹಾನುಭೂತಿ ತೋರಿಸಲಿಕ್ಕಾಗಿಯೂ ಈ ವರ್ಷ ಹಬ್ಬವನ್ನು ನಡಿಸಲಾದೆಂತಲೂ, ಕುವರಿ ಜಾಜಿ ಪೂವಯ್ಯ ಇವರಿಂದ ಸೂಚಿಸಲ್ಪಟ್ಟು ಮೆ. ಪಿ. ಯಸ್. ಮಂದಣ್ಣನವರಿಂದ ಅನುಮೋದಿಸಲ್ಪಟ್ಟು ಸರ್ವಸಮ್ಮತಿಂದ ಮಂಜೂರಾಯಿತು. ಮೆ ಪುಟ್ಟಿಚಂಡ ಬಿ ಕಾರ್ಯಪ್ಪನವರು ರಾಷ್ಟ್ರಸೇವಯ ಮಲ್ಲಿ ಜೊಂಬಾಯಿ ಕಾಂಗ್ರೆಸ್ ಕಮಿಟಿಗಾಗಿ ಕೆಲಸ ಮಾಡಿದ್ದಕ್ಕೆ ಆಭರಣ್ಣ ಈ ಸಂಘವು ಅಭಿನಂದಿಸಿತ್ತಿದೆ' ಎಂಬ ಠರಾವನ್ನು ಮೆ. ಯಸ್. ಉತ್ತಯ್ಯನವರು ಸೂಚಿಸಿ ಮೆ ಪಿ. ಮಾಚಯ್ಯನವರಿಂದ ಅನುಮೋದಿಸಲ್ಪಟ್ಟು ಸರ್ವಸಮ್ಮತಿಂದ ಮಂಜೂರಾಯಿತು. ದೇಶದಲ್ಲಿ ಸಂಪೂರ್ಣ ಶಾಂತಿಯಿಂದಿರುವಂತೆ ಪ್ರಾರ್ಥಿಸಲಿಕ್ಕಾಗಿ ತಾ. 7–9–30ರಲ್ಲಿ ಪ್ರಾರ್ಥನೆಯ ಮೀಟಿಂಗ್ ಎಷಮಬೇಕೆಂತ ಸಭೆ ತೀರ್ಮಾನವಾಯಿತು

### ಹಿಂದೂದೇಶ.

ಪಂಜಾಬ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಕುಮಾರಿ ಲಜಪತಿಯವರನ್ನು ಆರಿಸಿದ್ದಾರೆ

ತಾ 6–9–30 ಲ್ಲಿ ಬೆಂಗಾಬಾಯಿಯಲ್ಲಿ ಸಮುದಾಯದ ಜನರೆಲ್ಲರೂ ಸಾಧಾರ ಗಟ್ಟಿಯಲ್ಲಿ ಸೇರಿ ಉಪ್ಪು ಮಾಡಿದರು.

ವಾಯವ್ಯಪ್ರಾಂತ್ಯದಲ್ಲಿ ನೆರಹದ್ದಿನ ೭೦ಗಿಯಿಂದಪೂರ್ವದಿಗೂ ಇಂಡಿಯಾದ ಸೈನಿಕರಿಗೆ ಅಲ್ಲಲ್ಲಿ ಯುದ್ಧವಾಗುತ್ತಲೇ ಇದೆ

ನಾಗಪುರದಲ್ಲಿ ಸಾರಾಯಿ ಗರ್ಭಗಳನ್ನು ಪಿಕೆಟ್ ಮಾಡಿ ತ್ಯಾಗವಿದಕ್ಕಾಗಿ ಕಾಲೇಜು ವಿದ್ಯಾರ್ಥಿಯರಿಗೆ ಸಜಾ ತಿಳಿಸಿ ದೊರಯುತ್ತಲಿದೆ

ಪಂಡಿತ ಜೋಲಾಲ್ ನೆಹರೂರವರ ನುನಿಗ ಬರುವ ಟೆಲಿಗ್ರಾಮ್‌ಗಳನ್ನು ಸಹ ಕೂಡುವುದಿಲ್ಲವಾಗಿ ಮಿಸೆಸ್ ಕಮಲಾ ನಹರು ತಿಳಿಸಿರುತ್ತಾರೆ

ಕರಾಚಿಯಲ್ಲಿ ಜನರನ್ನು ಉಪ್ಪು ಮಾಡಲು ಹೇಳಿದ್ದಕ್ಕಾಗಿ ನವಜವಾನ್ ಸಭೆಯ ಮೆ ಮು. ಬಾರಕ್ ಅಲಿಯವರಿಗೆ 4 ತಿಂಗಳ ಸೆಜೆಯಾಯಿತು.

ಖೈರಾದಲ್ಲಿ ಸರದಾರ್ ವಲ್ಲಭಭಾಯಿ ಪಟೇಲರ ಮಗಳಾದ ಶ್ರೀಮತಿ ಮಣಿಬೆನ್ನಿಗೆ ಕಂದಾಯ ಕೊಡಬಾರದೆಂಕ ಬೋಧಿಸಿದ್ದಕ್ಕಿ 4 ತಿಂಗಳು ಕಠಿಣ ಸೆಜೆಯಾಯಿತು

ದೊಂಬಾಯಿಯ ವಿಲ್ಸನ್ ಕಾಲೇಜಿನ್ನಿ ವಿದ್ಯಾರ್ಥಿಗಳು ಸ್ವರಾಜ್ಯ ಬಾವುಟಿಯನ್ನು ಹುಸುವಿಗೆ ವಿರೋಧವಾಗಿ ಬಹಿಷ್ಕರಿಸಿದರು ಎಂಬ ಕಾರಣದಿಂದ ಕಾಲೇಜು ವಜ್ಜೆಲ್ಪಟ್ಟಿದೆ

ಮಧ್ಯಪ್ರಾಂತ್ಯದ ಮಲಕಾ ಪೂರದಲ್ಲಿ ಹತ್ತು ಸಾವಿರ ಜನರಿಂಗಿಂತ ಹೆಚ್ಚಾಗಿ ಸೇರಿ ಫಾರೆನ್ನು ಬಾನೂನು ಬುಗಮಾಡಿದರು. 100 ಜನ ಸ್ವಯಂಸೇವಕರು ಸೆರೆ ಹಿಡಿಸಲ್ಪಟ್ಟಿದ್ದಾರೆ

ತಂಜಾವೂರು ಬಳಿ ಒಂದು ಒಸ್ಸಿನಲ್ಲಿ ಒಟಿಬಿಗಳನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಬಸ್ಸ್ ಮಗುಚಿ 3 ಜನರು ಸತ್ತರು, ಸುನೂರು ಮೂವತ್ತು ಜನರಿಗೆ ಪಾಯವಾಗಿದೆ

ಬೊಂಬಾಯಿ ಪಟ್ಟಣದಲ್ಲಿ ತಾ 10ರಲ್ಲಿ ಬರೀ 8ಗಂಟೆಗಳೊಳಗೆ 18½ ಇಂಚು ಮಳೆ ಒಂದು ತುಂಬಾ ತೊಂದರೆಯೊಗಿದೆ ಕಾನ್ಸಿಲ್ ಚುನಾವಣೆಯು ಈ ಕಾರಣದಿಂದ ಮುಂದಿಸಲ್ಪಟ್ಟಿದೆ

ಆನಾಮ್ ಸಾಮ್ರಾಜ್ಯದ ರಾಜಕೀಯ ಜಳವಳದಿಂದ ಸರಕಾರದ ಉತ್ಪತ್ತಿಯು 8 ಲಕ್ಷ ರೂಪಾಯಿ ಕಡಿಮೆಯಾಗಿದೆಯಂತೆಯೂ, ವಾರೆಸ್ಟ್ ಉತ್ಪತ್ತಿ ಸಹ ತುಂಬಾ ಕಡಿಮೆಯಾಗಿದೆಯೆಂತಲೂ ತಿಳಿದಿದೆ

ಮದ್ರಾಸ್ ಕೌನ್ಸಿಲಿಗೆ ಈಗಿನ ಮುಖ್ಯ ದಂಡ್ರಿಯಾದ ಡಾಕ್ಟರ್ ಸುಬ್ಬರಾಯನವರಿಗೆ ಪುನಃ ಚುನಾವಣೆಯಾಯಿತು. ಎನೆಂಬ್ಲಿಗೆ ಮಲವಾಸಿನಿಂದ ಕೂಲ್ಲಂಗೇಡು ರಾಜರಿಗೂ ಚುನಾವಣೆಯಾಯಿತು

ನಾರಾಯಿಯನ್ನು ತೆಗೆದುಕೊಂಡು ಹೋಗುತ್ತಿದ್ದ ಒಬ್ಬನಿಂದ ಸಾರಾಯಿ ತೀಸಿವ ನ್ನು ಎಳೆದನೆಂಬ ಕಾರಣದಿಂದ ಬಿಜ್ಜು ಮುನಿಸ್ಟ್ಯಾನ್ ಸ್ವಯಂಸೇವಕನಾದ ಪುನಸ್ ಚಕ್ರಾಸ್ ಎಂಬವನಿಗೆ 12 ಚಡಿ ಪೆಟ್ಟು ಶಿಕ್ಷೆ ಕೊಟ್ಟರು

ನಾಗಪುರದಲ್ಲಿ ಇಬ್ಬರು ಸ್ವಯಂಸೇವಕರಿಗೆ ಒಬ್ಬೊಬ್ಬರಿಗೆ ೫ೀ ಚಡಿ ಪೆಟ್ಟು ಶಿಕ್ಷೆ ಕೊಡಲಾಯಿತ. ಅಪ್ಪೀಲು ಮಾಡುತ್ತೀರೋ ಎಂತ ಜಜ್ಜ ಕೇಳಿ ನಿರಾಕರಿಸಿದ ಮೇಲೆ ಶಿಕ್ಷೆಯನ್ನು ಜಾರಿ ಮಾಡಿದರು. ಮೇಜಸ್ಟ್ರೇಟರ ಈ ಶಿಕ್ಷೆಗಾಗಿ ಪಟ್ಟಣದಲ್ಲಿ ಹರತಾಳ ಮಾಡಿದರು.

ಮದ್ರಾಸಿನಿಂದ ರೌಂಡ್ ಟೇಬಲ್ ಕಾನ್‌ಫರೆನ್ಸಿಗೆ ದಿವಾನ್ ಬಹದೂರ್ ಎ ರಾಮಸ್ವಾಮಿ ಮೊದಲಿಯರ್, ಕೆ. ಟಿ ಪಾಲ್, ನರಸಿಂಹರಾಜು ನಾಯಡಾರ್ ಶ್ರೀನಿವಾಸ ಶಾಸ್ತ್ರಿ, ಸರ್ ಸಿ. ಪಿ ರಾಮಸ್ವಾಮ್ಯೆಯ್ಯರ್ ಮುಂತಾದವರು ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುವರಾಗಿ ವರ್ತಮಾನವಿದೆ

ಕರ್ನಾಟಿಕ ಪ್ರಾಂತ್ಯದ ಬಾಗಲಕೋಟೆಯ ದೇಶ ಸೇವಕರಾದ ಶ್ರೀನಿವಾಸರಾವ್ ಮಂಗಲವಾಡೆ ಮತ್ತು ಚುಮಂತರಾವ್ ಕೌಜಲಗಿ ಎಂಬವರು ಒಂದಾವೃತ್ತಿ ಜೈಲಿನಿಂದ ಬಿಡುಗಡೆಯಾಗಿ ಫಾರೆನ್ನು ಬಾನೂನು ಭಂಗಕ್ಕೆ ಒಳ್ಳೆಗಾಣಕೂಟ್ಟ ಕಕ್ಷೇರಿಗಾಗಿ ಪುನಃ ಸೆರೆ ಹಿಡಿಯಲ್ಪಟ್ಟಿದ್ದಾರೆ.

ಮದ್ರಾಸಿನ ವಜ್ರೇಶ್ವರ ಕಾಲೇಜಿನ ವಿದ್ಯಾರ್ಥಿಗಳು ೩ನೇ ತಾರೀಕನ್ನು 'ಗಂಧಿ ಟೊಪ್ಪಿ' ದಿನವಾಗಿ ಆಚರಿಸಿದರು ಎಲ್ಲಾ ವಿದ್ಯಾರ್ಥಿಯರೂ ಟೊಪ್ಪಿಸಹಿತ ಖದ್ದರ್ ದರಿಸಿ ಒಂದರು. ಪೊಲೀಸರಾಲರು ಯಾವ ಬಟ್ಟೆ ಹಾಕಿದರೂ ಶಾಂತ ರೀತಿಯಿಂದ ಇದ್ದರೆ ಅಡ್ಡಿ ಇಲ್ಲವೆಂತ ಹೇಳಿದರು

ಬೊಂಬಾಯಿ ಸಮೀಪ ಧರಾವಿ ಎಂಬಲ್ಲಿ ತಾ 7ರಲ್ಲಿ ಗಣಪತಿ ಉತ್ಸವದ ಸಂಬಂಧದ ಮೆರವಣಿಗೆಯಾದಾಗ ಹಿಂದುಮುಸಲ್ಮಾನರೊಳಗೆ ಪುಂಡಾಡಿ ಮೂವರು ಸತ್ತಿದ್ದಾರೆ ಅನೇಕರು ಘಾಯ ಹೊಂದಿದ್ದಾರೆ ಪೊಲೀಸಿನವರೂ ಕಾಂಗ್ರೆಸ್ ಬಿ ಲಾಪಕ್ ಸ್ವಯಂಸೇವಕರೂ ಸಹ ಶಾಂತಿಗೊಳಿಸುತ್ತಿದ್ದಾರೆ.

ರಾಜಿ ಪಂಚಾಯಿತಿ ನಿಷ್ಫಲವಾದದ್ದು ಕಾಂಗ್ರೆಸಿನವರು ಸಾಧ್ಯವಿಲ್ಲದ್ದನ್ನು ಕೇಳಿದ್ದರಿಂದ ಎಂತ ಮೋಜರೇಟ್ ಮುಂದಾಳುಗಳ ಕೆಲವರ ಅಭಿಪ್ರಾಯ ವಾಗಿದೆ ಹಿಂದೂಸ್ಥಾನಿನ ಸ್ವಾತಂತ್ರ್ಯಕ್ಕೆ ವಿರೋಧವಿದ್ದ ಇಂಗ್ಲಿಷರ ಪತ್ರಿಕೆಗಳೆಲ್ಲಾ ನಂತೋಷವನ್ನು ಸೂಚಿಸಿವೆ. ವೆಜ್‌ವುಡ್ ಬೆನ್ನರಿಗೆ ವೈಸರಾಯಿಯೆಂತಲೂ ತಿಳಿದಿದೆ.

ಉತ್ತರ ಕನ್ನಡ ಜಿಲ್ಲೆಯ ಕಾರ್ವಾರದಲ್ಲಿ 6000 ಗಂಡಸರೂ ಸುಮಾರು 500 ಹೆಂಗಸರೂ ಸೇರಿ ಫಾರೆನ್ನು ಬಾನೂನು ಬಂಗಕ್ಕಾಗಿ ಸೈಸಾರಿಯಿಂದ ಗುಳಿದ ಉಪ್ಪಿಗೆ ಮರ ಕಂದು ಹರಾಜು ನೂಡಿದರು. ಇಬ್ಬರು ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ ಈ ತಾಲೋಕಿನ ಅನೇಕ ಗ್ರಾಮಗಳಲ್ಲಿ ಈ ಬಾನೂನು ಭಂಗವಾಗುತ್ತಲೇ ಇದೆ.

ಸೊರಬ್ಬಿನಲ್ಲಿ ಶಾಸ್ತ್ರಿಲ್ ಜುಗಾವಣೆಯನ್ನ ಬಾಜಿ ಕಾಟ್ ಮಾಡಲಿಕ್ಕಾಗಿ ಪಿಕೆಟ್ ಮಾಡುತ್ತಿದ್ದಾರೆ ಪೋಲೀಸಿನವರು ದೊಣ್ಣೆಯನ್ನು ಉಪಯೋಗಿಸಿ ಜನರುಗಳನ್ನು ಅನೇಕರಿಗೆ ಘಾಯವಾಗಿದೆ. 200 ಜನ ಸ್ವಯಂಸೇವಕರನ್ನು ಸೆರೆ ಹಿಡಿದಿದ್ದಾರೆ. ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರೇ ಮುಂತಾಳುತನವನ್ನು ಕಡೆಯಲ್ಲಿ ವಹಿಸಿದರು

ಸತಾರ ಜಿಲ್ಲೆಯ ಕೆಲವು ಗ್ರಾಮಸ್ಥರು ದಂಗೆ ಎದ್ದ ದ್ದಾರಂಬ ಕಾರಣದಿಂದ ಅಲ್ಲಿ ಪೊಲೀಸಿನವರು ಹೋಗಿ ಗುಂಡು ಹಾರಿಸಬೇಕಲ್ಲಿ 3 ಜನರು ಸತ್ತಿರಿ, ಅನೇಕರು ಘಾಯ ಹೊಂದಿದರು ಸಾರೆಸ್ಸನಿಂದ ಅಡಿದು ಕೊಂದ ಒಂದು ತೇಗದ ಮರದ ಧ್ವಜ ಕಂಬವನ್ನು ಕೊಡದೆ ಪೊಲೀಸಿನವರಿಗೆ ಹೊಡೆದು, ಕಲ್ಲು ಎಸದು ಮುಂತಾಗಿ ಅಕ್ರಮ ನಡಿಸಿದ್ದರಿಂದ ಗುರಿಡು ಹಾರಿಸಿದ್ದಾಗಿ ಹೇಳುತ್ತಾರೆ

ತಿನ್ನವಲ್ಲಿ ಜಿಲ್ಲೆಯ ಒಂದು ಗ್ರಾಮದಲ್ಲಿ ಒಬ್ಬ ಶೂರುಬರ ಹುಹುಗಿಯೊಗಿದೇ ಇದ್ದು ಮದ ವೆ ಸಹ ಆಯಿತು ಗಂಡನ ಸಂಗಡ 10 ತಿಂಗಳ ವರೆಗೆ ಇದ್ದ ನಂತರ ಏನೋ ಒಂದು ನೋವು ಪ್ರಾಣಾಂಭವಾಗಿ ಈಚೆಗೆ ಆಸ್ಪತ್ರೆಯಲ್ಲಿ ಸರ್ಜೆ ಮಾಡಿ ಆ ಪರೆಶನ್ ಮಾಡಿದ ನಂತರ ಹುಹುಗಿಯೊಗಿದ್ದವಳು ಗಂಡ ಸಂಗಾಡ್ಡಾಸಿ. ಬೀಗನೆ ಮದ ವೆ ಮಾಡಿಕೊಳ್ಳುವದರಲ್ಲಿದ್ದಾನೆ

ರೇ ರಾಷ್ಟ್ರೀಯ ಬೆಳೆಗೆ ಅಲ್ಲಾಹಾಬಾದಿನ ಸೈನ್ಯ ಜೈಲಿನಿಂದ ನಂಂತ ಪೋತಿಲಾಲ್ ನೆಹರೂರವರನ್ನು ಬಿಡುಗಡೆ ಮಾಡಿದಾಗ ' ಕಳೆದ 23 ವರ್ಷಗಳಿಂದ ಇಗಿಂದಾಗ್ಗೆ ಜೈರ ಎಂಬ್ಕೆಲಸಿ ಕವಡಲ್ಲಿ ರಕ್ತಪೂ ಕಾಣುತ್ತದೆ 14 ವರ್ಷ ದ ಕಡಿಮೆಯಾಗಿದ ಕಾಂಗ್ರೆಸ್ ನಿರ್ಣಯದ ಮೇಲಿ ಕಾಂಗ್ರೆಸಿನ ಅಧ್ಯಕ್ಷ ಪದವಿಯನ್ನ ನಾನು ಕೊಡಲೇ ವ ವೆಂಬ ಕಾರಣಕ್ಕಾಗಿದ್ದರೂ ಸಹ ನನ್ನ ಆನಾರೋಗ್ಯದ ದೆಸೆಯಿಂದ ಈಗಿನ ಪೈಸಿಹೆಂಟರಾದ ಚಾಲ್ಸ್ ಒಬ್ಬನ್‌ರವರಿಂದ ಕೆಲಸವನ್ನು ಪಹಿಸಿಕೊಳ್ಳುವೆನಿಲ್ಲ' ಎಂತ ಪಂಡಿತರು ಹೇಳಿದ್ದಾರೆ ಸರಕಾರದಿಂದ ನೀಮಿತವಾದ ಮೂರು ಜನ ವೈಯಮ್. ಯಸ್ ಡಾಕ್ಟರುಗಳು " ಪಂಡಿತರ ಆನಾರೋಗ್ಯ ಸ್ಥಿತಿಯಿಂದ ಕತ್ತಾಲ ಕೆಡೆಕಾಗದೆ ಇರಬಹುದಾದರೂ ಕ್ರಮೇಣ ಎಂದಾದರೂ ಕಠಿಣವಾಗಬಹುದು. ಆದ್ದರಿಂದ ಅವರಿಗೆ ಅವಶ್ಯವಿರುವ ಚಿಕಿತ್ಸೆಯನ್ನು ಮಾಡಿಕೊಳ್ಳಲು ಅವಕಾಶ ಕೊಡಬೇಕು " ಎಂತ ಅಭಿಪ್ರಾಯ ಕೂಲ್ಟಿದ್ದರಿಂದ ಬಿಡುಗಡೆ ಮಾಡಿದ್ದಾಗಿದೆ ಎಂತ ಸರಕಾರದವರು ತಿಳಿಸುತ್ತಾರೆ

ಮಹಾತ್ಮ ಗಾಂಧಿಯವರ ತಿಶ್ಚಳಾದ ಶ್ರೀಮತಿ ವಿಂಠಾಭಾಮಿ ( ಎನ ನ್ನೇಡ್) ಎಂಬವರ ತಿವಿಳಿನಾಡಿ, ಮದ್ರಾಸ್, ಆಂಧ್ರ ಪ್ರಾಂತ್ಯ ಸಹ ಸೆ ಶ್ಕಿಯಾಂಬಂ ತಾ 9ನೆಲ್ಲ ಕಲ್ಕತ್ತಾ ತಲಿಪಿದರು ಇವರನ್ನು ಗಾಂಧಿಸಿಕಿಶಾಗಿ ಪ ರ್ವಾದಾ ನ್ಹ ಮೆರವಣಿಗೆಯು ಆಗಕೂಡದೆಂತ ಪೊಲೀಸ್ ಹುಕುಂ ಆದರೂ ಅವನ್ನು ಉಲ್ಲಂಘಿಸಿ ಮೆರವಣಿಗೆ ನಡೆಯಿತು. ಶ್ರೀ ವಿಠಾಬಾಯಿಯವನ್ನು ಪಸ್ತಗಿರಿ ನೂಡಿ ನಂತರ ಬಿಟ್ಟರು 30 ಇತರ ಮಹಿಳೆಯರೂ ದಸ್ತಗಿರಿ ಮಾಡಲ್ಪಟ್ಟಿದ್ದಾರೆ ಆ ಸಂಬಂಧವಾಗಿ ಆಗ ಕಾಲೇಜಿನ ಕಡೆಯಿಂದ ಪೊಲೀಸಿನವರಿಗೆ ಕಲ್ಲು ಎಸೆದರು ಎಂಬ ಸಗ್ಗೆಯ ಕಾರಣದಿಂದ ಪೊಲೀಸ್ ಡಿಪ್ಯೂಟಿ ಕಮಿಶನರ್ ನೇಮಕ ಆಗಿ ಕಾಲೇಜಿನ ಕ್ಲಾಸಿಗೆ ನುಗ್ಗಿ ದೊಣ್ಣೆಯಿಂದ ಹೊಡೆದರು. ಹತ್ತು ಜನರಿಗೆ ಘಾಯವಾಗಿವೆ ಹುಡ್ಗಿ ಹೈಕೋರ್ಟ್ ಜಡ್ಜಿಯವರ ಮಗನೂ ಸಹ ಘಾಯಹೊಂದಿದ್ದಾನೆ ಯೂನಿವರ್ಸಿಟಿ ಅಧಿಕಾರಿಗಳು ಈ ತತ್ವವನ್ನು ವಿರೋಧಿಸಿದ ಮೇಲೆ ತಪ್ಪಿಸಿ ನಿಸುವರಾಗಿ ಪೊಲೀಸ್ ಕಮಿಶನರವರು ಭಾಷೆ ಕೊಟ್ಟಿದ್ದಾರೆ

ಬಿ.ಬಿ.

### ನೋಟೀಸು.

ನನ್ನ ಜಾಪ್ತು ಈ ಕಳಗ ಜಮೆ ಕಾಣುತ್ತಿರುವ ಹಸು ಇದರ ಕರು ಸಹ ಜಲಾವಿಗೆ ಬಿಟ್ಟದ್ದು ತಾ 31–8–30ರಲ್ಲಿ ಪರಾರಿಯಾದದ್ದು ಈ ವರೆಗೆ ಕಾಣಸಿಕ್ಕಲಿಲ್ಲ. ಪೊಲೀಸಿನವ್ರು ಇವ್ರುಗ ಜಮೆ ಒಕೆರಿಯಿತ್ತೀನೆ ಜಮೆ ಕರವನ್ನು ಸಹ್ಕೆ ಮಾಡಿ ಕೊಟ್ಟವರಿಗೆ 5 ರೂ ಇನಾಮು ಕೊಡುತ್ತೀನೆ

ಜಮೆ—ನನ್ನ ಎಣ್ಣಾದ ಆಂದಾಜು 1 ಗೇಣುದ್ದ ಸಟ್ಟಿ ಕೋಡಿನ ಬಾಲ ಉದ್ದ ಇರುವ ಹಸು ಇದರ ನನ್ನ ಎಣ್ಣಾದ ಸುಮಾರು 10 ತಿಂಗಳ ಹೆಣ್ಣು ಕರ

### ಅಂಜುಮೂನೆ ಇತ್ತೆಹಾದ್ ಇಂಸ್ಲಾಮಿನ ಜನರಲ್ ಮಿಟಿಂಗು.

ಕಾರೀಕು 26—8—30ರಲ್ಲು ವೀರಾಜಪೇಟೆ ಸಾಹುಕಾರ್ ಜಿ. ಅಬ್ದುಲ್ ಖಾದರ್ ಸಾಹೇಬರವರ ಮಹಡಿಯಲ್ಲಿ ಕೊಡಗು ಅಂಜುಮೂನೆ ಇತ್ತೆಹಾದೆ ಇಸ್ಲಾಂಮಿನ ಜನರಲ್ ಮಿಟಿಂಗು ನಡಿಸಿ ಈ ಕೆಳಗಿನ ರಠಾವುಗಳು ಮಂಜೂರಾದವು

1. ಕಾಲೇಜಿನ ಇಬ್ಬರು ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡುವುದು.

2. ವೀರಾಜಪೇಟೆ ಮೆತ್ತು ಮಡಿಕೇರಿಯ ಮುನಿಸಿಪಾಲಿಟಿಯ ಪ್ರೆಸಿಡೆಂಟ್ ಮತ್ತು ಕೌನ್ಸಿಲ್ಲರ್ಸ್‌ನ್ನು ತಮ್ಮ ಸರಹದ್ದಿನಲ್ಲಿ ಒಂದೊಂದು ಮುಸ್ಲಿಂ ಗರ್ಲ್ಸ್ ಸ್ಕೂಲನ್ನು ಸ್ಥಾಪಿಸಿಕೊಡಲು ಅವರನ್ನು ಒಂದೊಂದು ಮೆಮೋರಿಯಲ್ ಮೂಲಕ ಅರಿಕೆ ಮಾಡಿಕೊಳ್ಳುವುದು.

3. ಕೊಡಗಿನ ಎಲ್ಲಾ ಭಾಗಗಳಲ್ಲಿಯೂ ಜಂದಾ ಮಸೂಲಾತಿಗೋಸ್ಕರ ಮೇಲ್ಕಂಡ ಅಂಜುಮೂನಿನ ಅಧ್ಯಕ್ಷರಾದ ಮೆ. ಯಂ. ಯಂ. ಸೀದ್ದೀಕ್ ವಗೈರೆಯರು ಸಂಚಾರ ಮಾಡುವುದು.

4. ವೀರಾಜಪೇಟೆಯಲ್ಲಿ ಶಾಲೆಗೆ ಹೋಗದಿರುವ ಅನೇಕ ಮುಸ್ಲಿಂ ಮಕ್ಕಳ ವೋಷಕರನ್ನು ಬೋಧಿಸಿ, ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮಾಡುವದಲ್ಲದೆ, ಆಗಾಗ್ಗೆ ಶಾಲೆಗೂ ಸಹ ಹೋಗಿ ಮಕ್ಕಳ ಅಭಿವೃದ್ಧಿಯನ್ನು ತಿಳಿಯುವುದಕ್ಕಾಗಿ ಈ ಕೆಳಗಿನ ಮಹನೀಯರಿಂದ ಕೂಡಿದ ಒಂದು ಕಮಿಟಿಯು ನಿರ್ಣಾಯಿತು.

ಕಮಿಟಿ ಮೆಂಬರುಗಳು:—ಮೆ. ಗಳಾದ 1. ಖಾಜಿ ಮಹಮ್ಮದ್ ಯೂಸೂಫ್ ಸಾಹೇಬ್, (ಮುನ್ಸಿಪಲ್ ಮೆಂಬರು) 2. ಗುಲಾಂ ಹುಸೇನ್ ಸಾಹೇಬ್, (ಪಟೇಲ್) 3. ಸೈಯ್ಯದ್ ಆಲಿ ಸಾಹೇಬ್, (ಪಟೇಲ್) 4. ಮಹಮದ್ ಯೂಸುಫ್ ಸಾಹೇಬ್, (ಪಟೇಲ್) 5. ಅಬ್ದುಸ್ ಅಹ್ಮದ್ ಸಾಹೇಬ್, 6. ಸರಂಗ್ ಅಬ್ದುಲ್ ಗಿನ್ನಿ ಸಾಹೇಬ್, 7. ಸಿ. ಮಹಮದ್ ಇಸ್ಮಾಯಿಲ್ ಸಾಹೇಬ್ ಮತ್ತು 8. ಅಂಜುಮನೆ ಸೆಕ್ರೆಟರಿ.

---

### ಪೆಡೇರೇಶನ್ ಕಮಿಟಿ ಮಿಟಿಂಗು.

ಈ ಮಿಟಿಂಗು ತಾ 6—9—30ರಲ್ಲು ಮಡಿಕೇರಿ ಪೆಡರೇಶನ್ ಆಫೀಸಿನಲ್ಲಿ ನಡೆಯಿತು. 12 ಮೆಂಬರುಗಳು ಹಾಜರಿದ್ದರು.

1. ತಾರೀಕು 7—6—30ರ ಕಾರ್ಯ ನಿರ್ವಾಹಕ ಮಂಡಳಿಯ ತಾ 21—6—30ರ ಮೆತ್ತು 5—7—30ರ ಎಗ್ಸ್‌ಕ್ಯುಟಿವ್ ಕಮಿಟಿ ಮಿಟಿಂಗುಗಳ ಪ್ರೊಸೀಡಿಂಗ್ಸ್‌ಗಳನ್ನು ಓದಿ ಸರಿಯೆಂದು ಅಂಗೀಕರಿಸಲಾಯಿತು.

2. ರಿಜಿಸ್ಟ್ರಾರರಾದ ರಿಜಿಸ್ಟ್ರಾರರಿಗೆ ಕೊಟ್ಟ ಸತ್ಕಾರ ಕೂಟದ ಲೆಕ್ಕ ನೋಡಲಾಯಿತು. ಸ್ವಾಗತ ಕಮಿಟಿಯವರು ಈ ಲೆಕ್ಕವನ್ನು ಚಿಕ್ಕ ಮಾಡಿ ರಿಪೋರ್ಟು ಮಾಡುವಂತೆ ಕೇಳಿಕೊಳ್ಳಲಾಯಿತು. ಮೇಲ್ಕಂಡ ಖರ್ಚು ವಜಾ ಜಾತವಿರುವ 148 ರೂ. ಮತ್ತು ಇನ್ನು ವಸೂಲಿಗೆ ಇರುವ ಮೊಬಲಗನ್ನು ಸಹ ಪೆಡರೇಶನಿನಲ್ಲಿ ಈ ಕೆಳಗೆ ತೀರ್ಮಾನಿಸಿದ ಮೇರೆ ಬರುವ ತಿಂಗಳಿಂದ ಹೊರಡಿಸುವ ನೂಸ ಪತ್ರಿಕೆಯ ಖರ್ಚಿಗಾಗಿ ಉಪಯೋಗಿಸುವಂತೆ ತೀರ್ಮಾನಿಸಲಾಯಿತು.

3. ಪೆಡರೇಶನಿನವರು ಸಂಘದ ಸ್ಥಯೋಜನಕ್ಕಾಗಿ ಒಂದು ಮೊಸಪತ್ರಿಕೆಯನ್ನು ಹೊರಡಿಸಬೇಕೆಂಬಾದಾಗಿ ದೀರ್ಘ ಚರ್ಚೆ ನಡೆದು ತಾ 1—10—30ರಿಂದ ಪೆಡರೇಶನ್ ಸೆಕ್ರೆಟರಿಯವರೇ ಎಡಿಟರಾಗಿ ಸದರಿ ಮೊಸೆ ಪತ್ರಿಕೆಯನ್ನು ಹೊರಡಿಸಬೇಕೆಂದೂ, ಚಂದಾವಾರ್ಷಿಕ ಚಂದ 3 ರೂ. ವಸೂಲು ಮಾಡಬೇಕೆಂದೂ ತೀರ್ಮಾನಿಸಲಾಯಿತು ಈ ಮೊಸೆ ಪತ್ರಿಕೆ ಹೊರಡಿಸುವ ಮೊದಲು ಎಗ್ಜೆಕ್ಯುಟಿವ್ ಕಮಿಟಿ ಮಿಟಿಂಗು ಮಾಡಿ ಎಲ್ಲಿ ಪ್ರಿಂಟು ಮಾಡುವುದೆಂಬುದನ್ನು ಏರ್ಪಡಿಸುವಂತೆ ತೀರ್ಮಾನಿಸಲಾಯಿತು.

4. ಪೆಡರೇಶನಿನ ಈ ವರೆಗಿನ ಜಮೆ ಮತ್ತು ಖರ್ಚಿನ ಪಟ್ಟಿ ಓದಲಾಯಿತು.

ಸುಪರ್‌ವೈಜರುಗಳನ್ನು ತರಬೇತಿಗೆ ಕಳುಹಿಸಲು ಸರ್ಕಾರದಿಂದ ಅನರ ತಂದೇತಿನ ಖರ್ಚು ಅಂದರೆ ಮೂರು ತಿಂಗಳ ತನಕ ಒಬ್ಬೊಬ್ಬನಿಗೆ 25 ರೂ ಮೇರೆ 5 ಜನರಿಗೆ 375 ರೂ. ಕೊಡಬೇಕೆಂದು ರಿಜಿಸ್ಟ್ರಾರವರ ಮೂಲಕ ಕೇಳಬೇಕೆಂದು ತೀರ್ಮಾನಿಸಲಾಯಿತು ಆಲ್ಲದೆ ಈ ಸಂಗತಿ ಮಂಡಿಸಲಿಕ್ಕೆ ಮುಂಚಿತವಾಗಿ ಇತರ ಸ್ಥಳಗಳಲ್ಲಿ ಪೆಡರೇಶನಿಗೆ ಇಂಥಾ ಗ್ರಾಂಟ್ ಕೊಡುವಂತೆ ರೂಲ್ ಇದೆಯೋ, ಇದ್ದರೆ ಅಂಥಾ ದಾಖಲ್ಲೆಗಳನ್ನು ರಿಜಿಸ್ಟ್ರಾರರ ಮೂಲಕ ತರಿಸಿಕೊಳ್ಳಬೇಕಾದೂ ಸಹ ತೀರ್ಮಾನಿಸಲಾಯಿತು

6. ಖಾಲಿ ತರಬೇತ್ತಿಲ್ಲಿರುವ ಸುಪರ್‌ವೈಜರುಗಳಿಗೆ ಈ ತಾ. ಆಕ್ಟೋಬರ್ ನವೆಗೆ ಪೆಡರೇಶನ್ ಆಫೀಸಿನಲ್ಲಿ ಮತ್ತು ರಿಜಿಸ್ಟ್ರಾರವರ ಆಫೀಸಿನಲ್ಲಿ ತರಬೇತು ಕೂಟ್ಟು ಸುಖರ ಹಾಗಾಮಿಯಾಗಿ ಸುಪರ್‌ವೈಸರು ಕೆಲಸಕ್ಕೆ ಪ್ರಾಕ್ಟಿಕಲ್ ಟ್ರೈನಿಂಗಿಗಾಗಿ ನೇಮಕಮಾಡುವಂತೆಯೂ, ಈ ವಿಷಯವನ್ನು ಕೂಡ್ಲೆ ರಿಜಿಸ್ಟ್ರಾರವರಿಗೆ ಬರೆದು ಮುಂದಿಲ ವಿರ್ಣಾಡು ಮಾಡಬೇಕಾಗಿ ಸಹ ತೀರ್ಮಾನಿಸಲಾಯಿತು.

7. ಎಲ್ಲಾ ಯೂನಿಯನುಗಳಲ್ಲಿ ಕಾನ್‌ಫರೆನ್ಸ್ ನಡಿಸಲು ಒಂದು ಎಗ್ಜಿಕ್ಯುಟಿವ್ ಕಮಿಟಿ ಮಿಟಿಂಗು ಮಾಡಿ ಯಾವ ದಿವಸಗಳಲ್ಲಿ ಎಲ್ಲೆಲ್ಲಿ ಮಾಡಬಹುದೆಂಬ ವಿಷಯವನ್ನು ಬಹುಸಿ ತೀರ್ಮಾನಿಸಬೇಕಾಗಿಯೂ, ಈ ನಿಷಯವನ್ನು ಎಲ್ಲಾ ಯೂನಿಯನುಗಳಿಗೂ ಮತ್ತು ಪೆಡರೇಶನ್ ಕಮಿಟಿ ಮೆಂಬರುಗಳಿಗೂ ಸಹ ತಿಳಿಸುವಂತೆ ತೀರ್ಮಾನಿಸಲಾಯಿತು. ಯೂನಿಯನ್‌ನವರು ಸಹ ಅವರವರ ಯೂನಿಯನ್ನಿಗೆ ಸಂಯೋಜನೆಯಾದ ಎಲ್ಲಾ ಸಂಘಗಳ ಜನರಲ್ ಮಿಟಿಂಗಿಗೆ ಏರ್ಪಡಿಸಿ ಮುಂದಾಗಿಯೇ ಪೆಡರೇಶನಿಗೆ ತಿಳಿಸುವಂತೆಯೂ ಸಹ ತೀರ್ಮಾನಿಸಲಾಯಿತು.

8 ಇದು ವರೆಗೆ ಪೆಡರೇಶನಿಂದ ಸಂಘಗಳಿಗೆ ಕಳುಹಿಸಿದ ಎಲ್ಲಾ ಸರ್ಕ್ಯೂಲಾರ್‌ಗಳು ಸರಿಯೂಗಿದೆಯೆಂದು ಒಪ್ಪಿ ಅಂಗೀಕರಿಸಲಾಯಿತು.

9. ಸುಪರ್‌ವೈಜರುಗಳಿಗೆ ಅವರವರ ಕೆಲಸಗಳನ್ನು ನಡಿಸುವ ವಿಷಯವಾಗಿ ತಯಾರಿಸಿದ ಮೆಮೋರಾಂಡಂ ಯೂನಿತಿಳುವಳಿಕೆಯನ್ನು ನುಂಜೂರು ಮಾಡಲಾಯಿತು ನದರು ಮೆಮೋರಾಡಂನ ನಕಲುಗಳನ್ನು ಎಲ್ಲಾ ಸಂಘಗಳಿಗೂ ಮತ್ತು ಯೂನಿಯನುಗಳಿಗೂ ಕಳುಹಿಸುವಂತೆ ತೀರ್ಮಾನಿಸಲಾಯಿತು.

10. ಸೆಂಟ್ರಲ್ ಬ್ಯಾಂಕಿಗೆ ಬರುವ ಸಾಲದ ಆರ್ಜಿಗಳು ಯೂನಿಯನ್ ಮುಖಾಂತರವೇ ಕಳುಹಿಸಿಕೊಡಬೇಕೆಂದು ಸ್ಥಿತಿ ಸಂಪಕ್ಕೂ ಸರ್ಕ್ಯೂಲರ್ ಕಳುಹಿಸಬೇಕಾದು. ಸೆಂಟ್ರಲ್ ಬ್ಯಾಂಕಿನವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು

11 ದೇವನೂರು ಧವನ ಭಂಡಾರದ ಸಂಪದವರು ತಮ್ಮ ಡಿವಿಡೆಂಡಿನಿಂದ ಸುಪರ್‌ವೈಜರಿಗೆ ಒಂದು ಬಹುಮಾನ ಕೊಡಲು ಮಂಜೂರಾತಿ ಕೊಡಬೇಕೆಂದು ಬರಕ್ಕೊಂಡ ರಿಪೋರ್ಟು ಓದಲಾಯಿತು

ಸದರಿ ಸಂಘದಲ್ಲಿ ಸುಪರ್‌ವೈಜರು ಮೂಡಿದ ಒಳ್ಳೆ ಕೆಲಸವನ್ನು ಪೆಡರೇಶನಿನ ಜಜ್ಜಾಸಕದಲ್ಲಿಬ್ಬಟ್ಟುಕೊಳ್ಳಲಾಗುವುದೆಂದೂ ಮತ್ತು ಸ ಪರ್‌ವೈಜರಿಗೆ ಬಹುಮಾನ ಕೊಡಲು ಮಂಜೂರಾತಿ ಸಿಕ್ಕಲಾರದೆಂದೂ ತಿಳಿಸುವಂತೆ ತೀರ್ಮಾನಿಸಲಾಯಿತು.

12. ಶನಿವಾರಸಂತೆ ಸ್ಪೋರ್ಟಿಗೆ, ಶನಿವಾರಸಂತೆ ಯೂನಿಯನಿಗೆ ಸಂಯೋಜನೆಯಾದ ಎಲ್ಲಾ ಸಂಘಗಳು ಮೆಂಬರಾಗಲಿಕ್ಕೆ ಸಮ್ಮತಿ ಕೊಡಬೇಕೆಂದು ಬರೆದ ಶನಿವಾರಸಂತೆ ಯೂನಿಯನ್ನಿನ ಅರ್ಜಿ ಓದಲಾಯಿತು ಯೂನಿಯನಿನ ಬೈಲಾ ನೋಡಿದೆ ಇದನ್ನು ವಿಲೆವಾರಿ ಮಾಡಕೂಡದಾಗಿ ತೀರ್ಮಾನಿಸಲಾಯಿತು.

13. ಮೂರ್ನಾಡು ಯೂನಿಯನ್ ಸುಪರ್‌ವೈಜರು ಕೆ. ಮುತ್ತಣ್ಣನವರು ಮತ್ತು ಶನಿವಾರಸಂತೆ ಯೂನಿಯನ್ ಸುಪರ್‌ವೈಜರು ಜೆನ್ನೆ ಕೇಶವ್ಯಯ್ಯನವರು ಕಳುಹಿಸಿದ ರಾಜೀನಾಮೆಯನ್ನು ಅಂಗೀಕರಿಸಲಾಯಿತು. ಅವರು ಕೂಡಲೆ ತಮ್ಮಲ್ಲಿರುವ ಎಲ್ಲಾ ರಿಕಾರ್ಡ್ ವಗೈರೆಗಳ ಚಾರ್ಜುಗಳನ್ನು ಆಯಾ ಯೂನಿಯನ್ ಸೈಸಿಲೆಂಟರಿಗೆ ಕೊಟ್ಟು ತಮ್ಮ ಕಳೆದ ತಿಂಗಳ ಸಂಬಳವನ್ನು ಹೊಂದಿಕೊಳ್ಳಬೇಕಾದು ತೀರ್ಮಾನಿಸಲಾಯಿತು.

14. ಅಕ್ಟೋಬರ್ 1ರಿಂದ ಸುಪರ್‌ವೈಜರ ವರ್ಗಾವರ್ಗಿಯನ್ನು ಮಾಡುವುದು, ಹೊಸದಾಗಿ ಕೆಲಸಕ್ಕೆ ತರಬೇತಿನಲ್ಲಿರುವ ಸುಪರ್‌ವೈಜರುಗಳನ್ನು ಮೊಬಿಲೈರು ಮಾಡುವುದು ಮತ್ತು ಅದರ ಸಂಬಳ ವರ್ಗೈರೆ ಖರ್ಚಾದು ಮಾಡುವ ಎಲ್ಲಾ ಅಧಿಕಾರಗಳನ್ನು ಎಗ್ಜಿಕ್ಯುಟಿವ್ ಕಮಿಟಿಯವರಿಗೆ ಕೊಡಲಾಯಿತು.

15 ಇಂಡಿಯನ್ ಕೋ-ಆಪರೇಟಿವ್ ಬೇಂಕ್ ಹೌಸ್ ಹಾಸರಿಕೆ ಎಡಿಟರವರು ಕೊಡಗು ಸಂಘಗಳ ರಿಜಿಸ್ಟ್ರಾರವರ ಮುಖಾಂತರ ಕಳುಹಿಸಿದ ಕಾಗದ ಓದಲಾಯಿತು.

ಅದರಲ್ಲಿ ಕೇಳಿದ ಸಂಗತಿಗಳಿಗೆ ರಿಜಿಸ್ಟ್ರಾರವರಿಗೆ ಬರಕೊಳ್ಳುವಂತೆ ತೀರ್ಮಾನಿಸಲಾಯಿತು

16 ಲ್ಯಾಂಡ್ ಮಾರ್ಗೇಜಿಂಗ್ ಬೇಂಕ್ ವಿಷಯದಲ್ಲಿ ಬಂದ ರಿಜಿಸ್ಟ್ರಾರರ ಸಂಖ್ಯೆ 298ನೇ ತಾ 21—8—30ರ ಕಾಗದ ಓದಲಾಯಿತು.

ಅದಕ್ಕೆ ಸಂಬಂಧಪಟ್ಟ ಎಲ್ಲಾ ಬೈಲಾ, ಸರ್ಕ್ಯೂಲರುಗಳನ್ನೂ ರಿಜಿಸ್ಟ್ರಾರರ ಮೂಲಕ ಮದ್ರಾಸಿನಿಂದ ತರಿಸಿ ಅನಂತರ ಸಮರ್ಪಕವಾದ ಜವಾಬು ಕೊಡುವಂತೆ ತೀರ್ಮಾನಿಸಲಾಯಿತು.

ಮೆ. ಕೋಡಿರ ತಮ್ಮಯ್ಯನವರು ತಾನು ಈಗ ಯೂನಿಯನ್ ಪ್ರೆಸಿಡೆಂಟರಾಗಿರುವಾದುದರಿಂದ ತಾನು ಪೆಡರೇಶನ್ ಕಮಿಟಿ ಮೆಂಬರಾಗಲು ಆಗುವದಿಲ್ಲವೆಂದು ರಾಜೀನಾಮೆ ಕೊಟ್ಟದ್ದನ್ನು ಅಂಗೀಕರಿಸಿ ಯೂನಿಯನ್ ಪ್ರೆಸಿಡೆಂಟರಾದ ಮೆ. ಬಿನ್ನಂಡ ಸುಬ್ಬಯ್ಯನವರನ್ನು ಕಮಿಟಿ ಮೆಂಬರಾಗಿ ಆರಿಸಲಾಯಿತು.

18. ರಿಜಿಸ್ಟ್ರಾರವರು ಯೂನಿಯನ್ ಮತ್ತು ಸಂಘಗಳಿಗೆ ಕಳಿಹಿಸಿದ ನಂಬರು 135/A ತಾ. 19—7—30ರ ಸರ್ಕ್ಯೂಲರ್ ಓದಲಾಯಿತು. ಇದೇ ವಿಷಯದಲ್ಲಿ ಪೆಡರೇಶನಿನವರು ಸರ್ಕ್ಯೂಲರ್ ಕೊಡಬೇಕೆಂದು ತೀರ್ಮಾನಿಸಿರುವದರಿಂದಲೂ, ಪೆಡರೇಶನಿನ ಮತ್ತು ರಿಜಿಸ್ಟ್ರಾರರ ಸರ್ಕ್ಯೂಲರುಗಳು ಒಂದಕ್ಕೊಂದು ವಿರೋಧಿಸುವ ಸಂಭವ ಕಾಣುವುದರಿಂದಲೂ ಇನ್ನು ಮುಂದಕ್ಕೆ ರಿಜಿಸ್ಟ್ರಾರವರು ಸರ್ಕ್ಯೂಲರ್ ಕೊಡುವ ಮೊದಲು ಪೆಡರೇಶನಿನ ತಿಳುವಳಿಕೆಯಿಂದ ಮಾಡುವುದು ಉತ್ತಮವೆಂತಲೂ ಪೆಡರೇಶನಿನವರ ಅಭಿಪ್ರಾಯವಾಗಿರುತ್ತೆ. ಇಲ್ಲದೆ ಸಹಕಾರ ಅಭಿವೃದ್ಧಿಯಲ್ಲಿ ರಿಜಿಸ್ಟ್ರಾರವರು ಮತ್ತು ಪೆಡರೇಶನಿನವರು ಎಕರೀತಿಯಲ್ಲಿ ವರ್ತಿಸುವುದು ಉತ್ತಮವೆಂದು ಪೆಡರೇಶನಿನವರ ಅಭಿಪ್ರಾಯವಾಗಿರುತ್ತೆ. ಪೆಡರೇಶನ್ ಆದನಂತರ ಎಲ್ಲಾ ಸರ್ಕ್ಯುಲರುಗಳನ್ನೂ ಪೆಡರೇಶನ್‌ವರೆಗೆ ಕೊಡಬೇಕೆಂದು ಸಹ ಪೆಡರೇಶನ್ ಬೈಲಾದಲ್ಲಿ ನಮೂದಿದೆ. ಆದ್ದರಿಂದ ಈ ವಿಷಯದಲ್ಲಿ ಮುಂದಿನ ಸರ್ಕ್ಯೂಲರುಗಳನ್ನು ಕುರಿತು ರಿಜಿಸ್ಟ್ರಾರವರ ಕಾಗದ ನ್ಸೀಕ್ಷಿಸುವುದು.

19. ಪೆಡರೇಶನಿನ ಕಮಿಟಿ ಮೆಂಬರು, ತಾವುನಾಡು ಯೂನಿಯನ್ ಪ್ರೆಸಿಡೆಂಟರಾದ ಮೆ. ನಲಿಯಂ ಶ್ರೀನಿವಾಸ್ಪೈ. ಇವರು ತನಗೆ ಪೆಡರೇಶನ್ ಮಿಟಿಂಗಿಗೆ ಹಾಜರಾಗಲು ಕಾಸ್ಟ ಚಾರ್ಜು 24/—ರೂಪಾಯಿ ಆಗಿರುತ್ತೆ ಎಂದು ಬರೆದ ಕಾಗದ ಓದಲಾಯಿತು.

ಈ ಸಂಗತಿಯಲ್ಲಿ ಈ ವೊದಲೇ ಅದ ತೀರ್ಮಾನದ ಪ್ರಕಾರ ನಡಕೊಳ್ಳುವಂತೆಯೂ, ಅವರ ಕೋರಿಕೆ ಮೇರೆ ಕಾರು ಕೊಡಿಗೆ ಕೊಡಲು ಆಗುವುದಿಲ್ಲವೆಂತಲೂ ತೀರ್ಮಾನಿಸಲಾಯಿತು.

20. ಸಹಕಾರ ಸಂಘದ ಇನ್ಸ್‌ಪೆಕ್ಟರಾದ ಮೆ. ಪಿ. ಪೈ ನ್ನಪ್ಪನವರು ಪೆಡರೇಶನಿಗೆ ಕಳುಹಿಸಿಕೊಟ್ಟ ಮೆಂಬರರ ಸಾಲ ಮೂಲದ ರಿಜಿಸ್ಟರ್‌ಗಳ (Property statement) ಕೃಷ್ಣ 117—10—0 ಆಣೆ ಕೊಡಲು ಮಂಜೂರು ಮಾಡಲಾಯಿತು ಈ ರಿಜಿಸ್ಟರುಗಳನ್ನು ಕೂಡಲೆ ಸಂಘಗಳಿಗೆ ವಿತ್ಯಯಿಸಿ ಅವ್ಯಯವನ್ನು ಪೆಡರೇಶನಿನವರು ಜಮೆಕ್ಕೆ ತೆಗೆದುಕೊಳ್ಳುವಂತೆ ತೀರ್ಮಾನಿಸಲಾಯಿತು.

ಪಿ ದೇವ್ಯಯ್ಯ.
(ಪ್ರೆಸಿಡೆಂಟ್)

---

### ಸಪ್ರಮ್ಯನೆಹಾರೆ.

ಟಾತ್ಮಿದಾರರು ಮಮುವ ಅಧಿಪ್ಯಾಯಗಳಿಗೆ ಪ್ರತಿಕರ್ತರು ಒಪಾಜ್ಞಾರರಲ್ಲ. ಸಂ.

---

### ಹರಕೆ ಫಲಿತಾಂಶ.

ಹರಿದಾಸರಾದ ಮೆ. ಮುಕ್ಕಾಟಿರ ಪೂವ್ವಯ್ಯನವರು ಚೇರಂಡ್ರೀಮಂಗಲ ಗ್ರಾಮದ ಹತ್ತಿರ ಬೆಟ್ಟುಬಲ ಬಳಿ ಕಾಲ ಆದಿತ್ಯವಾರ ದಿನ ರಾತ್ರಿ 9 ಗಂಟೆಗೆ ಶ್ರೀ ರಾಮ ಭಕ್ತಾಂಜನೇಯ ಕಪೀಲ್ ದಾನವ ವಿಷಯವಾಗಿ ಹುಕಿಕೆಯನ್ನು ಸ್ವಾಧರಿಸ್ಪವಾದ ಸಂಗೀತದಿಂದೊಡಗೂಡಿ ಸಾಂಗವಾಗಿ ಮಾಡಿದರು. ಸ್ವಮುತ್ತುಲಿನೆ ಮಹೇಶ್ವರಿಯರೂ, ಮೆಜಿಳೆಸುರೂ ಸಹ ಕಥೆಯನ್ನು ಕೇಳಿ ಇವರನ್ನು ಪ್ರೋತ್ಸಾಹಿಸಿದರು ಮತ್ತು ಳಿತ ಬೆಳಿಗದ ತಟ್ಟೆಯಲ್ಲಿ ಸಿಕ್ಕಿದ ಹಣವನ್ನು ಕೂಡಾ ತ್ಯಾಗೈಸಿ ಮಂಡಳಿಯವರ ಸಹಾಯಕ್ಕೆ ಕಳುಹಿಸಿಸುವಂತೆ ದಾತರು ಹೇಳಿದ್ದರಿಂದ ಅದನ್ನು ಕಳುಹಿಸಲಾಯಿತು

ಹಾಜರಿದ್ದವ

---

### ಸತ್ಕಾರ್ಯಕ್ಕೆ ಉತ್ತೇಜನ.

ನಮ್ಮ ಕೊಡಗಿನಲ್ಲಿ ಆಗ ನಡಿಯುತ್ತಿರುವ ಸತ್ಕಾರ್ಯಗಳಲ್ಲಿ ಸಹಾಯಕರಾಗಲು ಈ ಪ್ರಾಂತ್ಯದ ಕೆಲವರು ಕೂಡಲಾರಾಗಿರುವಕಾದರೂ, ಯಾರೂ ಮುಂದಾಳುಗಳ್ಳು ಇರುವುದರಿಂದಲೂ, ತಿಳುವಳಿಕೆ ಸಾಲದ್ದರಿಂದಲೂ, ಬಹು ಜನ ಕೊಡಬೇಕಾಗಿದೆ ಈ ಪ್ರಾಂತ್ಯದ ಜನರು ತಕ್ಕಷ್ಟು ವಿದ್ಯಾಭೋಧನೆಯಿಂದಲಾದರೂ ತಿಳುವಳಿಕೆ ಸಹಕಾರಸುವುದಾಗಿ ಉತ್ತೇಜನ ಕೊಡಬೇಕಾಗಿದೆ ಈ ಪ್ರಾಂತ್ಯದ ಜನರು ತಕ್ಕಷ್ಟು ವಿದ್ಯಾಭೋಧನೆಗೆ ನಿಗಾಕೊಡುವುದಾಗಿ ಸಹ ಕಾರು ಬಂದಿರುವ ನಾನೂ ಸಹ ಬೋಧನೆಕೊಟ್ಟು ಇದೇ ಶನಿವಾರಸಂತೆಯಲ್ಲಿ ಒಂದು ಎಂಟಿಂಗು ನಡಿಸುವುದಕ್ಕೆ ಏರ್ಪಡಿಸಿದೆ. ತಾ. 27—8—30ನೇ ಬುಧವಾರ ಸೆಮೂರು ಎರಡು ಗಂಟೆಗೆ ಮಿಟಿಂಗು ಪ್ರಾರಂಭವಾಯಿತು. ನೂರು ಜನರ ವರೆಗೆ ಬೈಲು ಕೂಡಿದ ಸಭೆಯಲ್ಲಿ ನಾನೂ, ಮೆ. ಜೆಂ. ಮಾಕ್ಕಣ್ಣೈಯ್ಯನವರೂ ಸಹ ಸ್ವಾನಾಸೀಧ್ಯ, ಖಾದಿ ಪ್ರಚಾರ, ಪರದೇಶೀ ಬಟ್ಟೆ ಬಹಿಷ್ಕಾರ, ಸ್ವದೇಶ ಜಾಗದಲ್ಲಿ ಸಾರಾಯಿ ಮರಗಳಿಂದ ನೇಂದ ಇಳಿಸುವುದನ್ನು ಮನ್ನ ಮಾಡಿಕೆ, ಅಧವಾ ಮರಗಳನ್ನು ನಾಶಪಡಿಸುವಿಕೆ ಮೊದಲಾದ ವಿಷಯಗಳನ್ನು ಸಭೆಕರಿಗೆ ತೃಪ್ತಿಪಡಿಸುವಂಥ ಭಾಷಣ ಮಾಡಿ ನಂತರ ಮಹಾತ್ಮ ಗಾಂಧಿಯವರ ಫೋಟೋ ಎತ್ತಿದೆ 15 ಜನರು ನಾಂತು ಇನ್ನು ಮುಂದೆ ಖಂಡಿತವಾಗಿಯೂ ನೇಂದ, ಸಾರಾಯಿಯನ್ನು ಸೇವಿಸುವುದಿಲ್ಲವಾಗಿ ಸಹಿ ಮಾಡಿ ಪತ್ರಿಕೆಗೆ ಸಹಿಮಾಡಿದರು. ಪೇಟೆಯವರು ತಮ್ಮ ಊರಿನಲ್ಲಿ ಅಂಗಡಿ ಮಡಗಲಿಕ್ಕೆ ಸ್ಥಳ ಸಹ ಕೂಡದ ಪಕ್ಷ ನಾವು ತುಂಬಾ ನಿಗದಲ್ಲಿ ರುಚ್ಚೀವೆಯೊಗಿ ಹೇಳಿದರು. ಕಸ್ತೂರಿ ಮಹಾತ್ಮ ಗಾಂಧಿಯವರ ಫೋಟೋವನ್ನು ಪ್ರತಿ ವರ್ಷಂಗೆ ಮಾಡಬೇಕಾಗಿ ಜಮ್ಮನಸ್ಸಿನಿಂದ ಹೇಳಿದರು ಮೆ. ಇಪ್ಪತ್ತೊಂದು ಎಂಟಿಂಗು ಮಾಡಿ ಸಭೆ ಸೇರಬೇಕಾಗಿ ತೀರ್ಮಾನಿಸಲಾಯಿತು. ಈ ರಿವಸ ಹುಬ್ಬಾವಹದ್ದರಿಂದ ಜನರಿಗೆ ಪುರುಸೊತ್ತು ಇಲ್ಲವೆಂದು ಹೇಳಿ 'ಮಹಾತ್ಮ ಗಾಂಧೀಕಿ ಜೈ' ಎಂಬ ಜಯಘೋಷದಿಂದ ಸಭೆಯು ಬರತಾಸ್ತು ಮಾಡಲಾಯಿತು.

ಫೂಸ ತಾ. 31—8—30ರಲ್ಲು ಇದೇ ಸೇಟೆಯಲ್ಲಿ ಸುಮಾರು 50 ಜನರ ಮೇಲ್ಪಟ್ಟ ಒಂದು ಸಭೆಯು ಸೇರಿತು ಈ ಸಭೆಯಲ್ಲಿ ಸ್ವರಾಜ್ಯವೆಂದರೇನು? ಈ ಜಲವಳಿಕೆಗಳಿಂದ ಇತ್ಯಾರ್ಥ ಸಿದ್ಧಿಯಾಗುವುದು ಸಾಧ್ಯವೋ?

ಹೊಂದಿ ಧನ ಪ್ರವಾಹ, ಅದನ್ನು ಶಡೆಯುವ ವಿಧಾನ, ಉದಾರತೆಗಾಗಿ ನಮ್ಮ ಶನಿವಾರಸಂತೆ ಪೇಟೆಯೊಂದರಿಂದುಂಟಾಗುತ್ತಿರುವಂಥ ನಿಷಾ ಧನ ಸ್ವಭಾವದ ಹತಾಶೆಗಳನ್ನು ವಿವಿಧ ಕಾರಿನಿ, ಇದನ್ನು ಶಡೆಯುವರೆಂದುಂಟಾಗುವ ಸುಖ ಸುಖ ತ್ಯಗಳನ್ನು ಮನಸ್ಸಂತೋಷವಾಗುವ ರೀತಿ ತಿಳಿಯಿ ಪಡಿಸಿ ನಾನಾ ತರಹದ ಆನೇಕ ಸಂಸ್ಥೆಗಳ ಸಬಯ ಮಾಡಿಸಿ ಒಟ್ಟಾರೆ ಸಧಿಕರ ಮನಸ್ಸನ್ನು ತೃಪ್ತಿಗೊಳಿಸಿದನು. ಈ ಮಿಟಿಂಗು ಸಹ ಕಳೆದ ಮಿಟಿಂಗನ್ನು ಬಲಪಡಿಸಿತು.

ಈ ದಿನವೂ ಸಧಿಕರು ಮಹಾತ್ಮ ಗಾಂಧಿಯವರ ಫೋಟೋವನ್ನು ಮೆಂಬರ್‌ಗಳಿಗೆ ವಿತರಿಸಿದರು ಇನ್ನೂ ಮುಖ್ಯಸ್ಥರುಗಳನ್ನು ಸೇರಿಸಿ ಪ್ರಜಾಂಗೊಳಿಸಿದ ಮೂಲಕ ಮುಂದಿಳ ವಿಟಿಂಗಿಗೆ ನಿಷ್ಕರ್ಷಿಸಲಾಯಿತು. ನಮ್ಮ ದೇಶದಲ್ಲಿ ದೀಕೋದ್ಧಾರಕ್ಕಾಗಿ ಹೊರಟಿರುವ ಮಹಾನುಭಾವರು ಈ ಕಡೆ ಗನುಸಿದರೆ ತುಂಬಾ ಸಹಾಯ ಮಾಡಬೇಕಾಗಿ ಸಧಿಯು ಅನುಮತಿ ಪಟ್ಟಿತು ಅಂತೂ ಈ ಜಿಲ್ಲೆಯಲ್ಲಿ ಮುಂದಾಳಿಲ್ಲದೆ ಬಾಕಿ. ಆಂಕ್ಯರಲ್ಲಿ ಶೋಲಾಪುರದ ಜಿಲ್ಲೆಗಳಿಗಾಗಿಗಾಗಿ ಫುಂಡರು ನಡೆಸಿದ ಆಕ್ಯಾಚಾರಕ್ಕೆ ಶಿಕ್ಷೆಗೊಳಗಾಗಿರುವ ಮಲ್ಲಪ್ಪ ಧನಶೆಟ್ಟಿ ಬೆಗ್ಗೆರೆ ಮೇರೆ ಭಿಗವಂತನು ದಯ ಕರುಣಿಸಿ ಅವೀಲು ಕೋರ್ಟು ಜಡ್ಜ್‌ಮೆಂಟರವರ ಮನಸ್ಸಿಗೆ ಅವನ ಆನುಗ್ರ ದಯ ಪಾಲಿಸಬೇಕಾಗಿ ಸಧಿಯ ಪರವಸ್ತ ಭಾಷಣವಾದ ನಂತರ 'ಮಹಾತ್ಮ ಗಾಂಧಿಕೀ ಜೈ" ಎಂಬ ಜಯಘೋಷದೊಡನೆ ಸಧೆಯು ಒಕಾಸ್ಯಾಯಿತು.

ಇತಿ ದೇಶ ಸೇವಕ,
ಶ ಮೂರ್ತಯ್ಯ.


## WANTED.

Influential and honest men to work as Agents in every Taluk in Coorg, South Canara, Wynad & Malabar Districts, for the Star of India Industrial & General Assurance Company Ltd. on a fixed salary of Rs. 40/-per mensem with bonus & commission.

Apply to —

V. Chandriah Naidu
District Organiser,
The Star of India Industrial & General Assurance Co, Ltd
Mercara.

## ಬೇಕಾಗಿದಾರೆ.

ಕೊಡಗು, ದಕ್ಷಿಣ ಕನ್ನಡ, ಮಲಬಾರು ಮತ್ತು ವಯನಾಡು ಡಿಸ್ಟ್ರಿಕ್ಟುಗಳ ಸ್ಥಿತಿಯೊಂದು ತಾಲೋಕಿನಲ್ಲಿಯೂ 'ಸ್ಟಾರ್ ಆಫ್ ಇಂಡಿಯೂ ಇಂಡಸ್ಟ್ರಿಯಲ್ ಮತ್ತು ಜನರಲ್ ಎಸ್ಯುರೆನ್ಸ್ ಕಂಪೆನಿಯ ಏಜೆಂಟರಾಗಿ ತಿಂಗಳಿಗೆ ೩೦ ರೂ ಸಂಬಳದಲ್ಲಿ ಬೀಸಸ್ ಮತ್ತು ಕಮಿಷನಿನ ಸಮೇತ ಕೆಲಸ ಮಾಡಲು ವ್ಯಮಣಾಕತನದ ಎತ್ತು ಜನರಲ್ಲಿ ಮಾತು ನಡೆಯುವ ಜನರು ಬೇಕಾಗಿದ್ದಾರೆ.

ಪಿ ಚಂದ್ರಯ್ಯ ನಾಯಿ ಡು,
ಡಿಸ್ಟ್ರಿಕ್ಟ್ ಆರ್ಗನೈಜರು,
ದಿ ಸ್ಟಾರ್ ಆಫ್ ಇಂಡಿಯೂ,
ಇಂಡಸ್ಟ್ರಿಯಲ್ & ಜನರಲ್ ಎಸ್ಯುರೆನ್ಸ್
ಕಂಪೆನಿ ಲಿಮಿಟೆಡ್,
12—7 ಮಡಿಕೇರಿ.

# ಡೋಂಗರೆ
ಇ ಮೈರ
# ಬಾಲಾಮೃತ.

ಮಗುವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ,
ಬಿ 52—44 ಗಿರಿಗಾಂವ, ಮುಂಬಯಿ.

## ಜನ ವರ್ಷಗಳ ಅನುಭವಸಿದ್ಧ ನುತ್ತು ಸಾವಿರಾರು ಜನರಿಂದ ಉಪಯೋಗಿ ಸಲ್ಪಟ್ಟ ಔಷಧಗಳು.

### ೧. ಧಾತುಪುಷ್ಟಿ ಲೇಹ.

ಧಾತು ಸಪ್ಪವಾಗುವಿಕ, ಧಾತುವು ಮೂಶ್ಯಮೊಡನೆ ಹೊರ ಹೋಗುವಿಕ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ಸಪ್ಪವಾಗುವಿಕೆ, ಜ್ಞಾಪಕ ಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಗಾಳಿ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಒಜ್ಜುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು —ಕ್ರಯ ಡಬ್ಬಿ 1ಕ್ಕೆ ೭—೮—೦ ಮೂರು ಡಬ್ಬಿಗಳಿಗೆ ರೂ. 7—೦—೦.

### ೨. ಅಶೋಕಾರಿಷ್ಟ ನುತ್ತು ಮೊಶ್ರೆ.

ಹೆಂಗಸರ ನುಟ್ಟು ದೋಷಗಳೆ, ಮುತುಸ್ರಾವದ ಹೆಚ್ಚು ಕಮ್ಮಿಯಾಗುವಿಕ, ಹೊಟ್ಟೆನೋವು, ಸೊಂಟ ನೋವು, ಸಂತಾನ ಜ್ಞೀತೆ, ಮೂರ್ಛ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆನೆವ ಮೊದಲಾದ ಸ್ತ್ರೀ ಗರ್ಭಾಶಯದ ಎಲ್ಲಾ ರೋಗಗಳನ್ನೂ ಆತಿ ತೀಶ್ರವಾಗಿದ್ದಲ್ಲಿಯೇ ಗುಣ ಪಡಿಸುವುದು ಆಶೋಕಾರಿಷ್ಟ ಮತ್ತು ಮೊಶ್ರೆಗಳು ಸಾವಿರಾರು ಹೆಂಗಸರಿಗೆ ಆಂತರಿಕ ಆರೋಗ್ಯವನ್ನು ಒದಗಿಸಿ, ಮನೋಭೀಷ್ಟೆಯನ್ನು ಪೂರೈಸಿರುವವು.
ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮೊಶ್ರೆ ರೂ. 2 ಆ. 4,
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4

### ೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಮಲೆ ಜ್ವರ, 2 ಯೂ 3 ದಿವಸಕ್ಕೊಂದು ಸಾರಿ ಒರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಒರುವ ಜ್ವರವನ್ನು ನಿರ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ರಕ್ತಹೀನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—೦, 3 ಬಾಟ್ಲಿಗಳಿಗೆ 4—2—೦.

### ೪. ಮೋಪ ಕುಠಾರ.

ಇದು ಮೂತ್ಯಸ್ಥಾನದಿಂದ ಕೆಲವು ಬಿಳಿದು, ಹಳದಿಯಂತೆ ಹೋಗವಕ್ಕೆ ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—೦. 3ಕ್ಕೆ ೫.

### ೫. ಇಭ್ಭ ಭೇದಿ ಗುಟಿಕೆ.

ಅಯಸಿನವನ್ನು ಉಂಟುಮಾಡುವ ಸುಖ ವೀರೇಚಕ ಬಾಟ್ಲಿ 1ಕ್ಕೆ ೦—೮—೦ ಆನೆ 3 ಬಾಟ್ಲಿಗಳಿಗೆ 2—2—೦.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ೫೦ ಮಿಲಿ ನಗತಿ ಎನಿಸಾಗಿ ಬಂದಲ್ಲಿ ರೋಗಕ್ಕ ತಕ್ಕವಾದ ಔಷಧಿ ರವಾನಿಸಲಿಮಾದು. ಕೆಲಬಿಳಗು ತಪ್ಪಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
12—11 ರಥಬೀದಿ, ಮಂಗಳೂರು, ದ. ಕನ್ನಡ.

# ಬಿ. ಎಸ್. ಕಿಟ್ಟಿ & ಕಂಪೆನಿ.

ಜಾಲ್ಸ್

## ಬಂಗಾರ ಬೆಳ್ಳಿ ಪಾತ್ರೆಗಳ ವ್ಯಾಪಾರಿಗಳು.

4 ಕ್ಯಾರೆಟ್ ಭಂಗಾರದ ಕಿಬ್ಬಿ ಹಾಕಿದ ಪಾತ್ರೆಯೂ ಬಂದೋಬಸೂ ಆದ ಪೌಂಟನ್‌ಪೆನ್‌ಗಳು.

| | | |
|---|---|---|
| ರಲ್ಡ್ಸ್ ಮಂಡರ್ ಪೌಂಟನ್‌ಪೆನ್ 1ಕ್ಕೆ | ರೂ | 3 0 0 |
| " " ಜಿಗ್ ಬ್ಯಾರೆಲ್ ಪೆನ್ 1ಕ್ಕೆ | | 3 3 0 |
| " " ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ | | 3 8 0 |
| " ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಪೌಂಟನ್‌ಪೆನ್ 1ಕ್ಕೆ | | 3 14 0 |
| " " ಮೂಡರ್ ಕಲ್ಲ್ ಸ್ಕ್ರೂ ಕ್ಯಾಪ್ ಪೌಂಟನ್‌ಪೆನ್ 1ಕ್ಕೆ | | 4 2 0 |
| " ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಧಿನ ಬ್ರವುನ್ ಕಲರ್ ಪೌಂಟನ್‌ಪೆನ್ 1ಕ್ಕೆ | | 5 8 0 |
| ಜಿಗ್ ಸ್ಪಿಟ್ ಪೌಂಟನ್‌ಪೆನ್ 1ಕ್ಕೆ | | 10 8 0 |
| ಪಾರ್ಕರ್ ಪೆನ್ 1ಕ್ಕೆ | | 14 6 0, & 20 10 0 |
| ಬ್ಲಾಕ್ ಒರ್ಡ್ ಪೌಂಟನ್‌ಪೆನ್ 1ಕ್ಕೆ | | 3 8 0, & 3 12 0 |
| ಸ್ವಾನ್ ಪೌಂಟನ್ ಪೆನ್ 1ಕ್ಕೆ | | 6 4 0, & 6 12 0 |
| ವಾಲರಮನ್ ಪೌಂಟನ್ ಪೆನ್ 1ಕ್ಕೆ | | 8 2 0, & 8 10 0 |

ಮ್ಯಿಂಪೇಡ್‌ಗಳು.

| | | |
|---|---|---|
| ಸ್ವಾನ್ಸಂಡ್ ಇರುವ ಸೆನ ಪೈಂಟೆನ್ಸ್ 1ಕ್ಕೆ | 3 | 6 0 |
| ಜಿಮ್ಸ್ ಮೇಡ್ ಸ್ಪೆಶಲ್ ಪೈಂಟೆನ್ಸ್ 1ಕ್ಕೆ | 2 | 2 0 |
| ಲಿಗಲಿಯೂ ಅಲಾರು ಪೈಂಟೆನ್ಸ್ 1ಕ್ಕೆ | 6 9 0, & 6 15 0, | |
| ಲಿಗಲಿಯೂ ಸ್ಪೆಶಲ್ ಅಲಾರು ಪೈಂಟೆನ್ಸ್ 1ಕ್ಕೆ | 2 | 2 0 |
| ಲಿಗಲಿಯೂ ಅಲಾರು ಸ್ಪೆಶಲ್ ಪೈಂಟೆನ್ಸ್ ರೇಡಿಯಂ ಡೈಲಿನದು 1ಕ್ಕೆ | 8 | 10 0 |
| ಬಿಗ್‌ಪೆನ್ ಅಲಾರು ಪೈಂಟೆನ್ಸ್ 1ಕ್ಕೆ | 4 | 6 0 |
| ನಿಗ್‌ಪೆನ್ ಅಲಾರು ಸ್ಪೆಶಲ್ ಪೈಂಟೆನ್ಸ್ ಇರತಕ್ಕ ಪಾತ್ರೆಯೂದ ಪೈಂಟೆನ್ಸ್ 1ಕ್ಕೆ | 13 | 4 0 |
| ಪಾತ್ರೆಯೂ ಒಂದೋಬಸೂ ಆದ ಪಾಕೆಟ್ ಬಾಜ್ 1ಕ್ಕೆ | 5 | 10 0 |
| ಡಿಟೋ ಸಮಾನೆಯಲ್ಲಿ ಎಬಿ, ಪಾದ್ದ ಕಂಪೆನಿಯ ಪಾಕೆಟ್ ವಾಜ್ 1ಕ್ಕೆ | 12 | 4 0 |
| ನಿಕ್ಕಲ್ ಕೇಸ್ ಸಿಲಿಂಡರ್ ಮುಮೆಂಟ್ ಸಾಧಾರಣ ತರಹ ರಿಸ್ಟ್ ವಾಜ್ 1ಕ್ಕೆ | 5 | 4 0, 7 8 0, 10 0 0 & 12 8 0 |



ಪಿಲ್ಲಿ ನಮೂನೆ ಸಿಮಿಲ್ಲೆ ನಮೂನೆ ಅಂದವಾದ ಟೇಬಲ್ ಟ್ರೈಮ್ಸ್ 1ಕ್ಕೆ 3—೮—೦ ಪ್ರಾಕಿಂಗ್ ಫೋರ್ವಾಂ ಆಲಾಯಿತು.

ಮಾನಿಯರ್ಡರ್ ರವಾನಿಸುವ ವಿಳಾಸ:—ಎಂ. ಎಸ್ ಶಿವಪ ಅಂಡ್ ಬ್ರದರ್ಸ್,
ಜಾಲ್ಸ್ ಆಯುರ್ವೇದಿಯಂ ವಾಚ್ ಹೌಸ್, ಮೈಸೂರು.

12—17

## ಪ್ರಕಟಣೆ.

**ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕ್ಸ್ ಲಿಮಿಟೆಡ್ ರೂ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.**

| | | ರೂ. |
|---|---|---|
| ಶೇರ್ ಬಂಡವಾಳ | — | 50,000 |
| ವಸೂಲಾದ ಶೇರ್ ಮೊಬಲಗು | — | 23,160 |
| ಜಮೂಬಂದ ಠೇವಣಾತಿ | — | 2,16,472 |

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆಯ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ಪೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ಪೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪೈಸಿಡೆಂಟರು, ಜೈಜರ್
ಕೋದಂಡ ಅಪ್ಪಯ್ಯನವರು, ಮನೆಯಪ್ಪಂಡ ಬೆಳ್ಯಪ್ಪ
ಖಾವ್ ಬಹದ್ದೂರ್ ನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್,
ತಾರೀಕು 1-7-1930.

---

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ತಪಾಸಣೆ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಮರೆನಾಡು—ಮೆ. ಕೇಕೆರ ಅಯ್ಯಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ ಮಂಡೇಪಂಡ ಸೋಮೆಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್ ವೆಂಕಪ್ಪಯ್ಯನವರು
ಶ್ರೀಮಂಗಲನಾಡು—ಮೆ ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಯ್ಯನವರು,
ಮಕ್ಕಂ, ಆರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚಟ್ಟೋಳಂಡ ಮೊಣ್ಣಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

---

## ಮೊರಾಟೆಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರ್‌ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟವಾವ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಡ್ಡರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ

12 bore Victor Cartridges Rs 10/- Per 100
**Mahomedally-Noorbhoy.**
ARMS & AMMUNITION MART.
321 Abdul Rehman Street.
52 51 BOMBAY. 3



ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

## ಓರಿಯಂಟಲ್ ಜೀವವಿಮೆ ಕಂಪೆನಿಯ

ಹಕ್ಕೊಡೆತನದ ಸಾರಾಯ ವೈದ್ಯಕೀಯ ಆದಾಯದ ಹಂಚಿಕೆಯು ಇದೇ ಡಿಸೆಂಬರ್ 31ನೇ ತಾರೀಕಿನಲ್ಲಿ ಕೊಡಲ್ಪಡುವುದು.

ಕಳೆದ ಮೂರು ಸಾರಿ ಆಂದಾಜು ಮಾಡಲ್ಪಟ್ಟಾಗ ಇದ್ದ ಉತ್ತರೋತ್ತರದ ವರ್ಧನೆ

1921ರಲ್ಲಿ 21½ ಲಕ್ಷ ರೂಪಾಯಿಗಳು.
1924ರಲ್ಲಿ 53½ " "
1927ರಲ್ಲಿ 78 " "

**ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.**

1921ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ.
1924ರಲ್ಲಿ " " " 22½ "
1927ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 25 ರೂ

**ಸ್ಥಳ ಸಂಕೋಚ ನಿಮಿತ್ತ ಮೊದಲಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.**

ನೆನ್ನೆ ಹೊಡತನು ಪ್ರಕೃತಿಯನ್ನು ನಾವೆಂತಕಿತ ವೈದ್ಯ ಡಾಕ್ಟರರಿಗೂ ಕೋರಿಸಲು ಗುಣಪಡಿಸಲಿರಲು ತಮ್ಮ ಅಶ್ಚರ್ಯ ಕರವಾದ ತಾಯಿತ ನಮ್ಮ ನನ್ನ ಹೊಡತನು ಈವಾಗ್ಯ ೨ ತಿಂಗಳಿಗೆ ವರೆಗೆ ಧರಿಸಿದ ವಶ್ಯತೆಗೆ ಮೈಯೆಷಗಿನ ಯವನತ್ತಾ ತಾಯಿಲೆಗಳು ನಾವೆಯಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಯುವುತನ್ನು ತಿಳಿಸಲು ಆತಿ ಸಂತೋಷವೆನಿಸುತ್ತ ತಮ್ಮ ನಿ ಳೆ ರಾಮಾಸಾಹೆಬ ಸುದಾಮ ಜಾನ್ಸ್

ಪ್ರಸ್ತಾದ ಎಸ್ಟೇಟ್ ಮುಂಬಾ

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,
52—1 ಮು. ಪೋ. ಆಥಣಿ, ಜಿ. ಬೆಳಗಾಂವ.

## ೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿ ಸಲ್ಪಟ್ಟ ಔಷಧಗಳು.

### ೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜಠ್ಠಾಪಕ ಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ಬೇಡ ಪಿತ್ತದ ಜಾಡ್ಯ, ರಕ್ತ ಪಿತ್ತ ಒಳ ಜ್ವರ, ಮಲ ಬದ್ಧತೆ ಕೈಕಾಲು ಒಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು —ಕ್ರಯ ಡಬ್ಬಿ 1ಕ್ಕೆ 2—8—೦ ಮೂರು ಡಬ್ಬಿಗಳಿಗೆ ರೂ 7—೦—೦

### ೨. ಅಶೋಕಾರಿಷ ಮತ್ತು ಮೂತ್ರೆ.

ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗಿ ಪ್ರದು, ಹೊಟ್ಟೆನೋವು, ಸೊಂಟ ನೋವು ಸಂತರ್ಪ ಹೀನತೆ ಮೊಟ್ಟೆ, ಮಲಬದ್ಧತೆ, ಜಳಜ್ವರ, ರಕ್ತಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮೂತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಜಿದಗಿಸಿ, ಮನೋಭಿಲಾಷೆಯನ್ನು ಪೂರೈಸಿರುವವು.
ಕ್ರಯ 1 ಬಾಟ್ಲಿ ಔಷಧ 1 ಡಬ್ಬಿ ಮೂತ್ರೆ ರೂ 2 ಅ. 4,
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ 6 ಆ 4

### ೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಒರುವ ಜ್ವರ, ಮಲೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಒರುವ ಜ್ವರವನ್ನು ನಿರ್ಮೂಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿವರ್ಧನ್ನು ಉಂಟು ಮಾಡುತ್ತವೆ ಬಾಟ್ಲಿ 1ಕ್ಕೆ 1—8—೦ 3 ಒಟ್ಟಿಗೆಳಿಗೆ 4—2—೦.

### ೪. ಮೋಪ ಕುರಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹುಡಿಯಂತೆ ಹೋಗತಕ್ಕ ಕೀವನ್ನೂ ವೀರ್ಯವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ 2—8—೦ ೩ಕ್ಕೆ ರೂ 7

### ೫. ಇಳ್ಳಾಭೇದಿ ಗುಟಿಕೆ.

ಆಯಸವನ್ನು ಕುಂಟುಮೊಡಿಸಿ ಸುಖ ವಿರೇಚಕ ಬಾಟ್ಲಿ 1ಕ್ಕೆ 0—12—೦ ಆಣೆ 3 ಬಾಟ್ಲಿಗಳಿಗೆ 2—2—೦

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಕಾಯಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ಕವಾನಿಸಬಹುದು ಉಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
12—12 ರಥಬೀದಿ, ಮಂಗಳೂರು, ಡ. ಕನ್ನಡ.

# ಎಂ. ಎಸ್. ಪಿಲ್ಲಪ್ಪ ಅಂಡ್ ಬ್ರದರ್ಸ್.

## ಹಾಗೂ ಪೈಂಟಿಂಗ್ ಕಂಟ್ರಾಕ್ಟರ್ಸ್, ಮೈಸೂರು.

4 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಹಾತ್ರಿಯೂ ಒಂದೊಬ್ಬನೂ ಆದ ಪೌಂಟನ್‌ಪೆನ್‌ಗಳು.

ರೆಲ್ಯೂ ಮಂಡರ್ ಪೌಂಟನ್‌ಪೆನ್ 1ಕ್ಕೆ ರೂ 3 ೦ ೦
" " ಬಿಗ್ ಬ್ಯಾರೆಲ್ ಪೆನ್ 1ಕ್ಕೆ 3 3 ೦
" " ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ 3 8 ೦
" " ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಪೌಂಟನ್‌ಪೆನ್ 1ಕ್ಕೆ 3 14 ೦
" " ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಪೌಂಟನ್‌ಪೆನ್ 1ಕ್ಕೆ 4 2 ೦
" ಸೆಲ್ಫ್ ಫಿಲ್ಲಿಂಗ್ ಮೊಡಲ್ ಆಧುನ ಲೈನ್ ಕಲರ್ ಪೌಂಟನ್‌ಪೆನ್ 1ಕ್ಕೆ 5 8 ೦
ಬಿಗ್ ಸ್ಯಾಟ್ ಪೌಂಟನ್‌ಪೆನ್ 1ಕ್ಕೆ 10 8 ೦
ಪಾರ್ಕರ್ ಪೆನ್ 1ಕ್ಕೆ 14 6 ೦, & 20 10 ೦
ವ್ಹಾಲ್‌ಒರ್ಡ್ಫ ಪೌಂಟನ್‌ಪೆನ್ 1ಕ್ಕೆ 3 ೫ ೦ & 3 12 ೦
ಸ್ಯಾನ್ ಪೌಂಟನ್ ಪೆನ್ 1ಕ್ಕೆ 6 4 ೦, & ೬ 12 ೦
ವಾಟರ್‌ಮನ್ ಪೌಂಟನ್ ಪೆನ್ 1ಕ್ಕೆ 8 2 ೦, & 8 10 ೦

ಪೈಂಟಿಸೀಸ್‌ಗಳು

ಸ್ಯಾಟಿಂಡ್ ಕಿರುವ ಸೆಂ ಪೈಂಟೀಸ್ 1ಕ್ಕೆ ೩ 6 ೦
ಒರ್ನಮೆಂಟ್ ಸೆಣ್ಣ ಪೈಂಟೀಸ್ 1ಕ್ಕೆ 2 2 ೦
ಲಿಗಲಿಯಂ ಆಲಾರು ಪೈಂಟೀಸ 1ಕ್ಕೆ 6 ೪ ೦, & 6 15 ೦
ಲಿಗಲಿಯಂ ಸೆಣ್ಣ ಪೈಜಿನ ಆಲಾರು ಪೈಂಟೀಸ್ 1ಕ್ಕೆ 7 2 ೦
ಲಿಗಲಿಯಂ ಆಲಾರು ಸೆಣ್ಣ ಪೈಂಟೀಸ್ ರೆಡಿಯಂ ಪೈಲಿನದು 1ಕ್ಕೆ 8 10 ೦
ಬಿಗ್‌ಪೆನ್ ಆಲಾರು ಪೈಂಟೀಸ್ 1ಕ್ಕೆ 9 ೬ ೦
ಬಿಗ್‌ಪೆನ್ ಆಲಾರು ಸ್ಪ್ಯಾಂಲ್ ಇರತಕ್ಕ ಪಾತ್ರಿ ಯದೆ ಪೈಂಟೀಸ್ 1ಕ್ಕೆ 13 4 ೦
ಪಾತ್ರಿಯೂ ಬಂದೋಬಸ್ತೂ ಆದ ವಾಕಟ್ ವಾಚ್ 1ಕ್ಕೆ 5 10 ೦
ಪಿಟೋ ನಮೂನೆಯಲ್ಲಿ ಎಬ್ಬ ಪಾತ್ರಿ ಕಾವೆನ್ಸಿನ ವಾಕಟ್ ವಾಚ್ 1ಕ್ಕೆ 1೮ 4 ೦
ನಿಶ್ಚಿತ ಕೇಸ್ ಸಿಲೆಂಡರ್ ಮುವೆಂಟ್ ಸಾತಾಧಾರ ಕರಹ ರಿಸ್ಟ್ ವಾಚ್ 1ಕ್ಕೆ ೨ 4 ೦, 7 8 ೦, 10 ೦ ೦ & 12 8 ೦



ಇಲ್ಲಿ ನಮೂನೆ ೮ ಸಿರುವ ನಮೂನೆ ಆಂಡವಾದ ಟೇಬಲ್ ಕ್ಲಾಂಡ್ ಸ್ 1ಕ್ಕೆ 3—6—೦ ಪ್ಯಾಕಿಂಗ್ ಪೋಸ್ಟೇಜು ಆಯಿದಾ

ಮುಖ್ಯಯೋರ್ತರ್ ಕವಾನಿಸುವ ವಿಳಾಸ —ಎಂ. ಎಸ್. ಪಿಲ್ಲಪ್ಪ ಅಂಡ್ ಬ್ರದರ್ಸ್,
52—18 ಪಾರೋಪಕಿಯಂ ವಾಚ್‌ಮೇಕರ್ಸ್, ಮೈಸೂರು.

## ಪ್ರಕಟಣೆ.

**ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್' ರ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.**

| | | ರೂ. |
|---|---|---|
| ಶೇರ್ ಬಂಡವಾಳ | — | 50,000 |
| ವಸೂಲಾದ ಶೇರ್ ಮೊಲಗು | — | 23 160 |
| ಜಮೂಂದ ರೇವಣಾತಿ | — | 2,16,472 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳೇನೇ ಹೊರತಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೂಲ ಪರೀಟಿವ್ ರಿಜಿಸ್ಟ್ರಾರರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ

| | |
|---|---|
| ಪ್ರೆಸಿಡೆಂಟರು, | ಟ್ರೆಜರರ್ |
| 'ಚೋದಂಡ ಅಪ್ಪಯ್ಯನವರು, | ಮನೆಯಪ್ಪಂಡ ಬೆಳ್ಯಪ್ಪ |
| ಠಾವ್ ಬಹದ್ದೂರ್. | ನವರು. |

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಕು 1—7—1930.

---

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಹಿಸ್ಸಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು [illegible]ತಿ ಮೂಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಮರೆನಾಡು—ಮೆ. ಕೀಕಿರ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ನೋಮ್ಮಯ್ಯನವರು, (ಖಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.

ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ವೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,

ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜೆ. ಮಾದಯ್ಯನವರು,

ಸುಂಟಿಕೊಪ್ಪ—ಮೆ ಅಪ್ಪಚಟ್ಟೋಕಂಡ ಮೊಣ್ಣಯ್ಯನವರು,

ಸೂಚನೆ —ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ,

---

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನ್ನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾನ ಬರೆದು ರಿಜಿಸ್ಟ್ರಾರ್ರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಪಾತ್ರ ಫಾರಮುಗಳೂ, ವಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ. ಮೇನೇಜರ್,

'ಕೊಡಗು" ಮಡಿಕೇರಿ.





12 bore Victor Cartridges Rs 10/- Per 100

**Mahomedally-Noorbhoy.**

ARMS & AMMUNITION MART.

321 Abdul Rehman Street.

52 52 BOMBAY. 3



ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

## ಓರಿಯಂಟಲ್ ಜೀವವಿಮೆ ಕಂಪೆನಿಯ

ಹತ್ತೊಂಬತ್ತನೇ ಸಾರಿಯ ವೈವಾರ್ಷಿಕ ಆದಾಯದ ಹಂಚಿಕೆಯು ಇದೇ ಡಿಸೆಂಬರ್ 31ನೇ ತಾರೀಕಿನಲ್ಲಿ ಕೊಡಲ್ಪಡುತ್ತೆ

ಕಳೆದ ಮೂರು ಸಾರಿ ಆಂದಾಜು ಮೂಡಲ್ಪಟ್ಟಾಗ ಇದ್ದ ಬೋನಸ್‌ಗಳು

1921ರಲ್ಲಿ 21½ ಲಕ್ಷ ರೂಪಾಯಿಗಳು
1924ರಲ್ಲಿ 53¼ " "
1927ರಲ್ಲಿ 78 " "

**ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.**

1921ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ. | 1927ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 25 ರೂ.
1924ರಲ್ಲಿ " " " 22½ "

ಈ ವರ್ಷದಲ್ಲಿ ದಾಖಲಾಗುವ ವಾಲಿಸಿಗಳಿಗೂ ಸಹ 1940ನೇ ಇಸವಿ ಡಿಸೆಂಬರ್ 31ನೇ ತಾರೀಕಿನಲ್ಲಿ ಆದಾಯದ ಹಂಚಿಕೆಯು ಕೊಡಲ್ಪಡುತ್ತೆ.

ಆದುದರಿಂದ ನೀವು ಓರಿಯಂಟಲ್ ಕಂಪೆನಿಯ ವಾಲಿಸಿದಾರರಾಗುವುದರಲ್ಲಿ ಹೇರಳ ಲಾಭವುಂಟು.

**ನಮ್ಮ ಪ್ರತಿನಿಧಿಗಳು ಎಲ್ಲೆಲ್ಲಿಯೂ ಇರುತ್ತಾರೆ.**

**ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.**

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು —

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು. 52—37

ಯಂ. ವಿ. ಮುತ್ತುಕೃಷ್ಣ ನಾಯಡು,
ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.



## NITRATE OF SODA.

The best and cheapest form of Nitrogen for plants. Highly concentrated and immediately available. Nothing like it to make plants grow.

This is a whitish crystalline salt, which is used to an enormous extent all over Europe and America as a nitrogenous manure. It can be used in mixtures, as well as singly, to stimulate plant growth. It permeates the soil freely and rapidly. Roots multiply soon and grow deep, giving the plants firmness and vigour. Foliage, flower, fruit and wood are also developed by its timely and judicious use. Its action is very quick and results can be observed within a few days of its application. Plants grown with nitrate of soda resist the attacks of plant diseases and insect pests owing to their greater strength and vitality induced by its application.

It contains about 16 per cent pure nitrogen or nearly 50 times as much nitrogen as is contained in an equal quantity of cowdung Its nitrogenous content is immediately available as plant food whereas that of cowdung is not assimilable by plants until after a slow chemical change in the soil

Experiments have proved that the plant food most deficient in our Indian soils is nitrogen which Nitrate of Soda supplies in the most economical and readily assimilable form

For garden plants best results are obtained by using a dilute solution at frequent intervals.

Cwt. Rs 12, 56 lbs. Rs 6—8—0; 28 lbs Rs 3—8—0, 14 lbs. Rs 1—12—0. Packing and cartage extra

24—20 "Pestoujee P. Pocha"



ತ್ವರೆ ಮಾಡಿರಿ! ತ್ವರೆ ಮಾಡಿರಿ!!

THE UNITED KARNATAK INSURANCE COMPANY LTD., DHARWAR.

## ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರೆನ್ಸ ಕಂಪೆನಿ ಲಿಮಿಟೆಡ್, ಧಾರವಾಡ.

(೧೯೧೬ನೇ ಇಸವಿಯ ಹಿಂದುಸ್ಥಾನದ ಕಂಪೆನಿಯ ಪೈಕಿನ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ)

**ಏಜಂಟರು ಬೇಕು.**

ಕನ್ನಡ ನಾಡಿನಲ್ಲಿ ಕನ್ನಡಿಗರ ಧನಸಹಾಯದಿಂದ ಸ್ಥಾಪಿಸಲ್ಪಟ್ಟ ಮತ್ತು ಕನ್ನಡಿಗರಿಂದ ನಡೆಸಲ್ಪಟ್ಟ ಈ ಮೊದಲನೇ ಕಂಪೆನಿಗೆ ಶೇರುಗಳನ್ನು ಮಾರುವದಕ್ಕೂ, ವಿಮೆಯ ಕೆಲಸವನ್ನು ತಂದು ಕೊಡುವದಕ್ಕೂ ಎಲ್ಲಾ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು ವಿಮೆಯ ಕೆಲಸವನ್ನು ಗ್ಯಾರಂಟಿ ಮಾಡಿದಲ್ಲಿ ವಿಶೇಷ ಸವಲತ್ತುಗಳು ಕೊಡಲ್ಪಡುವವು ಕನ್ನಡಿಗರೇ ತೀರ್ಮಾನೇ ನಮ್ಮ ಕೆಲಸವನ್ನು ಕೈಕೊಂಡು ಲಾಭವೂಡಿಕೊಳ್ಳಿರಿ.

ಹೆಚ್ಚಿನ ಪೂಹಿತಿಗಾಗಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K L. Huilgolkar.
ಸೆಕ್ರೆಟರಿ.

26—17 ಯು. ಕ. ಇ. ಕ. ಲಿ. ಧಾರವಾಡ.


Printed & published by P. I. Belliappa, at "Kodagu" Press, Mercara for "Kodagu" Ltd.

## ವೀರರಾಜಪೇಟೆಯಲ್ಲಿ ನಡೆದ ರಾಷ್ಟ್ರೀಯ ವಾರು ಚಳವಳದ ವಿವರಗಳು.

ತಾ. 7—10—30ರಲ್ಲಿ ವೀರರಾಜಪೇಟೆಯಲ್ಲಿ ಈಗಿನ ಚಳವಳವನ್ನು ಕುರಿತು ಕಮಿಶನರವರು ಮಾಡಿದ ಭಾಷಣ ಮತ್ತು ವಿಚಾರಗಳ ವಿವರ.

ದಕ್ಷಿಣ ಕೊಡಗು ತಾಲೋಕು ಸುಬೇದಾರರ ದನ್ನತ್ತಿನಿಂದ ವಿಚಾರಗಳ ನೋಟೀಸು ಹೊರಡಿಸಲ್ಪಟ್ಟಿತು. ಮೇಗಳಾದ ಪಿ ಎ ಬೆಳ್ಯಪ್ಪನವರು, ಕೆ ಸಿ ಕರುಂಬಯ್ಯನವರು, ಅಬ್ದುಲ್ ಗಫೂರ್‌ಖಾನರು ಮತ್ತು ಹೆಚ್. ಆರ್. ಕೃಷ್ಣಯ್ಯನವರನ್ನೂ ದನ್ನಗಿರಿ ಮಾಡಿದ್ದು ರಾಜದ್ರೋಹದ ಕಪ್ಪಿಗೆಂತಲೂ ವಿಚಿತ್ರಂಗು ಮತ್ತು ಖಾದಿ ಪ್ರಚಾರಕ್ಕೆಲ್ಲವೆಂತಲೂ ಈ ವಿಷಯ ಹರಡಿದ ಕಪ್ಪು ಅವಿಸ್ಮಾಯನನ್ನು ದೇಶೀಯರ ಮನಸ್ಸಿನಿಂದ ಹೋಗಲಾಡಿಸಲಿಕ್ಕಾಗಿ ಈ ವಿಚಾರಗ ಆಗುವುದೂ ಮಾ ಕಮಿಶನರವರು ವಿಚಾರಿಗಿನಲ್ಲಿ ಹಾಜರಿರುತ್ಕಾರೆಂತಲೂ ಪೈಗೈರೆಯಾಗಿ ನೋಟೀಸಿನಲ್ಲಿ ಬರೆದಿತ್ತು.

ವಿಚಾರಗ ಎಂದು ಗಂಟೆಗೆ ಸುರುವಾಗುವ ಮೊದಲು ಅಂದರೆ 1 ಗಂಟೆಗೆ ದೇಶೀಯರೆಲ್ಲರೂ ಕೂಡಿ ರೀಡಿಂಗ್ ರೂಮಿನ ಒಳಗೆ ಒಂದು ದೊಡ್ಡ ವಿಚಾರಗ ಮಾಡಿ ಸತ್ಯಾಗ್ರಹಿಗಳ ಪರವಾಗಿ ನೆ ಎನಂಡ ಕಾರ್ಯಪ್ರನವರಿಗೆ ಅವರ ಕೆಲಸವನ್ನು ವಿವರಿಸಲು ಅನುಮತಿ ಕೊಟ್ಟರು ಮಿ. ಕಾರ್ಯಪ್ಪನವರು ಅವರ ತಲಸದ ವಿಷಯ ಸ್ವಾರಸ್ಯವಾಗಿ ಅರ್ಧಗಂಟೆ ಭಾಷಣ ಮಾಡಿದರು. ಇದಕ್ಕೆ ಒತ್ತಾಸೆಯಾಗಿ ನೆ ಬಿದ್ದಂಡ ಬೋಪ್ಪೆಯ್ಯನವರೂ, ಶಿ ಮಂದೈಯ್ಯನವರೂ, ನಾಯಿಂಡ ಬೆಳ್ಯಪ್ಪನವರೂ ಭಾಷಣ ಮಾಡಿದರು.

ಇವರ ಭಾಷಣ ತೀರಿದ ಕೂಡಲೇ ಸಭೆಯವರಲ್ಲರೂ ಕೂಡಿ ಕಮಿಶನರವರ ವಿಚಾರಿಗಿನಲ್ಲಿ ಅವರ ಭಾಷಣವಾದ ಕೂಡಲೇ ದೇಶದವರ ಪಂಥಾಗಿ ನೆ ಕಳಪಂಡ ಅಚ್ಚಯ್ಯನವರು, ಬಿದ್ದಂಡ ಬೋಪ್ಪೆಯ್ಯನವರು, ಸಂಚೆಯ್ಯನವರು, ಉದಿಯೊಂಡ ಮಾಚಯ್ಯನವರು, ನಾಯಿಂಡ ಬೆಳ್ಯಪ್ಪನವರು ಮತ್ತು ಕೋಟೊ ಪಿ ಚಿಣ್ಣಪ್ಪನವರನ್ನು ಪ್ರತಿನಿಧಿಗಳನ್ನಾಗಿ ಮಾತಾಡಲಿಕ್ಕೆ ಚುನಾಯಿಸಿದರು. ಒಂದುವೇಳೆ ಕಮಿಶನರ ಪಗಂ ಮಾತಾಡಲಿಕ್ಕೆ ಅನುಮತಿ ಕೊಡದಿದ್ದರೆ ಎಲ್ಲರೂ ವಿಚಾರಿಗಿನಿಂದ ಎದ್ದು ಹೋಗಬೇಕೆಂದೂ ತೀರ್ಮಾನವಾಯಿತು

ವಿಚಾರಗ ಎಂದು ಗಂಟೆಗೆ ಸುರುವಾಯಿತು ಬೆಂಚು ಮೇಜೆಸ್ಟ್ರೇಟರೂ, ಅಸಿಯರೂಗಳೂ, ಕಲವು ಕಾನ್ಸ್ಟೆಲು ಮೆಂಬರುಗಳೂ, ರಿಸ್ಟ್ರೈಡ್ ಉದ್ಯೋಗಸ್ಥರುಗಳೂ, ಮುನಿಸಿಪಾಲಿಟಿ ಮೆಂಬರುಗೂ 1½ ಗಂಟೆಗೇನೇ ಎದುರಿಗಿರುವ ಕುರ್ಚಿಗಳನ್ನು ಕೂತಿದ್ದರು. ಕಮಿಶನರವರು ಬಂದ ಕೂಡಲೇ ಸಭೆಕರನ್ನು ಸಂಬೋಧಿಸಿ ಹೇಳಿದ್ದೇನೆಂದರೆ—ದೇಶವಲ್ಲಿ ಈಗ ತಾನೇ ಖೈದು ನೂಡಲ್ಪಟ್ಟ ನಾಲ್ಕರ ವಿಷಯದಲ್ಲಿ ತಪ್ಪು ಅಭಿಪ್ರಾಯಗಳು ಹುಟ್ಟಿವೆ ಅವರನ್ನು ದನ್ನಗಿರಿ ಮಾಡಿ ಕೈದು ಮಾಡಿದ್ದು ಏಕಿರಿಂಗಾ ಮತ್ತು ಖಾದಿ ಪ್ರಚಾರ ಮಾಡಿದ್ದಕ್ಕಲ್ಲ. ಅವರು ರಾಜದ್ರೋಹದ ತಪ್ಪಿಕ ಮಾಡಿದ್ದಕ್ಕಾಗಿ, ಆದರೆ ವಿಚಾರಣೆ ಕಾಲದಲ್ಲಿ ನೀವು ಯೋಚಾದರೂ ಹಾಜರಿದ್ದರೆ ಅವರ ತಪ್ಪಿತವು ತಿಳಿಯುತ್ತಿತ್ತು. ಶಾಂತ ರೀತಿಯ ಪಿಕೆಟಿಂಗಿಗೂ, ಖಾದಿ ಪ್ರಚಾರಕ್ಕೂ ಯಾ ಖಾದಿ ಬಟ್ಟೆ ಧರಿಸುವುದಕ್ಕೂ ಸರಕಾರದ ವಿರೋಧವಿಲ್ಲ. ಆದರೆ ಸತ್ಯಾಗ್ರಹಿಗಳು ಕೇವಲ ತಿಳುವಳಿಕೆಯಿಲ್ಲದ ಸಣ್ಣ ವ್ಯಾಯದವರೇ ಹಚ್ಚಿರುವಂಗ ಅವರು ಶಾಂತರೀತಿಯ ಪಿಕೆಟಿಂಗ್ ಮಾಡ ತ್ಕಾರೋ, ವಿಸೋನೋಡಬೇಕಾಗಿದೆ. ಸರಕಾರದವರ ಪಾಲಿಸಿಯು (ನೀತಿಯು) ತಲವರು ಹೇಳುವಂತೆ ನಿವಾ ಕುಡಿಯುವುದನ್ನು ಬಿಡುಮ ಮಾಡುವುದಲ್ಲ, ಹಾಗೆ ಹೇಳುವುದು (Nonsense) ಹುಚ್ಚು. ಕಳೆದ 25 ವರ್ಷಗಳಿಂದ ಅಂಗಡಿಗಳನ್ನು ಕಡಿಮೆ ಮಾಡುತ್ಕಾ ಬಂದಿದ್ದೇವೆ. ಖಾದಿ ಬಟ್ಟೆ ಧರಿಸುವುದಕ್ಕೆ ನಮ್ಮ ವಿರೋಧವಿಲ್ಲ. ದೇಶದಲ್ಲೆಲ್ಲಾ ಈ ವಿಷಯಗಳಲ್ಲಿ ಒಳಗೆ ತಪ್ಪು ಅಭಿಪ್ರಾಯಗಳು ಹರಡಿವೆ. ಅಂಥಾದ್ದಕ್ಕೆ ನೀವೆಲ್ಲರೂ ಗಮನ ಕೊಡಬೇಕಾದರು ಸರಕಾರದವರು ನಾವು ಪಿಕೆಟಿಂಗ ಕೇವಲ ಲೈಸೆನ್ಸ್ ಗಳನ್ನು ತೆಗೆದುಹಾಕುತ್ತಾರಂದೂ ಅನೇಕ ಸುಳ್ಳು ಸಪ್ತಗಳನ್ನು ಹಬ್ಬಿಸಿದ್ದಾರೆ. ಅದು ನಿಜವಲ್ಲ, ಶಾಂತಿಯುತ ಸತ್ಯಾಗ್ರಹ ಚಳವಳವನ್ನು ಹಿಂಸೆ ರೂಪವನ್ನು ತಾಳಿ ದೇಶಕ್ಕೆ ತೊಂದರೆಯಾಗಬಹುದು. ಆದ್ದರಿಂದ ಇಂಥಾದ್ದಕ್ಕೆ ಯಾರೂ ಪ್ರೋತ್ಸಾಹ ಕೊಡಬಾರದು ಎಂಬುದಾಗಿ ಅರ್ಧಗಂಟೆ ಭಾಷಣ ಮಾಡಿದರು. ಇವರ ಭಾಷಣವನ್ನು ಡಿಸ್ಟ್ರಿಕ್ಟು ಮೇಜಿಸ್ಟ್ರೇಟರು ಕೊಡಗು ಭಾಷೆಯಲ್ಲಿ ತರ್ಜುಮೆಯಾದ ಮೇಲಿದ್ದ

ಕೂಡಲೇ ಮೆ ಬಿದ್ದಂಡ ಬೋಪ್ಪೆಯ್ಯನವರು ಸ್ವಲ್ಪ ಮಂತು ಸಭಿಕರ ವರುಗಳಿಗೆ ಅರು ಜನರನ್ನು ವಕ್ತಿಕ್ಕೆ ಚುನಾಯಿಸಿದ್ದಾರೆಂತಲೂ, ಆದ್ದರಿಂದ ಪ್ರತಿ ಒಬ್ಬರಿಗೆ ನಿಮಿಷ ಮಾತಾಡಲು ಅನುಮತಿ ಕೂಡಬೇಕೆಂತಲೂ ಕೇಳಿಕೊಂಡರು. ಅದಕ್ಕೆ ಅವರು ಮಹಿಮೆಯ್ಯನವರನ್ನು ಕೇಳಿಕೊಂಡರು. ಸ್ವನ್ನನ್ನು ನಿವಾಗಿ ಸಂತಯವಿಲ್ಲ ವಿಚಾರಗಳಲ್ಲಿ ಪ್ರಶ್ನೆ ಕೇಳಬಹುದೆಂತಲೂ ಅದಕ್ಕೆ ತಾನು ಜವಾಬ್ದಾರಿಯೆಂತಲೂ ಹೇಳಿದರು. ಮೆ. ಬೋಪ್ಪೆಯ್ಯನವರ ಪ್ರಶ್ನೆ ಕೇಳುವುದಾರ ಒದರಾಗಿ ಸರಕಾರದವರು 'ಕೊಡಗಿನಲ್ಲಿ ಸತ್ಯಾಗ್ರಹವನ್ನು ನಿಲ್ಲಿಸಿದ್ದರಿಂದ ದೇಶದಲ್ಲಿ ಒಳಗೆ ಅಸಮಾಧಾನವಿದೆಯೆಂಬುದಾಗಿಯೂ, ಕೂಡಲೇ ಪತ್ರಿಕೆಯನ್ನು ಹೊರಗಡೆಗೆ ಅನುಮತಿ ಕೊಡಬೇಕಾಗಿಯೂ ಪಗ್ಗರೆಯೂಗಿ ಪ್ರಸಿದ್ಧವಾಗಿ ಕಮಿಶನರವರು ಮಾತು ಬೇಡವೆಂದೂ, ಪ್ರಶ್ನೆ ಕೇಳಬೇಕೆಂದೂ

ಕರ್ನಾಟಕಕ್ಕೆ ತಿಲಕ ಪ್ರಾಯರಾದ ಶ್ರೀಎಣ್ಣೆ ರಂಗನಾಕ ದಿವಾಕರರು ಳೆದಿದ ಶನಿವಾರ ಬೈಲಿನಿಂದ ಬಿ[illegible]ಟ್ಟಿರುವರು ಕೂಡಲೇ ಬೆಳಗಾಂಪಟ್ಟದ ಪ್ರಶ್ನೆಗಳನ್ನು ಹಾಕಿದರಿಸಿ ಅವರಿಗೆ ಸ್ವಾಗತವನ್ನಿತ್ಕರ.

1 ಪ್ರಶ್ನೆ — ನಾಲ್ಕೈ ವರ್ಷ ಚಾಲಾ ಇರುವಲ್ಲಿ ನಾನು ಕೋರ್ಟಿನಲ್ಲಿ ಹಾಜರಿದ್ದೆನು. ರಾಜದ್ರೋಹದ ಕಪ್ಪು ಸಾಬಿಸಿದವರಿಗೆ ಶಿಕ್ಷೆ ಮೊದಲು ಆದರೆ ಮೆ ಬೈಯ್ಯಪ್ಪೆಯ್ಯನವರು ಎಲ್ಲಿಯೂ ಭಾಷಣ ಮಾಡಿಲ್ಲ. ಸ್ಪೆ ಹೆಡ್‌ಕಾನ್‌ಸ್ಟೇಬಿಲ್ ರಬೋರ್ಟು ಮೇರೆ ಜೂವೆ ಸ್ಟೇಯನ್ನು ವಿಚಾರಣೆ ಮಾಡದೆ ಆವರಿಗೆ ಶಿಕ್ಷೆ ವಿಧಿಸಿದ್ದು ನ್ಯಾಯವೇ ?

ಜವಾಬು —ಅದಕ್ಕೆ ಅಪ್ಪೀಲು ಮಾಡಬೇಕಾಗಿತ್ತು.

ಪ್ರಶ್ನೆ —ತಾವು ಕಮಿಶನರವರಾಗಿ ಇದನ್ನು ನೋಡಿದಿರೋ?

ಜವಾಬು:—(ಮೌನ) ಅದು ಮಾಡಬೇಕಾಗಿತ್ತು.

೩. ಪ್ರಶ್ನೆ —ತಾವು ಸರಕಾರದ ನೀತಿಯು ಕುಡುಕುತನವನ್ನು ಕಡಿಮೆ ಮಾಡುವುದು ಎಂ ಹೇಳಿರಿ ನ ತ್ಕ ಜನರು ಸರಕಾರವು ಇದನ್ನು ಹೆಚ್ಚು ಕಡುವುದು ಎಂಬ ಅಬಿಪ್ರಾಯ 'ಸಾಸ್ಟೆನ್ಸ್' ಹ ಚ್ಚು ಎಂದು ಹೇಳಿರಿ. ಆದರೆ ಕಳೆದ ೨ ರೀಳು ವರ್ಷಗಳಿಂದ ಅಂಗಡಿಗಳನ್ನು ಕಡಿಮೆ ಮಾಡಬೇಕೆಂದು ಕೌನ್ಸಿಲಿನಲ್ಲಿ ಪ್ರತಿನಿದಿಗಳಿಗಳು ಕೇಳಿಕೊಂಡರೂ ತಾವು ಒಕಳೆ, ಮೊರೆನಾಡು, ಕಕ್ಕ ಕಡಂಗ ಈ ಸ್ಥಳಗಳಲ್ಲಿ ಅಂಗಡಿಗಳನ್ನು ಮಾಡಿದ್ದು ಏಕಕ್ಕ ?

ಜವಾಬು —ಜನರಿಗೆ ಬಿಯರಿಟಿಯಲಿಕ್ಕೆ ಒಳಗೆ ದೂರ ಹೋಗಬೇಕಾದ್ದರಿಂದ ಹತ್ತಿರಲ್ಲಿ ಸಿಕ್ಕುವ ಹಾಗೆ ಅನುಕೂಲ ಮಾಡಿದ್ದೇವೆ ಎಂದರು

ಪ್ರಶ್ನೆ —ಆಗ ಸುಸ್ಥಿರ ಶಕ್ತವು ಕುಡುಕುತನವನ್ನು ಹೆಚ್ಚು ಮಾಡಿದ ಹ ಗೆ ಆಯೋ, ಕಡಿಮೆ ಮಾಡಿದ ಹಾಗೆ ಆಯಿತೋ ?

ಇಷ್ಟರಲ್ಲಿ ಮ್ಮಂತು ಕವಿ ಶಸ ವರು ಎದ್ದು ಬಂಗಲೆಗೆ ತೆರಳಿದರು. ಜಿಲ್ಲೆ ಅಕಾಂತರೆ ಹೆಚ್ಚಾಗಿ ಕಮಿಶನರವರು ಹೋಗಕೂಡದಂಬುದಾಗಿ ಕೂಗಿದರು

ಕೂಡಲೇ ಸನ್ನೆಲ್ಲರೂ ಮೆ ಕೆ. ಪಿ ಚಿಣ್ಣಪ್ಪನವರನ್ನು ಕುರಿತು ಕಮಿಶನರನ್ನು ಪುನಃ ವಿಚಾರಿಗಿಗೆ ಕರತರಬೇಕೆಂದು ನವಾಲಿಗೆ/ನ್ಯಾಯವಾದ ಜವಾಬು ಸಿಕ್ಕಿದ ವಿನಹ ಹೋಗಕೂಡದೆಂಬ ತೀರ್ಮಾನ ಮಾಡಿದರು. ಮೆ ಚಿಣ್ಣಪ್ಪನವರು ಕಮಿಶನರ ಹತ್ತಿರ ಹೋಗಿ ಅವರನ್ನು ಕರೆದುಕೊಂಡು ಬಂದ ಮಳೆ ಜೋರಾಗಿ ಹೊಡೆಯುತ್ತಿದ್ದುದರಿಂದ ಕಮಿತರು ಒಂಗಲಿಯ ವೆರಾಂಡದಲಿ ನಿಂತಿದ್ದರು ಒಸಲ್ಲರೂ ನಿಂದದ್ದನ್ನು ಮೂಡಿ, ಳೆಗೂ ನಿಂತಿದ್ದರು. ಪುನಃ ಸವಾಲು ಜವಾ ಸುರುವಾಯಿತು.

ಪ್ರಶ್ನೆಗೆ ನೀವು ಸವಾಲು ಅಂಗಡಿಗಳ ವಿಷಯದಲ್ಲಿ ಕೊಟ್ಟ ಜವಾ ಸಮರ್ಪಕವಲ್ಲ ಅಂಗಡಿ ಹೆಚ್ಚಿದ್ದಕ್ಕೆ ನೀವು ಏನೇಳುವಿರಿ ?

ಜವಾ —ಕಮಿಶನರವರು ಆಲೋಚಿಸಿ ಅದಎಕ್ಸೈಜ್ ಬೋಡಿಗರು ಅಂಗಡಿಗಳನ್ನು ಹೆಚ್ಚಿಸಿದ್ದು, ಅವರ ಸಿವಾರನ್ನು ನಿಜಾರ್ಮೂಡಬೇಕಾಯಿತೆಂದು ಹೇಳಿದರು

ಪ್ರಶ್ನೆ.—ಖಾದಿ ಒಟ್ಟೆ ಹಾಕಲಿಕ್ಕೆ ವಿರೋಧವಿಲ್ಲವೆಂದು ಹೀರಾಗಾದರೆ ಕಾಲೆಯಲ್ಲಿ ಈ ವಿಷಯದಲ್ಲಿ ಮಕ್ಕಳಿಕ್ಕೆ ಮಾಡಿದ್ದು ವಿಕಕ್ಕಾಗಿ! ತಮ್ಮ ತಾವೆಯಲ್ಲಿರುವ ಸಬ್‌ಇನ್‌ಸ್ಪೆಕ್ಟರು ಇನಾಸ್ಪೆಕ್ಟರು ಡಿಸ್ಟ್ರಿಕ್ಟು ಬೋರ್ಡು ವಿಚಿತ್ರ ಆಸುಮತಿ ಇಲ್ಲದೆ ಡಿ. ವಿ. ಶಾಲೆಯಲ್ಲಿ ಮಕ್ಕಳು ಖಾದಿ ಒಟ್ಟೆ ಹಾಕಬಾರದೆಂದು ಸರ್ಕ್ಯುಲರ್ ಮಾಡಿದ್ದು ಏ ಇದೇ ರೀತಿ ಹೈ ಸ್ಕೂಲಿನಲ್ಲಿ ಮಾಡಿದ್ದಾರೆ.

ಜವಾಬು —ಖಾದಿ ಒಟ್ಟೆ ಹಾಕಲಿಕ್ಕೆ ನಮ್ಮ ನಿರ್ದಿಂಧವಿಲ್ಲ ಶಾಲಾಧಿಕಾರಿಗಳು ಹಾಗೆ ಮಾಡಕೂಡದು, ಮಾಡಿದ್ದು ತಿಳುವಳಿಕೆಗೆ ಬರಲಿಲ್ಲ.

4. ಪ್ರಶ್ನೆ —'ಕೊಡಗು' ಸತ್ಯಿಕೆಯನ್ನು ನಿಲ್ಲಿಸಿ ಪ್ರೆಸ್ ಆಕ್ಟಿನ್‌ಸ್ಟೆನ್ಸ್‌ನ್ನು ಜಾರಿಗೆ ತಂದದ್ದು ವಿತಕ್ಕಾಗಿ ?

ಜವಾಬು.—ವಿಚಿತ್ರರು ರಾಜದ್ರೋಹದ ವಿಷಯಗಳನ್ನು ಸೃಷ್ಟಿಸುತ್ತಿದ್ದರು, ಅದಕ್ಕಾಗಿ

ಪ್ರಶ್ನೆ.—ಪತ್ರಿಕೆ ದೇಶದವರದು, ಎಡಿಟರ್ ಸಂಬಳಕ್ಕೆ ಇರುವವರು. ಒಬ್ಬನು ಮಾಡಿದ ತಪ್ಪಿತಕ್ಕೆ ದೇಶದವರಿಗೆ ಶಿಕ್ಷೆ ಮಾಡುವುದು ನ್ಯಾಯವೇ ?

ಜವಾಬು—ಪತ್ರಿಕೆ ನಿಲ್ಲಿಸಲಿಲ್ಲ, ಸೆಕ್ಯೂರಿಟಿ ಕೊಟ್ಟು ಪತ್ರಿಕೆ ನಡಿಸಬಹುದು, ಆದ್ದರಿಂದ ಸೆಕ್ಯೂರಿಟಿ ಕೊಡಿ.

ಪ್ರಶ್ನೆ.—ಎಡಿಟರ್ ತಪ್ಪು ಮಾಡಿದರೆ ಪ್ರೆಸ್ ಆಕ್ಟು ಮೇರೆ ಇಂಥಿಂಥಾದ್ದು ರಾಜದ್ರೋಹವೆಂದು ಹೇಳಿ ತಿಳಿಸಿ ಮಾಡಲು ಹುಬಾಗಿತ್ತು, ಅದು ಮಾಡದೆ ದೇಶದವರಿಗೆ ಶಿಕ್ಷೆ ಮಾಡಿದ್ದರಿಂದ ಅತ್ಯಪ್ಪಿ ಬಹಳ ಹೆಚ್ಚಾಗಿದೆ.

ಜವಾಬು —ಪುನಃ ಹೇಳಿನ ಜವಾಬೇ ಹೇಳಿದರು ಆ ಮೇಲೆ ಮೆ. ನಾಯಿಡ ಬೆಳ್ಯಪ್ಪನವರು ಕೆಳಗೆಯಿನ ಪ್ರಶ್ನೆಯನ್ನು ಕೇಳಿದರು,

ಪ್ರಶ್ನೆ.—ಸರಕಾರದ ನೀತಿಯು ಕುಡುಕುತನವನ್ನು ಕಡಿಮೆ ಮಾಡುವುದೇ ಆದರೆ ಈಗಿರುವ ಎಲ್ಲಾ ಅಂಗಡಿಗಳನ್ನು ತುಚ್ಚಿ ಕದ್ದು ಅಂಡಿಯವನೆಸ್ಸನ್ನು, ಕಳಪಯಿಮನೆಗಳನ್ನು ಹಿಡಿಯಲಿಕ್ಕೆ ಅಬ್ಕಾರಿ ಇಲಾಖೆಯನ್ನು ಯಕ್ಕಳೆ ಹುಟ್ಟುಕೊಳ್ಳುವಾರದ

ಜವಾಬು —ಅದು ಸದ್ಯಕ್ಕೆ ಸಾಧ್ಯವಿಲ್ಲ.

ಮೆ. ಬಿದ್ದಂಡ ಸುಬ್ಬಯ್ಯನವರು ಕೇಳಿದ ಸ[illegible]ದ ಗವರ್ನ[illegible]ರು ಬರುತ್ತದೆ

ಪ್ರಶ್ನೆ.—ಸನ್ನದು ನಿರೂಪಕ್ಕೆ ವಿರೋಧವಾಗಿ ಬಮ್ಮಕ್ಕೆ ಕಂದಾಯ ಹೆಚ್ಚಿಸಿದ್ದು ವಿತಕ್ಕಾಗಿ ?

ಜವಾಬು —ಅದು ಈ ವಿಚಿಂಗಗಿಗೆ ಲಗಾವಿಲ್ಲ

ಉದಿಯೊಂಡ ಮಾಚಯ್ಯನವರು ಕಮಿಶನರವರು ಇಷ್ಟು ತಾಳ್ಮೆಯಿಂದ ಎಲ್ಲಾ ಪ್ರಶ್ನೆಗಳಿಗೂ ಜವಾಬು ಕೊಟ್ಟದ್ದಕ್ಕೆ ಸಭಿಕರ ಪರವಾಗಿ ವಂದನೆ ಮಾಡಿದನಂತರ ವಿಚಿಂಗು ಬರಕಾಸ್ತಾಯಿತು

ಕೂಡಲೇ ರೀಡಿಂಗ್ ರೂಮಿನ ಒಳ ಮೆ. ಬಿದ್ದಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ದೊಡ್ಡ ವಿಚಿಂಗು ಆಗಿ ಈ ಕೆಳಗಿನ ರಠವುಗಳು ಮಂಜೂರಾದವು

(1) ಈಗಿನ ಚಳವಳದ ವಿಷಯದಲ್ಲಿ ಕೊಡಗು ಕಮಿಶನರವರು ವಿಚಿಂಗಿನಲ್ಲಿ ಕೂಟ್ಟ ಜವಾಬು ಸಮರ್ಪಕವಾಗಿಲ್ಲವೆಂದು ಈ ವಿಚಿಂಗು ಅಭಿಪ್ರಾಯಪಡುತ್ತದೆ

(2) ನಿವಾನಿಷೇದಕ್ಕೂ, ಖಾದಿ ಪ್ರಚಾರಕ್ಕೂ ಈಗ ದೈಲು ರಾಸನೆನ್ನು ಅನುಭವಿಸುತ್ತಿರುವ ನಾಲ್ಕು ಜನರು ಮಾಡಿದ ಕೆಲಸದೆನ್ನು ಈ ವಿಚಿಂಗು ಶ್ಲಾಘಿಸುತ್ತದೆ.

(3) ಡಿಸ್ಟ್ರಿಕ್ಟು ಬೋರ್ಡು ಪ್ರೈಮರಿ ಶಾಲೆಗಳ ಆಡುಮತಿ ಇಲ್ಲದೆ ಶಾಲಾ ಸೆಟ್ ಆಸಿಸ್ಟಂಟ್ ಇನ್‌ಸ್ಪೆಕ್ಟರು ಖಾದಿ ಬಟ್ಟೆ ಹಾಕಕೂಡದೆಂಬುದಾಗಿ ಶಾಲೆಗಳಿಗೆ ಸರ್ಕ್ಯುಲರ್ ಕೊಟ್ಟದ್ದನ್ನು ಕೂಡಲೇ ರದ್ದು ಮಾಡಬೇಕಾಗಿ ಈ ವಿಚಿಂಗು ಕಮಿಶನರವರನ್ನು ಕೋರುತ್ತದೆ,

(4) ಕೊಡಗು ಪ್ರೆಸ್ಸಿಗೆ ಸೆಕ್ಯೂರಿಟಿ ಡಿಪೊಂಡ್ ಮಾಡಿ ಪತ್ರಿಕೆ ನಿಲ್ಲಿಸಿದ್ದನ್ನು ಕೂಡಲೇ ರದ್ದು ಮಾಡಿ ಪತ್ರಿಕೆ ಹೊರಡಿಸಲಿಕ್ಕೆ ಅನುಕೂಲ ಕೊಡಬೇಕೆಂದು. ಈ ವಿಚಿಂಗು ಕಮಿಶನರವರನ್ನು ಕೇಳಿಕೊಳ್ಳುತ್ತದೆ.

(೨) ಅಧ್ಯಕ್ಷರು ಈ ರಠವುಗಳನ್ನು ಕೊಡಗು ಕಮಿಶನರವರಿಗೂ ಮತ್ತು ಪತ್ರಿಕೆಗಳಿಗೂ ಕಳುಹಿಸಬೇಕೆಂದು ಈ ವಿಚಿಂಗು ಕೇಳಿಕೊಳ್ಳುತ್ತದೆ.

ತಾರೀಕು 1—10—30ರಲ್ಲಿ ದಕ್ಷಿಣ ಕೊಡಗಿನ ಜನರು ಸೇರಿ ವೀರರಾಜಪೇಟೆಯಲ್ಲಿ ವಿಚಿಂಗು ಮಾಡಿ ಈ ಕೆಳಗಿನ ರಠವುಗಳನ್ನು ಕೂಡಗು ಚೀಫ್ ಕಮಿಶನರವರಿಗೂ, ಕಮಿಶನರವರಿಗೂ ಕಳುಹಿಸಿದರ,

(1) ಜೂವಾಗಲೂ (ಡೊಮಿನಿಯನ್ ಸ್ಟೇಟಸ್) ಸಾಮಂತ ಸ್ವರಾಜ್ಯವನ್ನೇ ಬೇಡಿದುತ್ತಿದ್ದ 'ಕೊಡಗು' ಪತ್ರಿಕೆಯನ್ನು ಪ್ರೆಸ್ ಆರ್ಡಿನೇನ್ಸ್ ಮೂಲಕ ನಿಲ್ಲಿಸಿದ್ದಕ್ಕೆ ಈ ವಿಚಿಂಗು ವಿರೋಧಿಸುತ್ತದೆ ಕೂಡಲೇ ಈ ಆರ್ಡಿನೆನ್ಸ್‌ನ್ನು ರದ್ದು ಮಾಡಲೇಕಾಗಿ ಚೀಫ್ ಕಮಿಶನರವರನ್ನು ಕೋರುತ್ತದೆ.

(2) ಜೂವಾಗಲೂ ಶಾಂತ ರೀತಿಯಿಂದ ಖಾದಿ ಪ್ರಚಾರಕ್ಕೂ, ನಿವಾನಿಷೇದಕ್ಕೂ ಕೆಲಸ ಮಾಡುತ್ತಿದ್ದ ನಾಲ್ವರು ಸಾರ್ವಜನಿಕರಿಗೆ ಶಿಕ್ಷೆ ಮಾಡಿದ್ದಕ್ಕಾಗಿ ಈ ವಿಚಿಂಗು ವಿರೋಧಿಸುತ್ತದೆ.

(3) ಕೂಡಗು ಡಿಸ್ಟ್ರಿಕ್ಟು ಮೇಜೆಸ್ಟ್ರೇಟರ ಸರ್ಕ್ಯುಲರಿನಲ್ಲಿ ಸರಕಾರದವರು ಖಾದಿ ಪ್ರಚಾರ ಮತ್ತು ನಿವಾನಿಷೇಧಕ್ಕೆ ವಿರೋಧವಿಲ್ಲವೆಂದು ಹೇಳಿದರೂ, ಶಾಶಾಧಿಕಾರಿಗಳು ವ್ಯಕ್ತಿ ಸ್ವಾತಂತ್ರ್ಯವನ್ನು ತಗ್ಗಿಸಲು ಶಾಲೆಯಲ್ಲಿ ಹುಡುಗರು ಖಾದಿ ಟೊಪ್ಪಿ, ಖಾದಿ ಹಾಕಬಾರದೆಂಬುದಾಗಿ ಸರ್ಕ್ಯುಲರ್‌ಗಳನ್ನು ಮಾಡಿದ್ದಕ್ಕೆ ಈ ವಿಚಿಂಗು ಬಲವಾಗಿ ವಿರೋಧಿಸುತ್ತದೆ ಅಲ್ಲದೆ ಇಂಥಾದ್ದನ್ನು ರದ್ದು ಮಾಡ ಪಂತೆ ಕೂಡಲೇ ಶಾಲಾ ಧಿಕಾರಿಗಳಿಗೆ ಚೀಫ್ ಕವಿ ಶನವರು ಹುಕುಂ ಮಾಡಬೇಕೆಂದು ಈ ವಿಚಿಂಗು ಕೇಳಿಕೊಳ್ಳುತ್ತದೆ.

---

## ಗಾಂಧಿಯವರ ಪತ್ರ.

'ಹರಿಜನ' ಇಂಡಿಯಾ'ದಲ್ಲಿ ಗಾಂಧಿಯವರು ಜೈಲಿನಿಂದ ಕಳಿಸಿದ ಕಾಗದದಲ್ಲಿ 'ಅಭಯ' ಅಥವಾ ಹೆದರಿಕೆ ಇಲ್ಲದಿರುವಿಕೆಯ ವಿಷಯ ಹೀಗೆ ಹೇಳುತ್ತಾರೆ.

ಹೆದರಿಕೆ ಇಲ್ಲದಿರುವಿಕೆ'—ಈ ಗುಣವನ್ನು ದೈವಿಕ ಗುಣಗಳಲ್ಲಿ ಮೊದಲನೆಯದಾಗಿ ಗೀತೆಯ 16ನೇ ಅಧ್ಯಾಯದಲ್ಲಿ ಹೇಳಿರುವುದು ಅದನ್ನು ಓದುವವರೆಲ್ಲರಿಗೂ ಗೊತ್ತಿರಬೇಕು. ಬೇರೆ ಎಲ್ಲಾ ಉದಾತ್ತವಾದ ಗುಣಗಳ ಬೆಳವಣಿಗೆಗೆ ಈ 'ಹೆದರಿಕೆ ಇಲ್ಲದಿರುವಿಕೆ' ಯು ಅತ್ಯಾವಶ್ಯಕ. ಈ ಗುಣವಿಲ್ಲದೆ ಬಿಚ್ಚನು ಸತ್ಯಸ್ವೀಕರಣವನ್ನು ಹೇಗೆ ಮಾಡಬಾಸನು ? ಹುಯ ಮಾರ್ಗವು 'ಧೈರ್ಯಶಾಲಿಗಳಿಗೆ ಮಾತ್ರವೇ ತಾಯು'—ಹೇಡಿಗಳದಲ್ಲ. 'ಅಭಯ' ಪಾಠಾಯಿಸದೇ ಧೀರರೂ—ಕತ್ತಿ ಕೋಪಿಡಿದವರಲ್ಲ, 'ಅಭಯ' ವು ಹೊರಗಿನ ಹೆದರಿಕೆ—ಕಾಯಿಲೆಯ ಹೆದರಿಕೆ, ಸಾವಿನ ಹೆದರಿಕೆ, ಆಸ್ತಿ ಹೋಗಿಬಿಡುವ ಹೆದರಿಕೆ, ತನ್ನ ಇಷ್ಟಮಿತ್ರರ ಮರಣದ ಹೆದರಿಕೆ—ಗಳನ್ನೂ ದಿರುವುದನ್ನು ಸೂಚಿಸುತ್ತದೆ.

ಸಾವಿನ ಹೆದರಿಕೆಯನ್ನು ಬಿಟ್ಟವನು ಬೇರೆ ಎಲ್ಲಾ ಹೆದರಿಕೆಗಳನ್ನು ಗೆಲ್ಲುವನು ಎಂಬುದು ತಪ್ಪು ಗ್ರಹಿಕೆ. ಕೆಲವರು ಸಾವಿಗೆ ಹೆದರುವುದಿಲ್ಲ, ಆದರೆ ಈ ಜೀವನದ ಸಣ್ಣ ಸಣ್ಣ ತೊಡಕುಗಳಿಂದ ಜಗ್ಗುತ್ತಾರೆ, ಕೆಲವರಿಗೆ ತಮ್ಮ ಅನುರಾಗಕ್ಕೆ ಪಾತ್ರರಾದವರಿಂದ ಆಗಲುವುದನ್ನು ಸಹಿಸಲಾಗುವುದಿಲ್ಲ. ಕೆಲವು ಲ

ಮೊತ್ಕನನ್ನು ತಿಳಿದನಸಿಗೇ ಸಂಪೂರ್ಣ ಅಭಯ ಸಿದ್ಧಿಯಾಗು ತ್ತದೆ. ಆದರೆ ಆತ್ಮ ವಿಶ್ವಾಸವಿಟ್ಟುಕೊಂಡು ಬಿಡದೆ ಪ್ರಯತ್ನಿಸಿದರೆ ಆ ಧ್ಯೇಯದ ಕಡೆಗೆ ಸಾಗಲು ಸಾಧ್ಯವಾಗುತ್ತದೆ

ಕಾಮ, ಕ್ರೋಧ ಮೊದಲಾದವುಗಳು ಒಳಗಿನ ಹೆದರಿಕೆಗಳು ಒಳಗಿನ ಹೆದರಿಕೆಗಳನ್ನು ಗೆದ್ದಮೇಲೆ ಹೊರಗಿನ ಹೆದರಿಕೆಗಳು ಮಾಯವಾಗುತ್ತದೆ. ಎಲ್ಲಾ ಹೆದರಿಕೆಗಳು ನಮ್ಮ ದೇಹವನ್ನು ಸುತ್ತಿಕೊಂಡಿವೆ ನಮ್ಮ ದೇಹದ ಮೇಲಿರುವ ಮೋಹವನ್ನು ತೊರೆದರೆ ಅವೆಲ್ಲವೂ ತೊಲಗುವುವು ಧನ, ಕುಟುಂಬ, ನಮ್ಮ ದೇಹ—ಇವುಗಳ ಮೇಲಿನ ಮೋಹವನ್ನು ತೊರೆಯಬೇಕು ಅವುಗಳೆಲ್ಲವೂ ಇರುತ್ತವೆ. ಆದರೆ ಅವುಗಳನ್ನು ನಾವು ಬೇರೊಂದು ದೃಷ್ಟಿಯಿಂದ ನೋಡಬೇಕು. ಅವ್ಯ ನಮ್ಮದಲ್ಲ, ದೇವರದು ದೇವರು ನಮ್ಮನ್ನೂ ಅವುಗಳನ್ನೂ ನೋಡಿಕೊಳ್ಳಲು ನೇಮಿಸಿದ್ದಾನೆ ನಾವು ಹೀಗೆ ಯಜಮಾನತ್ವದಿಂದ ಆಳಿನ ಸ್ಥಿತಿಗೆ ನಮ್ಮನ್ನಿಳಿಸಿಕೊಂಡರೆ ಹೆದರಿಕೆಗಳೆಲ್ಲವೂ ಹೋಗುವುವು ಆಗ ನಾವು ಸತ್ಯನಾರಾಯಣನನ್ನು ಕಾಣಬಹುದು

— ——


ಫೋಟೋ ತೆಗಿಯುವುದನ್ನು

ಮೂಫಿಯೂಗಿ
ಕಲಿಸುತ್ತೇವೆ.

1 ನಾವು ನಿಮ್ಮ ನಕ್ಷೆಯನ್ನು Photo 12 ಐಂಚು ಉದ್ದ, 10 ಇಂಚು ಅಗಲಕ್ಕೆ ದೊಡ್ಡದಾಗಿ ತೆಗೆದು (Enlaregment) ಕೊಡುತ್ತೇವೆ. ಚಾರ್ಜು ಬರೆ ಎರಡು ರೂಪಾಯಿ ಮಾತ್ರ.

2 ಫೋಟೋ ತೆಗೆಯುವುದನ್ನು ಮೂಫಿಯೂಗಿ ಕಲಿಸುತ್ತೇವೆ.

3. ನಿಮಗೆ ಬೇಕಾದ ಫೋಟೋ ಸಾಮಗ್ರಿಗಳನ್ನು ಸುಲಭ ದರದಲ್ಲಿ ಒದಗಿಸಿ ಕೊಡುತ್ತೇವೆ.

ಕ್ಯಾಟಲಾಗಿಗೆ ವ ಇತರ ಮಾಹಿತಿ ಬಗ್ಗೆ ಒಂದಾಣೆ ಸ್ಟಾಂಪು ಸಮೇತ ಈ ವಿಳಾಸಕ್ಕೆ ಬರೆಯಿರಿ

**The Karnataka Trading Co.,**
Post Box 3563,
4—3 Girgaon Bombay 4



ಭರತಖಂಡದ ಜೀವವಿಮೆ ಕಂಪೆನಿ

ಓರಿಯಂಟ್

ಡಿವಿಡೆಂಡ್

ಇವಗ

ಬೋನಸ್ಸಾಗಿ ಕೊಡುತ್ತದೆ.

ವನ್ನು
ಕೊಡುವುದರಿಂ
ನಸಕ್ತರೂ, ಪುಷ್ಪರೂನಿತ್ತು
ಸಂತೋಷ ಚಿತ್ತರೂ ಆಗಿಪರು.

ಕೆ. ಟಿ. ಡೋಂಗರೆ ಕಂನಿ,
52—46 ಗಿರಿಗಾಂವ, ಮುಂಬಯಿ.



Ford
SALES AND SERVICE

NEW BEAUTY!!
*For the new Ford.*
New Body lines and colours.
Rustless steel for Exposed metal part,
Fully Enclosed, silent six brake system
Four Houdaille Hydraulic double-acting shock absorbers Triplex shatter-proof glass windshield
Quick acceleration ease of cantrol
55 to 65 miles an hour Smoothness, balance and security at all speeds
unusual number of ball bearings.
40 different kinds of steel
Typical Ford Ecomony, reliability and long life

**Good Dealer service after you buy the Car.**
**A Wonderful Hill climber !!!**

Easy instalment terms if you prefer
For Demonstration & other particulars
*Plese pply to:—*

**S. Sunder Rau,**
Sole Ford Dealer forcoorg,
24—16 MERCARA.


## ಸೂಚನೆ.

ಚಂದಾ ಹಣವನ್ನು ಮುಂಗಡವಾಗಿ ಪಾವತಿ ಮಾಡದವರಿಗೆ ಪತ್ರಿಕೆಯು ಬರುವ ವಾರದಿಂದ ನಿಲ್ಲಿಸಲಾಗುತ್ತೆ. ಆದ್ದರಿಂದ ಈ ಪತ್ರಿಕೆ ತಲಪಿದ ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇವೆ. [ಸ.


## ಔದ್ಯೋಗಿಕ ಶಿಕ್ಷಣ.

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲಿಜು ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲಿಯುವ ಸರಸ್ತಶಿಕ್ಷಣ ಕೊಡುತ್ತೇವೆ ಫಕ್ಕ ಕಟಿಂಗ ಮುಂದಕ ಎರಡು ತಿಂಗಳ ಮತ್ತು ಟೇಲರಿಂಗ ಮುಂದಕ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ಕ ಕಟಿಂಗ ಮತ್ತು (ಪಿವತ್ತೈದು) ರೂಪಾಯಿ ಮತ್ತು ಟೇಲರಿಂಗ ಪೀ ೧೫ (ಪದಿನೈದು) ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ್ಠ ಐದಿಪ್ಪತ್ತು ರೂಪಾಯಿ ಗಳಿಸಬಲ್ಲನು ವಿಶೇಷ ಮಾಹಿತಿ ಪತ್ರಿಕ ಬೇಕಾದಲ್ಲಿ ಸವಿಸ್ತರ ಒಂದು ಆಣೆ ಸ್ಟಾಂಪ್ಸ್ ಬೆಕೇಟು ಕಳುಹಿಸಬೇಕು

ಆಂ. ಬಿ. ಮುಧೋಳಕರ್,
ಫರ್ಸ್ಟಕ್ಲಾಸ್ ಡಿಪ್ಲೋಮಿಸ್ಟ್ ಪೈನಿಪಾಲ,
52—7 ಧಾರವಾಡ.



## ಆಸ್ತ್ಮಾ ಕ್ಯೂರ್ (ನೇವಸಕ್ಕೆ ಚಿಕಿತ್ಸೆ.)

ಪ್ರಪಂಚದಲ್ಲಿರುವ ಮನುಷ್ಯ ಪ್ರಾಣಿಗಳಲ್ಲಿ ಆಸ್ತ್ಮಾ (ನೇವಸ)ವು ವಾಸಿಯಾಗದ ಪ್ರಾಣಿಯೆಂತ ಪ್ರತ್ಯೇಕ ವೈದ್ಯರು ಹೇಳಿದ್ದಾರೆ. ಇದು ಶ್ವಾಸಕೋಶದ ಪ್ರಾಣಿಯೆ ಆಗಿದ್ದಾಗ್ಯೆ ಬರುತ್ತದೆ ಬಂದಾಗ ಉಸಿರಾಡುವುದು ಕಷ್ಟ, ಎದೆಯಲ್ಲಿ ಸೀತ, ಕಫ, ಉಗುಳುವುದು, ಕ್ಷೀಣನಾಗುವುದು, ಆಲಸ್ಯ, ಕಾಲ ತಿನ್ನಲು ಅಪೇಕ್ಷೆ, ಗಂಟಲಿನಲ್ಲಿ ಗುರುಗುರು ಶಬ್ದ ಇತ್ಯಾದಿ ಸೂಚನೆಗಳು ಕಾಣುತ್ತವೆ ಆಸ್ತ್ಮಾ (ನೇವಸ)ವು ಮೂರು ತರದ್ದಿದೆ. ಹ್ಯಾಮರಿಕ್, ಕಂಜೆಸ್ಟಿವ್, ಸ್ಪಾಸ್ ಮೋಡಿಕ್ ಎಂಬ ಹೆಸರು ವಿಧ. ಸಾಧಾರಣವಾಗಿ ವಾಸಿಯಾಗಲಾರದ ಪ್ರಾಣಿಯೆಂದು ಹೇಳಿದವರೆಲ್ಲೇ ಈ ಪ್ರಾಣಿಯಲ್ಲಿಯೆ ತಪ್ಪಿದೋರುವುದು. ಕೆಲವು ವೇಳೆ ಚಾಲಕರಿಗೂ ಸಪ ಬರುತ್ತದೆ ಆದರೆ ಮಕ್ಕಳ ನೇವಸವು ಪ್ರಾಯ ಬಂದಂತೆ ಹೊರಟು ಹೋಗುತ್ತದೆ. ಹೆಂಗಸರಿಗಿಂತ ಹೆಚ್ಚಾಗಿ ಗಂಡಸುಗೇ ಬರುವುದು ರೂಢಿ.

ನಮ್ಮ ನೇವಸದ ಔಷಧಿಯು ವಿಸೂ ಕೇಡುಮಾಡದ ಮೂಲಿಕಗಳಿಂದ ತಯಾರಿಸಿದ್ದಾಗಿದೆ ಇದನ್ನು ಉಪಯೋಗಿಸಿದ ಅನೇಕ ಜನರು ವಾಸಿಯಾಗಿದೆ ತುರಿತವಾದ ಪರಿಪಾಠ ಕೂಡುತ್ತದೆ ಮತ್ತು ಪರಿಹಾರವು ಎಷ್ಟಾಯಂ ಆಗಿರುತ್ತದೆ ಪ್ರಾಣಿಯೆಯು ಸೂಚನೆಗಳೆಲ್ಲಾ ಹೊಟು ಹೋಗಿ ನೆಮ್ಮನಾಗುತ್ತದೆ. ರಕ್ತ ವಿಶ್ವವಾವ ಕಫ, ಕೈಕಾಲು ಕಣ್ಣು ಗಳಗಳುವಿಕೆ, ಉಸಿರು ಕಟ್ಟುವುದು, ಕಷ್ಟದಿಂದ ಉಸಿರಾಡುವುದು ಮುಂತಾದ ಸೂಚನೆಗಳು ಎಸಿಯು ಬರುವಾಗ ಮಂಬು ಹಾರಿಹೋದಂತೆ ಮಾಯವಾಗುತ್ತವ. ದೀರ್ಘ ಕಾಲದ ರೋಗದಲ್ಲಿ ಸಹ ಅದ್ಭುತ ಶಕ್ತಿಯುಳ್ಳದ್ದಾಗಿದೆ

ಬೆಲೆ:—30 ದಿವಸಗಳ ಉಪಯೋಗಕ್ಕೆ ಬೇಕಾದ 60 ಮಾತ್ರೆಗಳು ಇರುವ ಪೀಸಿಗೆ 10—0—0 ರೂ ಮಾತ್ರ.

ಮದನ ಕಾಮೇಶ್ವರಿ ಲೇಪ್ಯ ವರ್.

ಮದನ ಕಾಮೇಶ್ವರಿ ಲೇಪ್ಯವು ಶಕ್ತಿಕೊಡುತ್ತದೆ, ಎರ್ಯ ವರ್ಧಿಸುತ್ತದೆ, ಯೌವನವು ಸದೆದು ಮೋಗದಂತೆ ಮಾಡುತ್ತದೆ, ಶುಕ್ಲ ಸ್ಖಲನವನ್ನು ನಿಲ್ಲಿಸುತ್ತದೆ, ಸಂಪೂರ್ಣ ಸಂಭೋಗ ಸುಖವನ್ನು ಕೊಡುತ್ತದೆ. ಅನೇಕರು ಈ ಪದ ಔಷಧಿಯಾಗಿದೆ. ಶಕ್ತಿವರ್ಧಕ, ಶಕ್ತಿಶೋಧಕ ಶಕ್ತಿಗಳನ್ನು ಸಹ ಕೊಡುತ್ತದೆ.

ಬೆಲೆ:— 24 ತೊಲೆಯ ಜಾಡಿ ಸೇರಿಗೆ ರೂ ೨—೦—೦

ದಿ ಆಲ್ ಇಂಡಿಯಾ ಆಯುರ್ವೇದಿಕ್ ಫಾರ್ಮಸಿ,
ಪೋಸ್ಟ್ ಬಾಕ್ಸ ನಂ. 159. ಮುಂಬ್ರಾಸು.



12 bore Victo.
**Mahomedan**
ARMS & AMMUNITION
321 Abdul Rehman Street.
52 52 BOMBAY. 3


## ವರ್ತಮಾನ ಸಂಗ್ರಹ.

### ಒಳದೇಶ.

ಕುಂದದ ಬೊಟ್ಟಿನ ಹಬ್ಬವು ಈ ವರ್ಷ ಶಾಂತ ರೀತಿಯಲ್ಲಿ ನಾಡಿಸಲ್ಪಟ್ಟಿತ್ತೆಂದು ತಿಳಿಯುತ್ತೇವೆ.

ಕೋಪರೇಟರ್ಸ್ ದಿವಸವನ್ನು ಕೊಡಗು ದೇಳದ ಎಲ್ಲಾ ಕಡೆಯಲ್ಲಿಯೂ ಸಡಕಾರಿಗಳು ಕಳೆದ ತಾ 1ರಲ್ಲಿ ಆಚರಿಸಿರುತ್ತಾರೆ.

ಕೊಡಗು ನ್ಯಾಯವಿಧಾಯಕ ಸಭೆಯು ವಿಟಿಂಗ್ ಈ ತಾ. 10ನೇ ದಿನ ಪೂರ್ವಾನ್ನ 11 ಗಂಟೆಗೆ ಆಗುತ್ತದೆಂದು ಕೊಡಗು ಗವರ್ನಮೆಂಟಿನಲ್ಲಿ ಪ್ರಕಟವಾಗಿದೆ.

ದಕ್ಷಿಣ ಕೊಡಗಿನ ಪೊನ್ನಪೆಟ್ಟಿಲ ಹಾಕಿ ಟೀರ್ನಮೆಂಟಿನವರು ತಾ 5 6 ನೇ ತಾರೀಕು, 7ರಲ್ಲಿ ಪೊನ್ನಂಪೇಟೆಯಲ್ಲಿ ತಮ್ಮ ಪಂದ್ಯಾಟವನ್ನು ಆಡುತ್ತಿರುವರು.

ಕಳೆದ ತಿಂಗಳಲ್ಲಿ 299 ಜನನವೂ, 299 ಮರಣವೂ ಕೊಡಗಿನಲ್ಲಿ ಉಂಟಾಗಿವೆ ಈ ಪೈಕೆ ಮಲೇರಿಯಾ ರೋಗದಿಂದ ಸತ್ತವರು 181 ಜೀರೆ ಜ್ವರದಿಂದ ೨೦

ನಾಪೋಕ್ಲು ಪಾಮುಸತ್ರಂಗಣದ ಮೆ ಯಂ ಯನ್ ಗುಂಡುರಾಯ ಅಗನ ಪಾರನೇ ಕ್ಲಾಸಿನ ವೆಟರ್ನೆರ್ಟರ ಅಧಿಕಾರವನ್ನು ಚೀಫ್ ಕಮಿಷನರವರು ಕೊಟ್ಟಿರುತ್ತಾರೆ

ಸತ್ಯಾಗ್ರಹಿಗಳ ಕೈಕೆ ಕೊಡಗು ತಾ 1ರಲ್ಲಿ ಕಾರ್ಯೋ (ಸರಂಭವಿನಲ್ಲಿಯೂ, 2ರಲ್ಲಿ ಗೋಣಿಕೊಪ್ಪಲ್ಲಿಯೂ, 3ರಲ್ಲಿ ವಿರಾಜಪೇಟೆಯಲ್ಲಿಯೂ, 5ರಲ್ಲಿ ವೀರಾಜಪೇಟೆಯಲ್ಲಿಯೂ ವಿಗ್ರಹ ನಡೆಸಿರುತ್ತಾರೆ

ವೀರಾಜಪೇಟೆ ಹೋಬಳಿ ಮುನಿಸಿಪಲಿಟಿಯ ಮೆ. ಯಂಡ ಕಾಳಪ್ಪನವರನ್ನು ಚೀಫ್ ಕಮಿಷನರವರು ಎಕ್ಸ್ಟ್ರಾ ಕ್ಲಾಸಿನಿಂದ ಕೂಡಿದ ಅಧಿಕಾರದ ಸಭಾ ಮೇಜಿಸ್ಟ್ರೇಟರಾಗಿ ನೇಮಿಸಿರುವರು.

ತಾ 6—11—30ರಲ್ಲಿ ಮಿಸ್ಸ್ ಕೂಡುರೆ ತಿಮ್ಮಯ್ಯನವರ ನಾವು, ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಲಕ್ಷ್ಮಿನಾರಾಯಣ ಸ್ವಾಮಿ ಬ್ರಹ್ಮರ್ಥ ರಥೋತ್ಸವವು ಒಳ್ಳೆ ವಿಜೃಂಭಣೆಯಿಂದ ನಡೆಯಿತು.

ಕೆದ ವಾರದಲ್ಲಿ ಹುದುಕೇರಿ, ಬೆಟ್ಟಕೇರಿ, ಭಾಗಮಂಡಲ್ಲಿ ಸುಂಟಿಕೊಪ್ಪ ನಾರಾಮಿ ಆಗುಗಳಲ್ಲಿನ್ನು ಕಂತು ಕಟ್ಟಡ್ಡಿಗೆ ಕೊಡಗು ಕರಾಜು ಮಾಡಿದ್ದಲ್ಲು ದೊರೂ ತೆಗೆದುಕೊಳ್ಳುವುದು ವರ್ತಮಾನ.

ವ್ಯ. ಯಂ. ಕುತಾಲಪ್ಪನವರ ಬದಲಿಗೆ ಎಸ್ಟ್ಟೇಟ್ ಅಸಿಸ್ಟೆಂಟ್ಸ್ ಕಲೆಕ್ಟರವರಾಗಿ ಮೆ. ಹೆಚ್ ಇ. ಬ್ರವುನ್ ಎಂ ಎವರು ನೇಮಕಮಾಡಲ್ಪಟ್ಟಿರುತ್ತಾರೆ ಮೆ ಕುತಾಲಪ್ಪನವರು ಮಡಿಕೇರಿಗೆ ವರ್ಗಮಾಡಲ್ಪಟ್ಟಿದ್ದಾರೆ

ಕಳೆದ್ದಾ 1 ಮತ್ತು 2ರಲ್ಲಿ ವೀರಾಜಪೇಟೆಯಲ್ಲಿ ಕೊಡಗಿನ ವಿದ್ಯಾರ್ಥಿಯಿಂಗಳ ಸಹಕಾರ ಸಂಘದ ಕಾನ್ ಫರೆನ್ಸ್ ಸಭೆಗಳು ರಬಿನ್ಸ್ಟ್ರಾರವರಾದ ಮೆ. ಯಂ. ಯನ್. ಮಂಗಳವರ ಅಧ್ಯಕ್ಷತೆಯಲ್ಲಿ ನಡೆಯುತು.

Printed for "Kod

ಎಕ್ಸೈಸ್ ಇನ್ಸ್‌ಪೆಕ್ಟರ ಕೆಲಸವು ಪೊಲೀಸ್ ಇಲಾಖೆಯಂತೆ ಪಾರು ಪತ್ಯಗಾರರಾದ ಮೇ. ಯನ್ ಸಿ ಸುಬ್ಬೈಷ್ಯನವರಿಗೆ ಆಗುತ್ತಿತ್ತೆಂದೂ, ಫೋನ್ಸಂಪೇಟೆಗೆ ಪಾರುಪತ್ಯಗಾರರಾಗಿ ಮೆ ಏ. ಎಂ. ಅಸ್ಪಜ್ಜನವರು ನೇಮಿಸಲ್ಪಡುವರೆಂದೂ ವರ್ತಮಾನ.

ಫೋನ್ಸಂಪೇಟೆಯಲ್ಲಿ ಮುಚ್ಚಲ್ಪಟ್ಟ ಸೇಂದಿ ಅಂಗಡಿಯು ಪುನಃ ತೆರೆಯಲ್ಪಟ್ಟಿದೆಯೆಂತಲೂ, ಗೋಣಿಕೊಪ್ಪಲು ಕಡೆಯಿಂದ ವಿಪರೀತ ಸೇಂದಿಯು ಫೋನ್ಸಂಪೇಟೆಗೆ ಹೋಗುವುದೆಂದೂ ಫೋನ್ಸಂಪೇಟೆಯ ಜನ್ಲು ಬಾಕ್ಕಿದಾರರು ತಿಳಿಸಿದ್ದಾರೆ.

ದನಗಳಿಗೆ ಗಂಟ್ಲುಕಟ್ಟುವ ರೋಗದ ದೆಸೆಯಿಂದ ಹತ್ತು ಗಟ್ಟು, ನಾಲ್ಕೇರಿ ಹುಲ್ಲುಗಾವಲಿನ ಫಾರೆಸ್ಟು ಮುಚ್ಚಲ್ಪಟ್ಟಿದೆ. ಕುಟ್ಟ, ಮೂರ್ಕಲ್ಲಿಗಾಗಿ ಫಾರೆಸ್ಟಿಗೆ ಹೋಗುವ ದಾರಿ ಜೂನ್‌ವಾರಗಳಿಗೆ ಬಂದಾಗಿದೆಯೆಂದು ಗಜಟ್ಟಿನಲ್ಲಿ ಪ್ರಕಟವಾಗಿರುತ್ತದೆ.

ಮುನ್ಸೀಫರಾದ ಮೆ. ಕೊರಪಂಡ ಮುತ್ತಣ್ಣ ಬಾರ್. ಎಟ್-ಲಾ ರವರ ಮಗ ತಿಮ್ಮಯ್ಯನವರು ಬೆಂಗಳೂರಿನಲ್ಲಿ ನಡೆದ ಇಂಟರ್ ಸ್ಕೂಲ್ಸ್ ಸ್ಪೋರ್ಟ್ಸ್‌ನಲ್ಲಿ 440 ಗಜ ಓಡುವುದರಲ್ಲಿ ಇಡೀ ಹಿಂದೂದೇಶದಲ್ಲಿ ಒಂದನೆಯಿಗಿಂತ I ನಿಮಿಷ ಕಮ್ಮಿ ಬರಿ ಜಯಶೀಲರಾಗಿರುವರೆಂದು ತಿಳಿಸಲು ಸಂತೋಷ ಪಡುತ್ತೇವೆ

ಕೊಡಗಿನ ಸತ್ಯಾಗ್ರಹಿಗಳು ಶಾಂತರೀತಿಯಿಂದ ತಿನ್ನು ತಿ, ಶ್ರೀಮಂಗಲ, ಹುದಿಕೇರಿ, ಫೋನ್ಸಂಪೇಟೆ, ಗೋಣಿಕೊಪ್ಪಲು, ವಿರಾಜಪೇಟೆ, ಅಮ್ಮತ್ತಿ, ಸುಬ್ರಹ್ಮಣ್ಯ ಮೊದಲಾದ ಸ್ಥಳಗಳಲ್ಲಿ ಪಿಕೆಟಿಂಗ್ ಮಾಡುತ್ತಲಿದ್ದಾರೆ. ಒಡನೆ ಸಿದ್ದಾಪುರ, ನಾಪೋಕ್ಲು, ಮೂರ್ನಾಡು ಮೊದಲಾದ ವ್ಯಾಪಾರ ಕೇಂದ್ರಗಳಲ್ಲಿ ಹೊಸ ಕೇಂದ್ರ ತೆರೆಯುವರೆಂದು ವರ್ತಮಾನ ಈ ಗಾಗಲೇ ಅವರ ಸಂಖ್ಯೆಯು 95ರ ಪರಿಗಿದೆಯೆಂದು ತಿಳಿಸಲಾಗಿದೆ

ಈ ತಾ. 10ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಹೊಸ ಚೀಫ್ ಕಮಿಷನರರವರು ದರ್ಬಾರು ಮಾಡುವರಾಗಿಯೂ, ರಾವ್‌ಬಹದ್ದೂರ್ ಟೈಟಲ್ಲನ್ನು ಪಿ. ಪಟ್ಟಮಾಡಿ ದೇವೈಯ್ಯನವರಿಗೂ, ಕೈಸರಿ ಹಿಂದೀ ಮೆಡಲುಗಳನ್ನು ಎಸ್‌ಸಿ ಕೊಡುವೇರ ಸೀತಮ್ಮ, ತಿಮ್ಮೈಯ್ಯನವರಿಗೂ, ರಾವ್‌ಸಾಹೇಬ್ ಟೈಟಲ್ಲನ್ನು ಮೆ. ಸಬಿಡೀರಿಯಂದ ಕಾಳಪ್ಪನವರಿಗೂ ಕೊಡುತ್ತಾರೆಂದು ತಿಳಿಯುತ್ತೇವೆ. ದರ್ಬಾರಿಗೆ ಹೋಗಲಿಕ್ಕೆ ಅವಕಾಶ ಇರುವವರು ಟೆಕೆಟಿಗೆ ಮುಂದಾಗಿ ಆರ್ಡರ್ ಪ್ರಕಾರ ಬರಕೊಳ್ಳಬೇಕಾಪ್ತ ಎಂದು ತಿಳಿಯುತ್ತೇವೆ

1919ನೇ ಇಸವಿಯ ಫೈನಲ್ ಯುದ್ಧವು ಮುಗಿದು ಇಂದಿಗೆ ಬರೋಬ್ಬರಿ ನಿನಗೆ ಆರ್ಮ್‌ಸ್ಟಿಸ್ (Armistice) ಎಂದು ಹೆಸರು ಪಡೆದಾಗಿದೆ ಆವತ್ತಾ ದಿನವು ಈ ತಾರೀಕು 11ನೇ ದಿನ ಪೂರ್ವಾಹ್ನ 11 ಗಂಟೆಗೆ ಆಗಬೇಕಾಗಿದೆ ಸದರಿ ದಿನವನ್ನು ಎಲ್ಲರೂ ವಾರ್ತಾನೆಯಿಂದ ಆಚರಿಸುವಂತೆಯೂ, ಸದರಿ 11 ಗಂಟೆಯ ಸಮಯದಲ್ಲಿ ಎಲ್ಲರು ನಿಮಿಷ ಎಲ್ಲಾ ಕರ್ತಾರ ಇರಬೇಕೆಯವರು ಕೆಲಸ ಬಾಕಿ ಮಾಡಿ ಮೌನ ವ್ರತವನ್ನು ತಳಿದೇ ತಂತಲೂ, ಈ ಸಮಯಕ್ಕೆ ಎಲ್ಲಾ ಕಾರ್. ಬಸ್ಸ್ ವಗೈರೆ ಜನರ ಸಂಚಾರವನ್ನು ನಿಲ್ಲಿಸಬೇಕೆಂತಲೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಹಿಂದೂದೇಶದ ಪೌರ್ಕಾರಕ್ಕೆ ತಿಳಿಸಿರುವರೆಂದು ನಮಗೆ ತಿಳಿಸಿರುತ್ತಾರೆ.

---

## ಹಿಂದೂದೇಶ.

ತಲಕಕ್ಕದ ಮೇಯರಾಗಿದ್ದ ಸರ್‌ಗುಪ್ಪರ ಪಶ್ಚಿಯವರಿಗೆ ದೆಹಲಿಯಲ್ಲಿ 4 ತಿಂಗಳು ಸಾದಾ ಸಜವು ವಿಧಿಸಲ್ಪಟ್ಟಿದೆ.

ಕಾಂಗ್ರೆಸಿನ ಅಧ್ಯಕ್ಷರಾದ ಸಂಜೀವ ಒವಾಹಿರ್‌ಲಾಲ್ ನೆಹರುರವರಿಗೆ ರಾಜದ್ರೋಹದ ತಿಕ್ಕಗಾಗಿ ಎರಡು ವರ್ಷದ ಕಠಿಣ ಸಜವನ್ನು ವಿಧಿಸಲಾಗಿದೆ

ಗುಜರಾತಿನ ಸರದಾರರಾದ ವಲ್ಲಭಭಾಯಿ ಪಟೇಲರನ್ನೂ, ಹಿಂದೂಸ್ಥಾನದ ಸೇವಾದಳದ ದಳವಾಯಿಯಾದ ಡಾಕ್ಟರ್ ಹರ್ಡೀಕರವರನ್ನೂ ಬೈಲಿನಿಂದ ಬಿಟ್ಟಿರುವರು.

ಇಂಗ್ಲೆಂಡಿನಿಂದ ಇಂಡಿಯಕ್ಕೆ ಬರುತ್ತಿರುವ ಸಾಮಾನುಗಳು ಕೇಳದ 50/ರಷ್ಟು ಕಡಿಮೆಯಾಗಿದೆಯೆಂದು ಇಂಡಿಯಾದ ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಜೋಕು ಮಾಡಿರುವರು.

ನಮ್ಮ ಹಕ್ಕವರ್ಕಿಯವರು ಳೆಳೆದ ವಾರ ಪಾರ್ಲಿಮೆಂಟ್ ಸಭೆಯನ್ನು ತೆರೆದಾಗ ಹಿಂದೂಸ್ಥಾನದ ಪ್ರಸ್ಥಾಪದಲ್ಲಿ ಸೈಮನ್ ವರದಿಯ ವಿಷಯವಾಗಿ ಬಹಳ ಮಾತು ಹೇಳಿರುವುದಿಲ್ಲ.

ಕಳೆದ ವಾರದಲ್ಲಿ ಮದ್ರಾಸು ಪ್ರಾಂತ್ಯದ ತಂಜಾವೂರು ಜಿಲ್ಲೆಯಿಂದ ಎರಡರಾತ್ರಿ ಅನೇಕ ಕಡೆಗಳಲ್ಲಿ ವಿಪರೀತ ಮಳೆಯಾಗಿ ರೈಲ್ ರಸ್ತೆಗಳಿಗೂ ಮತ್ತು ಗ್ರಾಮಗಳಿಗೂ ಬಹಳ ನಷ್ಟವುಂಟಾಗಿವೆ.

ವಲ್ಲಭಾಯಿ ಪಟೇಲರು ಮತ್ತು ಮಹಾತ್ಮಗಾಂಧಿಯವರ ಪುತ್ರರೆತ್ತರಿಯರಾಗಿದ್ದ ಮಹದೇವ ದೇಸಾಯಿಯವರು ಇತ್ತೀಚೆಗೆ ಅಲ್ಲಾಹಾಬಾದಿಗೆ ಹೋಗಿ ಪಂಡಿತ ಮೋತಿಲಾಲರ ಸಮಾಧಿಯನ್ನು ನೋಡಲಿಕ್ಕಿರುವಂತೆ.

ಪಂಡಿತ ಜವಾಹರ್‌ಲಾಲರಿಗೆ ಪುನಃ ಕೈದು ಮಾಡಿದ್ದ ದಿನ ಜವಾಹರ ದಿವಸವನ್ನು ಈ ತಾ. 16ನೇ ಆದಿತ್ಯವಾರ ಅಖಿಲ ಭಾರತದೇಶದಲ್ಲೆಲ್ಲಾ ಆಚರಿಸಬೇಕೆಂದು ಕಾಂಗ್ರೆಸ್ ಸಮಿತಿಯವರು ನಿರ್ಣಯಿಸಿರುತ್ತಾರೆ.

ಕರ್ನಾಟಕಕ್ಕೆ ತಿಲಕ ಪ್ರಾಯರಾದ ಶ್ರೀಮಾನ್ ರಂಗನಾಥ ದಿವಾಕರರವರು ಳೆಳೆದ ಶನಿವಾರ ಬೈಲಿನಿಂದ ಬಿಡುಗಡೆ ಮಾಡಲ್ಪಟ್ಟಿರುವರು ಕೂಡಲೇ ಬೆಳಗಾಂಪಟ್ಟಿದ ಜನರು ದೊಡ್ಡ ಸಭೆ ಸೇರಿಸಿ ಅವರಿಗೆ ಸ್ವಾಗತವನ್ನಕ್ಕಿದಲ್ಲದೆ ಒಂದು ಮಾನಪತ್ರವನ್ನು ಸಹ ಒಪ್ಪಿಸಿದರು.

ರಾಂಡಾಟೀಬರ್ ಕಾನ್‌ಫರೆನ್ಸ್ ಈ ತಾರೀಕು 12 ರಲ್ಲಿ ಇಂಗ್ಲೆಂಡಿನಲ್ಲಿ ಕೂಡಲಿಕ್ಕೆ ವಜಾರಾಬಾಗುವುದಷ್ಟೆ. ಅದೇ ದಿನ ಹಿಂದೂ ರಾಜಕೀಯ ಕೈದುಗಳನ್ನೆಲ್ಲಾ ಬಿಡುವೆರೆಂದೂ, ಪುನಃ ಕಾಂಗ್ರೆಸ್ ಮುಂದಾಳುಗಳೊಡನೆ ರಾಜಿನಿಧಾನಕ್ಕೆ ಸುರುವಾಡುತ್ತಿರುವರೆಂತಲೂ ಬಲವಾದ ಸುದ್ದಿಯಿದೆ.

ಹಿಂದೂದೇಶದ ಪತ್ರಿಕೆಗಳಲ್ಲಿ ಈಗಾಗಲೇ ರಾಜಕೀಯ ಕೈದುಗಳು 60,000ಕ್ಕೆ ಏಳುವರಷಿಂದು ತಿಳಿಯುತ್ತೇವೆ. ಈ ಜೆಗೆ ಇಂಡಿಯಾದ ಸೆಕ್ರೆಟಿಯವರು ಪಾರ್ಲಿಮೆಂಟಿನಲ್ಲಿ ಪ್ರಶ್ನೆಗೆ ಜವಾಬಾಗಿ ಅಂಡಿಸಾತ್ಯಕ್ಕೆ ಒಳಪಟ್ಟು ರಾಜಕೀಯ ಕೈದುಗಳ ಸಂಖ್ಯೆಯು ಬೈಲಿನಲ್ಲಿ 23,135 ಇದೆಯೆಂದು ಹೇಳಿದ್ದಾರೆ.

ನೆತ್ಯಾಗ್ರಹ ಜನಗಳಲ್ಲಿ ಬಂಗಾಳ ಪ್ರಾಂತ್ಯದಲ್ಲಿ ಈ ವರೆಗೆ 14 000 ಜನರು ಬೈಲಿಗೆ ಹೋಗಿರುವರೆಂದೂ, ಸರದೇಶ ಒಟ್ಟಿಯ ಪತ್ರ. ಕಡಿಮೆಯಾಗಿದೆಯೆಂದೂ. ಈಗಾಗಲೇ 3 ಕೋಟಿ ರೂ ಬೆಲೆ ಬಾಳುವ ಒಟ್ಟಿಗಳ ಮೂಟೆಗಳನ್ನು ಯಾರೂ ತೆಗೆದುಕೊಳ್ಳದೆ ಬಂದರದಲ್ಲಿ ಬಿದ್ದಿದೆಯೆಂದೂ ಪತ್ರಿಕೆಗಳಿಂದ ತಿಳಿಯ ಬರುತ್ತದೆ

ಬಂಗಾಳದಲ್ಲಿ ಸುಒಳಪುರ ಜಿಲ್ಲೆಗೆ ಸೇರಿದ ಜಾತವಾಲಿ ಎಂಬಲ್ಲಿ ಒಬ್ಬ ಮೊಟಗಾರನು ದೇವಿಯನ್ನು ಪ್ರಸನ್ನ ಮಾಡಿಕೊಳ್ಳುವ ಬಗ್ಗೆ ಒಂದೇ ಪೆಟ್ಟಿಗೆ ಒಬ್ಬ ಹುಡುಗನ ರುಂಡವನ್ನು ಹಾರಿಸಿ ಒಳಿಕೊಟ್ಟನು ದೇವಿಯು ಪ್ರಸನ್ನ ವಾಗಲಿಲ್ಲ. ತಾನು ಒಳಿಯ ಜೊತೆಗೆ ಹೋಗುವ ಒಳಿಯನ್ನು ಸಾಕ್ಷಿ ಮೈಮೇಲೆ ಹಾಕಿಕೊಂಡನು

ಕಾಂಗ್ರೆಸ್ ಅಕ್ಟಿಂಗ್ ಪೈಸಿಡೆಂಟರಾದ ಮತ್ತು 4 ಸಲ ಳಕ್ಕತ ಮುನ್ಸಿಪಾಲಿಟಿಯ ಮೇಯರಾಗಿದ ಸೇನಗುಪ್ತರನ್ನು ಅ ಮೈತಕರದಲ್ಲಿ ರಾಜದ್ರೋಹದ ತಪ್ಪಿಗೆ ದಸ್ತಗಿರಿ ಮಾಡಿ ದೆಹಲಿಗೆ ಕರದು ಒಂದು ವರ್ಷದ ಸಾದಾ ಸಜೆ ವಿಧಿಸಿದರು. ಅದೇ ದಿನ ತರ ಪತ್ರಿಯವು ದೆಹಲಿಯಲ್ಲಿ ಕಾಶೂನನ್ನು ಉಲ್ಲಂಘಿಸಿದ್ದಕ್ಕಾಗಿ ಅವರನ್ನು ದಸ್ತಗಿರಿ ಮಾಡಿರುವರು

ಬೊಂಬಾಯಿ ಗವರ್ನರ ಕಚೇರಿಗೆ ನಾಲ್ವರು ವಾಲಂಟಿಯರುಗಳು ಹೋಗಿ ಪ್ರತಿಯೊಬ್ಬ ಚಾಕರನ ಮೇಜಿನು ಮೇಲೆ ನಿಂವೆಲ್ಲರೂ ಸೆಕರ್ಟರ ಕೆಲಸವನ್ನು ಬಿಡಿರೀ ಎಂದು ಮುದ್ರಿಸಿದ ಪತ್ರಿಕೆಗಳನ್ನಿಟ್ಟು ಹೋದರು. ಸ್ವಯಂಸೇವಕರು ಅಲ್ಲಿಯೇ ಹೋಮ್ ಮೆಂಬರಾದ ತಾಲ ಸೇನ್ ಸಾಹೇಬರು ಬಂದಿದ್ದಾರೋ ಎಂದು ಕೇಳಿದರು. ಇವರನ್ನು ಕೂಡಲೇ ಪೋಲೀಸಿನವರು ದಸ್ತಗಿರಿ ಮಾಡಿದರು

ಜಸ್ಟಿಸ್ ಪಾರ್ಟಿಯ ಮುಂದಾಳಾದ ವಿವಾಸ್‌ಬಹದ್ದೂರು ಮುನಿನಾಮಿ ನಾಯುಡುವರನ್ನು ಮದ್ರಾಸಿನ ಮುಖ್ಯ ಮಂತ್ರಿಯಾಗಿ ಆರಿಸಲ್ಪಟ್ಟಿರುವರು. ಇವರು ಬ್ರಾಂಹಿತರಾಗಿ ಕಮಟೆ ಮೊದಲಾಗಿ ಕೂಡಗಿಗೆ ಳಳೆದ ಎಲ್ಲೆಸ್ ತಿಂಗಳಲ್ಲಿ ಬಂದಿದ್ದರು. ಅಲ್ಲದೆ ರಾಜಾಸೀಟಿನಲ್ಲಿ ಒಂದು ದೊಡ್ಡ ಭಾಷಣ ಮಾಡಿ ಕೊಡಗು ದೇಶದ ರತ್ನಜ್ಯಭಾರ ಕೃಷಿಯ ವಿಷಯ ಪ್ರಸ್ತಾಪಿಸಿ ಟ್ರಾಕ್ಟರಿಗೆ ಅಂದರೆ ಹಿಂದುಬಿದ್ದಿರುವ ಪ್ರಾಯಾಗಾರ ಜನರಿಗೆ ಕಕ್ಕದ್ದಿದೆಯೆಂದು ಹೇಳಿದ್ದು ಎಲ್ಲರ ಜ್ಞಾಪಕದಲ್ಲಿರಬಹುದು.

ಬೊಂಬಾಯಿಯಲ್ಲಿ ಒಬ್ಬ ಪೋಲೀಸು ಸಾರ್ಜಂಟನು ಮತ್ತು ವಿಜಾರೋ ಎಂಬೊಬ್ಬ ಕಾನ್ಸ್‌ಟೇಬಲನು ಅಕಾಪಿನಲ್ಲಿರುವ 22 ಜನ ಸ್ತ್ರೀಯರಿಗೆ ಮಧ್ಯರಾತ್ರಿಯಲ್ಲಿ ಹೋಗಿ ಏನೇನೋ ನಾಚಿಕೆಗೇಡಿನ ಮಾತುಗಳನ್ನಾಡಿದುದ್ದಕ್ಕಾಗಿ ಸ್ತ್ರೀಯರು ನೂನಪನ್ನು ರಕ್ಷಿಸಲು ಮುಂದಿನ ವರ್ತಾಮಾ ಮಾಡುವ ಬಗ್ಗೆ ಮತ್ತು ಈ ವಿಷಯವನ್ನು ಸಂತಾಪದ ಅಧಿಕಾರಿಯ ಕೆಲಸ ಬೊಂಬಾಯಿಯ ಎಲ್ಲಾ ಪಾರ್ಟಿಯ ಮುಖಂಡರುಗಳೂ, ಸಂಘಸಂಸ್ಥೆಗಳೂ ಈ ಕಾರೀಕು 16 ರಲ್ಲಿ ಪಬ್ಲಿಕ್ ಮಿಟಿಂಗ್ ಮಾಡಿ ಈ ಅತ್ಯಾಚಾರವನ್ನು ಬಾರಿಸಿರಿಕ್ಕಿರುವರು.

ಹಿಂದೂದೇಶದ ರಾಂಡಾಟೀಬರ್ ಕಾನ್‌ಫರೆನ್ಸ್‌ಗೆ ಹೋದ ಪ್ರತಿನಿಧಿಗಳನ್ನು ಸಿಕಾಂಡಿನಲ್ಲಿ ಆದ ಆದರೂನ

ವಸಾಹತು ಮಂತ್ರಿಗಳು (ಆಂಡ್ರಿ, ಕೆನಡಾ, ಆಸ್ಟ್ರೇಲಿಯಾ, ಆಫ್ರಿಕಾ, ಏರ್‌ಲೆಂಡ್ ಮೊದಲಾದ ದೇಶದವರು) ಇಂಗ್ಲೆಂಡಿನಲ್ಲಿ ಮುಖ್ಯ ಮಂತ್ರಿಗಳೊಳಗೆ ಸುಂತಕಗಳ ವಿಷಯದಲ್ಲಿ ವಿಚಾರಿಂಗ್ ನಡೆಸುತ್ತಿರುವರು ಹಿಂದೂದೇಶದಿಂದ ರಾಂಡಾಟೀಬರ್ ಕಾನ್‌ಫರೆನ್ಸಿಗೆ ಹೋದ ಮಹನೀಯರುಗಳೂ, ವಸಾಹತು ಮಂತ್ರಿಗಳಿಗೂ ಕಾರ್ಯಯನ್ನಿನ ವಿಷಯಗಳ ಪುರ ಶನವನ್ನು ನೋಡಲಿಕ್ಕಾಗಿ ಆಮಂತ್ರಣವಿತ್ತು ಮುಖ್ಯ ಪ್ರಧಾನರಾದ ಮೆಕ್ಡೋನಾಲ್ಡರು ವಸಾಹತು ಮಂತ್ರಿಗಳನ್ನು ಎದುರುಗೊಳ್ಳುವುದರಲ್ಲಿಯೂ, ಆದುಸಿವುದರಲ್ಲಿಯೂ ವಿಶೇಷ ತೊಂದರೆ ತೆಗೆದುತೊಂಡು ಅವರಿಲ್ಲ ಊಟ ಸಾನರ ವಗೈರೆ ಬಹಳ ಆಡುಬರದಿಂದ ಕೊಟ್ಟರು.

ಅವರೆ ಹಿಂದೀ ಪ್ರತಿನಿಧಿಗಳನ್ನು ಕೇಳುವ ದಿಕ್ಕೇ ಇಲ್ಲ ದಾಯಿತು. ಇವರಿಗೆ ಕೂಲಿಕಾಮ್ಕ ಸಹ ಜಾಗವಿಲ್ಲದೆ ಬಂದು ಸ್ವಂತದಲ್ಲಿ ಎರಡು ಗಂಟೆಯ ಕಾಲ ಚಳಿಗಾಳಿಯಲ್ಲಿ ಹೊಟ್ಟೆಗೇನೂ ಇಲ್ಲದೆ ನಿಂತು ಕಾಕಾಯಿತು. ಕಡೇಗಾಲಕ್ಕೆ ಒಬ್ಬರು ಕಾಗೆಗಳಿಗೆ ಕೊಡುವಂತೆ, ಕಲವು ಸೊಟ್ಟಿಯ ಜೂರುಗಳನ್ನು ಕೊಟ್ಟರು. ಇಂಗ್ಲಿಷ್ ಪ್ರಧಾನ ಮಂತ್ರಿಗಳು ಇವರ ಮುಂದೆ ಆಗಾಗ್ಗೆ ಹೋಗುತ್ತಿದ್ದರೂ ಮಾತಾಡಿಸಲಿಲ್ಲ. ಇನ್ನೊಬ್ಬ ಗುಪ್ತಸಂಸ್ಥೆಯಾ ನಾಗವುದಾದ ಗವರ್ನರಾಗಿದ್ದ ಮೇ ಕಾಂಬೆಯವರಿಗೆ ನಿಮಗೆ ಇಂಗ್ಲಿಷ್ ಬರುತ್ತದೆಯೋ ಎಂದು ಕೇಳಿದನು? ಈ ಅವಮಾನಗಳನ್ನು ರಾಜಕೀಯ ಮುಖಂಡರಾದ ಮೆ ಜಯಕರ್‌ರವರು ನೋಡುತ್ತಾ ನಿಂದ್ದರು. ಅನಂತರ ಸಿಟ್ಟಿನಿಂದ ಎಲ್ಲರೂ ತಮ್ಮ ವಾಸಸ್ಥಳಕ್ಕೆ ಬಂದರು. ಇದು ಮುಗಿದ ಬಳಿಕ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಆದ ಕಾರ್ಯಕ್ಕೆ ವ್ಯಸನವನ್ನು ತಮ್ಮ ಅಸ್ಸೈಂಟರ ಮೂಲಕ ಕಳುಹಿಸಿದರು.

ಅಲಹಾಬಾದಿನಲ್ಲಿ ಪಂಡಿತ ಜವಾಹರ್‌ಲಾಲರಿಗೆ 2 ವರ್ಷ ತಿಳ್ಳೆ ಮಾಡಿದ ಬಗ್ಗೆ ಒಂದು ವಾರದ ವರೆಗೆ ಜವಾಹರ್ ಶಾಲ್ ವಾರವೆಂಬುದಾಗಿ ಯೂವಾಗಲೂ ವೀರಘೋಷಣೆ, ಖಾದಿ ಪ್ರಚಾರ ವೈಗೈರೆ ರಾಷ್ಟ್ರೀಯ ಕೆಲಸಗಳನ್ನು ಮಾಡಲಿಕ್ಕೆ ನಿಶ್ಚಿಸಿರುತ್ತಾರೆ. ಈ ಸೆರೆಘೋಷಣೆಯು ತಾ. 26ರಲ್ಲಿ ಸಾಯಂಕಾಲ 4ಗಂಟೆಗೆ ಹೊರಟು ಹೋಗುವಾಗ್ಗೆ ಮೇಜೆಸ್ಟ್ರೇಟರು ನೆಕ್ಸ್ಟ್ 144 ನ್ನು ಪ್ರಯೋಗಿಸಿ ಮೆರವಣಿಗೆ ಹೋಗಕೂಡದೆಂದು ಕಡೆದರು. ರಾತ್ರಿ 10ಗಂಟೆಯ ವರೆಗೆ ರಸ್ತೆಯಲ್ಲಿಯೇ ಎಲ್ಲರೂ ಕೂತಿದ್ದರು. ಅನಂತರ ಪೋಲೀಸರು ಹೊರಟು ಹೋದರು. ಮೆರವಣಿಗೆಯು ಗೊತ್ತುಮಾಡಿದ ಜಾಗತಾಗಿ ಸಾಗಿ ಹಿಡಿದ ಕಾರ್ಯವನ್ನು ನಡೆಸಿದರು.

ಬೊಂಬಾಯಿಯಲ್ಲಿ ರಾಷ್ಟ್ರೀಯ ಧ್ವಜವಂದನೆಯನ್ನು, ಳೆಳೆದ ತಾರೀಕು 25 ರಲ್ಲಿ ಆಚರಿಸಿದರು. ಸುಮಾರು 50 ಸಾವಿರ ಜನರು ಇದರಲ್ಲಿ ಭಾಗಿಗಳಾಗಿದ್ದರು. ಶ್ರೀಮತೀ ಅರುಂಡಿಕಾಜಾಲಿಯವರು ಧ್ವಜವನ್ನು ಹಿಡುಕೊಂಡು ಮೈದಾನಕ್ಕೆ ಬಂದರು. ಪೊಲೀಸರು ಇವನ್ನು ಕತ್ತಿಮಾಡಲಿಕ್ಕೆ ತಯಾರಾಗಿ ಬಂದಿದ್ದರು ಧ್ವಜವನ್ನು ಕನಕೆಯ್ಯುವ ಬಗ್ಗೆ ಪ್ರಯತ್ನ ಪಟ್ಟರು. ಹಿಂದೂಸ್ಥಾನಿ ಸೇವಾದಳದ ಸ್ವಯಂ ಸೇವಕಿಯರು 22 ಜನರು ಸತ್ಯಲೂ ಕೋಟೆಗೆಟ್ಟು ಧ್ವನ್ಯಾಗಿ ನಿಂತರು. ಪೊಲೀಸರು ಹೊಡೆದು ಬಡಿದರೂ ಧ್ವಜಗೌರವವನ್ನು ಜಾತಿ ಇತರ ಕೆಲಸವನ್ನು ಪೂರೈಸಿದರು. ಸುಮಾರುಳ ಇನೂರು ಪೊಲೀಸಿನವರು ಅನೇಕಸಾರಿ ದೊಣ್ಣೆ ಪಹಾರಗಳನ್ನು ಜನರ ಮೇಲೆ ಮಾಡಿದರು. ಈ ಪ್ರಯತ್ನದಲ್ಲಿ ಸುಮಾರು 300 ಒಳಗೆಗೆ ಗಾಯವಾಗಿ ಆಸ್ಪತ್ರೆಯಲ್ಲಿರುತ್ತಾರೆ.

ಸಿಂಹಳದ್ವೀಪದಾದ್ಯಂತ ಜೈಲಿನಲ್ಲಿ ಹೆಚ್ಚುರುವಕ ಖಳಿಗಳನ್ನು ಧರಿಂದಂಧಾ ಜೈಲುವಾಸಕ್ಕೆ ಒಪ್ಪಿಸಲ್ಪಟ್ಟ ಮಹಿಳಾ ಸತ್ಯಾಗ್ರಹಿಗಳನ್ನು ಜೈಲು ಅಧಿಕಾರಿಗಳು ಕರೆದು ಕಮ್ಮಿ ರಾಂದ ಅಕ್ಕರ ಬಳೆಗೆನ್ನು ಕಕ್ಕಸಿಸದೆರಂದೂ, ಸ್ತ್ರೀಯರು ಮುಖ್ಯಿದತನದ ಸೂಚಕದ ಗುರುತನ್ನು ಹಾಳುಮಾಡುವಂತಾದಾಗಿ ಸ್ತ್ರೀಯರು ಬೇತಿ ಕೊಡುವೂ ಅಧಿಕಾರಿಗಳು ಳೆಳಲಿಲ್ಲವೆಂದೂ, ಅದಕ್ಕಾಗಿ ಆ ಎಂಗಳೆಲ್ಲರೂ ಉಪವಾಸವೆಂತಲೂ, ಇವಿಷಯ ಜೈಲ್ ಅಧಿಕಾರಿಗಳಿಗೆತಿಳಿಸುವರೆಂದೂ ಪತ್ರಿಕೆಗಳಿಂದತಿಳಿಯುತ್ತೇವೆ.

ಇಂಗ್ಲೆಂಡಿನ ಪ್ರಸಿದ್ಧ ಪತ್ರಿಕರ್ತನಾದ ಮತ್ತು ಲೇಬರ್ ಪಾರ್ಟಿಯ ಮುಖಂಡರ ಸೈಕೆ ಒಬ್ಬನಾದ ಮೆ. ಫ್ರೇಳಿಯಲ್ಸ್‌ಫರ್ಡ್ ಎಂಬವರು ಗುಜರಾತಿನಲ್ಲಿ ಳೆಳೆದ ಎಡುವಾರದಿಂದ ತೆರಳಿ ಜನರ ನಿಜವಾದ ಕಷ್ಟಸುಖವನ್ನು ತಿಳಿಯುತ್ತಿದ್ದಾರೆ. ಗುಜರಾತಿನ ಬಾರ್ಡೋಲಿ ತಾಲೂಕೇಕಸಿನಲ್ಲಿ 50,000 ಜನರು ಮನೆ ಆಸ್ತಾಸ್ತಿ ಬಿಟ್ಟು ಹೊರಟಿದ್ದಾರಂತೆ. ಸ್ವರಾಜ್ಯ ಸಿಕ್ಕಿದ ವಿನಹ ಹಿಂದಿರುಗುವುದಿಲ್ಲವೆಂದೂ, ಆ ವರೆಗೆ ಕಂದಾಯ ಕೊಡುವುದಿಲ್ಲವೆಂದೂ ಹೇಳುತ್ತಾರಂತೆ.

ಬೊಂಬಾಯಿಯಲ್ಲಿ ಪೊಲೀಸು ಅಧಿಕಾರಿಗಳಿಂದ ಸ್ತ್ರೀಯರಿಗೆ ಆದ ಅವಮಾನಕ್ಕಾಗಿ ವಿಚಾರಿಸಿ, ಅಲ್ಲಿಯ ಡಾಕ್ಟರಾದ ಶ್ರೀಮತಿ ವಲಂಬಿ ಸಾಲುತಿಮ್ಮರವರೂ (ಯಂ. ಬಿ. ಬಿ. ಯಸ್.) ಬೊಂಬಾಯಿ ಸಂಸ್ಥಾನಕ್ಕೆ ಕಾಗದ ಬರೆದು ತನ್ನ ಬೆ. ಪಿ. ಎಂಬ ಗೌರವ ಮೆಜೆಸ್ಟ್ರೇಟ್‌ತನಕ್ಕೆ ರಾಜಿನಾಮೆ ಕೊಟ್ಟಿರುವರು.

---

## ಹೊಸ ಜವಾಹಿರ್‌ಲಾಲರ ಸ್ಟೇಟ್‌ಮೆಂಟಿನ ಸಾರಾಂಶ.

ರಾಜದ್ರೋಹದ ವಿಷಯಕ್ಕಾಗಿ ನನಗೆ ಈಗ ಏಪನೆಯ ಸೆಲ ತಕ್ಕೀರಾತಾಗುವುದಾಗಿದೆ. ನಾನು ಇದು ವರೆಗೆ ಯಾವ ವಿಚಾರಣೆಯಲ್ಲಿಯೂ ಭಾಗ ತೆಗೆದುಕೊಳ್ಳಲಿಲ್ಲ. ಇನ್ನು ತೆಗೆದುಕೊಳ್ಳುವುದೂ ಇಲ್ಲ. ಎಂದು ವರ್ಷಕ್ಕೆ ಮೊದಲು ನನ್ನನ್ನು ಇದೇ ತಪ್ಪಿಗೆ ಚಾರ್ಜು ಮಾಡಿದರು. ಆಗ ನಾನು ರಾಜದ್ರೋಹವು ಹಿಂದೀಯರ ಮತವೆಂತಲೂ, ಅನನ್ನು ಸಾಧಿಸುವುದೇ ಎಲ್ಲರ ವೈಕ್ತಿಯಂಗಿರಬೇಕೆಂತಲೂ ಹೇಳಿದೆನು. ಹಿಂದೀಯರಿಗೆ ಸ್ವತಂತ್ರವಿಲ್ಲ. ಆವರ ಕಷ್ಟಗಳು ನಿವಾರಣೆಯಾಗುವುದೂ ಇಲ್ಲ ಎಲ್ಲಿಯ ವರೆಗೆ ಇವರ ಕಷ್ಟವು ಪರಿಗಳು ಹೋಗುವುದಿಲ್ಲವೋ, ಆ ವರೆಗೆ ನಾನು ಬ್ರಿಟಿಷರೊಡನೆ ಸಮನುವನ್ನು ಹೊಂದುವೆನು. ಆಗ ಹೊರತು ನನಗೆ ಬೇರೆ ಉದ್ಯೋಗವೇ ಇಲ್ಲ. ಸದಾ ನನ್ನ ಧ್ಯೇ

## ರಾಜಕೀಯ ಚಳವಳಕ್ಕೆ ಶಿಕ್ಷೆ.

ತಾರೀಕು 20—9—1930 ರಲ್ಲಿ ವೀರಾಜಪೇಟೆಯಲ್ಲಿ ಶ್ರೀ ಹೊಳ್ಳ ಕೃಷ್ಣಯ್ಯನವರು ಸಾರಾಯಿ ಅಂಗಡಿ ಮುಂದೆ ಪಿಕೆಟ್‌ಮಾಡುತ್ತಿದ್ದಾಗ್ಯೆ ಸಬ್‌ಇನ್ಸ್‌ಪೆಕ್ಟರು ಇವರನ್ನು 114 ಪಂಟೆಗೆ ದಸ್ತಗಿರಿಮಾಡಿದರು ಅಲ್ಲಿಂದ ಆಸ್ಪತ್ರೆಗೆ ಡಾಕ್ಟರ್ ಪೀಳ್ಕೆಗೆ ತೆಗೆದುಕೊಂಡುಹೋಗಿ ಹಿಂತಿರುಗುವಷ್ಟರಲ್ಲಿ ಸಾವಿರಾರು ಜನರ ಗುಂಪು ಸೇರಿತು. ಶ್ರೀ ಕೃಷ್ಣಯ್ಯನವರಿಗೆ ಹೂವಿನ ಹಾರ, ಪನ್ನೀರು, ಸೆಂಟ್ ವಗೈರೆಯಿಂದ ಸತ್ಕರಿಸಿದರು. ಬಸ್ಸಿನಲ್ಲಿ ಕೂರಿಸಿದ ನಂತರ ಬಸ್ಸಿನ ಸುತ್ತಲೂ ಜನರು ನೆರೆದು ಸುಂಕದ ಕಟ್ಟೆವರೆಗೆ ಒಂದು ಮೈರವಣಗೆಯೇ ಆಯಿತ. ಸ್ವಯಂಸೇವಕರೂ, ಜನರೂ ಜಯಘೋಷದೊಡನೆ ವಾಪಸು ತಿರುಗಿ ಬರುವಷ್ಟರಲ್ಲಿ ಪಟ್ಟಣದಲ್ಲೆಲ್ಲಾ ಅಂಗಡಿ ಬಾಗಿಲು ಹಾಕಿ ಹರತಾಳವಾಗಿತ್ತು. ಆನಂತರ ಒಂದು ವಿಶೇಷ ಮೀಟಿಂಗ್ ನಡೆದು ಸರಕಾರದ ಕೃತ್ಯವನ್ನು ಬಂಡಿಸಲಾಯಿತು. ಶ್ರೀ ಕೃಷ್ಣಯ್ಯನವರು ಅವೇ ದಿನ ಮಡಿಕೇರಿಗೆ ತರಲ್ಪಟ್ಟು ಜೈಲ್ ಆಸ್ಪತ್ರೆಗೆ ಕಳುಹಿಸ್ಲ್ಪಟ್ಟರು.

ಅದೇ ದಿನ ಶ್ರೀ ಅಬ್ದುಲ್ ಗಫೂರ್‌ಖಾನ್ ಸಾಹೇಬರನ್ನು ತರಲು ಬಿಳುಗುಂದದ ಮನೆಯಲ್ಲಿ ದಸ್ತಗಿರಿಮಾಡಿ ಸಾಯಂಕಾಲ ವೀರಾಜಪೇಟೆಗೆ ಕರೆತಂದರು. ಸುಂಕದ ಕಟ್ಟೆಯಿಂದ ಸ್ಟೇಷನ್ ವರೆಗೆ ಇವರನ್ನು ದಾರಿಯಲ್ಲೆಲ್ಲಾ ಹೂವಿನ ಹಾರ ಮುಂತಾದ್ದರಿಂದ ಸತ್ಕರಿಸಿದರು

ಶ್ರೀ ಪಂಡ್ಯಂಡ ಬೆಳ್ಯಪ್ಪನವರು ತಾ. 19 ರಲ್ಲಿ ಮಡಿಕೇರಿಗೆ ಒಂದಿದ್ದವರು 20 ರಲ್ಲಿ ವೀರಾಜಪೇಟೆಗೆ 5 ಘಂಟೆ ಬಸ್ಸಿನಲ್ಲಿ ಒಂದರು. ನಾವಿಕರು ಜನರು ಕಾಯುತ್ತಿದ್ದರು. ತನ್ನನ್ನು ಕೂಡಲೇ ದಸ್ತಗಿರಿಯಾಗಬಹುದು, ಎಲ್ಲರೂ ಶಾಂತತೆಯನ್ನು ಕಾಪಾಡಬೇಕು ಎಂತ ವಗೈರೆ ಭಾಷಣ ಮಾಡುತ್ತಿದ್ದರು. ಅಷ್ಟರಲ್ಲಿ ಶ್ರೀ. ಕೊಳ್ಳಿಮಾಡ ಕರುಂಬೈಯ್ಯನವರು ಸಹ ತನಗೆ ವಾರಾಂಟಿದೆಯೆಂತ ತಿಳಿದು ಹುಡಿಕೇರಿಯಿಂದ ವೀರಾಜಪೇಟೆಗೆ ತಲಪಿದರು ರೀಡಿಂಗ್ ರೂಮ್ ಬಳಿ ಸೇರಿ ಶ್ರೀ ಬೆಳ್ಯಪ್ಪನವರು ಸ್ವಲ್ಪ ಕಾಲ ಭಾಷಣ ಮಾಡುತ್ತಿರುವಷ್ಟರಲ್ಲಿ ಅವರನ್ನೂ, ಕರುಂಬೈಯ್ಯನವರನ್ನೂ ದಸ್ತಗಿರಿಮಾಡಿ ಸ್ಟೇಷನ್ನಿಗೆ ಕರದೊಯ್ದರು. ಜನರು ಇವರನ್ನು ಸತ್ಕರಿಸಿದರು. ಮೂರನೆ ದಿನ ಬೆಳಿಗ್ಯೆ 8 ಘಂಟೆಗೆ ಇವರು ಮೂವರನ್ನೂ ಮಡಿಕೇರಿಗೆ ಹೊರಡಿಸುವಾಗಲೂ ಜನರು ಹೂವಿನ ಹಾರ ಸುಗಂಧ ದ್ರವ್ಯ ಮುಂತಾದ್ದರಿಂದ ಸತ್ಕರಿಸಿದರು.

ಮಡಿಕೇರಿಗೆ ಸುಮಾರು 11 ಘಂಟೆಗೆ ಬಸ್ಸಿನಲ್ಲಿ ತಲಪಿದರು. ಸುಂಕದ ಕಟ್ಟೆ ಬಳಿ ಅನೇಕರು ಕಾಯಿದ್ದರು. ಬಸ್ ದಾಟಿದ ನಂತರ ಕೆಲವು ವಿದ್ಯಾರ್ಥಿಗಳು ಜಯಘೋಷ ಮಾಡುತ್ತಾ ಸ್ವರಾಜ್ಯಬಾವುಟ ಹಿಡಿದು ಹಿಂಬಾಲಿಸಿ ಸ್ಟೇಷನ್ನಿಗೆ ಬಂದರು ಅಲ್ಲಿ ವಿದ್ಯಾರ್ಥಿಗಳಿಗೆ ಸ್ವರಾಜ್ಯಗೀತೆ ಹಾಡುತ್ತಾ ನಿಂತಿದ್ದರು. ಸುಮಾರು 1 ಘಂಟೆ ಮೇಲೆ ಜೈಲಿಗೆ ಕಳಿಸಲ್ಪಟ್ಟರು.

ಅನಂತರ ವಿದ್ಯಾರ್ಥಿಗಳು ಮತ್ತು ಕೆಲವರು ಸೇರಿ ಗೀತೆಗಳನ್ನು ಹಾಡುತ್ತಾ ವೇಟೆಯೆಲ್ಲಾ ಮೆರವಣಗೆ ಮಾಡಿದರು. ಮಧ್ಯಾಹ್ನದ ನೇಳಿ ವೇಟೆಯಲ್ಲಿ ಅಂಗಡಿಗಳು ಮುಚ್ಚಲ್ಪಟ್ಟವು.

ದಸ್ತಗಿರಿಮಾಡಿದರ ಮೇಲೆ ಪ್ರತ್ಯೇಕ ಸ್ಪೆಷಲ್‌ಕಾರಾಗಿ ತಾ. 26,27 ರಲ್ಲಿ ಸಬ್‌ಜಡ್ಜ್ ಮತ್ತು ಪರ್ಸ್ಟ್ ಕ್ಲಾಸ್ ಮೇಜಿಸ್ಟ್ರೇಟರಾದ ಮಿ. ಪಿ ಮೀದರ್ಪ್ಪರವರು ಮುಂದೆ ವಿಚಾರಣೆ ನಡೆಯಿತು. ಪಬ್ಲಿಕ್ ಪ್ರಾಸಿಕ್ಯೂಟರಾದ ಮೆ. ಘಜಂಗರಾಯರು ಸರಕಾರಿ ಕಡೆಯಿಂದ ವಿಚಾರ ನಡೆಸಿದರು. ದಸ್ತಗಿರಿ ಮಾಡಿಲ್ಪಟ್ಟವರು ರಾಜದ್ರೋಹದ ಪಿತೂರಿಗಳನ್ನು ಪಬ್ಲಿಕ್‌ಗೆ ವಿರುದ್ಧವಾಗಿ ಬರೆದಿದ್ದರಿಂದ ಇನ್ನು ಮುಂದೆ ಆರು ತಿಂಗಳ ವರೆಗೆ ಅಂಥಾ ಮತಿಂಗಳನ್ನಾಗಲಿ ಪುಟಿಲ್ಲ ಮೊದಲಾದ ಪತ್ರಿಕೆಗಳನ್ನು ಕೊಳ್ಳಬಾರದೆಂತ ಕೋರ್ಟಿನ ಆಜ್ಞೆ ಆಗಿದೆ. ಇವರ ಭಾಷಣಗಳನ್ನು ಕೋರ್ಟು ಮುಂದೆ ರುಜುವಾತುಮಾಡಲಾಗಿತ್ತದೆಯೆಂತ ವಿವರಿಸಿ ಡಿಫ್ಯುಟಿ ಸುಪರಿಂಟೆಂಡೆಂಟರನ್ನೂ, ಸಬ್‌ಇನ್ಸ್‌ಪೆಕ್ಟರ್ ಕೆ ಮುತ್ತಣ್ಣನವರನ್ನೂ, ಮಡಿಕೇರಿ ಸಬ್‌ಇನ್ಸ್‌ಪೆಕ್ಟರ್ ಕೆ. ಸಿ.ಬೆಳ್ಯಪ್ಪನವರನ್ನೂ ತಾಲೂಕಗೇರಿ ಹೆಡ್ಡಾಕಾನ್ಸ್‌ಟೇಬಲರನ್ನೂ, ಶ್ರೀ ಮಂಗಲ ಪಾರುಪತ್ಯಗಾರರನ್ನೂ ಮತ್ತು ಶ್ರೀವೆಂಗಲ ಗಾಮಸ್ಥನೊಬ್ಬರನ್ನೂ ಸಹ ಶ್ರೀ ಬೆಳ್ಯಪ್ಪನವರ ಕೇಸಿನಲ್ಲಿ ವಿಚಾರ ಮಾಡಿದರು. ಇವರುಗಳು ತಾ. 30.5.30 ರಲ್ಲಿ ಮಡಿಕೇರಿಯಲ್ಲಿ ತಾ 10—6—30 ರಲ್ಲಿ ಪೊನ್ನಂಪೇಟೆಯಲ್ಲಿ, ತಾ. 17—9—30 ರಲ್ಲಿ ಶ್ರೀಮಂಗಲದಲ್ಲಿ ತಾ. 22—5—30 ರಲ್ಲಿ ಪೊಳ್ಳೆಬೆಟ್ಟದಲ್ಲಿ ತಾ. 28 8-30 ರಲ್ಲಿ ವೀರಾಜಪೇಟೆಯಲ್ಲಿ ಮಾಡಿದ ಭಾಷಣಗಳ ರಿಪೋರ್ಟುಗಳನ್ನು ಹಾಜರ್ ಪಡಿಸಿದರು. ಗ್ರಾಮಸ್ಥನ ಸಾಕ್ಷಿಯು ಶ್ರೀ ಬೆಳ್ಯಪ್ಪನವರ ಭಾಷಣದಲ್ಲಿ ರಾಜದ್ರೋಹವಿತ್ತೆಂತ ಹೇಳಲಿಲ್ಲ. ಶ್ರೀ ಬೆಳ್ಯಪ್ಪನವರನ್ನು ಏನ ಹೇಳಲಕ್ಕ ಇದೆಯೆಂತ ಕೇಳಿದ್ದಕ್ಕ ಬ್ರಿಟಿಷ್ ನ್ಯಾಯ-ಕೀರ್ತಿನ ಕೋರ್ಟುಗಳಲ್ಲಿ ತನಗೆ ವಿಶ್ವಾಸವಿಲ್ಲ. ಸಾಕೇವೇಷಮಾಡಿ ಜೈಲಿಗೆ ಹೋಗುವ ಆಸೆಯೂ ಇಲ್ಲ ಮಂಡಾಬಾಗಿ ತಪ್ಪಿಗೆ ಸಿಕ್ಕಿದ್ದಕ್ಕೆ ತಾನು ಸಂತೋಷಪಡುತ್ತೇನೆ ಎಂತ ವಗೈರೆ ಜವಿದಿದ್ದ ಬರ್ಮಾ ಹೇಳಿಕೆಯನ್ನು ಓದಿದರು. ಆ ಗ್ಯುಮೆಂಟು ಆದ ನಂತರ ಆರ್ಡರ್ ಬಗ್ಗೆ ತಾ. 29—9—30 ಕ್ಕೆ ಮುಂದಿನ ದಿನಕ್ಕಾಯಿತು.

ಶ್ರೀ. ಕೊಳ್ಳಿಮಾಡ ಕರುಂಬೈಯ್ಯನವರ ನೇರಿನಲ್ಲಿ ಕೇಸು ನಲ್ಲಿ ಡಿ. ಸುಪರಿಂಟೆಂಡೆಂಟ್, ಸಬ್‌ಇನ್ಸ್‌ಪೆಕ್ಟರ್ ಕೆ. ಬೆಳ್ಯಪ್ಪನವರು, ಶ್ರೀಮಂಗಲ ಪಾರುಪತ್ಯಗಾರರು ಬಿ. ಪಂಗಪ್ಪನವರ ಸಬ್‌ಇನ್ಸ್‌ಪೆಕ್ಟರ್ ಸಿ. ಕೆ. ಮುತ್ತಣ್ಣನವರು, ತಾಲೂಕಗೇರಿ ಹೆಡ್‌ಕಾನ್ಸ್‌ಟೇಬಲರನ್ನೂ ಸಹ ವಿಚಾರಣೆಯಾಯಿತು. ಇವರು ಮೊದಿದ ಮೂರು ಭಾಷಣಗಳ ರಿಪೋರ್ಟು ಹಾಜರ್‌ಸೂದ ಆಯಿತು.

ಶ್ರೀ. ಕರುಂಬೈಯ್ಯನವರು ತನ್ನು ಹೇಳಿಕೆಯಲ್ಲಿ ಬ್ರಿಟಿಷ್ ಸರಕಾರದ ತಾಬೆಯಲ್ಲಿರುವ ನೇಚಿಸ್ಟ್ರೇಟರುಗಳಿಗೆ ತಮಗೆ ನ್ಯಾಯತೀರ್ಪಿರಿಂತೆ ತೀರ್ಪು-ಕೊಡಲು ಸ್ವತಂತ್ರವಿಲ್ಲ. ಆದ್ದರಿಂದ ಈ ಕೋರ್ಟಿನ ವಿಚಾರದಲ್ಲಿ ತಾನು ಭಾಗತೆಗದು ಕೊಳ್ಳುವದಿಲ್ಲ. ಮೇಜಿಸ್ಟ್ರೇಟರಿಗೆ ಸಾಧ್ಯವಿದ್ದಷ್ಟು ಶಿಕ್ಷೆಕೊಡಬಹುದು ಎಂತ ಹೇಳಿದರು.

ಶ್ರೀ ಅಬ್ದುಲ್ ಗಫೂರ್‌ಖಾನ್ ಸಾಹೇಬರ ಕೇಸಿನಲ್ಲಿ ಡಿ. ಸುಪರಿಂಟೆಂಡೆಂಟರನ್ನೂ, ಶ್ರೀಮಂಗಲ ಹೆಡ್‌ಕಾನ್ಸ್‌ಟೇಬಲರನ್ನೂ ಮತ್ತು ಪೊನ್ನಂಪೇಟೆ ಸಬ್‌ಇನ್ಸ್‌ಪೆಕ್ಟರನ್ನೂ ವಿಚಾರಣೆಯಾಯಿತು. ಇವರ ಮೂರು ಭಾಷಣಗಳು ಹಾಜರ್‌ಪಡಿಸಲ್ಪಟ್ಟಿತು. ಬ್ರಿಟಿಷರ ನ್ಯಾಯತೀರ್ಪಿನ ಕೋರ್ಟುಗಳಲ್ಲಿ ತನಗೆ ನಂಬಿಕೆಯಿಲ್ಲ, ಇಬ್ಬರು ಕೊಡಗರೂ, ಒಬ್ಬ ಬ್ರಾಹ್ಮಣ, ಒಟ್ಟು ಮುಸಲ್ಮಾನನನ್ನು ಸಹ ಹಿಡಿದು ದೇಶದ ಜಗ್ಗಟ್ಟನ್ನು ತೋರಿಸಿದ್ದು ಸಂತೋಷ. ನಮ್ಮನ್ನು ಜೈಲಿಗೆ ಕಳುಹಿಸಿ ಇನ್ನೂ ಜನರು ದೇಶಸೇವೆಗೆ ಮುಂದೆ ಬರಲು ಮೊಡುವಂತೆ ಮಾಡಿದರೆ ಮೇಜಿಸ್ಟ್ರೇಟರು ಸಹ ದೇಶಸೇವೆಮಾಡಿದಂತಾಯಿತು ಎಂತ ವಗೈರೆ ತಮ್ಮ ಹೇಳಿಕೆಯನ್ನು ಓದಿದರು.

ಶ್ರೀ ಕೃಷ್ಣಯ್ಯನವರ ಮೇಲೆ ಡಿ. ಸುಪರಿಂಟೆಂಡೆಂಟರನ್ನೂ, ಪೊನ್ನಂಪೇಟೆ ಮತ್ತು ತಾಲೂಕಗೇರಿ ಹೆಡ್‌ಕಾನ್ಸ್‌ಟೇಬಲರನ್ನೂ ಸಹ ವಿಚಾರಣೆಮಾಡಿ ಇವರ ಎರಡುಭಾಷಣಗಳನ್ನು ಹಾಜರ್‌ಮಾಡಿದರು. ಶ್ರೀಮಂಗಲದ ಭಾಷಣದ ರಿಪೋರ್ಟರ್ ಇವರದೂ ದೆತ್ತು ಶ್ರೀ. ಕರುಂಬೈಯ್ಯನವರದೂ ಒಂದೇಯಾಗಿತ್ತು. ಇವರು ಸಹ ಕೋರ್ಟು ವಿಚಾರದಲ್ಲಿ ಭಾಗತೆಗೆದು ಕೊಳ್ಳುವದಿಲ್ಲವೆಂದ ವಗೈರೆ ಹೇಳಿಕೆ ಹೇಳಿದರು.

ತಾ. 29—9—30 ರಲ್ಲಿ ಎಲ್ಲರ ಮೇಲೂ ಜಡ್ಜ್‌ಮೆಂಟ್ ಆಯಿತು. ಇವರ ಭಾಷಣಗಳಲ್ಲಿ ರಾಜದ್ರೋಹವಿದೆಯೆಂತ ದುಜುವಾತಾಯಿತು. ಆದ್ದರಿಂದ ಆರು ತಿಂಗಳ ವರೆಗೆ ಒಳ್ಳೇ ನಡತೆಗೆ 1000 ರೂ. ಗೆ ಒಬ್ಬನನ್ನು ಜಾಮೀನು ಕೊಡಬೇಕೂ ಶಕ್ತೀ ವೈಬ್ಯಪ್ಪನವರಿಗೂ, ಅಬ್ದುಲ್ ಗಫೂರ್‌ಖಾನ್ ಸಾಹೇಬರಿಗೂ ವಿಧಿಸಲಾಯಿತು. 500 ರೂ. ಗೆ ಜಾಮೀನು ಕೊಡಬೇಕೆಂತ ಶ್ರೀ. ಕರುಂಬೈಯ್ಯನವರಿಗೂ, ಕೃಷ್ಣಯ್ಯನವರಿಗೂ, ವಿಧಿಸಲಾಯಿತು. ಎಲ್ಲರೂ ಜಾಮೀನು ಕೊಡಲು ಇಷ್ಟಾಕ್ಕರ ವಾಗಿದ್ದರಿಂದ ಆರು ತಿಂಗಳ ಸಾದಾ ಶಿಕ್ಷೆ ಅನುಭವಿಸಬೇಕೆಂತ ತೀರ್ಮಾನವಾಯಿತು. ಶ್ರೀ ಬೆಳ್ಯಪ್ಪನವರನ್ನೂ, ಅಬ್ದುಲ್ ಗಫೂರ್‌ಖಾನ್ ಸಾಹೇಬರನ್ನೂ ಬಿ. ಕ್ಲಾಸಿಗೂ, ಶ್ರೀ ಕರುಂಬೈಯ್ಯನವರನ್ನೂ, ಕೃಷ್ಣಯ್ಯನವರನ್ನೂ 'ಸಿ' ಕ್ಲಾಸಿಗೂ ತೀರ್ಮಾನಿಸಿದರು.

ತೀರ್ಪು ಒದುವ ಮುಂಚೆ ಶ್ರೀ. ಬೆಳ್ಯಪ್ಪನವರ ಪತ್ನಿಯವರಿಗೆ ಬೆಳ್ಯಪ್ಪನವರೊಂದಿಗೆ ಸಂಭಾಷಿಸಲೂ, ಶ್ರೀ ಗಫೂರ್‌ಖಾನ್ ಸಾಹೇಬರೊಂದಿಗೆ ಅವರ ಮಕ್ಕಳಿಗೆ ಸಂಭಾಷಿಸಲೂ ಮೇಜಿಸ್ಟ್ರೇಟರು ಅನುಮತಿ ಕೊಟ್ಟರು. ಇತರ ಕೆಲವು ಸ್ನೇಹಿತರು ಅನುಮತಿ ಕೇಳಿದ್ದಕ್ಕೆ ಕೊಡಲಿಲ್ಲ.

ಸಾಕ್ಷ್ಯ ವಿಚಾರ ನಡೆಯುವಾಗ ಕೋರ್ಟು ತುಂಬಾ ಜನರು ನೆರೆದಿದ್ದರು. ಶ್ರೀ. ಐಕಂಡ ಕಾರ್ಯಪ್ಪನವೇ ಮುಂತಾದ ಸ್ವಯಂಸೇವಕರೂ ಹಾಜರಿದ್ದರು.

ತಾ. 1—10—30ನೇ ದಿನ ಬೆಳಿಗ್ಯೆ 4 ಘಂಟೆಗೆ ಶ್ರೀ ಬೆಳ್ಯಪ್ಪನವರೂ, ಅಬ್ದುಲ್ ಗಫೂರ್‌ಖಾನ್ ಸಾಹೇಬರೂ ಕಾರಿನಲ್ಲಿ ಮಂಗಳೂರಿಗೆ ಸಾಗಿಸಲ್ಪಟ್ಟು ಅಲ್ಲಿಂದ ಶೈಲಿನ 2ನೇ ಕ್ಲಾಸ್‌ನಲ್ಲಿ ಕಣ್ಣಾನೂರಿಗೂ ಸಾಗಿಸಲ್ಪಟ್ಟರು.

ತಾ. 23—10—30ರ ವರೆಗೆ ಶ್ರೀ ಕರುಂಬೈಯ್ಯನವರೂ ಕೃಷ್ಣಯ್ಯನವರೂ ಮಡಿಕೇರಿ ಜೈಲಿನಲ್ಲೇ ಇಡಲ್ಪಟ್ಟು ಆನಂತರ ಮಂಗಳೂರು ಪೂರ್ಣವಾಗಿ ಕಣ್ಣಾನೂರಿಗೆ ಸಾಗಿಸಲ್ಪಟ್ಟರು.

---

## ಜೆ. ಹೆಚ್. ಯೇಟ್ಸ್, ಬ್ರೈಯಿಲ್ಸ್‌ಫರ್ಡ್ ಎಂಬವರ ಅಧಿಸ್ಯಾಯ.

ಇಂಗ್ಲೆಂಡಿನಿಂದ ಹಿಂದೂಸ್ಥಾನದ ಸ್ಥಿತಿಯನ್ನು ತಿಳಿಯಲು ಒಂದ ಹೆಚ್. ಯೇಟ್ಸ್, ಬ್ರೈಯಿಲ್ಸ್‌ಫರ್ಡ್ ಎಂಬವರು "ಹಿಂದೂ" ನ್ಯಾಕೆಯ ಬಾಕ್ಸಿಮಾರಾಗೆ ಈ ವಾರ ಕೊಟ್ಟ ಅಧಿಪಾಯ.

ನಾನು ಹಿಂದೂಸ್ಥಾನಕ್ಕೆ ಬಂದು ಮೂರು ವಾರ ಮಾತ್ರವಾಯಿತು. ಆ ಕಾಲವನ್ನೆಲ್ಲಾ ಬೊಂಬಾಯಿ ಅಧಿಪತ್ಯದಲ್ಲೇ ಕಳೆದೆನು. ಗುಜರಾತಿನ ಗ್ರಾಮಗಳಲ್ಲಿ ಇದ್ದ ದಿವಸಗಳನ್ನು ಎಂದೂ ಮರೆಯುವಂತಿಲ್ಲ. ಈ ಕಾಲವೆಲ್ಲಾ ನಾನು ಹಿಂದೀಯರೊಂದಿಗೇ ಇದ್ದೆ. ಬೊಂಬಾಯಿ ಅಧಿಪತ್ಯದ ಜನರ ಜಗ್ಗಟ್ಟು ನೆನಗೆ ಬೆಚ್ಚಿಗೆ ಗೌರವವಾಗಿದೆ. ಕಣ್ಣಾನಿಂದಲೇ ಈ ಜಗ್ಗಟ್ಟು ಯೂರಾಪಿಯರೂ ಕೊರಿಬರುತ್ತಿದೆ. ಕೆಲವು ಗ್ರಾಮಗಳಲ್ಲಿ ಕೆಲವು ಮುಸಲ್ಮಾನರು ವಿನಹ ಎಲ್ಲರೂ ಗಾಂಧಿ ಟೊಪ್ಪಿಯನ್ನೇ ಧರಿಸುತ್ತಾರೆ. ಹಿಂದೂಗಳೆಲ್ಲರೂ ಕಾಂಗ್ರೆಸಿಗೆ ಒತ್ತಾಸೆ ತೋರುವವರಾಗಿದ್ದಾರೆ. ಮುಸಲ್ಮಾನರಲ್ಲೂ ಅರ್ಧದಷ್ಟು ಜನರು ಕಾಂಗ್ರೆಸಿಗೆ ಸಹಾನುಭೂತಿಯುಳ್ಳವರಾಗಿದ್ದಾರೆ. ಈ ಅರ್ಧದಲ್ಲಿ ಎಷ್ಟಾಪಂಥ ಯುವಕರು ಸೇರಿದ್ದಾರೆ.

ಎಲ್ಲೆಲ್ಲಿ ಹೋದರೂ ಚಕ್ರಗೋಷ್ಠಿಯಿಂದ (ರೌಂಡ್‌ಟೇಬಲ್ ಕಾನ್‌ಫರೆನ್ಸ್) ಏನು ಪ್ರಯೋಜನವಾದೀತು ಎಂತಲೂ, ಕೂಲಿಕಾರರ ಪಂಗಡದ ಸರಕಾರವು ಎಷ್ಟರ ಮಟ್ಟಿಗೆ ಮಾತಾಡಿದಂತೆ ನಡಿಸೀತು ಎಂಬ ಪ್ರಶ್ನೆಗಳನ್ನು ಕೇಳುತ್ತಾರೆ. ಎರಡು ಪಕ್ಷದಲ್ಲೂ ಒಳ್ಳೇ ಮುಂದಾಳುಗಳಿದ್ದರೆ ತಕ್ಕಮಟ್ಟಿಗೆ ಪ್ರಯೋಜನವಾದೀತೆಂತ ನಾನು ಪ್ರತಿ ದಿನವೂ ಹೇಳುತ್ತಿದ್ದೇನೆ. ಕಾನ್‌ಫರೆನ್ಸಿನಲ್ಲಿ ಆಗುವ ತೀರ್ಮಾನಗಳು ಹೇಗಾದರೂ ರಾಜಿಪರಕ್ಕುಗಳೇ ಸರಿ ಆದ್ದರಿಂದ ಕೆಲವು ಮಟ್ಟಿಗೆ ಆಶಾಭಂಗವೂ, ಕೆಲವು ಮಟ್ಟಿಗೆ ಪ್ರಯೋಜನಕಾರಿಯೂ ಆಗುತ್ತದೆ. ಫಲಿತಾಂಶವನ್ನು ಜನಾಂಗವು ಸಮರ್ಥನದಿಂದ ಅಜಮಾಯಿಸಿ ನೋಡಬೇಕಾದರೆ ಮನಸ್ಸು ಕಾಂಕ್ರೀತಿಯಲ್ಲಿರಬೇಕು. ಆದರೆ ಸರಕಾರವು ಇಡುವ ಅನಾವಶ್ಯದ ಮತ್ತು ಅನೇಕ ವೇಳೆ ಅನಾಸುಷ್ಠ ಹಿಂಸೆಗಳಿಂದ ಜನಾಂಗವು ತುಂಬಾ ಸಿಟ್ಟಾಗಿದೆ.

ಕಳೆದ ವಾರ ಬೊಂಬಾಯಿಯಲ್ಲಿ ಆದ ನಡವಳಿಕೆಯನ್ನು ನೋಡಿದ ನಂತರ ಕೂಲಿಕಾರ ಪಕ್ಷದ ಸರಕಾರದ ನುಡಿಯಂತೆ ನಡೆವೀತೆಂತ ಹೇಗೆ ತಾನೇ ನಂಬಿಯಾರು? ರಾಷ್ಟ್ರೀಯ ಬಾವುಟಕ್ಕೆ ಗನುಸ್ಕರಿಸಲು ಸಂಪೂರ್ಣವಾಗಿ ಶಾಂತತೆಯನ್ನು ಮಹಿಳೆ ಗುಂಪು ಒಂದು ಮೈದಾನದಲ್ಲಿ ಕೂಡಿತ್ತು. ಏನೂ ಪುಂಡಾಗಲಿಲ್ಲ, ಆದರೆ ಪೋಲೀಸಿನವರು ದೊಣ್ಣೆಪೆಟ್ಟಿನಿಂದ ಗುಂಪನ್ನು ಚದರಿಸಿದರು. ಸುಮಾರು 200 ಜನರು ದಸ್ತಗಿರಿ ಮಾಡಲ್ಪಟ್ಟರು. ಸುಮಾರು 80 ಜನರಿಗೆ ಹೆಚ್ಚುಕಡಿಮೆ ಡಾಕ್ಟರ ಸೌಕಾಯಪೇಕ್ಷಾಗುವಷ್ಟು ಕಡಿಣ ಘಾಯವಾಯಿತು. ಎಷ್ಟೇ ಭದ್ರತೆಗೆಳನ್ನಿಟ್ಟುಕೊಂಡರೂ ಸಾವಂತ ಸ್ವರಾಜ್ಯ ಕೊಡುವದು ನಮ್ಮುದ್ದೇಶವಾದರೆ ಆವರ ಸ್ವರಾಜ್ಯ ಬಾವುಟಕ್ಕೆ ನಾವೂ ನಮಸ್ಕರಿಸಬೇಕಾಗುತ್ತದೆ. ಏಲ್ಯಾಂಡ್ ದ್ವೀಪಗಳಿಗೆ ಇರುವ ಹಕ್ಕು ಇಂಡಿಯಾಕ್ಕೆ ಸಿಕ್ಕಬಾರದೇ?

ಸ್ವಿಟ್ಜರ್ಲಂಡಗಳಲ್ಲಿ ದೊಡ್ಡ ದೊಡ್ಡ ಯುರೋಪಿಯನ್ ಆದ್ಯೋಗಸ್ಥರೂ, ವಾಗರೂಕತೆಯಳ್ಳವರೂ ಪತ್ರಿಕೆಗಳೂ ಇರುವಲ್ಲಿ ದಬ್ಬಾಳಿಕೆಗೆ ಸ್ವಲ್ಪ ತಡೆ ಇದೆ. ಗ್ಯಾಸುಗಳಲ್ಲಿ ಯೂ ತಡೆಯೂ ಇಲ್ಲ. ನಾನು ಸುತ್ತಿದ ಗುಜರಾತಿನ ಪ್ರತಿಯೊಂದು ಗ್ರಾಮದಲ್ಲೂ ಕಂದಾಯ ಮಸೂಲ್‌ಮಾಡುವ ನೆಪದಿಂದ ಪೋಲೀಸಿನವರು ಅನಾವಶ್ಯವಾಗಿ ಹೊಡೆದರೆಂಬ ಪ್ರತಿಕಾರು ಇದ್ದೇ ಇತ್ತು. ಪೋಲೀಸಿನವನು ದೊಣ್ಣೆಯನ್ನು ಎತ್ತಿ "ಸ್ವರಾಜ್ಯ ಬೇಕೋ?" ಎಂತ ಕೇಳಿ "ಇಗೋ ಇಲ್ಲಿ ಸ್ವರಾಜ್ಯ" ಎಂತ ಹೊಡೆಯುವನು. ಆಗ ಆತ ಕಡಿಣ ತಪ್ಪು ಘಾತಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ಇಂಥಾ ಪೋಲೀಸಿನವರಿಗೆ ಸಂಬಳ ಕೊಡುವ ಸರಕಾರವು ಸ್ವರಾಜ್ಯವನ್ನು ಯಾವ ರೀತಿಯಲ್ಲಿ ಕೊಡುವುದು ಎಂಬದನ್ನು ಜೋಚಿಸುತ್ತಿದೆಯೆಂತ ಇಂಥಾ ಗ್ರಾಮದ ರೈತರು ಹೇಗೆ ತಾನೇ ನಂಬಿಯಾರು?

ಇಂಡಿಯೊದ ಪ್ರೀತಿಗೆ ನಾತ್ಕರಾದ ಮುಖಂಡರು ಹೇಳಿದರೆ ಮಾತ್ರ ಇಂಡಿಯಾವು ರಾಜಿಗೆ ಒಪ್ಪೀತಷ್ಟೆ. ಅಂಥಾ ಮುಖಂಡರು ಲಂಡನ್ನಿನಲ್ಲಿಲ್ಲ. ಆಂಥವರೆಲ್ಲರೂ ಜೈಲಿನಲ್ಲಿದ್ದಾರೆ. ಕಾನ್‌ಫರೆನ್ಸಿನ ಶಿಫಾರಸುಗಳು ಪ್ರಕಟವಾದಾಗ ಜೈಲಿನಲ್ಲಿರುವ 60,000 ರಾಜಕೀಯ ಖೈದಿಗಳ ಕಡೆಯಿಂದ ಏನು ಅಭಿಪ್ರಾಯ ಬರುತ್ತದೆಯೆಂತ ಹಿಂದುಸ್ಥಾನದವರು ಎದುರು ನೋಡುತ್ತಾರೆ. ಈ ಖೈದಿಗಳಲ್ಲಿ ಹೆಚ್ಚಿನವರು 'ಸಿ' ಕ್ಲಾಸಿಗೆ ಸೇರಿಸಲ್ಪಟ್ಟಿದ್ದಾರೆ. ಈ ಕ್ಲಾಸಿನಲ್ಲಿ ಸಿಕ್ಕುವ ಆಹಾರವೂ, ಅನುಕೂಲವೂ ಅತಿ ಕೀಳುತರದ ಕಷ್ಟತಪ್ಪಿಗೆ ಕೂಡುವಂಥಾದ್ದಾಗಿದೆ. ಜೈಲುಗಳು ತುಂಬಿ ಹೋಗಿವೆ. ಸಿಕ್ಕುವ ಆಹಾರವು ಕತ್ತಿನೆಯಾಗಿದೆ. ಇಂಥಾ ಖೈದಿಗಳು ಯಾವ ತರದ ವಿಕಾಸದ ಮನಸ್ಸಿನಿಂದಲೂ, ಯಾವ ತರದ ಆನೆಯಿಂದಲೂ ರಾಜಕೀಯ ಭವಿಷ್ಯತ್ತನ್ನು ಅಜಮಾಯಿಸಬಹುದು? ಆದರೆ ಹಿಂದುಸ್ಥಾನದ ತೀರ್ಮಾನವನ್ನು ಕೊಡುವವು ಈ ಖೈದಿಗಳೇ ಹೊರತು ಲಂಡನಿಗೆ ಕಾನ್‌ಫರೆನ್ಸಿಗೆ ಹೋದ ಮಂದಿಯರಲ್ಲ. ಹೀಗೆ ಲಂಡನಿಗೆ ಹೋದವರಲ್ಲಿ ಹತ್ತು ಆಧುನಿಕ ಪತ್ನೆಯಿಂದ ಬನರನ್ನು ಮಾತ್ರ ಹಿಂದೀಯರು ಗೌರವಿಸುತ್ತಾರೆ. ಆದರೆ ಹಿಂಬಾಲಕರಿಯವರು ಯಾರೂ ಇಲ್ಲ.

ಮೆ. ಗಾಂಧಿಯವರ ಮತ್ತು ಆವರಂತೆಯೇ ಕಾಂಗ್ರೆಸಿನಲ್ಲಿ ಮುಂದಾಳುಗಳಾಗಿರುವವರ ತೀರ್ಮಾನವನ್ನು ಮಾತ್ರ ಹಿಂದುಸ್ಥಾನದ ಜನತಾಗದ ಪೆಚ್ಚಿನ ಭಾಗವು ಒಪ್ಪುಕೊಳ್

"KOHINOOR" OFFICE MERCARA.

It not delivered please return to

# ಕೊಹಿನೂರು.

ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ ।
ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ದುಃಖಭಾಗ್ಭವೇತ್ ॥

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಕೋಟೆರ ಪಿ. ಚಿಣ್ಣಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೧೦ | ಮಡಿಕೇರಿ, ಸನ್ ೧೯೨೦ನೇ ಇಸವಿ ನವೆಂಬರ್ ತಾರೀಕು ೭ ನೇ ಶುಕ್ರವಾರ. | ಸಂಚಿಕೆ ೧೭

Telephone — 3145

Telegrams:— 'PRECIOUS'

By Appointment to H E The Governor of Madras.

Cups, Rs. 6, and upwards



Medals, Rs. 1-8-0 and upwards.

CUPS.
MEDALS.
SHIELDS.
CASKETS.

V. SUBRAMANIA IYAR.
JEWELLER.

Post Box No., 423, Tripliacne,

Illustrated Catalogue Free on Application.

MADRAS.

52—1



ಕಾರ್ಡ್ ಬರೆದರೆ ಉಗಿನ ಕ್ಯಾಟಲಾಗು ವಳಿಯಂಗಿ ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬರ್ಚಿಗಳು, ತೋಪುಗಳು, ಕೇಪ್ಸುಗಳು, ಪಸ್ಟ್ರು ಮತ್ತು ಮದ್ದಿನ ಎಲ್ಲಾ ಸಾಮಗ್ರಿಗಳು ಬಹು ಕಡಿಮೆ ಧರದಲ್ಲಿ ದೊರೆಯುವವು.

GOOLAM HUSAIN ALLIBHOY & SONS,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

44—8

ಕಟುಕಷಾಯ ಮಲೆಜ್ವರಕ್ಕೆ:—ಇದು ಇಂಜಕ್ಷನ್ ಮತ್ತು ಕ್ವೀನಸು ಸಂಬಂಧವಾದ ಗುಣವಾಗದಿರುವ ಮಲೆ ಜ್ವರ, ದಿನವಿ ನವ ಜ್ವರ, 3—4 ದಿನಕ್ಕೊಮ್ಮೆ ಬಾರಿ ಬರುವ ಜ್ವರ ಮತ್ತು ಜ್ವರಗಳ್ಳೆ ರೋಗದಿಂದ ಆಯವ ಜ್ವರಗಳಿಗೆ ಬಾ ಕೆಲಸುತ್ತದೆ. ಸೀಸೆ ಒಂದಕ್ಕೆ ರೂ 1—3—0 3ಕ್ಕೆ ರೂ 4—0—0, 6ಕ್ಕೆ ರೂ 7—5—0 12ಕ್ಕೆ ರೂ 14

ಚಂದನಾಸವ:—ಇದು ಪ್ರಮೇಹ ಮತ್ತು ಕೈಲ್ಲ, ಮೂತ್ರ ಹನಿಸನಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಏಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯಲಾಗಿ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹುರಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಕಡಿಮೆಯಲ್ಲಿ ಸಾಮಾನ್ಯವಲ್ಲದಿರುವುದು ದೇಹದಲ್ಲಿ ಉರಿ ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ ನಾಳದಲ್ಲಿ ಬುಜ್ಜುನ ಸೋವು ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 2, 6ಕ್ಕೆ ರೂ 1—4—0 3—8—0, 6—12—0

ಯೋಮನಾಸಿನಿ:— ಈ ಹುಡಿಯನ್ನು ಸೀಸೆಗೆ ಳಿಯ ಮೃಯಲ್ಲಿ ರೋಗವಿರುವ ಭಾಗಕ್ಕೆ ಹಲ್ಲು ರೋಗವು ಉರಿಯ ಬೇ ಮು ಕ್ಕೆ 1ಕ್ಕೆ 6ಆಣೆ 3ದಪ್ಪಿಗೆಗೆ ರೂ 1, 1 ಪೌಷಿಗೆ 1—8—0

ವಿಷೋಲ್ಬಣಿನಿ ಪೈಲಾ:—ತಲೆನೋವು, ತಲೆಸುತ್ತುವಿಕೆ, ತಲೆಯಿಂದ ಕೀವು ಸೋರುವುದು ಕೆವಿ

# ಕೊಡಗು.

ಸರ್ ೧೯೫೦ನೇ ಇಸವಿ

ನವಂಬರ್ ತಾ. ೭ನೇ ಶುಕ್ರವಾರ.


## ಪಾಚಿಕರಲ್ಲಿ ವಿನಂತಿ.

ನಾವು ಒಂದು ತಿಂಗಳ ಮೇಲೆ ಇದ್ದು ಬಂದ ಬಳಿಕ ಅದೃಶ್ಯರಾಗಿದ್ದೆವು. ಸ್ಥಳೀಯ ಸಹಕಾರದವರು ಪೈಸ್ ಆರ್ಡಿನೆನ್ಸ್‌ನ್ನು ಉಪಯೋಗಿಸಿ "ಕೊಡಗು" ಪೈಸ್ಸನಿಂದ 1000 ರೂ ಪಾಯಿ ಜಾಮೀನ್ ಕೇಳಿದ್ದರಿಂದ ಜಾಮೀನ್‌ಕೊಟ್ಟು 1000 ರೂಪಾಯಿಗಳನ್ನು ಕಳಕೊಳ್ಳುವ ಭೀತಿಯಲ್ಲಿ ಪತ್ರಿಕೆಯನ್ನು ನಡಿಸುವದು ಯುಕ್ತವಲ್ಲವೆಂತ ಪತ್ರಿಕಾ ಜಾಲಕರಿಗೆ ತೋರಿದ್ದರಿಂದ ನಮಗೆ ವಾಚಕರೆಮಿಂಗೆ ಬರಲು ಸಾಧ್ಯವಾಗಿಲ್ಲ. ಈಗ ಪೈಸ್ ಆರ್ಡಿನೆನ್ಸ್ ಎಂಬ ಖಾನೂನಿನ ವಾಯಿದೆ ತೀರಿದ್ದರಿಂದ ಸ್ವೇಚ್ಛೆಯ ಸರಕಾರದ ಮುಕ್ಕುರಿ ಶಾಸನಾಗಿಯೇ ಪ ಒವಾಗಿ ನಾವು ರೈಸ್ಯರಾಗಲು ಸಾಧ್ಯವಾಯಿತು. ನಮ್ಮ ಸ್ವೇಚ್ಛೆಯಿಂದ ನಮ್ಮು ಕೆಲಸನನ್ನು ನಿಲ್ಲಿಸಿದ್ದಲ್ಲವಾದ್ದರಿಂದ ವಾಚಕರು ನಮ್ಮನ್ನು ಕ್ಷಮಿಸಿದೆ ಇರಬಾರದೆಂತ ನಂಬುತ್ತೇವೆ.

ಈ ತನ್ಮಧ್ಯೆ ಸಂವಾದಕತ್ವದಲ್ಲಿಯೂ ನ್ಯಕ್ಕಿ ವ್ಯತ್ಯಾಸ ವಾಗಿದೆ ಆದರೆ ಪತ್ರಿಕೆಯು ಪ್ರಾರಂಭವಾಗಿಗ ನಾವು ಹಾಕಿಕೊಂಡ ಮೇಲ್ಪಂಕ್ತಿಯನ್ನು ಎಂದೂ ವಿಮರಲಿಲ್ಲ. ಇನ್ನು ಮೇಲೆಯೂ ವಿಮರುವದಿಲ್ಲ. ಹಿಂದೂಸ್ಥಾನದಲ್ಲೂ ನಮ್ಮ ದೇಶದಲ್ಲೂ ನಡೆಯುವ ವರ್ತಮಾನಗಳನ್ನು ಕೂಡುತ್ತಿದ್ದು ಹಿಂದೂಸ್ಥಾನಕ್ಕೆ ಸಾಮಂತ ಸ್ವರಾಜ್ಯವೂ ನಮ್ಮ ದೇಶಕ್ಕೆ ಪ್ರಜೆಯ ಅಭಿಪ್ರಾಯಕ್ಕನುಸಾರವಾಗಿ ನಡಿಯುವ ಸರಕಾರ ಪದ್ಧತಿಯೂ ಸ್ಥಾಪಿಸಲಾಗಲು ಪ್ರಯತ್ನಿಸುತ್ತಿದ್ದೇವೆ ಈ ಹೋರಾಟವು ಜನರಿಗೆ ಅನ್ನ, ನೀರು, ಗಾಳಿಯಷ್ಟೇ ಅವಶ್ಯ ವಾಗಿದ್ದಾಗಿದೆ. ಸ್ವರಾಜ್ಯದ ಅಭಿಲಾಷೆಯು ವಿದ್ಯಾವಂತ ಪಾಲಕರಲ್ಲಿ ಮಾತ್ರ ಹುಟ್ಟಿರುವುದಲ್ಲ, ಜನಸಮುದಾಯದಲ್ಲಿ ಹರಡಿದ ಆಕೆಯಾಗಿನೆಯಂತ ನಮ್ಮ ದೇಶದಲ್ಲಿ ನಡಿಯುತ್ತಿರುವ ಜಳವಳದಿಂದಲೂ ಒಟ್ಟು ಹಿಂದೂಸ್ಥಾನದ ಸ್ಥಿತಿಯಿಂದಲೂ ಸರ್ವರಿಗೂ ಸುಲಭವಾಗಿ ತಿಳಿಯುತ್ತದೆ. ನಮಗೆ ಬಂದ ಆಡಚಣೆಯು ಹೋಗಿ ಜನರ ಜನ್ಮಸಿದ್ಧ ಹಕ್ಕಾದ ಸ್ವರಾಜ್ಯವನ್ನು ಸಂಪಾದಿಸುವ ಹೋರಾಟದಲ್ಲಿ ಭಾಗಹೆಗೆದು ಕೊಳ್ಳಲು ಪುನಃ ಅನುಕೂಲ ದೊರೆತದ್ದಕ್ಕೆ ಪಂಪೂರ್ಣನಿಗೆ ವಂದಿಸಿ ಮುಂದೆ ಸಾಗುತ್ತೇವೆ—

## ಹೊಸ ಚೀಫ್ ಕಮಿಶನರವರು.

ನಮ್ಮ ದೇಶಕ್ಕೆ ಹೊಸ ಚೀಫ್‌ಕಮಿಶನರು ನೇಮಕವಾಗಿ ಕೆಲವು ತಿಂಗಳಾದವು ಆದರೆ ಅವರು ಕಳೆದ ತಿಂಗಳ 25 ನೇ ತಾರೀಕಿಗೆ ಮಡಿಕೇರಿಗೆ ಬಂದವರು ದೇಶದ ಸ್ಥಿತಿಯನ್ನೂ, ಆಕಾಂಕ್ಷೆಗಳನ್ನಿ ತಿಳಿದುಕೊಳ್ಳಲು ಪ್ರಯತ್ನಿಸುತ್ತಿರುವ ಹಾಗೆ ಯಾವಾಗಲೂ ಇಟ್ಟುಕೊಳ್ಳುವರೆಂದೇ ನಮ್ಮ ಕೋರಿಕೆ ಈ ವರೆಗಿನವರಂತೆ ತನ್ನಲ್ಲಿಗೆ ಶಾವಾಗಿಯೇ ಒಂದವರ ಸಂಗಡ ಮಾತ್ರ ಸಂಭಾಷಿಸಿ ದೇಶದ ಸ್ಥಿತಿಯನ್ನು ತಿಳಿದುಕೊಳ್ಳುವ ಪದ್ಧತಿಯನ್ನು ಬಿಟ್ಟು, ಅನೇಕರಿಗೆ ಚೀಫ್ ಕಮಿಶನರು ಪತ್ರ ಬರೆದು ಕರೆಸಿಕೊಂಡು ಸಂಭಾಷಿಸುತ್ತಾರೆ ಈ ವಿಷಯದಲ್ಲಿ ಬೇರೆ ಪುಡಿಕೇರಿಯಲ್ಲಿರುವವರನ್ನು ಮಾತ್ರ ಕರೆಸಿದರೆ ಸಾಲದು. ಚೀಫ್‌ಕಮಿಶನರು ಆಸುನೆರೆಸಿರುವ ಈ ಕೈನುವು ಬಳ್ಳೇದಾಗಿದೆ. ಈ ಕ್ರಮದಿಂದ ತಮಗೆ ದೊರಯುವ ತಿಳುವಳಿಕೆಯನ್ನು ದೇಶಕ್ಕೆ ಪ್ರಯೋಜನವಾಗುವಂತೆ ಉಪಯೋಗಿಸಿ ತಕ್ಕರೋ ಎಂಬದನ್ನು ಇನ್ನು ಮೇಲೆ ನೋಡಬೇಕಷ್ಟೆ. ಇವರು ಆನೇಕ ಇಲಾಖೆಗಳನ್ನು ತಾವೇ ಖುದ್ದಾಗಿ ಪರೀಕ್ಷಾಗಾನುಸ್ಸು ಮುಂದಾಗಿ ಕೊಡವೆ ನೋಡುತ್ತಿರುವದು ಜನರಿಗೆ ತೃಪ್ತಿಯನ್ನುಂಟುಮಾಡುವುದಾಗಿದೆ. ಹೀಗೆ ಮಾಡಿದರೆ ಎಲ್ಲಾ ಇಲಾಖೆಯವರೂ ತಮ್ಮತಮ್ಮ ಕೆಲಸಗಳನ್ನು ಸರಿಯಾಗಿ ಮಾಡಿಯೇ ಮಾಡುತ್ತಾರೆ ಚೀಫ್‌ಕಮಿಶನರು ದೇಶವನ್ನು ನೋಡುವ ಮುಂಚೆ ನಮ್ಮ ಪೈಸ್ಸನಿಂದ ಜಾಮೀನ್ ಕೇಳಿಯೂ, ನಾಲ್ವರು ದೇಶ ಸೇವಕರನ್ನು ಜೈಲಿಗೆ ಕಳುಹಿಸಿದ್ದಕ್ಕೆ ಒಪ್ಪಿಗೆ ಕೊಟ್ಟೂ ದೇಶದಲ್ಲಿ ಅತ್ಯಪ್ಯಮನ್ನುಂಟುಮಾಡಿದ್ದರು. ದೇಶದ ಅನುಭವನಿಲ್ಲದೆ ಮೇಲಾಧಿಕಾರಿಗಳಿಗೆ ವತ್ತಾಯಕ್ಕೆ ಒಳಗಾಗಿ ಈ ಕೆಲಸ ಮಾಡಿರಬಹುದೆಂತ ಊಹಿಸಬಹುದಾಗಿದೆ. ಕಾಂತರೀತಿಯಿಂದ ಪಿಕೆಟ್ ಮಾಡಿ ನಿಶಾಸೇವನೆಯನ್ನು ಕಡಿಮೆ ಮಾಡುವ ಕೆಲಸಕ್ಕೆ ಇವರು ಈ ವರೆಗೂ ಅಡ್ಡಿಬಾರದಿರುವದರಿಂದ ಇವರು ಅನಾವಶ್ಯವಾಗಿ ದಬ್ಬಾಳಿಕೆಯನ್ನು ಕೈಕೊಳ್ಳುವವರಾಗಿಲ್ಲವೆಂತ ತೋರುತ್ತದೆ

ಡೀತದಲ್ಲಿ ವಿಶೇಷವಾಗಿ ದೇಶಾದಿರುವ ಸ್ವರಾಜ್ಯದ ಅಭಿಲಾಷೆಯು ಕೈ ಗೂಡುವಂತೆ ನೂಡಲು ಈ ಚೀಫ್ ಕಮಿಶನರವರಿಗೆ ಅನುಕೂಲವಿದೆ. ಇವರು ಈ ಅನುಕೂಲವನ್ನು ಈ ವರೆಗೆ ಉಪಯೋಗಿಸಿದಂತೆ ತೋರುವದಿಲ್ಲ. ದೇಶದ ರಾಜಕೀಯ ಭವಿಷ್ಯತ್ತನ್ನು ದೇಶದ ಹಿತಕ್ಕಾಗಿ ರೂಪಿತ ಪಡಿಸಲು ಇವರಿಗೆ ಸಹಾಯ ಮಾಡಬಹುದು. ಇವರ ಕಾಲದಲ್ಲಿ ಲಂಡನ್ನಿನಲ್ಲಿ ಚಕ್ರಗೋಷ್ಠಿಯು ನಡಿಯುತ್ತದೆ. ಜನರ ಅಭಿಪ್ರಾಯವನ್ನು ನಿಜ ರೀತಿಯಿಂದ ಇಂಡಿಯಾ ಸರಕಾರಕ್ಕೆ ತಿಳಿಸಿದರೆ ಪ್ರಜಾ ಜವಾಬ್ದಾರಿ ಸರ್ಕಾರವು ಕೊಡಗಿಗೆ ಸುಲಭದಲ್ಲಿ ದೊರೆಯುತ್ತಿತ್ತು. ಚಕ್ರಗೋಷ್ಠಿಯಿಂದ ಸ್ವಯೋಜನವಾಗುವ ವಿಷಯದಲ್ಲಿ ಸಂಶಯವಿದೆಯಾದರೂ ಮುಂದೆ ವಾರ್ಲಿಮೆಂಟಿನಲ್ಲಿ ರಾಜಕೀಯ ಸುಧಾರಣೆಗಳ ಖಾನೂನು ತಯಾರಾಗುವಾಗಲೂ ಇವರೇ ಚೀಫ್ ಕಮಿಶನರಾಗಿ ಇರಬಹುದಾದ್ದರಿಂದ ಆಗಬಾರದೂ ಕೊಡಗು ಈಗಿನ ನಿರಂಕುಶ ಅಧಿಕಾರದಿಂದ ತಪ್ಪಿ ಸ್ವಜಾ ಜವಾಬ್ದಾರಿ ಸರ್ಕಾರವು ಸ್ಥಾಪಿಕವಾಗಲು ಸಹಾಯ ಮಾಡಬಹುದು.

ಇವರ ಉದ್ದೇಶ ಎಷ್ಟೇ ಬಳ್ಳೇದಿರಲಿ, ದೇಶದ ಅಭಿಪ್ರಾಯವನ್ನು ಬಹಿರಂಗಸಡಿಸದೆ ಇವರಿಂದ ಯಾವ ಸಹಾಯವೂ ಆಗಲಾರದು. ಆದ್ದರಿಂದ ಸ್ವರಾಜ್ಯ ಸಂವಾದನೆಗಾಗಿ ಶಾಂತ ರೀತಿಯಿಂದ ನ್ಯಾಯರೀತಿಗೆ ಒಳಪಟ್ಟು ಚಳವಳವನ್ನು ಎಡೆ ಬಿಡದೆ ನಡಿಸಿ ಸ್ವರಾಜ್ಯವನ್ನು ಸಂವಾದನೆ ಮಾಡುವುದು ದೇಶಿಯರ ಕೃಯಲ್ಲಿದೆ.

## ಖಾದಿ ಬಟ್ಟೆಯೂ, ಶಾಲಾಧಿಕಾರಿಗಳೂ.

ಕೊಡಗು ಕಮಿಶನರವರು ಕಳೆದ ಅಕ್ಟೋಬರ್ ತಾರೀಕು 7ರ ವೀರಾಜಪೇಟೆಯ ಪಬ್ಲಿಕ್ ಮೀಟಿಂಗಿನಲ್ಲಿ ಹೇಳಿದ ವಿವರವನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ ಖಾದಿ ಬಟ್ಟೆಯನ್ನು ವಿದ್ಯಾರ್ಥಿಗಳು ಹಾಕಬಹುದೆಂತಲೂ, ಇಂಥಾದ್ದಕ್ಕೆ ಸರಕಾರದ ಯಾವ ಆಕ್ಷೇಪಣೆ ಇಲ್ಲವೆಂತಲೂ ಹೇಳಿದ್ದಾರೆ. ಅಲ್ಲದೆ ಶಾಲಾ ಸಬ್ ಆಸಿಸ್ಟೆಂಟ್ ಇನ್ಸ್‌ಪೆಕ್ಟರು ಈ ವಿಷಯದಲ್ಲಿ ಕೊಟ್ಟ ಸರ್ಕ್ಯೂಲರ್ ವಿಷಯ ತನಗೆ ಗೊತ್ತಿಲ್ಲವೆಂದೂ ಸಹ ಹೇಳಿದರು.

ಅವೇ ದಿನ ಪಬ್ಲಿಕ್ ಮೀಟಿಂಗ್ ಮಾಡಿ ಆದರ ತಾವು ಗಳನ್ನು ಕಮಿಶನರಿಗೆ ತಳುಹಿಸಿದ್ದಾರೆಂದೂ ತಿಳಿಯುತ್ತೇವೆ ಇಂದು ಕಡೆಯಲ್ಲಿ ಶಾಲಾಧಿಕಾರಿಗಳು ಈ ತರದ ನಿರ್ಬಂಧದ ಸರ್ಕ್ಯೂಲರ್‌ಗಳನ್ನು ಕೊಟ್ಟಿದ್ದೂ, ಇನ್ನೊಂದು ಕಡೆ ಸರ್ಕಾರದ ಮುಖ್ಯಾಧಿಕಾರಿಯೂ ಕಮಿಶನರವರು ಖಾದಿ ಕೊಡಲಿಕ್ಕೆ ಆಕ್ಷೇಪಣೆ ಇಲ್ಲವೆಂದು ಹೇಳಿದ್ದೂ ಜನರ ಮನಸ್ಸಿನಲ್ಲಿ ಕಳಂಕಕ್ಕೂ, ಜರ್ಜರಿಗೂ ಅವ್ಪದನನ್ನುಂಟುಮಾಡಿದೆ. ಕೆಲವರು ಕಮಿಶನರು ಹೇಳಿದ್ದು ಸರಿಯೊ, ಅಥವಾ ಶಾಲಾಧಿಕಾರಿಗಳು ಹೇಳುವದು ನಿಯೋ ಎಂಬುದರಲ್ಲಿ ವಿವಾದಾಸ್ಪದದಲ್ಲಿರುವಾರ್ತಾರೆ.

## ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರೆನ್ಸ ಕಂಪೆನಿ ಲಿಮಿಟೆಡ್, ಧಾರವಾಡ.

(೧೯೧೬ನೇ ಇಸವಿಯ ಹಿಂದುಸ್ಥಾನದ ಕಂಪೆನಿಯ ಏನೇ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ)

### ಏಜಂಟರು ಬೇಕು.

ಕನ್ನಡ ನಾಡಿನಲ್ಲಿ ಕನ್ನಡಿಗರ ಧನಸಹಾಯದಿಂದ ಸ್ಥಾಪಿಸಲ್ಪಟ್ಟ ಮತ್ತು ಕನ್ನಡಿಗರಿಂದ ನಡೆಸ ಲ್ಪಟ್ಟ ಈ ಮೊದಲನೇ ಕಂಪೆನಿಗೆ ಶೇರುಗಳನ್ನು ಮಾರುವದಕ್ಕೂ, ವಿಮೆಯ ಕೆಲಸವನ್ನು ಕಂದು ಕೊಡುವದಕ್ಕೂ ಎಲ್ಲಾ ಜಿಲ್ಲೆಗಳಲ್ಲಿ ಏಜಂಟರು ಬೇಕಾಗಿರುವರು ವಿಮೆಯ ಕೆಲಸವನ್ನು ಗ್ಯಾರಂಟಿ ಮಾಡಿದಲ್ಲಿ ವಿಶೇಷ ನವಕತ್ಕುಗಳು ಕೊಡಲ್ಪಡುವವು. ಕನ್ನಡಿಗನೇ ತೀರ್ಪನೇ ನಮ್ಮ ಕೆಲಸವನ್ನು ಕೈಕೊಂಡು ಲಾಭಗೊಡಿಕೊಳ್ಳಿರಿ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Huilgolkar.
ಸೆಕ್ರೆಟರಿ.
ಯು. ಕ. ಇ. ಕ. ಲಿ. ಧಾರವಾಡ.

26—22

Printed & published by K. P. Chinnappa at "Kodagu" Press, Mercara for "Kodagu" Ltd.

# ಕೊಡಗು.

ಸತ್ಕೀರ್ತಿ ಭೂತದಯಯುಗ್ ವಿದಾ ವೀತಿ ಪ್ರಸುತ ತಾ ॥ ಏಕಮತ್ಕೀರ್ತಿಪ್ರದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ॥

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಕೋಟೆರ ಸಿ. ಚಿಣ್ಣಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೦ | ಮಡಿಕೇರಿ, ಸನ್ ೧೯೩೦ನೇ ಇಸವಿ ಡಿಸೆಂಬರ್ ತಾರೀಕು ೧೯ನೇ ಶುಕ್ರವಾರ. | ಸಂಚಿಕೆ ೨೨



'The Twins,'
MERCARA

Gentleman,

Accept my immense thanks for your kind letter and the LOVELY LITTLE ROSE BOWL, which was to hand recently. The WORKMANSHIP of the BOWL is SPLENDID. I appreciate it very much.

Yours truly,
(Sd) Mrs. K. C. Subbiah.

Telephone :- 3145

Telegrams - 'Precious"

DIAMONDS

JEWELLERY

GOLD & SILVER ARTICLES OF ALL PATTERNS.

'The Valley'
MERCARA.

Dear sir,

I Should write to you in appreciation of the PROMPT EXECUTION of the order and the FINE WORKMANSHIP of the RING sent to me. To deal once with you is to deal again when anything is wanted

Yours faithfully,
(Sd) B S. Kushalappa.

V. SUBRAMANIA IYER
JEWELLER

2 & 3 Kuppumuthu Street, Tiruvateesvaranpet, Designs & Estimates Free on Application Post Box 423, Triplicane, MADRAS. 52-6



ಕಾರ್ಡು ಒದಿದರೆ ಅಗಿನ ಕ್ಷೌರಂಗಳು ಮೂ ಏಳಂಗಿ ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬರ್ಚಿಗಳು, ತೋಟಿಗಳು, ಶೇಖಗಳು, ವ ಮ್ಮ ನುತುಲ ಚೀಟಿಯು ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
210 Abdul Rehman Street. BOMBAY.

44—12

ಕಟುಕಷಾಯ ಮಲೆಜ್ವರಕ್ಕೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದಾಗ ಗುಣವಾಗದಿರುವ ಮಲೆ ಜ್ವರ ದಿನ ಬಿಟ್ಟು ಬರುವ ಜ್ವರ, 3-4 ದಿನಕ್ಕೊಮ್ಮೆ ಸಾರಿ ಬರುವ ಜ್ವರ, ನಗಿಸಿ ಬರುವ ಜ್ವರ ಮತ್ತು ಜ್ವರಕ್ಕೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, 3ಕ್ಕೆ ರೂ. 4—0—0 6ಕ್ಕೆ ರೂ 7—8—0, 12ಕ್ಕೆ ರೂ 14

ಚಿಂದನಾಸವ:—ಶರೀರ ಪ್ರಮೇಹ ಮೂತ್ರ ಕೃಚ್ಛ್ರ ಮೂತ್ರ ಸಮಸ್ಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಸಿಂಡಗೆಗೆ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ನೀರು ಬರುವುದು, ಮೂತ್ರದಲ್ಲಿ ಧಾತು, ಹುರಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಕಡಿಮೆಯಲ್ಲಿ ಸಾಮಸ್ಯವಿಲ್ಲದಿರುವುದು, ಬೆಚ್ಚದಲ್ಲಿ ಉರಿ, ಬಾಯೂರಿಕೆ, ಸ್ವಪ್ನಾವಸ್ಥೆ ಮೂತ್ರ ನಾಳದಲ್ಲಿ ಹುಣ್ಣುವ ನೋವಿಗೆ ಇವಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3, ಒಕ್ಕೆ ರೂ 1—4—0 3—8—0, 6—12—0

ರೋಮನಾಸಿನಿ:— ತಿ ಹುಡಿಯನ್ನು ಸೀಸೆಲ್ಲಿ ಕಲಸಿ ಹೆಣ್ಣುಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಪ ಯಾಗುವುದು ಹಚ್ಚಿ 1ಕ್ಕೆ 6 ಆಣೆ, 3ಕ್ಕೆ ಡಜನಿಗೆ ರೂ 1, 1 ಡಜನಿಗೆ 3—8—0

ಮೆನೋರಾಲ್ಜಾಸಿನಿ ಕ್ಷೀರ:—ಶರೀರವು ಶರೀರಗುವುದು, ತಲೆಸುತ್ತಿ, ಕಣ್ಣುರಿ, ಸೀಯುಂದ ನೀರು ಸೋರುವುದು ಕೆಲವು ಕಣ್ಣು ಸೋವು, ಅಸ್ಪಾರ ಪಟ್ಟೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇತಾದಿಗಳಲ್ಲಿ ಒಂದಿಷ್ಟು ಗುಣವಾಗುತ್ತದೆ. ಈ ಔಷಧವನ್ನು ಎಲ್ಲಿ ನಿಶ್ಚವಾಗಿರುವ ಕಡಿದನ್ನು ಬೆಳಿಯಿಸಿ ಕೆತ್ತಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಆಕಾಲಕ್ಕೆ ಹಣ್ಣಾಗುವಂತೆ ಮಾಡುವುದು ಕಡಿದು ಕೆಡದು ಇದ್ದರೆ ಹೆಚ್ಚಿನ ಕಡಿದನ್ನು ಮುಟ್ಟುತ್ತದೆ ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0. ಮೂರು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಲಾಸ—ಮನೋಲ್ಲಾಸಿನಿ ಕರಂಡಿಕೆ,

52—33 ಕಲಿಯಾಗು ತಂಡಿ ಮೋಡಿ] 9. ಮಂಗಳೂರು.

ಬಾಲಾರ್ಕಮದು.

ನಮ್ಮ ಮಕ್ಕಳ ಸ್ವಾಂಥ್ಯವನ್ನು ಸೋದಿಸೇಕಾದರೆ ಅದ್ಭುತ ಗುಣವಿಳ್ಳ ಬಾಲಾರ್ಕಮಧುವನ್ನು ಕೊಡಿರಿ ಮಕ್ಕಳು ಕೊಳ್ಳಗೆ

ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಒಮ್ಮೆ ಬೇಗೆ ಪುಷ್ಟಿಯೂ, ಬಲವೂ ಬರುವದು ದಿನ ದಿನಕ್ಕೆ ಆರೋಗ್ಯವೂ, ತೊಳಪೂ ಹೆಚ್ಚುವದು. ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ ಸೀಸೆ 1ಕ್ಕೆ 12 ಆಣೆ. ಮೆ ಖ 9 ಆಣೆ.

52—49 ಶ್ರೀಯುಂ. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ.
(ಮೈಸೂರು ಸೀಮೆ)

ಕೊಡಗು.

ಸರ ೧೯೬೦ನೇ ಇಸವಿ
ಡಿಸೆಂಬರ್ ತಾ ೧೯ನೇ ಶುಕ್ರವಾರ.

## ಸ್ಥಳೀಯ ಸರಕಾರದ ಕೃತ್ಯ.

ವೃತ್ತಾಂತ ಪತ್ರಿಕೆಗಳನ್ನು ಪೋಸ್ಟ್ ಮಾಸ್ಟರ್ ಜನರಲ್ ಆಫೀಸಿನಲ್ಲಿ ರಿಜಿಸ್ಟರ್ ಮಾಡಿಸಿದರೆ ಅರ್ಧ ಟಪ್ಪಾಲು ಚಾರ್ಜಿನಲ್ಲಿ ಟಪ್ಪಾಲು ಮೂಲಕ ಕಳುಹಿಸುವ ಅನುಕೂಲ ದೊರಕುತ್ತದೆ ನಮ್ಮ ಪತ್ರಿಕೆಗೂ ಕಳೆದ ಸೆಪ್ಟಂಬರ್ ತಿಂಗಳ ವರೆಗೆ ಈ ರಿಯಾಯ್ತಿ ಇತ್ತು. ಸೆಪ್ಟಂಬರ್ ಆಖೈರಿನಲ್ಲಿ ಪೆನ್ಸಿನಿಂದ ಜಾಮೀನ್ ಕೇಳಿದ ನಂತರ ಪೇಪರ್ ನಿಂತು ಹೋಗಿತ್ತಷ್ಟೆ. ಪುನಃ ಆರ್ಡಿನೆನ್ಸ್ ತೀರಿದ ಸಮಯದಲ್ಲಿ ಪೇಪರ್ ಸೊರ ಟೀಕೆಂಬ ನಿರೀಕ್ಷಣೆಯಿಂದ ಪುನಃ ಪತ್ರಿಕೆಯನ್ನು ರಿಜಿಸ್ಟರ್ ಮಾಡಿಸಿದ ವಿಷಯವನ್ನು ರಿಯಾಯ್ತಿ ದರದ ಪೋಸ್ಟೇಜ್ ಹಾತಿದರೆ ಪತ್ರಿಕೆಗಳನ್ನು ಅಂಗೀಕರಿಸಕೂಡದೆಂತ ಮಡಿಕೇರಿ ಪೋಸ್ಟಾಫೀಸಿಗೆ ತಿಳಿಸಿರುವುದಾಗಿ ಪೋಸ್ಟ್‌ಮಾಸ್ಟರ್ ಜನರಲ್‌ರಿಂದ ನಮಗೆ ಕಾಗದ ಬಂತು

ಪೋಸ್ಟಾಫೀಸ್ ಖಾನೂನನ್ನು ಓದಿ ನೋಡಿದರೆ ವರ್ತಮಾನ ಪತ್ರಿಕೆಯನ್ನು ಪ್ರಕಟಿಸುವವರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಮುಂದೆ ಡಿಕ್ಲೇರ್ ಮಾಡಿದ್ದಾರೆಂಬುದಕ್ಕೆ ಒಂದು ಸರ್ಟಿಫಿಕೇಟನ್ನು ತೋರಿಸಿ ಬರಕೊಂಡರೆ ಪತ್ರಿಕೆಯನ್ನು ರಿಜಿಸ್ಟರ್ ಮಾಡಿಸಿಕೊಳ್ಳಾಗುತ್ತದೆಯೆಂತ ಇದೆ ಪ್ರೆಸ್ ಆರ್ಡಿನೆನ್ಸ್ ಹೋದ ನಂತರ ಸರಿಯಾದಕತ್ತನನ್ನು ಹೊಸದಾಗಿ ಪಡಿಸಿಕೊಂಡವರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಮುಂದೆ ಮಾಡಬೇಕಾದ ಡಿಕ್ಲೇರೇಶನ್ನು ಮಾಡಿದರು ಡಿಕ್ಲೇರೇಶನ್ ಆದ ಬಗ್ಗೆ ಸರ್ಟಿಫಿಕೇಟ್ ಕೊಡಬೇಕೆಂತ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಕೂಡಲೇ ದರ್ಖಾಸ್ತು ಮಾಡಲಾಯಿತು ಅರ್ಜಿ ಮೇಲೆ ತಾನು ಸರ್ಟಿಫಿಕೇಟ್ ಕೊಡಕಾಗುವದಿಲ್ಲ, ಆರ್ಡಿಯನ್ನು ಚೀಫ್‌ಕಮಿಶನರಿಗೆ ಳಿಸಿಲಾಗುತ್ತದೆಯೆಂತ ಹೇಳಿದರು ಅರ್ಜಿ ಬರಕೊಂಡು ಸುಮಾರು ಒಂದೂವರೆ ತಿಂಗಳಾದರೂ ಈ ವರೆಗೂ ಯಾವ ಹುಕುಮೂ ಬಂದಿರುವುದಿಲ್ಲ. ಸರಕಾರದ ಈ ವರ್ತನೆಯಿಂದ ವಾರ ವಂದರ ನಮ್ಮ ಪತ್ರಿಕೆಯ ರವಾನೆಗೆ ಸುಮಾರು 20 ರೂಪಾಯಿ ಹೆಚ್ಚು ಖರ್ಚಾಗುತ್ತದೆ ಸ್ಥಳೀಯ ಸರಕಾರದಿಂದ ಸರ್ಟಿಫಿಕೇಟಾಗಲೀ ಆಧುನಾ ಪೋಸ್ಟ್‌ಮಾಸ್ಟರ್ ಜನರಲರಿಂದ ರಿಜಿಸ್ಟರಾದ ಒಗ್ಗೆ ನಂಬರಾದರೂ ಬಂದೀತೆಂತ ಈ ವರೆಗೂ ಕಾದು ನೋಡಿದ್ದಾಯಿತ. ದೇಶದ ಜನರು ಕಂಪೆನಿ ಮಾಡಿಕೊಂಡು ನಡಿಸುತ್ತಿರುವ ಈ ಪತ್ರಿಕೆಯ ವಿಷಯದಲ್ಲಿ ಸ್ಥಳೀಯ ಸರಕಾರದವರು ತೋರಿಸುತ್ತಿರುವ ವರ್ತನೆಯು ಒಳ್ಳೆ ವಿಷಾದಕರವಾಗಿರುವುದರಿಂದ ಜನರಲ್ಲಿ ಕುಂಬಾ ಅಶ್ಚರ್ಯವನ್ನುಂಟುಮಾಡಿದೆ ಕಿದು

ಸ್ಥಳೀಯ ಸರಕಾರದ ಮಂತ್ರಿ ಪೋಸ್ಟಲ್ ಖಾತೆಯವರ ವರ್ತನೆಯು ಖಾನೂನಿಗೆ ಸಲಯಿರುವಂತೆಯೂ ತೋರಿ ಒರುವುದಿಲ್ಲ. ಪೋಸ್ಟಲ್ ರೂಲ್ಸ್ ಮೇರೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಸರ್ಟಿಫಿಕೇಟ್ ಕೊಟ್ಟರೆ ರಿಜಿಸ್ಟರ್ ಮಾಡಲಾಗುವುದೆಂತ ಇದೆ ಪೋಸ್ಟಮಾಸ್ಟರ್ ಜನರಲರಿಂದ ಬಂದ ಪತ್ರದಲ್ಲಿ ಪೊಲಿಟಿಕಲ್ ಆಫೀಸರ ಸರ್ಟಿಫಿಕೇಟು ಬೇಕೆಂತ ಕೇಳಿದ್ದಾರೆ. ಬ್ರಿಟಿಷ್ ವ್ಯಾಪ್ತ್ಯವಾದ ಕೊಡಗಿನಲ್ಲಿ ಪ್ರಕಟವಾಗುವ ಪತ್ರಿಕಗೆ ಪೊಲಿಟಿಕಲ್ ಆಫೀಸರ ಸರ್ಟಿಫಿಕೇಟ್ ಅವಶ್ಯವೇ ಇಲ್ಲ ಎರಡನೇ, ಪತ್ರಿಕೆಯನ್ನು ಪ್ರಕಟಿಸುವವರು ಡಿಕ್ಲೇರ್ ಮಾಡಿಕೊಂಡದ್ದಕ್ಕೆ ಸರ್ಟಿಫಿಕೇಟ್ ಬೇಕೆಂತ ಅವೇಕ್ಷಿಸಿದಾಗ ಕೊಡುವುದಿಲ್ಲವೆಂತ ಹೇಳಲು ಅವರಿಗೆ ಹಕ್ಕಿರುವಂತೆ ಕಾಣುವುದಿಲ್ಲ. ಅವರು ಸರ್ಟಿಫಿಕೇಟ್ ಕೊಡದಂತ ಸ್ಥಳೀಯ ಸರಕಾರವು ಮಾಡುವೆಂತಂಬ ಸಂಶಯ ವಿವೆ. ಇವುಗಳಿಂದ ಸರಕಾರಿ ಇಲಾಖೆಗಳ ಕೃತ್ಯಗಳು ಖಾನೂನಿಗೆ ವಿರೋಧವಿರುವಂತೆ ಕಾಣುತ್ತದೆ

ಅಪಹಾಸ್ಯಕ್ಕೆ ಪತ್ರಾಸೆ ಕೊಡುವ ಎಷ್ಟೋಪತ್ರಿಕೆಗಳು ಬೇರೆ ಪ್ರಾಂತ್ಯಗಳಂದ ಹೊರಡುತ್ತಲಿವೆ ಅಲೆಲ್ಲಾ ಆಯಾ ಪೋಸ್ಟ್ ಮಾಸ್ಟರ್ ಜನರಲರ ಆಫೀಸಿನಲ್ಲಿ ರಿಜಿಸ್ಟರಾಗಿವೆ ಹೀಗಿರುವಾಗ ನಮ್ಮ ಪ್ರಾಂತ್ಯಕ್ಕೆ ಸಂಬಂಧಪಡುವ ಪೋಸ್ಟ್‌ಮಾಸ್ಟರ್ ಜನರಲರು ಮಾಡಿರುವ ಹುಕುಮೂ ಸ್ಥಳೀಯ ಸರಕಾರವು ಸರ್ಟಿಫಿಕೇಟು ಸಿಕ್ಕದಂತೆ ಮಾಡಿರುವುದೂ ಸಹ ನ್ಯಾಯವಾದದ್ದಲ್ಲ. ಇನ್ನಾದರೂ ಕಡಮೂಡದೆ ಸ್ಥಳೀಯ ಸರಕಾರವು ಪೋಸ್ಟ್‌ಮಾಸ್ಟರ್ ಜನರಲರಿಗೆ ಒಪ್ಪಿದು ಪತ್ರಿಕೆಯನ್ನು ರಿಜಿಸ್ಟರ್ ಮಾಡಿಸಲು ಸಹಾಯ ಕೊಟ್ಟಾರಂತ ನಂಬುತ್ತೇವೆ.

## ಮೂವುಕೂಟ ಟ್ರಾಮ್‌ವೇ.

ದೇಶದಲ್ಲಿ ಏಳೇ ಆಸೆಯುಂತಿದ್ದು ಹದಿನಾಲ್ಕು ಲಕ್ಷ ಕ್ಕಿಂತ ಹೆಚ್ಚಾಗಿ ಹಣ ವ್ಯಯ ಮಾಡಿಸಿದ ಮೂವುಕೂಟ ಟ್ರಾಮ್‌ವೇ ಆಲಸವು ಜನರಿಗೆ ಬಹಳ ನೋವನ್ನುಂಟುಮಾಡಿತ್ತು. ಇದನ್ನು ಮುಚ್ಚದಿದ್ದಿದ್ದರೆ ಪುನಃ ವರ್ಷ ವರ್ಷವೂ ಲಕ್ಷಗಟ್ಟಿ ರುಪಾಯಿಗಳು ಅದರ ಮೇಲ ಉಸ್ತುವಾರಿ ಕೆಲಸಕ್ಕೆ ಖರ್ಚಾಗುತ್ತಿತ್ತು.

ಕಳೆದ ಫೋರ ಯುದ್ಧದ ಸಮಯದಲ್ಲಿ ವಿನೂನಕ್ಕೆ ಸುರವನ್ನು ಒದಗಿಸಲಿಕ್ಕಾಗಿ ಈ ಕೆಲಸವನ್ನು ಸುರುಮಾಡಿ ಯುದ್ಧವು ಮುಗಿದನಂತರ ಇಂಪೀರಿಯಲ್ ಸರಕಾರದವರು ಎಲ್ಲಾ ಖರ್ಚನ್ನು ನಮ್ಮ ಸರಕಾರದವರ ಮೇಲೆ ಹಾಕಿಬಿಟ್ಟರು ಯುದ್ಧದ ಎಲ್ಲಾ ಖರ್ಚನ್ನು ಇಂಪೀರಿಯಲ್ ಸರಕಾರವೇ ವಹಿಸಿರುವಾಗ ಈ ಹದಿನಾಲ್ಕು ಲಕ್ಷ ರುವಾಯಿಗಳು ಖರ್ಚಾದದ್ದನ್ನು ನಮ್ಮ ವ್ಯಾಂತಿಕ ರೆವನ್ಯೂಗೆ ಹಿಂದಕ್ಕೆ ಕೊಡಬೇಕಾಗಿತ್ತು. ಆದರೆ ಇಂಡ್ಯಾ ಸರಕಾರದವರು ಇದಾವ್ದೆದೂ ೧೯೨೬ ದರೆ 1924ರಲ್ಲಿ ಕಾನ್ಸಿಲು ಕೂಡುವಾಗ ಯಾವ ಸಿಲುಕನ್ನೂ ಕೊಡಲಿಲ್ಲ.

ಟ್ರಾಮ್‌ವೇಯಲ್ಲಿ ಇಷ್ಟೆಲ್ಲಾ ಖರ್ಚಾದರೂ ಕೊಂಚ ಮಟ್ಟಿಗಾದರೂ ಉತ್ಪತ್ತಿಯನ್ನು ಟ್ರಾಮ್‌ವೇ ನಾಮಾನುಗಳನ್ನು ಮೂರಾಯದರೂ ಮೂಡಬೇಕಾಂದು ಇಲಾಖೆಯವರಿಗಾಗಲೀ ಯೂ ಸರಕಾರಕ್ಕಾಗಲೀ ತೋರಲಿಲ್ಲ ಒಸರು ಎಷ್ಟೇ ಕೂಗಿದರೂ ಟ್ರಾಮ್‌ವೇ ನಾಮಾನುಗಳನ್ನು ಪೂರ್ತಿಯಾಗಿ ಸಂಗ್ರಹಿಲಿಲ್ಲ ರೇಯಿಲುಗಳು ಈಗಲೂ ರನ್ನೆಯಲ್ಲಿಯೇ ಕಾಣುತ್ತಿ ಈ ವಿಷಯ ಕಳೆದ ಕೌನ್ಸಿಲಿನಲ್ಲಿ ಒಬ್ಬರು ಪ್ರಸ್ತಾಪಿಸಿದ್ದಕ್ಕೆ ನಾಮಾನುಗಳನ್ನು ಅನುಕೂಲವಿರುವ ಜಾಗದಲ್ಲಿ ಸ್ಟೋರು ಮಾಡಿಯವರೆಂದು ಘಾರೆನ್ಸ್ ಮೆಂಬರರು ಜವಾಬು ಕೊಟ್ಟಿದ್ದಾರೆ

ಹೀಗೆ ನಿಜವಲ್ಲದ ಜವಾಬುಗಳನ್ನು ಕೊಟ್ಟದ್ದು ವಿಷಾದಕರ ಇನ್ನಾದರೂ ನಮ್ಮ ಸರಕಾರದವರು ಈ ರೇಯಿಲ್ ನಾಮಾನುಗಳನ್ನು ಒಂದು ಜಾಗದಲ್ಲಿ ಸಂಗ್ರಹಿಸಿ ತಕ್ಕ ಬೆಲೆಗೆ ಸೂರಿ ದೇಶಕ್ಕೆ ಆದ ತುಂಬಾ ನಷ್ಟವನ್ನು ಕಲವು ಮಟ್ಟಿಗಾದರೂ ಭರ್ತಿಮಾಡುವರೆಂದು ನಂಬುತ್ತೇವೆ

## ಕೊಡಗಿನಲ್ಲಿ ಗ್ರಾಮ ಪಂಚಾಯಿತಿ ಆಕ್ಟು.

ಗ್ರಾಮ ಪಂಚಾಯಿತಿಯನ್ನು ಜಾರಿಗೆ ತರಲಿಕ್ಕಾಗಿ ಸರಕಾರದವರು 1926ರಲ್ಲಿ ಕೊಡಗು ಕಾನ್ಸಿಲಿನಲ್ಲಿ ಒಂದು ಖಾನೂನನ್ನು ಪಾಸು ಮಾಡಿದರು ಆಂದಿನಿಂದ ಈ ವರೆಗೆ ಆ ಖಾನೂನು ಯಾವುದೋ ಕಾರಣಂದ ನಿದ್ರಿಸುತ್ತಿದ್ದು ಈಗ ತಾನೇ ಎಚ್ಚರವಾದಂತೆ ಕಾಣುತ್ತದೆ ಗ್ರಾಮ ಪಂಚಾಯಿತಿಯು ಪ್ರತಿ ಗ್ರಾಮದಲ್ಲಿಯೂ ಜಾರಿಗೆ ಒಂದು ಚಿನ್ನಾಗಿ ಕೆಲಸ ಮಾಡಿದರೆ ದೇಶಕ್ಕೆ ಎಷ್ಟು ಕ್ಷೇಮವುಂಟಾಗುತ್ತದೆಂದು ನಾವು ಹೇಳಬೇಕಾಗಿಲ್ಲ.

ಡಿಸೆಂಬರ್ 1ರ ಕೊಡಗ. ಗಜೆಟ್ಟಿನಲ್ಲಿ ಸರಕಾರದವರು ಈ ಆಕ್ಟಿಗೆನುಗುಣವಾಗಿ ರೂಲ್ಸ್‌ಮಾಡಿ ಪ್ರಕಟಿಸಿರುತ್ತಾರೆ ಈ ರೂಲ್ಸ್ ಇಂಗ್ಲಿಷಿನಲ್ಲಿರುವುಗರಿಂದಲೂ, ಕೊಡಗು ಗಜೆಟನ್ನು ತರಿಸುವವರು ಬಹಳ ಕಡಿಮೆ ಜನರಿರುವುದರಿಂದಲೂ, ಗ್ರಾಮ ವಾಸಿಗಳಿಗೆ ಇದರ ನ್ಯೂನಾತಿರಿಕ್ತಗಳನ್ನು ಕಂಡು ಹಿಡಿದು ಅಧಿಕಾರಿಗಳ ಅವಗಾಹನೆಗೆ ತರಲು ಸಾಧ್ಯವಿಲ್ಲ ಈ ರೂಲ್ಸ್ 1931ನೇ ಇಸವಿ ಜನವರಿ 1ರಲ್ಲಿ ಜಾರಿಗೆ ಬರುತ್ತದಂದೂ, ಇದರ ವಿಷಯ ಇಚ್ಛೈವಣೆ ಮತ್ತು ಸೂಚನೆಗಳ ನ್ನು ಕೊಡಕಕ್ಕವರು ಈ ತಾರೀಕಿನೊಳಗೆ ಕಳುಹಿಸಿ ಕೊಡಬೇಕೆಂತಲೂ ಪ್ರಕಟಿಸಿದೆ ಗ್ರಾಮವಾಸಿಗಳಿಗೆ ಪ್ರಯೋಜನವಾಗುವಂತ ಈ ರೂಲ್ಸ್‌ಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಿ, ಸತ್ಕಿಗೆಗಳ್ಳಿಯಂ, ನಾಡುಕಚ್ಚೇರಿಗಳ ಮೂಲಕವೂ ದೇಶದಲ್ಲಿ ಪ್ರಚಾರವಾಗುವುದು ಅತ್ಯಾವಶ್ಯಕವಾಗಿದೆ. ಹೀಗೆ ಪ್ರಕಟಣೆ ಮಾಡಿ ಕಡಿಮೆ ಪಕ್ಷ ಎರಡು ತಿಂಗಳ ಸಮಯವಾದರೂ ನ್ಯೂನಾತಿರಿಕ್ತಗಳನ್ನು ಕಂಡು ಹಿಡಿದು ಅಧಿಕಾರಿಗಳಿಗೆ ತಿಳಿಸಲು ಅವಕಾಶವಿರುತ್ತೆ. ಅಧಿಕಾರಿಗಳು ಕೂಡಲೆ ಮೇಲೆ ಬರೆದಂಥ ವಿಷಯಗಳಿಗೆ ಗಮನಕೊಡಬೇಕಾಗಿ ಕೋರುತ್ತೇವೆ

ರೂಲ್ಸಿನ ವಿಷಯ ನನ್ನ ಅಭಿಪ್ರಾಯವನ್ನು ಮುಂದಿನ ವಾರದ ಪತ್ರಿಕೆಯಲ್ಲಿ ಕೂಡ ತ್ತೇವೆ

## ಶನಿವಾರಸಂತೆ ಆಸ್ಪತ್ರೆ.

ಶನಿವಾರಸಂತೆಯಲ್ಲಿ ಆಸ್ಪತ್ರೆ ತೆಗೆಯಬೇಕೆಂದು ಆ ಹೋಬಳಿಯ ಜನರು ಅನೇಕ ವರ್ಷಗಳಿಂದ ಕೂಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ. ಡಿಸ್ಟ್ರಿಕ್ಟ್ ಬೋರ್ಡಿನವರು ಕಳೆದ ಮೂರ್ ತಿಂಗಳಲ್ಲಿ ಮೂನಾರ್ನಾಡು ಮತ್ತು ಶನಿವಾರಸಂತೆಯಲ್ಲಿ ಆಸ್ಪತ್ರೆ ಇಡಬೇಕೆಂದು ತೀರ್ಮಾನಿಸಿ ಮೂನಾರ್ನಾಡಿನಲ್ಲಿ ಆಸ್ಪತ್ರೆ ತೆರೆದರು. ಆದರೆ ಶನಿವಾರಸಂತೆಯ ಆಸ್ಪತ್ರೆ ಕೆಲಸವು, ಈ ಹೊತ್ತು, ನಾಳೆ ಎಂಬುದಾಗಿ ಮುಂದಕ್ಕೆ ನೂಕಲ್ಪಡುತ್ತಾ ಇದೆ

ಆಸ್ಪತ್ರೆಗಳಿಗಿರುವ ಎಲ್ಲಾ ಔಷಧಗಳೂ, ಸಾಮಾನುಗಳೂ ಒಂದು ಕೆಲವು ತಿಂಗಳಾಯಿತ್ತೆಂದು ತಿಳಿಯುತ್ತೇವೆ ಹೀಗಿದ್ದರೂ ಸಹ ದಿನ ನೂಕುವ ಕಾರಣವೇನೆಂದು ತಿಳಿಯುವುದಿಲ್ಲ ಜಾಬಿಯ ಕೆಲಸವಾಗದ್ದರಿಂದ ಆಸ್ಪತ್ರೆ ತೆರೆಯಲಿಕ್ಕೆ ಸಾಧಕಾಶವಾಯಿತೆಂದೂ, ಮೆದ್ಯೆ ಪ್ಲೇಗು ತಲೆದೋರಿತೆಂದೂ, ಈ ಕಾರಣದಿಂದ ಮುಂದರಿಸಲ್ಪಟ್ಟಿದೆಯೆಂದೂ ತಿಳಿಯುತ್ತೇವೆ ಇವೆರಡು ಕಾರಣಗಳೂ ಆನಾವಶ್ಯವಾದ ಸಾಧಕಕ್ಕೆ ನ್ಯಾಯವಾದ ಕಾರಣಗಳಾಗಿ ಕಾಣುವುದಿಲ್ಲ ಜಾಬಿಯಂ ಸಬ್ ಅಸಿಸ್ಟೆಂಟ್ ಸರ್ಜನರು ಅಲ್ಲಿಯೇ ಇದ್ದಿದ್ದರೆ ಪ್ಲೇಗ್ ವಿಷಯ ಎಚ್ಚರ ತೆಗೆದುಕೊಳ್ಳಲಿಕ್ಕೆ ಎಷ್ಟು ಅನುಕೂಲವಾಗುತ್ತಿತ್ತು. ಸೋಮವಾರಪೇಟೆಯ ಸಬ್ ಅಸಿಸ್ಟೆಂಟ್ ಸರ್ಜನರು ಆಗಾಗ್ಗೆ ಶನಿವಾರಸಂತೆಗೆ ಹೋಗಿ ಆ ಆವಶ್ಯಕತೆಯೂ ಇರುತ್ತಿರಲಿಲ್ಲ. ಜಾಬಿಯ ತೆಂಗಿದರೆಯಿಂದ ತೆರೆಯಲಿಲ್ಲವೆಂಬುದು ಹಾಸ್ಯಾಸ್ಪದವಾದ ಕಾರಣವಾಗಿದೆ ಜಾಬಿಯ ಕೆಲಸವು ಆಗುವ ವರೆಗೆ ಬೇರೆ ಜಾಗದಿಂದ ನೀರು ತಂದು ಕೊಂಡು ಕೆಲಸ ಮಾಡಲಿಕ್ಕೆ ಎಷ್ಟೋ ಅನುಕೂಲಗಳಿವೆ

ಇನ್ನಾದರೂ ಸಿವಿಲ್ ಸರ್ಜನರು ಕಡಮೂಡದೆ, ಕೂಡಲೇ ಈ ಆಸ್ಪತ್ರೆಯನ್ನು ತೆರೆದು ಅನೇಕ ತರದ ಕಾಯಿಲೆಯಿಂದ ನರಳುತ್ತಿರುವ ಹೋಬಳಿಯ ಜನರಿಗೆ ಕಕ್ಕ ಅನುಕೂಲವನ್ನು ಕಲ್ಪಿಸ ವರೆಂದು ನಂಬುತ್ತೇವೆ.

## ವಿಮರ್ಶೆ.

(ಜಯಕರ್ನಾಟಕ.)

ಕನ್ನಡ ನಾಡಿನ ಶ್ರೇಯೋಭಿವೃದ್ಧಿಯನ್ನೇ ಯಾವಾಗಲೂ ಪಾಲೈಸುತ್ತಿರುವ ಸರ್ವೋತ್ತಮವಾದ ಜಯಕರ್ನಾಟಕ ವೊಸ ಪತ್ರಿಕೆಯನ್ನು ಓದಿದ ವಿದ್ಯಾಂಸರು ಕನ್ನಡ ನಾಡಿನಲ್ಲಿ ಬಹಳ ಕಡಿಮೆ ಜನರುಬುಹುದು ಇದರಲ್ಲಿ ಪ್ರಕಟಣೆಯಾಗುತ್ತಿರುವ ರಾಜಕೀಯ, ಕವಿತಾ, ನಾಮೊಪೆಕಾ, ಸತ್ಯಾಗ್ರಹ ಲೇಖನಗಳು ಉಚ್ಚಾಕಂಠವಾಗಿವೆ ಇದರ ಕಳೆದ ನವಂಬರು ತಿಂಗಳ ವಿಶೇಷ ಸಂಚಿಕೆಯಲ್ಲಿ ಕೊಡಗಿನ ಪತ್ರು ಕನ್ನಾಟಕದ ಸೇತ್ಯಾಗ್ರಹಿಗಳು ಭಾವಚಿತ್ರಗಳೂ, ಕರ್ನಾಟಕದ ಮಹನೀಯರೇಕರುಗಳ ನಕ್ಷೆಯೂ ಪ್ರಕಟಿಸಲ್ಪಟ್ಟಿದೆ ಅಲ್ಲದೆ ಅನೇಕಾನೇಕ ಉಪಯುಕ್ತ ಲೇಖನಗಳೂ ಪ್ರಕಟಿಸಲ್ಪಟ್ಟಿವೆ

ಈಗ ತಾನೇ ಪ್ರಕಟಣೆಯಾದ ಡಿಸೆಂಬರು ತಿಂಗಳ ಸಂಚಿಕೆಯಲ್ಲಿ ಕೊಡಗಿನ ಆಹಾರ ವಿಚಾರ ಳು ಮೈಸೂರು ಕೊಡಗು ವಿಚಾರ ಸಮಿತಿಯ ಕಾರ್ಯದರ್ಶಿಗಳಾದ ಶ್ರೀಮತಿ ಕೆ. ಸಿ ಅಕ್ಕಮ್ಮನವರಿಂದ, ಮಂಗಳೂರಿನ ಡಿಪ್ರೆಸ್ಡ್ ಕ್ಲಾಸ್‌ಗಳ ಮಿಶನ್ನಿನ ಕಾರ್ಯಗಳು—ಶ್ರೀ ಜಿ. ಮುಹು, ಗೋವಿಂದ ರಾಯರಿಂದ, ಬಾಡಗರೇಮೆ ಸಾಮಂತ ರಾಜ ಬಳವಳ—ಶ್ರೀ ದೊರೆಸಾಮಿ ಮ್ಯುಂಗಾರವರು M A B L ರವರಿಂದ, ಅರಗಿನ ಕೈಗಾರಿಕೆ—ಸಚಿತ್ರ ಶ್ರೀ ವಾಸುದೇವರಾಯರು ಬಿ ಎ ಯವರಿಂದ ಮತ್ತು ಇನ್ನು ಅನೇಕ ಶ್ರೇಷ್ಠ ಲೇಖಗಳು ಪ್ರಕಟಿಸಲ್ಪಟ್ಟಿವೆ ಇಂಥ ಸಂಚಿಕೆಗಳನ್ನು ಪ್ರತಿ ಒಂದು 9—8—0 ಆಣೆ ಕೊಟ್ಟು ಪಡೆಯಬಹುದಾಗಿದೆ, ಜಯಕರ್ನಾಟಕಕ್ಕೆ 5—8—0 ರೂ. ಕೊಟ್ಟು ಚಂದಾದಾರರಾಗಿ ಕರ್ನಾಟಕದ ಉನ್ನತಿಗೆ ಸಹಾಯಮಾಡಬೇಕೆಂದೂ ಕೊಡಗಿನ ಒಂದುಗುಳ್ಳಿ ಎನಂತಿ ನಂಬುತ್ತೇವೆ

## ಮೊರಾಟಿಕ್ಕೆ.

ಅಮ್ಮತ್ತಿನಾಡು ಹೊಸೂರು ಗ್ರಾಮದ ಮೆ. ಪೊನ್ನಕ್ಚೆಚ್ಚೆರ ಲೇಟ್ ಗಣಪತ್ತಿಯವರ ಕಾರೆಕಾಡಿನಲ್ಲಿರುವ 32 ಎಕರು ಭೂಮಿ, ಅಂದಾಜು 50 ಎಕರು ಚಾಳೆ ಜಾಗ ಸಹ ಮೊರಾಟಿಕ್ಕಿದೆ ಭೂಮಿಯ ಪೈಕಿ 27 ಎಕರು ಸಾಗುವಳಿಯಲ್ಲಿದೆ. ನೀರಿನ ಸೆಂಟರಾಯಿಯು ಕಾಲುವೆ ಮೂಲಕ ಯಾವ ಕಾಲವಲ್ಲೂ ಜೊರೆಯುತ್ತೆ. ಬೆಲೆ ಅಂದಾಜು 10,000 ರೂ ಪಾಯಿ ಒಳಗೆ ಆಗಬಹುದು ಯಾಸಿಪ್ಪವರಿಗೆ ಈ ಕೆಳಗಿನ ಅಡ್ರೆಸ್ಸಿನವರಿಗೆ ಪತ್ರವ್ಯವಹಾರ ನಡಿಸಿ ತಪಶೀಲ್ ತಿಳಿಕೊಳ್ಳಿ ಒಹದು

ಜನ್ಮಡ ಮಂದಪ್ಪ, or ಪೊನ್ನಕ್ಚೆಚ್ಚೆರ ಬೆಳ್ಳಿಪ್ಪ,
ಕೈಕೇರಿ ಗ್ರಾಮ, ಮರ್ಚೆಂಟ್,
ಗೋಣಾಕೊಪ್ಪಲು ವೀರಾಜಪೇಟೆ

## ಕಾನ್ಫೆಂಟುಗಳು ಏನುಮಾಡುತ್ತಿವೆ?

### ಹಿಂದೂಮತೀಯರೇ ಕಣ್ತೆರೆಯಿರಿ!

ಈಗ ಕೆಲವು ದಿನಗಳ ಈಗೆ ಬೆಂಗಳೂರು ನಗರದಲ್ಲಿಯೇ ಇರುವ ಒಂದು ಕಾನ್ಫೆಂಟಿನಲ್ಲಿ ಒಂದು ವಿಚಿತ್ರ ಸಂಗತಿಯು ನಡೆದಂತೆ ತಿಳಿಯುತ್ತದೆ ಬೆಂಗಳೂರು ನಗರದ ಒಂದು ಭಾಗದಲ್ಲಿ ಒರ್ವ ಗೌಂಡ ಮನೆತನದವರು ವಾಸಿಸುತ್ತಿರುವರು. ಇವರಿಗೆ ೧೨ ವರ್ಷದ ಮತ್ತು ೮ ವರ್ಷದ ಮಕ್ಕಳೀರ್ವರು ಇದ್ದರು. ಇವರೀರ್ವರೂ ಹೆಣ್ಣು ಮಕ್ಕಳು. ಈಗ ಈ ಮಕ್ಕಳಿಗೆ ತಂದೆ ಇಲ್ಲದಿರೋಣದ್ದರಿಂದ ಮಕ್ಕಳ ತಂದೆಯ ಆಣ್ತಿಗೆಯನ್ನು ನಡಿಸುತ್ತಿದ್ದರು. ಇವರೀರ್ವರನ್ನೂ ಬೇರೆ ತಿಳಿಸಿದ ಬೆಂಗಳೂರು ನಗರದಲ್ಲೇ ಇರುವ ಒಂದು ಕಾನ್ಫೆಂಟಿಗೆ ವಿದ್ಯಾಭ್ಯಾಸಕ್ಕೆ (?) ಕಳುಹಿಸುತ್ತಿದ್ದರು

ಈಗ ೮-೧೦ ದಿನಗಳ ಈಗಲಿ ಇವರು ಮನೆಗೆ ಒರುವುದು ಸಾವಕಾಶವಾಯಿತು. ಆದರೆ ಸ್ವಲ್ಪ ಹೊತ್ತಾದ ಬಳಿಕ ಸಾಯಂಕಾಲ ೫ ಗಂಟೆಯ ವೇಳೆಗೆ ೮ ವರ್ಷದ ಹುಡುಗಿ ಮೂತ್ರ ಮನೆಗೆ ಒಂದಳು. ಆಗ ಅವಳನ್ನು ನಿನ್ನ ಅಕ್ಕ ಎಲ್ಲಿದ್ದೇ ಎಂದು ಕೇಳಲು, ಅವಳು ಹೇಳಿದುದ್ದೇನೆಂದರೆ—ನಾವಿಬ್ಬರೂ ಒಟ್ಟಿಗೆ ಬರುತ್ತಿದ್ದೆವು, ಮಹಿಳಾಸೇವಾ ಸಮಾಜದ ಬಳಿ ಕೆಲವರು ಮಹಮ್ಮದೀಯರು ನಮ್ಮ ಅಕ್ಕನ ಮೇಲೆ ಬಿದ್ದು ಆ ಬಳೆನ್ನು ಎತ್ತಿಕೊಂಡು ಹೋದರು. ಆಗ ಅನಳ ಕಿವಿಯಲ್ಲಿದ್ದ ಆ ಆಭರಣವನ್ನು ಕೊಟ್ಟು ನೀನು ಮನೆಗೆ ಜೋಗ. 'ಎಂದು ಹೇಳಿದರು' ಎಂದರು ಮನೆಯವರಿಗೆ ಗಾಬರಿಯಾಯಿತು. ಆಗ ಮನೆಯಲ್ಲಿದ್ದವರು ಹೆಂಗಸರು ಮಾತ್ರ. ಅವರು ರೋದನ ಎಡಿಸಶಕಾರಂಭಿಸಿದರು. ಅಸ್ಟರ ವೇಳೆಗೆ ಸುಮಾರು ಸಾಯಂಕಾಲ ೬-೩೦ ಅಥವಾ ೭ ಗಂಟೆಯ ಸಮಯ—ಆ ವೇಳೆಗೆ ಈ ಎರಡು ಮಕ್ಕಳನ್ನೂ ನೋಡಕೊಳ್ಳುತ್ತಿದ್ದ ಯಜಮಾನನು ಮನೆಗೆ ಒಂದನು. ಮನೆಯವರು ವಿಚಾರವನ್ನೆಲ್ಲಾ ಹೇಳಿದರು. ಅತನು ಪೊಲೀಸನವರಿಗೆ ಈ ವರ್ತಮಾನವನ್ನು ತಿಳಿಸಿದನು ಅಂದು ರಾತ್ರಿ ಬಹಳ ಮತ್ತು ಕೈಲೂ ಎಲ್ಲವೂ ಈ ಹುಡುಗಿಗಾಗಿ ಜಪ್ತಿ ಮಾಡಲಾಯಿತು. ಆದರೆ ಮಗು ಸಿಕ್ಕಲಿಲ್ಲ. ರಾತ್ರಿ ಎಷ್ಟು ಎಷ್ಟ ಕಳೆದರೂ ತಂಗಿಯಾದ ೮ ವರ್ಷದ ಹುಡುಗಿಯು ಒಂದೇ ರೀತಿಯಾಗಿ ಮೇಲೆ ಹೇಳಿದಂತೆಯೇ ಹೇಳುತ್ತಿದ್ದರು ಆನಂತರ ಮನೆಯ ಯಜಮಾನರು ಆ ಬಾಲಕಿಯ ಸ್ನೇಹಿತೆಯ ಮನೆಗೆ ಹೋಗಿ ನಮ್ಮ ಮಗು ಒಂದಿದ್ದಳೇ? ಎಂದು ಕಳಿಸಿದುದಕ್ಕೆ ಆ ಕಡೆಯು ಬಂದು ಹೊರಟು ಹೋದಳು ಎಂದು ಉತ್ತರವನ್ನು ಳ್ಳುತ್ತಿ. ಅನಂತರ ಬಡ ಬ್ರಾಹ್ಮಣನು ಮನೆಗೆ ನಿರಾಶನಾಗಿ ಬಂದನು ಹೀಗೇ ರಾತ್ರಿಯೆಲ್ಲಾ ಸಂತಾಪದಲ್ಲಿ ಕಳೆಯಿತು

ಶಾಸ್ತ್ರಶಾಲ ಸುಮಾರು ೪-೩೦ ಅಥವಾ ೫ ಗಂಟೆಯ ವೇಳೆಗೆ ಬಾಗಿಲನ್ನು ತಟ್ಟಿದಂತೆ ಆಯಿತು. ಅದೇನೆಂದರೆ—ಆಕೆ ಒಡುತ್ತಿದ್ದ ಕಾನ್ಫೆಂಟಿನಲ್ಲಿ ನೇರ ಹೋಗಿ ನೆಂಬುದು. ಆಗಲೇ ಅತನ ಮೇಲೆ ತಿಳಿಸಿದ ಈ ಇಬ್ಬರು ಬಾಲಕಿಯರೂ ಓದುತ್ತಿದ್ದ ಕಾನ್ಫೆಂಟಿಗೆ ಹೋದನು ಗೇಟು ಹಾಕಿದ್ದಿತು ಗೇಟು ತಗಿದುಕೊಂಡು ಅತನು ಒಳಹೊಕ್ಕನು ನೆದರು ಕಾನ್ಫೆಂಟಿನ ಮುಖ್ಯಾಧಿಕಾರಿಣಿಯಲ್ಲಿಗೆ ನಿಂತಿದ್ದಂತೆ ತೋರಿತು ಆಳೆಯು ಈತನು ಒಳಹೊಕ್ಕಿದ್ದನೆಯೇ ಈತನು ಗರ್ತಿಸಿದಾತಯೂ, ಈತನ ಬರುವಿಕೆಯು ಆಕಗೆ ಇಷ್ಟವಿಲ್ಲದಾತೆಯೂ ತೋರಿ ಒರುವ ರೀತಿಯಲ್ಲಿ ಎಂಡು ಸಾಯಿಗಳನ್ನು ಈತನ ಕಡೆಗೆ ಜೂರಿ ಬಿಟ್ಟಳು ನಾಲ್ಕಾಗಿಯೂ ಒ ವಾಗಿ ಈತನ 'ಅಮ್ಮಾ ನಾನು ನಿಮ್ಮೊಡನೆ ಸ್ವಲ್ಪ ಮಾತಾಡಬೇಕ, ನಾಯಿಗಳನ್ನು ವಾಪಸು ಕರೆಯಿರಿ' ಎಂದನು. ಇದಕ್ಕೆ ಆಕಯು —"ನಿನಗೆ ಯಾರು? ನನಗೆ ನಿನ್ನ ಗುರ್ತಿಲ್ಲ ಈ ನಡೆ ಹೊತ್ತಿನಲ್ಲಿ ಬರಲು ಕಾರಣವೇನು"? ಎಂದು ಪ್ರಶ್ನಿಸಲು ಆದಕ್ಕೆ ಈತನು "ಅಮ್ಮಾ ನಮ್ಮ ಹುಡುಗಿ ನಾಗಮ್ಮನೆಂಬುವಳೇ ನಾಕರೂ ಇಲ್ಲಿ ಇರುವಳೆಸೇ ನೋತಿಕೊಂಡು ಹೋಗೋಣ ವೆಂದು ಒಂದಿದ್ದೇನೆ" ಎಂದರು.

ಆಕೆ.—ನಾಗಮ್ಮ, ಯಾರೋ ನನಗೆ ಗೊತ್ತಿಲ್ಲ ನೀ ವ್ಯಾರೋ ಮುಂಚೇನೇ ಗೊತ್ತಿಲ್ಲ

ಆತ:—ಜೋಕೆ, ಬೇಗ ಈ ನಾಯಿಗಳನ್ನು ನೀವು ವಾಪಸು ಕರೆದು ನನ್ನ ಮಗು ನಾಗಮ್ಮ ಎಲ್ಲಿರುವೆಂಬುದನ್ನು ತಿಳಿಸಿದರೇ ಸರಿ, ಇಲ್ಲವಾದರೆ ನಾನು ಇನ್ನೊಂದು ಗಂಟೆಯಲ್ಲೇ ನಿಮ್ಮ ಕಾನ್ಫೆಂಟನ್ನು ಪೊಲೀಸಿನವರು ಮುತ್ತುವಂತೆ ಮಾಡುವೆನು.

ಈ ಸೊತುಗಳನ್ನು ಕೇಳಿ ಮತಿಯು ಮೇಲಿದ್ದ ಸ್ತ್ರೀ ವೃತ್ತಿಯು ಇಳಿದು ಒಂದು ವಿನಯದಿಂದ (?) ನೀನಾರು? ಬಾ ನ್ನಿ ಎಂದು ಹೇಳಿ ನಾಯಿಗಳನ್ನು ವಾಪಸು ಕರೆದಳಂತೆ. ಆ ಸಂತರ ಈ ನಾಗಮ್ಮನ ಮೇಲ್ವಿಚಾರಕರು ನಾಗಮ್ಮ ಇರುವಳೇ ಎಂದು ಪ್ರಶ್ನಿಸಲು ಇದ್ದಾಳೆ, ಮಲಗಿದ್ದಾಳೆ ಎಂದಳಂತೆ.

ಆಗ ತಿನರಿಗೆ ಆಶ್ಚರ್ಯವೂ, ಸಂತೋಷವೂ ಆಯಿತು. ಆಗ ಅವರು "ನೀವು ಅವಳಿಗೆ ಮಲಗಲು ಏಕೆ ಜಾಗ ಕೊಟ್ಟಿರಿ? ನಾನು ಆ ಹುಡುಗಿಗೆ ಮೇಲ್ವಿಚಾರಕನಾಗಿರುವುದು ನಿಮಗೆ ತಿಳಿದೂ, ನನಗೆ ಈ ಹುಡುಗಿಯು ಇಲ್ಲಿಗೆ ಒಂದಿರುವುದರ ವಿಷಯವನ್ನೇ ತಿಳಿಸದಿರಲು ಕಾರಣವೇನು?" ಎಂದು ಕೇಳಲು ಆಕೆಯು "ಈ ನಾಗಮ್ಮನು ರಾತ್ರಿ ಬಹಳ ಹೊತ್ತಾದ ಮೇಲೆ ಒಂದು, ನಮ್ಮ ಮನೆಯಲ್ಲಿ ಮಲಗಲು ಜಾಗ ಕೊಡಿ ಎಂದು" ಕೇಳಿದುದರ ಮೇಲೆ ಮಲಗಲು ಜಾಗಕೊಟ್ಟೆವು. ಬೆಳಗಾಗುತ್ತಲೇ ನಿಮಗೆ ಹೇಳಕಳುಹಿಸೆಬೇಕೆಂದಿದ್ದ ಆಶ್ಚರಲ್ಲೇ ನೀವೇ ಒಂದಿರಿ ಎಂದಳಂತೆ.

ಆನಂತರ ಮಕ್ಕಳ ಮೇಲ್ವಿಚಾರಕರು ಇವಳನ್ನು ಎಬ್ಬಿಸಿ ಮನೆಗೆ ಕರೆದು ತಂದರಂತೆ, ಕನ್ನ ತಂಗಿಗೆ 'ನನ್ಮುಕ್ಕನನ್ನು ಮಹಮ್ಮದೀಯರು ಎತ್ತಿಕೊಂಡು ಹೋದರು' ಎಂದು ಈ ಹುಡುಗಿಯೇ ಮನೆಯಲ್ಲಿ ಹೇಳುವಂತೆ ಹೇಳಿ ಕೊಟ್ಟಿದ್ದಳಂತೆ. ಈ ಬಾಲಕಿಗೆ ಕಾನ್ಫೆಂಟಿನಲ್ಲಿ ಅನ್ನ ನೀರ ಹೋಗಲು ಅಲಿಯದೋಧೆಯೇ ಕಾರಣವಲ್ಲವೇ? ಮೇಲೆ ತಿಳಿಸಿರುವಂತೆಯೇ ಎಲ್ಲಾ ಕಾನ್ಫೆಂಟುಗಳೂ ಇಲ್ಲದಿರಬಹುದು. ಆದರೆ ಎಲ್ಲಾ ಒಂಬೇ ಕಾಂತಿಗೆ ಸೇರಿದುವು ಅದುದರಿಂದ ಈ ವಿಷಯವನ್ನು ನಮ್ಮ ಹಿಂದೂ ಮತೀಯರು ಚೆನ್ನಾಗಿ ಓದಿ ತಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಬಹಳ ಎಚ್ಚರದಿಂದ ವರ್ತಿಸಬೇಕು. ಮೇಲೆ ತಿಳಿಸಿದ ಕಾನೆಂಟಿನಂತೆ ಕಾನ್ಫೆಂಟಿನಲ್ಲಿ ಓದುಗಾಂಕೆಯು ಇಲ್ಲದಿದ್ದರೆ ಏನೂ ಎಲ್ಲ. ಜಾತಿಕಡುವುದಸ್ಕಿಂತ ನಿರಕ್ಷರ ಕುಕ್ಷಿಯಾಗಿರುವುದೇ ಮೇಲಲ್ಲವೆ?

"ಕೂರುಬರ ಪತ್ರಿಕೆಯಿಂದ."

— — —

## ಮಹಾತ್ಮಾಜೀಯವರ ಸದ್ಯದ ವಿಚಾರಗಳು.

ಗುಜರಾತ್ ವಿದ್ಯಾಪೀಠದ ಮುಖ್ಯಾಧ್ಯಾಪಕರಾದ ಕಾಕಾ ಕಾಲೇಲಕರು ಯರವಡಾ ಸೆರೆಮನೆಯಲ್ಲಿ ಮಹಾತ್ಮಾ ಗಾಂಧೀಯವರ ಸಂಗಡ ೨೮-೧೧—೩೦ ವರೆಗೆ ಇದ್ದು ಆ ದಿನ ಬಿಡುಗಡೆ ಹೊಂದಿದರು. ಈಗ ಸದ್ಯಕ್ಕೆ ಮಹಾತ್ಮಾಜಿಯವರ ವಿಚಾರಗಳು ಏನಿರಬಹುದು ಎಂಬ ಬಗ್ಗೆ ಸವಿಕ್ಷರಲ್ಲಿ ಕುತೂಹಲವಿರುವುದು ಸಹಜ. ಕಾಕಾ ಕಾಲೇಲಕರವರು ಹೇಳಿದ ಕೆಳಗಿನ ಮಾತುಗಳನ್ನು ನಾವು ಅಕ್ಷರಶಃ ಓದಿದಲ್ಲಿ ನಮ್ಮ ಆ ಕುತೂಹಲವು ಬಹುಮಟ್ಟಿಗೆ ಶಾಂತವಾಗುವದು

ಮಹಾತ್ಮಾಜಿಯವರ ವಿಚಾರಗಳ ಸಾರಾಂಶವು ಹೀಗಿರುವೆಂದು ಕಾಕಾ ಕಾಲೇಲಕರು ಹೇಳಿದರು "ದುಂಡು ಮೇಜಿನ ಪರಿಷತ್ತು ಯಶಸ್ವಿಯಾಗುವದು ಸಾಧ್ಯವಿದೆಯೆಂದು ನನಗೆ ತೋರುವದಿಲ್ಲ ಲಾರ್ಡ್ ಇರ್ವಿನ್ ಸಾಹೆಬರು ಆ ತತ್ಕರಣ ಪೂರ್ವಕವಾಗಿ ಹಿಂದೂಸ್ಥಾನದ ಸಲುವಾಗಿ ಪ್ರಯತ್ನ ಪಟ್ಟಿದ್ದರೆ ಆ ಪರಿಷತ್ತು ಯಶಸ್ವಿಯಾಗುವ ಹಾಗಿತ್ತು. ಕನ್‌ಸ್ಟ್ರಟಿವ್ ವರ್ಕ್ಗದವರ ವಿಶ್ವಾಸವು ಆವರಲ್ಲಿತ್ತ ಆವರು ಎತ್ತಿದ ವಾಕನ್ನು ಕೂಲಿಕಾರ ವರ್ಕ್ಗದವರು ತೆಗೆದು ಹಾಕುತ್ತಿದ್ದಿಲ್ಲ. ಹೀಗಿದ್ದರೂ ಲಾರ್ಡ್ ಇರ್ವಿನ್‌ರು ಆ ರೀತಿಯಿಂದ ಸಯಾನುಭೂತಿ ಪೂರ್ವಕವಾಗಿ ಹಿಂದೂಸ್ಥಾನದ ಸಲುವಾಗಿ ಪ್ರಯತ್ನ ಮಾಡಲಿಲ್ಲ. ಇದನ್ನೆಲ್ಲ ನೋಡಿದರೆ ಕಾಂಗ್ರೆಸ್ಸಿನವರು ದುಂಡು ಮೇಜಿನ ಪರಿಷತ್ತಿಗೆ ಬಹಿಷ್ಕಾರ ಹಾಕಿದ್ದು ಬೇಗಯ್ಯನೇ ಆಯಿತೆಂದು ಹೇಳಬಹುದು.

ಹಿಂದೂಸ್ಥಾನದಲ್ಲಿ ಈ ೧೨೦ ದಿನ ಚಳವಳಿಯನ್ನು ನೋಡಿ ನನಗೆ ಸಂತೋಷವಾಗಿದೆ. ಜನರು ಇಷ್ಟು ಅಹಿಂಸಾತ್ಮಕವಾಗಿ ಆತ್ಯಾಚಾರಗಳನ್ನು ಸಹಿಸುತ್ತಿರುವರೆಂದು ಆತ್ಯಂತ ಸಮಾಧಾನದ ಸಂಗತಿಯು ಇದರಲ್ಲಿ ಈ ಚಳವಳಿಯ ಯಶಸ್ಸಿನ ಬೀಜವು ಇರುವದು. ಸ್ತ್ರೀಯರಂತೂ ಅದ್ವಿತೀಯವಾದ ಧೈರ್ಯ ಬೆಗಳ ತೆನ, ಆತ್ಮಸಾಮರ್ಥ್ಯ, ತ್ಯಾಗ ಇವುಗಳನ್ನು ತೋರಿಸಿದ್ದಾರೆ. ಇನ್ನು ಪುರುಷರು ತಮ್ಮ ದೊಡ್ಡಸ್ಥಿಕೆಯನ್ನು ಹೇಳುವ ದಿನಗಳು ಹಿಂದೆ ಹೋದವು

ಹಿಂದೂಸ್ಥಾನವು ನತಕೀಯರ ಆಳಿಕೆಯ ಮೂಲಕ ದಃಖದಲ್ಲಿ ಒಳಬುತ್ತಿರುವದೆಂಬುದು ಸತ್ಯವಾದ ಮಾತು, ಈ ಪರಿಸ್ಥಿತಿಯನ್ನು ಒದಲು ಮಾಡುವದು ನಮ್ಮ ಕರ್ತವ್ಯವು ಆ ಹಿಂಸಾಮಯವಾದ ಶೈತ್ಯ ಸ್ಥಿತಿಕ, ಮಾರ್ಗದಿಂದಲೇ ನಾವು ಹಾಗೆ ಮಾಡಬೇಕು.

ಹಿಂದೂಸ್ಥಾನದ ಒನಿಗೆ ಕಾವಿಲ್ಲದ ಉಪ್ಪು ದೊರೆಯಬೇಕು ಎಂದು ನನ್ನ ಸ್ಪಷ್ಟವಾದ ಮತವು ಆ ರೀತಿ ಉಪ್ಪು ದೊರಕಿಸುವ ಪ್ರಯತ್ನವನ್ನು ನಾವು ಪ್ರಾಣ ಹೋದರೂ ಬಿಡಕೂಡದೆ.. ಮದ್ಯ ಪ್ರತಿಬಂಧದ ಸಂಗತಿಯೂದರೂ ಹಾಗೆಯೇ ಇರುವದು. ಉಪ್ಪಿನ ಕರವನ್ನು ರದ್ದುಪಡಿಸುವ ಮತ್ತು ಮದ್ಯದ ವ್ಯಾಪಾರವನ್ನು ನಿಲ್ಲಿಸಿ ಜಡುವ ನಮ್ಮ ಪ್ರಯತ್ನಗಳಿಗೆ ಸರಕಾರವು ಎಷ್ಟು ಅಡ್ಡಿ ಒರುವದೋ ಅಷ್ಟು ಅದರ ಬಲವು ಕುಂದಿ ಜನಕ್ಷಯಲ್ಲಿ ಅದರ ಮಹಿಷ್ಠಂಗವಾಗುವದು.

ಪರದೇಶೀ ವಸ್ತುಗಳ ಬಹಿಷ್ಕಾರವನ್ನು ದಿನ ದಿನಕ್ಕೆ ನಾವು ಹೆಚ್ಚಿಸುವ ಬಗೆ ಮಾಡಬೇಕು. ಬ್ರಿಟಿಷ್ ಬಟ್ಟೆಗಳನ್ನು ಮತ್ತು ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಬೇಕು ಎಂದು ನಾನು ತತ್ಪತಃ ಅನ್ನಲಿಕ್ಕೆ ಸ್ವಲ್ಪ ಹಿಂಜರಿಯುವೆನು. ಯಾಕಂದರೆ—ಎಲ್ಲ ಪರದೇ ಬಟ್ಟೆಗಳನ್ನು ಬಹಿಷ್ಕರಿಸಬೇಕು ಎಂದು ನಾನು ಅನ್ನಬಹುದು. ಆದರೆ ಎರಡನೇ ದೇಶದ ಬಟ್ಟೆಗಳನ್ನು ಬಹಿಷ್ಕರಿಸಿದ್ದರೂ ಬ್ರಿಟಿಷ್ ಬಟ್ಟೆಗಳನ್ನು ಬಹಿಷ್ಕರಿಸಿದಂತೆ ಎಂದು ವ್ಯಕ್ತಶಃ ನಾನು ಹೇಳುವದು ಸ್ವಲ್ಪ ಮೆನಸ್ಸಿಗೆ ಬರುವದಿಲ್ಲ. ಆದರೆ ಎರಡನೆಯವರು ಹಾಗೆ ಅಂದರೆ ಅಥವಾ ಮಾಡಿದರೆ ಅದು ಅಂತಹ ದೊಡ್ಡ ಕಷ್ಟ ಎಂದು ನಾನು ಅನ್ನಲಾರೆ. ಉದಾಹರಣಾರ್ಥ-ವಾಗಿ ಈಗ ಬೇ ನಾಲ್ಕನ್ನು ನಸ್ಸ ಗೆಯೆಂದು ಆವನಿಗೆ ಸತ 'ಈಗ ನಮಗೂ, ನಿಮ್ಮ ಜನತಾಂಗಕ್ಕೂ ಯುದ್ಧವು ನಡೆದಿದೆ ಈ ಯುದ್ಧವು ಮುಗಿಯುವ ವರೆಗೆ ನಾನು ನಿಮ್ಮ ದೇಶದ ಸರಕು ಕೊಂಡು ಅದಕ್ಕೆ 'ಸಹಾಸು ಮಾಡಲಾರೆನು" ಎಂದು ಹೇಳುವಲ್ಲಿ ನಿನೂ ಅವಿವೇಕಿಯಲ್ಲವೆಂದೇ ನಸ್ಸ ಮತವು. ಆದುದರಿಂದ ಈ ಯುದ್ಧವು ಮುಗಿಯುವ ವರೆಗೆ ನಾವು ಬ್ರಿಟಿಷ್ ಸರಕಿಗೆ ವಿಶೇಷ ಬಲವಾದ ಬಹಿಷ್ಕಾರ ಹಾಕಬೇಕೆಂದು ಯತಾರಾದರೂ ಚಳವಳಿ ನಡಿಸಿ ಅದು ಯೋಗ್ಯವೇ ಎಂದು ನಾನು ಅನ್ನುವೆನು.

ಕೆಂದಾಯ ಕೊಡಬಾರದೆಂಬ ಚಳವಳಿಯು ಎಷ್ಟು ಕಷ್ಟ ಆದರೂ ಅದು ಬೇಕಬೇಕು. ಆದರೂ ಜನರೂ ಸ್ವಾರ್ಥ ತ್ಯಾಗಕ್ಕೆ ಪೂರ್ಣ ಸಿದ್ಧರಿದ್ದಲ್ಲಿ ಮೂತ್ರ ಅದನ್ನು ಕೈಕೊಳ್ಳುವದು ಯೋಗ್ಯವು. ಒಂದು ಪಕ್ಷದಲ್ಲಿ ಆ ಚಳವಳಿಯನ್ನು ಪ್ರಾರಂಭಿಸಿ ಅಲ್ಲಿಯ ಬೈತರು ಅದನ್ನು ಬಿಟ್ಟರೆ ಅದು ಯೋಗ್ಯವಲ್ಲ. ಇದು ನಿಜವು ಆದರೂ ನನಗೆ ಅದು ವಿಷಾದಕರ ಸಂಗತಿಯಲ್ಲ ಆದೊಂದು ಆ ತರದ ಬಲವನ್ನು ಪಡೆಯುವಾಗ ಮಾಡಿದ ಪ್ರಯೋಗವೆಂದು ಹೇಳಬಹುದು. ಆದರೆ ನೈತಿಕ ದೃಷ್ಟಿಯಿಂದ ನಾವು ಎಲ್ಲಿಯೂ ಯಾವ ಕಾಲಕ್ಕೂ ಅಡೋಗತಿಗೆ ಹೋಗದಂತೆ ಎಚ್ಚರಪಡಬೇಕು."

---

## ಕಾರಾಗೃಹದಲ್ಲಿರುವ ಮಹಾತ್ಮರ ಸ್ಥಿತಿ.

ಎಲವಾಡ ಕಾರಾಗೃಹದಲ್ಲಿ ಬಂಧಿಸಲ್ಪಟ್ಟಿದ್ದು ಈಗ ಎರಡು ವರ್ಷಗಳಿರುವ ಕಾಕಾಕಲೇಲ್ಕರರನರು ಬೊಂಬಾಯಿನಲ್ಲಿ ವಿಲ್ಲೀವಾಲ್ಡ್ ಖಾದಿ ಸಂಘವೇರ್ಪಡಿಸಿದ್ದ ಸಭೆಯಲ್ಲಿ ಉಪನ್ಯಾಸ ನೆಡಿಯವಾಗ್ಗೆ ಮಹಾತ್ಮ ಗಾಂಧಿಯವರ ದೇಹಸ್ಥಿತಿಯನ್ನು ಕುರಿತು ಈ ಪ್ರಕಾರವಾಗಿ ಹೇಳಿರುತ್ತಾರೆ.—

ಕಮಿಷ್ಟ ಒಂದನೆಯೆಡೆಸೆ ಇರಲು ಮಹಾತ್ಮರಿಗೆ ಸ್ವಲ್ಪತ್ಯದನರು ಅನುಮತಿಯನ್ನು ಕೊಡದೆ ತಮಗಿಷ್ಟ ಬಂದವರನ್ನು ಇರಿಸುವರು. ಆದರಂತೆಯೇ ನಾನು ಮಹಾತ್ಮರ ಕೂಡ ಇರಲು ಅನುಜ್ಞೆ ದೊರೆದಿದ್ದಿತು ನಾನು ಮೊದಲು ಎರವಾಡಕ್ಕೆ ಹೋದಾಗ್ಗೆ ಮಹಾತ್ಮರು ಯಾವ ಕೆಲಸವನ್ನು ಮಾಡಿದಾಗ್ಯೂ ಒಳಗೆ ಆಸಕ್ತಿಯಿಂಗಾಗುತ್ತಿದ್ದಿತು ಮಹಾತ್ಮರು ತಮ್ಮ ಕಾಲವನ್ನೆಲ್ಲ ರಾಟೆಯನ್ನ ತಿರುಗಿಸುವುದರಲ್ಲೇ ಕಳೆಯುತ್ತಿರುವರು 1922ರಲ್ಲಿ ಮಹಾತ್ಮರಿಗೆ ೬ ವರ್ಷ ಏಥೆಬ್ಬಲ್ಟ್ಟಾಗ ಅವರು ನಿಷ್ಕಲ್ಲೂ 14—15 ಗಂಟೆಗಳ ವೆರೆಗೆ ಪುಸ್ತಕಗಳನ್ನೋದುತ್ತಿದ್ದರು. ಈ ಸಾರಿ ನೂಲನ್ನು ತೆಗೆಯುವುದರಲ್ಲೇ ಅವರಿಗ ಆಸಕ್ತಿ, ಹೆಚ್ಚಾಗಿದೆ ಈಗ ಹತ್ತಿಯನ್ನು ಕಂಧ್ರಮೂಡಿ ರಾತ ವೆನ್ನು ನಪ ತೆಗೆಯುತ್ತಿರುವರು ಪೋಲೀಸಿನವರು ಪ್ರಜೆಗಳನ್ನು ಲಾಟಿಯಿಂದ ಹೊಡೆಯುತ್ತಿರೆಂಬದನ್ನು ತಿಳಿದಕಗಲೇ ಮಹಾತ್ಮರು ಪುಣ್ಯ ನೇವೆಯನ್ನು ಬಿಟ್ಟು ಕೊಂಡ ಬರ್ಜಾರವನ್ನೂ, ಹಾಲನ್ನೂ ಸೇವಿಸುತ್ತಿರುವರು. ಬೊಂಬಾಯಿನಲ್ಲಿ ಸ್ತ್ರೀಯರು ಮಾಡುತ್ತಿರುವ ಕೆಲಸವನ್ನು ಕೇಳಿ ಮಹಾತ್ಮರು ಬಳಕವಾಗಿ ಹರ್ಷಪಟ್ಟು ಮಹಿಳಾಯುಗವೆಂದು ಹೇಳಿದರು. ಮದಾಸಿನ ಹಿಂದು, ಬೊಂಬಾಯಿನ ಕ್ರಾನಿಕಲ್ ಮತ್ತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗಳು ಮಹಾತ್ಮರಿಗೇ ದಲು ಕೊಡುವುತ್ತಿನೆ.

"ಮೈಸೂರು ಸ್ಟಾರ್"

---

### ಮಡಿಕೇರಿ ಮುನಿಸಿಪಲ್ ಸ್ಕೂಲಿಂದ ಪರವರ ಆಫೀಸಿನಿಂದ.

ಮಡಿಕೇರಿ ಮುನಿಸಿವಾಲಯಿಯಲ್ಲು ಇರುವ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ —

ಹಾಲಿ ವರ್ಷದ ಮಡಿಕೇರಿ ಮುನಿಸಿವಾಲಟಿಯಲ್ಲು ಇರುವ ಮೇನೆಗೆ ಕಂದಾಯವನ್ನು ಸಬ್ ಕಮಿಟಿ ಬೆಂಬರುಗಳು ಬದಲಾಣಿ ಮಾಡಿ ಪಟ್ಟಿ ತಯಾರಿ ಕೊಟ್ಟಿರುವುದನ್ನು ಮುನಿಸಿಪಲ್ ಆಫೀಸಿನಲ್ಲು ಇಡಲ್ಪಟ್ಟಿದೆ ಈ ಪಟ್ಟಿಯನ್ನು ಎಲ್ಲಾ ಜನರು ನೋಡಿತೆಳಿಯಬೆಂಡು ಅವರು ನಿರ್ಧರಿಸಿದಂತೆ ಕಂದಾಯದ ಮೇಲೆ ತಕರಾರು ಇದ್ದಲ್ಲು ಅಂಥಾ ತಕರಾರು ಅರ್ಜಿಗಳನ್ನು ಈ ತಾರೀಖಿನಿಂದ 1930ನೇ ಇಸವಿ ಡಿಸಂಬರು 31ರ ಒಳಗೆ ಸೆಸಿಷನರವರಿಗೆ ಬರೆದು ಕಳುಹಿಸಿ ವುದು ತಪ್ಪಿದರೆ ಆ ನಂತರ ಬರುವ ತಕರಾರು ಅರ್ಜಿಗಳನ್ನು ಅಂಗೀಕರಿಸಲಿಕ್ಕಿಲ್ಲ ವಾದ ಸಂಗತಿ ಈ ಮೂಲಕ ಜಬರಂಗ ಪಡಿಸಿದೆ

ತಾ 25—11—30, ಪಿ ದೇವೈಯ್ಯ,
3—2 (ಪ್ರೆಸಿಡೆಂಟರು,)

---

## ಮೊರಾಟ್ಕ್ಕಿದೆ.

### ವಿಸ್ತಾರವಾದ ಮನೆ, ತೃರೆಮಾಡಿರಿ;

ವೀರಾಜಪೇಟೆ ಸ್ಕೂಲ್ ರೋಡಿನಲ್ಲಿ, ಲೇಟ್ ಸಾಮು ಕಾಕ್ ಮನೆಗೆ ಕಂಜಯ್ಯನವರ ವಿಸ್ತಾರವಾದ ಮನೆ. ಕೊಟ್ಟಿಗೆ, ಕಲ್ಲು ಕಟ್ಟಿದ ಬಾವಿ, ಹಿತ್ತಲು ವಿಶಿಷ್ಟ ವಿಂಡಾಲಟ್ಟಿಕೆ ಎರಡು ಮೂರು ಬಾಡಿಗೆಯಾಗಲು ವಾಸವಿರಬಹುದು, ನೇಯ್ಗೆ, ಬಸ್ ಇತ್ಯಾದಿ ಕುಲಸಿಗಳಿಗೆ ಬಹು ಅನುಕೂಲ. ಈಗ ಸುಕಾವುವ ಮಕ್ಕಳ ಬೋರ್ಡಿಂಗ್‌ಗಾಗಿ ಮಹಮೊಹನ ನಾಲ್ಕನ್ನು ಠಿಕವಾಗಿಗಳಿಗೆ ಜಾಹಿಗೆಗೆ ವಹಿಸಿಕೊಂಡಿರುತ್ತೆ. ಇದಕ್ಕಾ ಸುಸಂದರ್ಭವು ಇನ್ನು ದೊರಕಲಿಕ್ಕಿಲ್ಲ. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿಕೊಳ್ಳಿ.

ಸ್ವಾಮಿ ಕಾಂಭವಾನಂದ,
4—2 ಶ್ರೀ ಕಾರದಾತ್ಮಮ, ಪೊನ್ನಂಪೇಟೆ.

# ವರ್ತಮಾನ ಸಂಗ್ರಹ.

## ಒಳದೇಶ.

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಎಲೆಕ್ಷನ್ ತಾ. 27ನೇ ದಿನ ಬೆಳಿಗ್ಗೆ 11 ಗಂಟೆಗೆ ಜವಿಸಾನ್ವಾದರ ಸಂಘದ ಹಾಲ್‌ನಲ್ಲಿ ನಡೆಯುತ್ತೆ.

ದಕ್ಷಿಣ ಕೊಡಗಿನ ದನಗಳ ಮತ್ತು ತರಕಾರಿಗಳ ಪ್ರದರ್ಶನವು ಕಳೆದ ತಾ. 14—15 ಮತ್ತು 16 ರಲ್ಲು ಗೋಣಿ ಕೊಪ್ಪಲು ಸಂತೆಮೊಳದ ಬಳಿ ನಡೆಯಿತು.

'ಕೊಡಗು' ಕಂಪನಿಯ ಡೈರೆಕ್ಟರುಗಳ ಎಲೆಕ್ಷನ್ ತಾ. 11—1—1931ನೇ ದಿನ ಮಧ್ಯಾನ್ನ 12 ಗಂಟೆಗೆ ವೀರಾಜಪೇಟೆ ಬಿದ್ದರ್ ಸ್ಟೋರ್ ಮಹಡಿಯಲ್ಲಿ ನಡೆಯುತ್ತೆ.

ಮೂರ್ನಾಡು ಮುತ್ತಾರುಮುಡಿ ಗ್ರಾಮದ ಮೆ. ಕಂಬಡಕಂಡ ಸುಬ್ಬಯ್ಯನವರನ್ನು ಗುಂಡು ಹೊಡೆದು ಕೊಂದ ಮೊಖದಮ್ಮೆಯು ಈ ದಿನ ವಿಚಾರಣೆಗೆ ಸುರುವಾಗಿದೆ.

ಕೊಡಗು ಜವಿಸಾನ್ವಾದರ ಸಂಘದ ಎಗ್ಸಿಕ್ಯೂಟಿವ್ ಕಮಿಟಿ ಎಲೆಕ್ಷನ್ ತಾ. 11—1—1931ನೇ ಆದಿತ್ಯವಾರ ದಿನ ಮಧ್ಯಾನ್ನ 1 ಗಂಟೆಗೆ ವೀರಾಜಪೇಟೆ ಬಿದ್ದರ್ ಸ್ಟೋರ್ ಮಹಡಿಯಲ್ಲಿ ನಡಿಯಲಿಕ್ಕಿದೆ.

ಅಮ್ಮತ್ತಿನಾಡು ಸಹಕಾರ ಸಂಘಗಳ ಕಾನ್‌ಫರೆನ್ಸ್ ಕಳೆದ ತಾ 16ರಲ್ಲು ಫೆಡರೇಶನ್ನಿನ ಗೌರವ ಕಾರ್ಯದರ್ಶಿಯವರಾದ ಮ. ಕೆ. ಪಿ. ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಅನೇಕ ಠರಾವುಗಳು ಮಂಜೂರಾದವು.

ಕಳೆದ ತಾ. 12ರಲ್ಲು ಸೋಮವಾರಪೇಟೆ ಟೌನ್ ಸಹಕಾರ ಸಂಘದ ಜನರಲ್ ಮಿಟಿಂಗು ಮೈಸೂರು ರಿಪ್ರೆಸೆಂಟೇಟಿವ್ ಎಸೆಂಬ್ಲಿ ಮೆಂಬರು ಮತ್ತು ಕಾಫಿ ವ್ಹಾರ್ಟರ್‌ಹಾದ ಶ್ರೀಮತಿ ಡಿ ಸಾಕಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು

ಶ್ರೀಮತಿ ಕೂಡಂದೆರೆ ಸೀತವ್ವನವರು ಮಡಿಕೇರಿಯಲ್ಲಿರುವ ಕೊಡವ ಬುಡಿಕಟ್ಟಿನವರಿಗೆ ಅವರ 'ಸನ್ನಿಸೈಡ್' ಸುನೆಯಲ್ಲಿ ತಾ. 1—1—1931ನೇ ದಿನ 3 ಗಂಟೆಗೆ ಒಂದು ಟೀ ಪಾರ್ಟಿ ಕೊಡಲು ಏರ್ಪಾಡು ಮಾಡಿರುತ್ತಾರಾಗಿ ತಿಳಿಯುತ್ತೇವೆ.

ಕಳೆದ ತಾ. 5ನೇ ದಿನ ಅಂದರೆ ಆರಮನೆ ಪೊಳ್ದು ದಿನ ಸಾಯಂಕಾಲ ಕುಂಬೆಲ ಗ್ರಾಮದ ಕೋಳಿಯ್ಯ ಮನೆಯವರಿಗೂ, ಪೊಂಗೇರ ವನೆಯವರಿಗೂ ಹೊಡೆದಾಟವಾಗಿ ಅಧಿಕಾರಿಗಳಿಗೆ ಅರ್ಜಿ ವಗೈರೆ ಒದಿಸುಕೊಳ್ಳಲಾಗಿದೆಯೆಂದು ತಿಳಿಯುತ್ತೇವೆ.

ನಾಪೋಕ್ಲು ನಾಡಿನವರು ತಮ್ಮ ಹುತ್ರಿ ಹಬ್ಬವನ್ನು ಅಂದರೆ ಪೊಳ್ದು ದಿನವನ್ನು ಒಂದೇ ದಿನ ಆಚರಿಸುವ ಬಗೆಬಗೆಯಲ್ಲಿ ಮತ್ತಿ ದೇವರ ಅಪ್ಪಣೆ ಕೇಳಿದ್ದಲ್ಲು ಮೊಮೂಲ್ ವೇಳೆ ಆರಮನೆಯೊಳ್ಳು, ನಾಡುಮೊಳ್ಳು ಆಚರಿಸಬೇಕೆಂತ ತಿಳಿಸಿದರ ಮೇರೆ ಆ ರೀತಿ ಜಾರಿ ಮಾಡಿಯಿರುತ್ತಾರಾಗಿ ವರ್ತಮಾನ.

ಕ್ರಿಸ್‌ಮಸ್ ಹಬ್ಬದ ಉದ್ದಿಶ್ಯ ಕ್ಯಾಲೆಂಡರಿನಲ್ಲಿ ನಮೂದಿಸಿದ ರಜ ದಿವಸಗಳಲ್ಲದೆ ತಾ. 22 ಮತ್ತು 23ರಲ್ಲಿ ಸಹ ಬಾಣಿ ಮುಚ್ಚಲ್ಪಡುವುದೆಂತಲೂ, ತಾ. 31 ನೇ ದಿನ ಮಾಮೂಲಿನ 11½ ಗಂಟೆಯಿಂದ 3½ ಗಂಟೆ ವರೆಗೆ ವೈವಾಟುಗಳಿಗೆ ಖಾಜಾನೆ ತೆರೆಯಲ್ಪಡುವುದೆಂತಲೂ ಟ್ರೆಜರಿ ಆಫೀಸರವರು ತಿಳಿಸಿರುತ್ತಾರೆ.

ನಾಪೋಕ್ಲಿನಲ್ಲಿ ನಿವಾಸಿಗಳಿಗೆ ಅನುಕೂಲವಾಗಿ ಸಾರಾಯಿ ಮತ್ತು ಸೇಂದಿ ಅಂಗಡಿಗಳಲ್ಲಿ ವ್ಯಾಪಾರವು ಮೂಮೂಲ್ ರೀತಿ ಆಗದೆ ಇದ್ದದ್ದರಿಂದ ಕಂಟ್ರಾಕ್ಟುದಾರರು ಕಂತು ಪಣ ಕಟ್ಟದ ಕಾರಣ ಸರಕಾರದವರು ಕಂಟ್ರಾಕ್ಟು ದಾರರ ಜಪ್ತಿಯಿಂದಿಗೆ ವಗೈರೆಗಳನ್ನು ಜಪ್ತಿ ಮಾಡಿರುತ್ತಾರಾಗಿ ವರ್ತಮಾನ.

ಮಡಿಕೇರಿ ಮುನಿಸಿಪಲ್ ಜುನಾವಣೆಯು ಕಳೆದ ತಾ. 15ಕ್ಕೆ ಇರಲ್ಬಟ್ಟದ್ದು ಸರಿಯಷ್ಟೆ. ಸದರಿ ದಿನ ಪೋಲಿಂಗ್ ಆಫೀಸನ್ನು ಎಳು ಗಂಟೆಗೆ ತೆರೆಯುವ ಬದಲು ಒಂದು ಗಂಟೆ ಕಡುವಾಗಿ ತೆರೆದದ್ದರಿಂದ ಪುಕಾರವಾಗಿ ಜುನಾವಣೆಯನ್ನು ಬಾಕಿ ಮಾಡಿ ಜನವರಿ ತಾ. 15ರಲ್ಲಿ ಮಾಡುವಂತೆ ತೀರ್ಮಾನ ಮಾಡಿರುವುದಾಗಿ ತಿಳಿಯುತ್ತೇವೆ.

ಕೊಡಗು ಸತ್ಯಾಗ್ರಹ ಮಂಡಳಿಯವರು ಕಳೆದ ವಾರ ವೀರಾಜಪೇಟೆಯಲ್ಲಿ ಮಿಟಿಂಗು ಮಾಡಿ ಈ ವರೆಗೆ ಮಾಡಿದಂತೆ ಕಾರ್ಯನೀತಿಯ ಸಾರಾಂಶ. ಅಂಗಡಿ ಪಿಕೆಟಿಂಗ್, ಖಾದಿ ಪ್ರಚಾರ, ಪರದೇಶೀ ಬಟ್ಟೆ ಬಹಿಷ್ಕಾರವನ್ನು ಮೂಡುವಂತೆಯೂ, ಗ್ರಾಮಗಳಲ್ಲಿ ಹೋಗಿ ಈ ವಿಷಯದಲ್ಲಿ ಪ್ರಚಾರ ಕೆಲಸ ಮಾಡುವ ಪ್ರೋಗ್ರಾಮ್ ಮಾಡಿರುವೆಂದೂ ತಿಳಿಯುತ್ತೇವೆ.

ಬಾಳೆಕಾಡು ಕೋಟದ ಮೇನೇಜರು ಮೆ ಡೇವಿಸ್‌ರವರು ಕಳೆದ ತಾ. 7ರಲ್ಲು ಮಡಿಕೇರಿಗೆ ಬಂದಿದ್ದಾಗ ಸತ್ಯಾಗ್ರಹಿಗಳು ಗಡಂಗದ ಮುಂದೆ ನಿಂತು ಪಿಕೆಟ್ ಮಾಡುತ್ತಿರುವ ವೇಳೆಯಲ್ಲಿ ನಿವಾರಣವಾಗಿ ಅವರ ಪೈಕಿ ಒಬ್ಬರಿಗೆ ಅಂದರೆ ಮೆ. ವಲ್ಲಿಂಗಿಲ್ ಜಿಂಗಪ್ಪನವರ ಕೆನ್ನೆಗೆ ಬಲವಾಗಿ ಹೊಡೆದು ಸಾಕಾಶ ತಂದಾಗಿ ಜೋರು ವಗೈರೆ ಮಾಡಿರುತ್ತಾರಾಗಿ ವರ್ತಮಾನ.

ಕೊಡವರಿಗೆ ಖ್ಯಾತಿಗೆಯಂತೆ ಹುತ್ರಿ ಹಬ್ಬವನ್ನು ನೀಲಗಿರಿಯಲ್ಲಿರುವ ಕೊಡವರು ಕಲವರು ಕೂಡಿ ಮೆ. ಅಮ್ಮಚ್ಚಂಡ ತಿಮ್ಮಯ್ಯನವರ ಭವನದಲ್ಲು ಇದೇ ತಾ. 14ರಲ್ಲಾ ಶಾಸ್ತ್ರೋಕ್ತವಾಗಿ ನಡೆಸಿದರೆಂದೂ, ಅನೇಕ ಕೊಡವ ಅತಿಥಿಗಳು ಬಂದು ಸೇರಿದ್ದರೆಂದೂ, ಕೊಡವರ ಪದ್ಧತಿಗನುಸಾರವಾಗಿ ತಿಂಡಿ ಫಲಹಾರಗಳನ್ನು ಸ್ವೀಕರಿಸಿ 'ಆಟ್ ಸಾಟ್' ಗಳಿಂದ ಸಭೆಯು ಮುಕ್ತಾಯಗೊಂಡಿತ್ತೆಂದೂ ಒಬ್ಬರು ಬರೆದಿರುತ್ತಾರೆ.

ಸುಳ್ಯದ ಮೆ. ಕೆ. ಪರಮೇಶ್ವರಯ್ಯನವರು ಸ್ವಲ್ಪ ಹತ್ತಿ ಬೀಜ ಹಾಕಿ ಒಂದು ಬಂಡಿ ವರೆಗೆ ಹತ್ತಿ ಬೆಳೆಸಿರುವುದರಿಂದ ಸದರಿ ಹತ್ತಿಯನ್ನು ಬೀಜದಿಂದ ಬೇರ್ಪಡಿಸಿ ಜತ್ತಿ ಮಾಡಲು ಸುಲಭದ ವಿಧಾನವನ್ನು ಯಾರಾದರೂ ಪತ್ತಿಕೆಯ ಮೂಲಕ ತಿಳಿಸಿದರೆ ಅವರಿಗೆ ತಾನು ಕೃತಜ್ಞನಾಗುವೆನೆಂತ ತಿಳಿಸಿರುವುದರಿಂದ ತಿಳಿದಂತೆ ಮಹಾಸುಭಾವರು ತಕ್ಕ ಉಪಕರಣವನ್ನು ಪತ್ರಿಕೆ ಮೂಲಕ ತಿಳಿಸಬೇಕಾಗಿ ಕೋರುತ್ತೇವೆ.

ಕಡಿಯತ್ಮನಾಡು, ಬೆಪ್ಪುನಾಡು, ನಾಲ್ಕುನಾಡು, ಸೂರ್ನಾಡು, ಬೇಂಗುನಾಡು, ಕುಯ್ಯೂಂಗೇರಿನಾಡು, ಮತ್ತು ಮಡಿಕೇರಿನಾಡುಗಳಲ್ಲಿ ಹುತ್ರಿ ಮತ್ತು ನಾಡು ಕೋಲುಗಳನ್ನು ನಡೆಸಿದ್ದರೂ ಕೋಲಿಗೆ ಹಾಜರಾದವರ ಸಂಖೆಯು ಬಹಳ ಕಡಿಮೆ ಇತ್ತೆಂದೂ, ಉತ್ಸಾಹವೇನೂ ಇಲ್ಲದಿತ್ತೆಂದೂ, ನಿವಾಸವನ್ನು ಅನೇಕ ಗ್ರಾಮಗಳಲ್ಲಿ ಪೂರ್ತಿಯಾಗಿಯೂ, ಕೆಲವು ಕಡೆ ಬಹಳ ಮಟ್ಟಿಗೂ ನಿಲ್ಲಿಸಿದ್ದಾರೆಂದೂ ತಿಳಿಯಬಂದಿದೆ.

ಕಾಫಿ, ಒಣ್ಮೆಣಸು, ಯೂಲಕ್ಕಿ, ಕಿತ್ತಳೆ ಮತ್ತು ಭತ್ತ ಈ ವರ್ಷ ವಿಪರೀತವಾಗಿ ಬೆಲೆ ಕಮ್ಮಿಯಾಗಿರುವುದರಿಂದ ಈ ವರ್ಷದ ಕಂದಾಯವನ್ನು ಸೆಪ್ಟಂಬರ್, ಅಕ್ಟೋಬರ್, ನವೆಂಬರ್, ಮೇ ಮತ್ತು ಜೂನ್ ತಿಂಗಳುಗಳಲ್ಲಿ ಅಂದರೆ 5 ಕಂತುಗಳನ್ನು ಕೊಡಬೇಕಾಗಿಯೂ 5ನೇ ಕಂತಿನ ಆಜ್ಞೆಯಿರುವರೆಗೆ ನೋಟೀಸು ಜಾರ್ಜು ಹಾಕಬಾರದಾಗಿಯೂ ಸೂರಾರು ಸೈನುಗಂಡ ಹಂಡು ಅರ್ಜಿಯನ್ನು ಅಮ್ಮತ್ತಿನಾಡಿನವರು ಜಮೂಬಂದಿ ಆಫೀಸುಗಳಿಗೆ ಕೊಟ್ಟಿರುವರೆಂದು ವರ್ತಮಾನವಿದೆ.

ಈ ವರ್ಷ ಹುತ್ರಿ ಹಬ್ಬದಲ್ಲಿ ವೀಕೆಯಾರೆಲ್ಲರೂ ಖಾದಿ ಜಳಪಳವಳದ ಸ್ಯಯೋಜನೆಸನ್ನು ತಿಳಿದು ಖಾದಿ ಬಟ್ಟೆಯನ್ನೇ ಹೆಚ್ಚಾಗಿ ಕೊಂಡುಕೊಂಡದ್ದರಿಂದಲೂ, ವೀರಾಜಪೇಟೆ, ಪೊನ್ನಂಪೇಟೆ ಖಾದಿ ಬಾಡಾರಗಳಲ್ಲಿ ಅಲ್ಲದೆ ಇತರ ಎಲ್ಲಾ ವ್ಯಾಪಾರಸ್ಥರೂ ಖಾದಿ ಬಟ್ಟೆಯನ್ನು ತರಿಸಿ, ತಮ್ಮ ಅಂಗಡಿಗಳಲ್ಲಿಯೇ ಮಾರಿದುದು ಸ್ಪೋತ್ಕರ್ಷವಾಗಿದೆ. ಒಳ್ಳಗಟ್ಟಿ ರೂಪಾಯಿಗಳ ಪರದೇಶಿ ಬಟ್ಟೆಯು ಪ್ರತಿ ವರ್ಷವೂ ಖರ್ಚಾಗುತ್ತಿದ್ದದ್ದು, ಈ ವರ್ಷ ಸಾವಿರ ಗಟ್ಟಿಯೂ ಆಗಲಿಲ್ಲವೆಂದು ಒಟ್ಟಿ ವ್ಯಾಪಾರಿಗಳಿಂದ ತಿಳಿಯಬಂದಿದೆ.

ರೆಡ್ಡಕ್ರಾಸ್ ಸಂಪದವರು ಶ್ರೀಮಂಗಲನಾಡಿನ ಜನರಿಗೆ ಹಿಳುವಳಿಕೆ ಕೊಡುವ ಉದ್ದಿಶ್ಯ ಈ ತಾ. 25ರಿಂದ 30ನೇ ವರಗೆ ಮೂರು ಸ್ಥಳಗಳಲ್ಲಿ ಮೂಯೂಲಾಂದ್ರವನ್ನು ಪ್ರದರ್ಶಿಸಲು ಏರ್ಪಾಡು ಮಾಡಿರುತ್ತಾರಾಗಿ ತಿಳಿದು ಬರುವುದರಿಂದ ಕಮ್ಮಿ ಪಕ್ಷ 10 ಸ್ಥಳಗಳಲ್ಲಿಯಾದರೂ ಮೇಳ್ಕಂಡ ಮೂಯೂಲಾಂದ್ರಗಳನ್ನು ಏರ್ಪಡಿಸಿ ಜನರಿಗೆ ತಿಳುವಳಿಕೆ ಕೊಡಲು ಪ್ರೋತ್ಸಾಹ ಕೊಡುವಂತೆ ರೆಡ್ಡಕ್ರಾಸ್ ಸಂಘದವರು ನಿಗ ಕೊಡಬೇಕಾಗಿ ಶ್ರೀಮಂಗ್ತ ನಾಡಿನವರೆಬ್ಬರ ಒಂದು ಬಿತ್ತ.

ತಾ. 17 ರಲ್ಲು ಬೆಳಿಗ್ಗೆ 6½ ಗಂಟೆಗೆ ಸತ್ಯಾಗ್ರಹಿಗಳ ಸೈಕಿಯ ಮಂಡೇಪಂಡ ಕಾರ್ಯಪ್ಪನವರು ಮತ್ತು ಮೆ. ಬಿ ಜಿ ಗಣಪಯ್ಯನವರು ಮಡಿಕೇರಿ ಆರಮನೆ ಮುಂದೆ ದೇವಡಿ ಹಬ್ಬಿಯಲ್ಲಿ ಇರಿಸಿರುವ ಯೂನಿಯನ್ ಜಾಕಸ್ಸನ್ನು ಕೆಳಗೆ ಇರಿಸಿ, ರಾಷ್ಟ್ರೀಯ ಧ್ವಜವನ್ನು ನಿರಿಸಿದ ನಂತರ ಧ್ವಜಾರೋಹಣ ಮಾಡಿದ ಕೂಡ್ಲೆ ಪೋಲೀಸಿನವರು ಅಬ್ಬರಿಸಿ ಎರೆಸ್ಟ್ ಮಾಡಿದರು. ಸದರಿ ದಿವಾಳಿಯಾಗಿ ಇಬ್ಬರಿಗೂ 2 ತಿಂಗಳು ಕಠಿಣ ಸಜೆಯೂ, 50 ರೂಪಾಯಿ ಜುಲುಮಾನೆಯೂ, ತಪ್ಪಿದರೆ 3 ವಾರ ಹೆಚ್ಚಿನ ಸಜೆಯೂ ವಿಧಿಸಲಾಗಿದೆ

ಗಡಂಗದಲ್ಲಿ ಪಿಕೆಟಿಂಗ್ ಮಾಡಿದರ ಫಲಿತಾಂಶವು ಈ ಕೆಳಗೆ ಕಾಣಿಸಿದ ಅಂದಾಜು ಸಟ್ಟಿಯ ರೀತಿಯಿಂದ ತಿಳಿಯಬಹುದಾಗಿದೆ.

| | ಕಳೆದ ವರ್ಷ. | ಈ ವರ್ಷ. |
|---|---|---|
| ವೀರಾಜಪೇಟೆ | 1050 | 67 |
| ಗೋಣಿಕೊಪ್ಪಲು | 640 | 18 |
| ಮಡಿಕೇರಿ | 850 | 130 |
| ಸೋಮವಾರಪೇಟೆ | 102 | 14 |
| ಜಮ್ಮು | 2742 | 229 |

ಕೊಡಗಿನಲ್ಲಿ ಕಳೆದ ಆರೇಳು ತಿಂಗಳಿಂದ ಹಗಲಿರುಳು ಮಳೆ ಬಿಸಿಲೆನ್ನದೆ ಕೆಲಸ ಮಾಡುತ್ತಿರುವ ಸತ್ಯಾಗ್ರಹಿಗಳ ಕೆಲಸದಿಂದ ಕಳೆದ ಕೈಲ್ ಮುಹೂರ್ತ ಸುತ್ತು ಈ ಹುತ್ರಿಯಲ್ಲಿ ಸುಮಾರು 3,000 ಗ್ಯಾಲನ್ ಸಾರಾಯಿ ಖರ್ಚು ಕಡಿಮೆಯಾಗಿದೆ. ಇದರಿಂದ ಈ ಎರಡು ಹುಬ್ಬದಲ್ಲಿಯೇ ಸುಮಾರು 20,000 ರೂಪಾಯಿಗೆ ಮೇಲ್ಪಟ್ಟ ಹಣವು ದೇಶದಲ್ಲಿ ಉಳಿಕೆಯಾಗಿ, ಶಕಾತಕೆಯೂ, ತಿಳುವಳಿಕೆಯೂ, ಖರ್ಚು ಕೋತೆಯೂ ಹಿಚ್ಚಾಗಿದೆಯೆಂದು ಒಬ್ಬರು ತಿಳಿಸಿರುತ್ತಾರೆ.

---

## ಕೊಡಗಿನ ಹುತ್ರಿ ಹಬ್ಬ.

### ಈಗಿನ ರಾಷ್ಟ್ರೀಯ ಚಳವಳಿಕ್ಕೆ ಸಹಾನುಭೂತಿ.

ಮರೆನಾಡು—ನಾಡು ಮಂದಿನಲ್ಲಿ ಜನರು ಉತ್ಸಾಹದಿಂದ ನೆರೆದು ಸುಮಾರು 500 ಜನರು ವಿಟಿಂಗನ್ನು ಮಾಡಲಾಯಿತು.

ಅಂಜಿಗೇರಿನಾಡು ಮಂಡ.—ಹೈ ಸೆಂಡ್ಯೂರು ಕೋಣಗೇರಿ, ಹುದುಕೇರಿ ಸುತ್ತು ಮುತ್ತಳಿನ ಜನರು ಸಹ ನಾಡು ಕೋಲನ್ನು ಯಾರೂ ಆಚರಿಸಲಿಲ್ಲ.

ನಾಪೋಕ್ಲುನಾಡು ಬೇತು ಗ್ರಾಮದವರು ತಮ್ಮ ಹುತ್ರಿ ದೇವರ ಅಪ್ಪಣೆ ಪಡೆದು ಅವರ ನಾಡುಮಂದಿನಲ್ಲಿ ಸ್ವರಾಜ್ಯ ಬಾವುಟವನ್ನು ಹಾಕಿದರೆಂತಲೂ, ಅಂದಾಜು 200 ಜನರು ಪೈಕಿ 50 ಜನರು ಖಾಧಿಯನ್ನೇ ಧರಿಸಿದ್ದರೆಂತಲೂ ತಿಳಿಯುತ್ತೇವೆ.

ಬಿದ್ದಾಟಂಡ ಓಡೆ—ನಾಡು ಮಂದಿನಲ್ಲಿ ಸ್ವರಾಜ್ಯ ಬಾವುಟವನ್ನು ಹಾಕಕೂಡದೆಂತ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮೆ ಬಲ್ಲಚಂಡ ನಂಜಪ್ಪನವರು ತಕರಾರು ಮಾಡಿದಾಗ್ಯೂ ಕೂಡ ನಾಡವರು ಕೇಳದೆ ಬಾವುಟವನ್ನು ಹಾಕಿದರೆಂತ ತಿಳಿಯುತ್ತೇವೆ.

ತಿರುನೆಲ್ಲಿಗೇರಿ—ನಾಡು ಮಂದಿನಲ್ಲು ಸೆಂಪೂರ್ಣವಾಗಿ ಲಿಸಿ ಧ್ವಜಾರೋಹಣ, ಮೆರವಣಿಗೆ ಮೂಲಕ ನಾಡು ಮಂಗಳಕ್ಕೆ ಸೇರಿದರು. ಸೇರಿದ ಸುಮಾರು 1000 ಜನರಿಗೆ ಮೆ. ಪೊಣ್ಣಂಡ ಮಾಚಯ್ಯನವರೂ, ಮೆ. ಅಜ್ಜಮಾಡ ಮಾದಪ್ಪನವರೂ ಸ್ವಾರಸ್ಯವಾದ ಭಾಷಣ ಮಾಡಿದರು.

ಹರಿಹರ ಹುತ್ರಿ ಕೋಲನ್ನು ಸಂಪೂರ್ಣವಾಗಿ ನಿಲ್ಲಿಸಿ ಸುಮಾರು 1200 ಜನರು ಸ್ವರಾಜ್ಯ ಬಾವುಟದೊಡನೆ ವೀರಾಜಪೇಟೆಗೆ ಆಗಮಿಸಿದರು. ಮಾರನೆಯ ದಿವಸ ಸತ್ಯಾಗ್ರಹಿಗಳು ಜಾಜರಿದ್ದರು. ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ ಪೊನ್ನಿಮಾಡ ಮಾಚಯ್ಯನವರು ಈಗಿನ ಚಳವಳಿಯ ವಿಷಯವಾಗಿ ಮಾತಾಡಿ, ಖಾದಿ ಪ್ರಚಾರ, ನಿಷೇಧ ಇದಕ್ಕೆ ಉತ್ತೇಜನ ಕೊಡುವಂತೆ ಸ್ವಾರಸ್ಯವಾದ ಭಾಷಣವನ್ನು 2 ಗಂಟೆ ವರೆಗೆ ಮಾಡಿದರು.

ನಾಣಾಯ ಬಾಣೆ ನಾಡುಮಂದು—ಇದು ಎಡೆನಾಡಿನ ನಾಡುಮಂದು. ಸಾವಿರಾರು ಕೊಡಗರೂ ವೀರಾಜಪೇಟೆ ನಿವಾಸಿಗಳೂ ತಂಡ ತಂಡವಾಗಿ ಸೇರುವ ನಾಡುಮಂದ. ಈ ವರ್ಷ ನಾಡವರು ಬಗ್ಗಟ್ಟಾಗಿ ಕೋಲನ್ನು ನಿಲ್ಲಿಸಿರುವರು. ಇದು ಗ್ಯಾನುದಿಂದ ಪೂರ್ತಿ 8—20 ಜನರು ಒಂದು ಹೋದವು. ಉಳಿದ ಗ್ರಾಮಸ್ಥರೆಲ್ಲರೂ ಖಾದಿ ಪ್ರಚಾರ, ನಿಷೇಧಕ್ಕೆ ಬೆಳವಳದಲ್ಲಿ ಭಾಗಿಗಳಾಗಿ ಒಲ್ಲಲ್ಲಿ ಮೀಟಿಂಗ್‌ಗಳ ಮೂಲಕ ಹುಬ್ಬವನ್ನು ಆಚರಿಸಿದರು.

ಪಟ್ಟಿಬಾಣೆ ನಾಡುಮಂದು.—ಇದು ಇನ್ನೊಂದು ಇದೇ ನಾಡಿನ ಕೋಲ ಬಾಣೆ. ಸಾಧಾರಣ ವಂದೆರಡು ಸಾವಿರ ಮಂದಿ ಸೇರುವ ಸ್ಥಳ, 9 ಗ್ಯಾನ ಸ್ಥಳ ಸೇರುವ ಪದ್ಧತಿ ಈ ಗ್ಯಾರುಗಳಲ್ಲಿ ಊಟ ಕೋಲನ್ನು ಸಹ ಸಂಪೂರ್ಣ ನಿಲ್ಲಿಸಿದ್ದಲ್ಲದೆ ಈ ನಾಡುಮಂದಿಗೆ ಸಹ ಯಾರೂ ಸೇರಿಲ್ಲ. ಈ ನಾಡಿನ ಪಂಚರು ಮೊದಲುಗೊಂಡು ಹೊರಜಿಲ್ಲೆಯವರೂ ಈ ಬಾಬ್ಬವನ್ನು ಆಚರಿಸದೆ ಇದ್ದದ್ದು ವಿಶೇಷ. ನಾಡುಕೋಲಿನ ದಿನ ಮಂದಿನಲ್ಲಿ ಹಿಂದೆಂದೂ ಕಂಡಿರದ ಸಭೆಸೇರಿದ್ದರು. ನಿವಾಸಿಗಳೆಲ್ಲರೂ ಖಾದಿ ಪ್ರಚಾರ, ಜಳವಳವು ಈ ಹಬ್ಬದ ದಿನಗಳಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ನಡೆಯಿತು.

ಬೆಟ್ಟಗೇರಿನಾಡು ಸೈನುಡಿಕೆ ಬಾಣೆ—ದಕ್ಷಿಣ ಕೊಡಗಿನಲ್ಲಿ ಅತಿ ದೊಡ್ಡದಾದ 3 ನಾಡಿನವರಿಂದ ಸೇರಲ್ಪಡುವ ಕ್ಷತ್ರಿಯ ಕೋಲು ಈ ವರ್ಷ ಸೆಂಪೂರ್ಣವಾಗಿ ನಿಲ್ಲಿಸಲ್ಪಟ್ಟಿತು. ಮೂಮೂಲು ರೀತಿ ಕೋಲು ಹೊಡೆಯುವ ಮತ್ತು ಇತರ ನಾಡುಗಳ ಪ್ರತಿನಿಧಿಗಳು ಸಭೆಯನ್ನು ನಡೆಯಿಸುವುದರ ಬದಲು ಹಿಂದಿ ಸ್ವರಾಜ್ಯ ಬಾವುಟವನ್ನು ಗ್ಯಾನುಗಳಲ್ಲಿಯೂ, ನಾಡಿನ ವಂದಿನಲ್ಲಿಯೂ ಮೆರವಣಿಗೆ ನಡಿಸಲ್ಪಟ್ಟಿತು. ಭೃಜ ಸಮೇತ ಸತ್ಯಾಗ್ರಹಿಗಳೆಲ್ಲರೂ ತಾನೆ 3 ದಿಕ್ಕಿನಿಂದ ವಂದಿಗೆ ಮೆರವಣಿಗೆ ಸೇರಿದ್ದರು. ನೆರೆದ ಸಭೆಯವರಿಗೆ ತಗಿನ ಜಾಂಳಿಗರ ಸಂಗ್ಯಾಯಗಿ ಮೆ. ಚಕ್ಕೆರ ಮೆಯ್ಯನವರು ಮತ್ತು ವೆ ರಾಯಿಂಗಡ ಚಿಣ್ಣಪ್ಪನವರು ಸ್ವಾರಸ್ಯವಾದ ಭಾಷಣ ಮಾಡಿದರು 3 ನಾಡಿನ ಕ್ಷತ್ರಿಯರಾದ ಅಡ್ಡಂಡ ಪೆಮ್ಮಯ್ಯನವರ ಜತ್ತಾಸ್ಯೆಯು ಕ್ಷಾಫನೀಯವಾಗಿದೆ.

ಅಮ್ಮತ್ತಿ.—ಈ ಹೊದಲೇ ತೀರ್ಮಾನಿಸಿದಂತೆ ಅಮ್ಮತ್ತಿ ನಾಡಿನ 6 ಗ್ಯಾನುಸ್ಥರು ಹುತ್ರಿ ಹಬ್ಬವನ್ನು ಕದಿರು ತೆಗೆಯುವದು ವಿಷಯ ಬೇರೆ ಯಾವ ಹಬ್ಬವನ್ನೂ ನಡೆಯಿಸುವದನ್ನು ನಿಲ್ಲಿಸುವದನ್ನು ಪ್ರತಿ ಗ್ಯಾನುದಲ್ಲೂ, ಸ್ವರಾಜ್ಯ ಬಾವುಟ ಮೆರವಣಿಗೆ, ರಾಷ್ಟ್ರ ಗೀತೆ ಇವುಗಳಿಂದ ಕಳೆದ ತಾ 9ರಲ್ಲು ಪ್ರತಿ ಗ್ಯಾನುಗಳಿಂದಲೂ ತೊಡುತೊಡವಾಗಿ ಜನರು ಅಮ್ಮತ್ತಿ ವೈದಾನಕ್ಕೆ ಒಂದು ಸೇರಿ ಪೇಟೆಯಲ್ಲು ಸತ್ಯಾಗ್ರಹಿಗಳ ಸಮೇತ ದ್ವಜಾರೋಹಣ ಮೆರವಣಿಗೆ ಮಾಡಿ ನಾಡುತಕ್ಕರು ಅಧ್ಯಕ್ಷತೆಯಲ್ಲಿ ಮೀಟಿಂಗ್ ಸೇರಿದ್ದರು. ಸೇರಿದ ಸಭೆಯಲ್ಲಿ ಮೆ. ಏನಂಡ ಕಾರ್ಯಪ್ಪನವರು ಹಿಂದೂದೇಶದ ಪೂರ್ವಸ್ಥಿತಿಯನ್ನೂ, ಪರದೇಶಿಯರ ಆಳಿಕೆಯಿಂದ ಉಂಟಾದ ಕಷ್ಟನಷ್ಟಗಳನ್ನೂ, ಹಿಂದೀಯರು ಬ್ರಿಟಿಷರಿಗೆ ಅವರ ಕಷ್ಟಕಾಲಗಳಲ್ಲಿ ಮಾಡಿದ ಸಹಾಯವನ್ನೂ, ಈ ಉಪಕಾರಕ್ಕೆ ಉಪಕಾರ ಸಿಕ್ಕುವ ಬದಲು ನಮಗೆ ಸಿಕ್ಕುತ್ತಿರುವ ಅಪಕಾರವನ್ನೂ, ಕಷ್ಟವನ್ನೂ, ಬಡತನವನ್ನೂ, ಒಡಕನ್ನಕ್ಕೆ ಕಾರಣವನ್ನೂ ಸಾಂಗವಾಗಿ 1½ ಗಂಟೆ ಸಮಯ ವಿವರಿಸಿ ಸಾರಾಯಿ ಬಿಡುವದರಿಂದಲೂ, ಖಾದಿ ಉಡುವದರಿಂದಲೂ ಉಂಟಾಗತಕ್ಕ ಪ್ರಯೋಜನವನ್ನೂ ವಿವರಿಸಿ ಎಲ್ಲರೂ ಮಹಾತ್ಮ ಗಾಂಧಿಯವರು ಹೂಡಿದ ಧರ್ಮಯುದ್ಧಕ್ಕೆ ಭಾಗಿಗಳಾಗಬೇಕಾಗಿ ಕೇಳಿಕೊಂಡರು. ಆದೇ ವೇಳೆ ಮೆ ಮಂಡೇಡ ಕುಟ್ಟಪ್ಪನವರೂ, ಕುಟ್ಟಂಡ ಕಮ್ಮುಯ್ಯನವರೂ, ಇನ್ನು ಅನೇಕರೂ ಭಾಷಣ ಮಾಡಿದರೂ. ಕೊನ್ನಾಡ ಬೈಗೋಡು ಗ್ರಾಮವನ್ನೆಲ್ಲ ಸಂಪೂರ್ಣವಾಗಿ ಖಾದಿ ಉಡುವಿನಲ್ಲಿಯೂ ಉಳಿದವರಲ್ಲಿ ಮುಕ್ಕಾಲು ಭಾಗದ ಜನರು ಖ

## ಹಿಂದೂದೇಶ.

ಪಂಡಿತ ಮೋತಿಲಾಲರ ಸ್ಮೃತಿಯು ಇನ್ನೂ ಗುಣವಾಗಿಲ್ಲ, ಅಗಲೇ ಶ್ರೀ ಸ್ವರೂಪ ರಕ್ಕವ್ವು ವೀಲಾಕ್ಕರ್

ಅಹಮದಾಬಾದಿನಲ್ಲಿ ಸರ್ದಾರ್ ವಲ್ಲಭಾಯಿ ಪಟೇಲರನ್ನು ದಸ್ತಗಿರಿ ಮಾಡಿ ಬೊಂಬಾಯಿಗೆ ಕರೆತಂದು ಹೊಗಲು ರುತ್ತಾರೆ

ತಾ ೨೮—11—30 ರಲ್ಲಿ ಟೀಕೆಯೇಡಲ್ಲಿ ನೆರೆದ ರು 40 ಮೈಲು-ಗಳ ದೂರದ ಜಯಂಕೊಂಡಂ ಘೋಷಣೆಯಾಗಿ ೩೫ ಒನರು ಸಕ್ಕು ಹೋದರು.

ಬ್ರಿಟಿಷರ ವ್ಯಾಪಾರವನ್ನು ತಿಂಗಸು ತಿಂಗಳಿಗೆ ಲಕ್ಷಗಟ್ಟಿ ಪೌಂಸ್ ಗಳು ಕಡಿಮೆಯಾಗುತ್ತಾ ಬರುತ್ತಿದೆಯೆಂದು ಬೋರ್ಡ್ ಆಫ್ ಟ್ರೇಡ್ ಪತ್ರಿಕೆಯಲ್ಲಿ ಪ್ರಕಟಿಸಿದೆ

ಮೈಸೂರಿನಲ್ಲಿ ತಾ 12—11—30 ರಂದು ಆಚರಿಸಿದ ಹರತಾಳದಲ್ಲಿ ಜಾಲಕೇಯರ ಮೇರವಣಿಗೆಯಲ್ಲಿ ಳಾಗ ತೆಗೆದುಕೊಂಡ ಮೈಸೂರು ಮಹಾರಾಣಾ ಕಾಲೇಜಿನ ಶ್ರೀಮತಿ ಕೃಷ್ಣ ಲಕ್ಷ್ಮಮ್ಮ ಬಿ ಎ ಇವರನ್ನು ಸಸ್ಪೆಂಡ್ ಮಾಡಿ ತ್ತಾರೆ

ಬೊಂಬಾಯಿ ಮಿಲ್ಲಿನಲ್ಲಿ ಕಲಸ ಮಾಡುತ್ತಿದ್ದ ನಿಮ್ಮ ಗನು ಎಂಬೊಬ್ಬನು ತನ್ನ ಹೆಂಡತಿ ವತ್ಸ ಅತ್ತಿಮನ್ನು ಇವರಿಬ್ಬರು ತನ್ನ ಗುಟ್ಟನ್ನು ಕನ್ನ ಶತ್ರುಗಳಿಗೆ ತಿಳಿಸಿದೆಂಬ ಕಾರಣದಿಂದ ಕೂಲಿಸಾಕಿ ಸೂಡಿ ಕೂಡಲೇ ತಾನಾಗಿಯೇ ಪೂಲೀಸಿನವರ ವಶವಾದನು

ಬೊಂಬಾಯಿಯಲ್ಲಿ 10 ವರ್ಷದ ಲೇಕ ವಯಕಿಯು ಪಿಕೆಟಿಂಗ್ ಮಾಡಿದುದರಿಂದ 2 ತಿಂಗಳ ಸಾದಾ ಶಿಕ್ಷೆಯನ್ನೂ, 100 ರೂ ದಂಡವನ್ನೂ ವಿಧಿಸಿದ್ದಾರೆ ಎಂದು ಹೇಳಿ ದಾಗ ದಂಡ ಕಟ್ಟದಿದ್ದರೆ ಮುಂಬೈ 1 ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಲು ಗೊತ್ತು ಮಾಡಿದ್ದಾರೆ

ಬೊಂಬಾಯಿಯಲ್ಲಿ ಜಾಮೀನು-ಗಳಾಗಿ ಇಟ್ಟುಕೊಳ್ಳಕ್ಕೆ ಸೇರಿದ 131 ಸ್ವಯಂ ಸೇವಕರಾದ ಮುಸ್ಲಾನ್ನರನ್ನು ವಾಪಸು ಮಾಡುವ ಕಡೆಗಳಲ್ಲಿ ಪೀಕೆಟಿಂಗ್ ಗಡಿಸಿಕ್ಕಿದ್ದಾರೆ ಸ್ವಯಂ ಸೇವಕ ಮುಸಲ್ಮಾರುಗಳು ಎಷ್ಟೇ ಗದರಿಸಿದರೂ ಇವರುಗಳು ಶಾಂತ ರೀತಿಯಿಂದಿದ್ದರಂ

ಬೊಂಬಾಯಿ ವರ್ತಕ ಸಭೆಯವರಾಪಾರಿಸಲ್ಲಿ ವಿದೇಶೀ ಬಟ್ಟೆಗಳ ಆಂಗಡಿಗಳ ಮುಂದೆ ಪಿಕಟಿಂಗ್ ಮಾಡುವ ಸ್ವಯಂ ಸೇವಕರು ವಿದೇಶೀ ಬಟ್ಟೆ ವ್ಯಾಪಾರವು ಮೂಲವುದನ್ನು ನಿಲ್ಲಿಂದ ಹೊರತು ಕಾಪು ಆನ್ನ ಗೃಹಣ ಮಾಡಬೇಕೆಂದೆಲ್ಲಿಯು ಘೋಷ್ಯ ಸ್ಪತಿಜ್ಞೆಯನ್ನು ಮಾಡಿಸ್ಯಾರೆ.

ಲಬನಾದಲ್ಲಿ ತಾ 2೧—6 30ರಲ್ಲಿ ಒಂದು ದಿವಸ ಮಸ್ಯಾಗ್ರಹ ಪೊಳೆಸರ ದವೆ ೧೦೨ ಜನ ಇರ ಮನೆಯ ವೇಲೆ ದಾಳಿಯಮ್ಮಕ್ಕೆ ಅಲ್ಲಿಂದ ರಾಷ್ಟ್ರೀಯ ನಿಶಾನೆಯನ್ನು ಕಂಡುಕಂಠಿಸ್ಥರ ಮೇಲೆ ಅಲ್ಲಿಯ ಸುಧೇಶಾಭಿಮಾನ ವೇಲೆ ಮೂಡ ಕೀಳಾಗಿ ಇ ರಿಗೆ ೧ ವರ್ಷ ಸೆಜ ವಿಧಿಸಲಾಯಿತು

ಲಂಡನ್ ಪಟಿಷತ್ತಿನ ಹಿಂದೀ ಸ್ಪತಿನಿಧಿಗಳು ಹಿಂದಿಯಲ್ಲೇ ಶಡಿಯ ಬಯಸಿದ್ದಾಗಿ ಕೆಲವು ಸಂಬಾದಗಳೇ ನ್ಯಾದರೂ ತಿಳಿಯಬೇಕಾದರೆ ಹಿಂದೀ ಪತ್ರಿಕೆಗಳು ಇಂಗ್ಲೆಂಡಿಗೆ ಹೋಗುವ ತನಕ ಕಾಯ ಬೇಕಾತ ಆಂಗ್ಲೆ ಪತ್ರಿಕೆಗಳು ಅದನ್ನು ಕ್ಷಾತ ಯಾವ ಸ್ವತಂತ್ರವನ್ನೂ ಸ್ಪೀಕರಿಸಿ ವುದಿಲ್ಲವಂತೆ

ಪಂಡಿತ ಮದನಮೋಹನ ಮಾಲವೀಯರು ಅಲ್ಲಹ ಒಂದಿನ ಸೇಯನ್ನು ಜೈಲಿನಲ್ಲಿದ್ದರು ಎಂಬ ಸಂಖ್ಯೆ ಅವರಿಗೆ ಮೊಕ್ಕ ಕೋಶದಲ್ಲಿ ಕಾಯಿಲೆಸಿಸಿಂತಾಗಿ ಎಲ್ಲಾ ಅವ್ಯೆಕ್ಷೆಗಳನ್ನು ಬಿಟ್ಟುಬಿಟ್ಟರು ಅವರ ಪತ್ನಿ ಪುತ್ರರು ಅಲ್ಲಾಹಾಬಾದಿಗೆ ಬಂಗಿರುತ್ತಾರೆ ನವಾಲವೀಯರು ಒಹು ಎಚ್ಚರಿಕೆಯಿಂದ ಸ್ವಂತಗಾರಿಸುತ್ತಾರೆ

ಶ್ರೀಮತಿ ವೇಣಿಹನೀ ಲೇಖಿಯೊಂದು ಎಪ್ಪತ್ತು ವರ್ಷದ ವಿದುಷಿಯು ಮೊನ್ನೆ ಕಲ್ಕತ್ತೆಯ ಬೈಲಿನಿಂದ ಬಿಡುಗಡೆಯಾಗಿ ಬಿಡುಗಡೆಯು ಸತ್ಯಾಗ್ರಹದ ಸ್ತ್ರೀ ಸೇನೆಯ ಗುಲ್ಲು, ಇನ್ನೂರು ಬಿಯರೆಂದು ಹೇಳುವರು ಇವರು ವಿದುಷಿಯರ ದ ರಾಮಬಾಯಿಯವರ ತಂಗಿ ಗಾಂಧಿಜಿಯವರ ಪತ್ನಿಯಾಗಿರ ನರು ಶ್ರೀ ದಾಸವರು ಕಲ್ಕತ್ತೆಯಲ್ಲಿ ವಿದ್ಯಾಶಕರಾಗಿ ಕೆಲಸ ಮಾಡುತ್ತಿದ್ದರು.

ತಿರುವೂರಿನಲ್ಲಿ ರಾಷ್ಟ್ರೀಯ ಚಾಲುಟಕ್ಕೆ ವಂದಿಸಿ ಸಭೆ ಸೇರಿಂಧುದಕ್ಕೆ 144 ನೇ ಕೆಕ್ಷನ್ ಉಪಯೋಗಿಸಲ್ಪಟ್ಟಿತ್ತು ಇದಕ್ಕೆ ವಿರೋಧಿಸಿ ಆಲ್ಲಿಯ ಶ್ರೀಮತಿ ಪದ್ಮಾವತಿ ಆಯರ್ ಎಂಬವರು ರಾಷ್ಟ್ರೀಯ ಬಾವುಟದ ವಂದನೆಯ ಕೆಲಸದಲ್ಲಿ ಉದ್ಯುಕ್ತಳಾದುದರಿಂದ ಮೆಜಿಸ್ಟ್ರೇಟರು ಅವರಿಗೆ 100/ರೂ ಬುಲ್ಲಾನೆಯನ್ನು ವಿಧಿಸಿದರು. ಜ ಆ ಸೆಯನ್ನು ಕಟ್ಟಲ್ಪಟ್ಟಿದ್ದರಿಂದ ಅರು ವಾರಗಳ ಸಾದಾ ಸಜೆ ಮಾಡಿಸುತ್ತಾರೆ

ಅಲಹಾಬಾದಿನ ಜೈಲರ್ ಜಡಿಯವರಾದ ದಲಾಲರಿಯರು ಮಧ್ಯರದ ಸೆಕ್ಷನ್ಸ್ ಜಡ್ಡಿಯವರಾದ ಪಿ ಬಿ ಸಾವಿ ಸಿ ಎಸ್ ರವರು ಜಿಯ ಕೆಸಿನಲ್ಲಿ ಒರೆದು ಜಡ್ಡಿಮೆಂಟಿನ ಮೇಲೆ ಟೀಕಿಸಿ ಹೀಗೆಂದು ಹೇಳಿರುವರು—ನಸ್ಸಂತೆಯೇ ಐ ಸಿ ಎಸ್ ಆದ ಈ ಸೆಕ್ಷನ್ಸ್ ಜಡ್ಡಿಯ ಹಾಸ್ಯಾಸ್ಪದವಾದ ಒ ತೀರ್ಪಿನೆಂಟಿನ್ನು ನೋಡಲು ವಿಷಾದಿಸುತ್ತೇನೆ ಈ ತರದ ಜಡ್ಡಿಮೆಂಟಿನ್ನು ಒಂದಿದ್ದು ನೋಡಿದಾಗ ಇವರು ಈ ಪದವಿಯನ್ನು ವಹಿಸಿಕೊಳ್ಳಕ್ಕೆ ಅರ್ಹರಲ್ಲವೆಂದೇ ಹೇಳುತ್ತೇನೆ ಆದ್ದರಿಂದ ಇವರು ಜುನ್ನಿ ಎಂಬವರಿಗೆ ಐ ಪಿ ಸಿ ಸೆಕ್ಷನ್ ೧೪೪ ರಡಿಯ 7 ವರ್ಷ ಕಠಿಣ ಸೆಜೆಯನ್ನು ವಿಧಿಸಿದ್ದು ಮಾಡಿ ಕುಲಾಸ್ ಮಾಡಿದ್ದೇನೆಂಬಹಾಗಿ ಬರೆದಿದ್ದಾರೆ

ಬಂಗಾಳದಿಂದ ಹಿಂದಿರುವ ಪ್ರಯಾಣಿಕರು ಇಂಗ್ಲೆಂಡಿನ ಪ್ರಜ್ಞೆಯ ಮಂತ್ರಿಗಳಾದ ಸೆಕ್ರೆಟರಿ ಆಫ್ ಸ್ಟೇಟಿಗೂ ಹಿಂಗೆಂದು ತಂತಿ ಕೊಟ್ಟಿರುವರು. ಸತ್ಯಾಗ್ರಹ ಸೆತೆಲ್ಪವರವರೆಗೆ ಬಂಗಾಳ ಹಿಂದುಗಳ ವಿಷಯ ಸೂತಾಡಲು ಯೂರೋಪಿಯರಲ್ಲಿ ಒಬ್ಬರೂ ಇಲ್ಲವೆಂತಲೂ ಇವರ ಮುಂದೆಸಲಾದ ಆಪಾದನೆಗಳು ವಿಕ್ಷಯವೇ ಸುಳ್ಳುಭಿಪ್ರಾಯವೆಂತಲೂ, ಜಿನೀವರದ 14 ಪಲಹೆಗಳಿಗೆ ತಾವು ಬಲಪ್ರಯೋಗವಿಲ್ಲವೆಂತಲೂ ಕೇಬಲ್ ಕೂಟ್ಟಿರುವರು

ಕಳೆದ ತಾ 16ರಲ್ಲು ಜೆಲ್ಲಿಯ ಸ್ತ್ರೀ ಸತ್ಯಾಗ್ರಹಿಗಳು ಶಾಯಿದುಗಳ ಆಫೀಸು ಮತ್ತು ಕೋರ್ಟನ್ನು ಪಿಕೆಟ್ ಮಾಡಿದರು ಅವರು ಇನ್ನು ಮುಂದೆ ಖಾದಿ ಬಟ್ಟೆ ತೊಡುತ್ತೇನಂದು ವಚನಗ್ರಾಸ ಮಾಡಿದ ಸಮಯ ಒಳಕ್ಕೂ, ಹೊರಕ್ಕೂ ಬಿಡುವುದಿಲ್ಲವೆಂದು ಹಳೆ ಅತ್ತ ನಿಂತರು ಇವನ್ನು ಕಂಡು ಅಯುರುಗಳೆಲ್ಲರೂ ವಿಚಲಿತಗೊಂಡು ಮಾಡಿದರು ಅಯುರುಗಳ ಸಂಘದ ಸ್ಪತಿನಿಧಿಯೊಬ್ಬರು ಎನ್ನು ನುಂದಕ್ಕೆ ಖಾದಿ ತೊಡುವುದಿಲ್ಲವೆಂದು ಹೇಳಿದರೆ ಹಸರನ್ನು ಕೊಡಿ ಕ್ಷೀನೆಂದೂ, ಅವರ ಆಫೀಸು ಮೂಕ್ಯ ಪಿಕಟ್ ವಿಷಯವೇ ಮಾತನಾಡಲು ಕಾಂಗ್ರೆಸ್ ಸ್ತ್ರೀ ಸತ್ಯಾಗ್ರಹಿಗಳು ಒಪ್ಪಿದರು

ಬೊಂಬಾಯಿಯಲ್ಲಿ ಸರದೇಶಿ ಒಪ್ಪಿ ಬಹಿಷ್ಕಾರದ ನಿಯಿಕ್ಷ ಲಾಭ ತನ್ನ ವೈರಿಯಾದ ಮೃತವಕಾರ ಸತ್ಯಾಗ್ರಹಿ ಬಾಬುಗೆಸು ಎಂಬವರ ಕವರ ಮೇಲಿನಾಗೆಯೆ ಎ ವಜ್ಯ ಜಾಗಗಳಿಗಾಗಿ ದಹನಮಾಡುವ ಜಾಗಕ್ಕೆ ಹೋಗುವಾಗೆಲ್ಲ ಪೋಲೀಸಿನವರು ದಾರಿಯಲ್ಲಿ ಅತ್ತಗಟ್ಟಿ ಕಡೆಯು ಅತ್ಯಿ ಚಾರ್ಜ್ ವಡಿ ಅನೇಕರಿಗೆ ಗಾಯವಾಡಿದರು ಆದರೂ ಜನರು ನಿಂತ ಜಾಗದಿಂದ ಕದಲಲಿಲ್ಲ ಲಕ್ಷಗಟ್ಟಿ ಜನರು ಈ ವೆ ರವಣಿಗೆಗೆ ನೇರಿದ್ದರು ಕಡೆಗೆ ಶ್ರೀಜತ್ ಮುಖ್ಯ ಮಂತ್ರಿಗಳೂ ಪೋಲೀಸಿನವರು ವೆ ರವಣಿಗೆಯನ್ನು ಮುಂದಕ್ಕೆ ಬಿಟ್ಟರು ಬೊಂಬಾಯಿ ಪಟ್ಟಣದಲ್ಲಿ ಈ ಸನ್ನಿವೇಶದಲ್ಲಿ ಎಲ್ಲಾ ಆಂಗಡಿಗಳೂ ಎ ಚ್ಚಲ್ಪಟ್ಟಿತ್ತು. ಈ ಮಂದಾಕ್ಕೆ ಕಾರಣಭೂತರಾದ ಪಾರ್ಸಿ ಆಂಗಡಿಯವನ ಅಂಗಡಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿ ಮಾಟಿಗಳನ್ನು ಹೊರಕ್ಕೆಹಾಕಿ ಸುಟ್ಟು ಬಿಟ್ಟಿದ್ದಾರೆ ಇದು ಪೊಲೀಸು ವಿಚಾರಣೆಯಲ್ಲಿದೆ ಈ ವರೆಗೆ ಯಾರೂ ದಸ್ತಗಿರಿ ಮಾಡಲ್ಪಟ್ಟಿರುವುದಿಲ್ಲ

ಕಾನ್‌ಸ್ಟೇಟಿವ್ ಪಕ್ಷದ ಚರ್ಚಿಲ್ ಎಂಬವರು ಇಂಡಿಯಾದ ವಿಷಯ ಕಳೆದ ಧಾರ್ಲದಲ್ಲಿ ಮಾಡಿದ ಭಾಷಣವನ್ನು ಕೇಳಿ ಮೊಡುವೆ ಭಾಷಣವನ್ನು ಯಾರೂ ಮಾಡಲಿಲ್ಲವೆಂದೂ, ಇಂಥಾ ಭಾಷಣವು ರೌಂಡ್ ಟೇಬಲ್ ಕಾನ್‌ಫರೆನ್ಸಿನ ಜಯಕ್ಕೆ ಒಳ್ಳೆ ಕೇಡು ಮಾಡತ್ತದೆಯೆಂದೂ ಹಿಂದೂದೇಶದಿಂದ ಒಬ ಎಲ್ಲಾ ಜಾತಿ ಕೇ ೧೯ನ ಸ್ಪತಿನಿಧಿಗಳು ಲಂಡನ್ನಿಗೆ ರಾಜಿ ಶಕ್ತಿಗೆ ಒಂದ ಸೌಲುದಲ್ಲಿ ತಿಂದಾ ಆಡಿ, ತಮ್ಮ ಭಾಷಣ ಮಾಡಿ ಬಂದಿರುತ್ತಿರುವಾಗ ಇಂಡಿಯಾದೇಶ ಸ್ವೆರಾಜ್ಯಕ್ಕೆ ಹೋರಾಡಿ ಪುದು ನ್ಯಾಯವೆಂತಲೂ, ಬ್ರಿಟಿಷರು ಇಳಿಕೆಯಿಂದ ಆವು ಸ್ವರಾಜ್ಯಕ್ಕೆ ಕಬೂರಾಗಿದ್ದಾರಂತಲೂ ಇಂದಾ ಭಾಷಣದಿಂದ ರೌಂಡ್ ಟೇಬಲ್ ಕಾನ್‌ಫರೆನ್ಸನ್ನು ಒಷಿಕ್ಷರಿಸಿದ ಕಾಂಗ್ರೆಸ್ ಪಕ್ಷದವರ ಕೆಲಸಕ್ಕೆ ಬಹು ಅನುಕೂಲವಾಗುವುದೆಂದೂ, ಇನ್ನು ಮುಂದಕ್ಕಾದರೂ ಇಂಥ ಕೆಟಿಕ ಭಾಷಣ ಬಾರದಂತೆ ಚರ್ಚಿಲ್‌ರವರಿಗೆ ಒತ್ತಿ ಹೇಳುತ್ತೇನೆಂದೂ ಇಂಗ್ಲೆಂಡಿನ ಪ್ರಧಾನ ಮಂತ್ರಿಯಾದ ಮೆಕ್‌ಡೊನಲ್ಡರು ಒಂದು ಬಾಷಣದಲ್ಲಿ ಹೇಳಿರುವರು

ಲಂಡನ್ನಿನಲ್ಲಿ ಶ್ರೀಜತ್ ಜಯಕರಿನರು ಒಂದು ನಿಮಿಟಿಂಗಿನಲ್ಲಿ ಮಹಾತ್ಮ ಗಾಂಧಿಯವರ ಮತ್ತು ರೌಂಡ್‌ಟೇಬಲ್ ಕಾನ್‌ಫರೆನ್ಸಿನ ವಿಷಯ ಹೀಗೆಂದು ಹೇಳಿರುವರು— ಮಹಾತ್ಮ ಗಾಂಧಿಯವರಿಗೆ ಬ್ರಿಟಿಷರ ರಾಜಿ ಒಪ್ಪಂದದಲ್ಲಿ ನಿಶ್ಚಾಸವೇ ಇರುವುದಿಲ್ಲ. ಗಾಂಧಿಯನೆಯೊಡನೆ ನಾವು ರಾಜಿ ಸಂಧಾನದ ಮಾತನ್ನು ಆಡಿ ಯಾವ ಒಪ್ಪಂದಕ್ಕೂ ಬಾರದಿದ್ದ ಸಮಯವಲ್ಲ ಅವರು ಹೀಗೆಂದು ಹೇಳಿದರು ಇಂಗ್ಲೆಂಡಿನಿಂದ ರೌಂಡ್ ಟೇಬಲ್ ಕಾನ್‌ಫರೆನ್ಸ್ ತೀರಿ ಸ್ವತಂತ್ರ್ಯದ ಮುಖ್ಯಾಂಶಗಳನ್ನು ತಿಗದುಕೊಂಡು ಬನ್ನಲ್ಲಿ ಬನ್ನಿ ಅವುಗಳು ಎಷ್ಟನ ಪಟ್ಟಿಗೆ ಸಾಧಕವಾಗಿದೆಯೆಂಬುದನ್ನು ಆ ತಿ ಸೂಕ್ಷ್ಮ ದಿಂದ ನೋಡಿ ಪೂರ್ಣ ಅವುಗಳ ವಿಷಯದಲ್ಲಿ ಪರ್ಯಾಲೋಚಿಸುತ್ತೇನೆ. ಇದನ್ನೇ ಪಂಡಿತ ಮೋತಿಲಾಲ್ ನೆಹರುವರು ಪುಟ್ಟೀಕರಿಸಿದರು. ಈ ತರದ ಧೊರನೆಸುಗಳನ್ನು ಅವರು ಕೂಟ್ಟಿದ್ದಂದ ಹಿಂದೂದೇಶಕ್ಕ ರೌಂಡ್ ಟೇಬಲಿನಲ್ಲಿ ಸ್ವಯೋಜನ ಸಿಕ್ಕೀಸಿಂಬ ನಂಬಿಕೆಯಿಂದ ಕೆಲಸ ಮಾಡುವುದಾಗಿ ಪ್ರಜೆಗಳ ಅಧೀನಕ್ಕೆ ಬಂಗಪಟ್ಟ ಪೂರ್ಣ ಜವಾಬುದಾರಿ ಸರಕಾರವು ಇತಿಯೊಕ್ಕೆ ಸಿಕ್ಕತ್ತದೋ ಎಂಬುದನ್ನು ಒಂದೆರಡು ವಾರ ನೋಡಿ ಇದು ಸಾಧ್ಯವಾಗದಿದ್ದರ ಸಸ್ಪು ಲ್ಲಿ ಕೆಲವಾದರೂ ಇಂಡಿಯಾಕ್ಕೆ ನೆಪ್ಪಗ ಹಿಂದಿರುಗುತ್ತೇವೆ

ಬೊಂಬಾಯಿಯ ಪ್ರಸಿದ್ಧ ಸಾಮಾಜಿಕ ಸಹಕಾರಿ ವೆ ನೋದಲಾದ ಸಾರ್ವಜನಿಕ ಕಲಸದ ಮುಂದಾಳು ಮತ್ತು ಬೊಂಬಾಯಿ ಸರಕಾರದ ಎಗ್ಸಿಕ್ಯೂಟಿವ್ ಕೌನ್ಸಿಲರಾಗಿದ್ದ ಸರ್ ಶಾಲುಬಾಯಿ ಸಾಸಲಾದಾಸರು ಗುಜರಾತಿನ ಪೂಲೀಸು, ರವಿನ್ಯೂ ಅಧಿಕಾರಿ ಉದ್ಯೋಗಿಸ್ಥರು ರೈತರಿಗೆ ನೋಡುತ್ತಿರುವ ತೊಂದರೆ ಕುರಿತು ವಿಚಾರಿಸಲಿಕ್ಕಾಗಿ ಗುಜರಾತಿನ ಕೆಲವು ಗ್ರಾಮಗಳಲ್ಲಿ ಸಂಚಾರಿಸಿ ಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಬರೆದಿರುತ್ತಾರೆ ಇವರಿಗೆ ಮೊದಲು ಇಂಗ್ಲೆಂಡಿನ ಪ್ರಸಿದ್ಧ ಲೇಖಕರಾದ ಮೆ ಬೈಯಿಶ್ಲೆಫಡ್‌ರು ಮತ್ತು ಮಹಾತ್ಮಾ ಗಾಂಧಿಯವರ ಬಲಗೈಯಂತಿರುವ ಶ್ರೀಜತ, ಮಹಾದೇವ ದೇಸಾಯಿಯವರು ಗುಜರಾತಿನ ಗ್ರಾಮಗಳನ್ನು ಸಂದರ್ಶಿಸಿ ರೈತರನ್ನು ಕುದ್ದು ಕಂಡು ಸಂಭಾಷಿಸಿ ಪೋಲೀಸು ಮತ್ತು ಇತರ ಅಧಿಕಾರಿಗಳ ತೊಂದರೆಯಿಂದಲೇ ಬಾರ್ಡೋಲಿಯಲ್ಲಿ ಜನಿಕ ಗ್ರಾಮಗಳು ಶೈರತು ಊರ ಬಿಟ್ಟಿರುವರೆಂದು ತಿಳಿಸಿದುತ್ತಾರೆ ಇವರು ಬರೆದಿದ್ದನ್ನು ಒತ್ತಾಸೆಯಾಗಿ ಸೆರ್ ಶಾಲುಬಾಯಿ ಸಾಮುದಾಸರು ಯೂವರಾಗಲಿ ಸೆರಕಾರದ ಮನುಷ್ಯರಾಗಿದ್ದವರೇ ಬರೆದಿದ್ದು ನೋಡಿದರೆ ಗುಜರಾತಿನ ರೈತರುಗಳ ತ್ಯಾಗವೂ ಕಷ್ಟವೂ ಜನರ ಗೋಚರಕ್ಕೆ ಬರುತ್ತೆ. ಇವರು ಪಿಕಟಿಂಗ್ ಆರ್ಡಿನೆನ್ಸ್‌ನ್ನು ವೈನೆರಾಯರು ಜಾರಿಗೆ ತಂದದ್ದರಿಂದ ದೇಶದಲ್ಲಿ ಹೆಚ್ಚಿನ ಆಡಕತ್ತಿ ತ್ತಿಂದೂ ಸರಕಾರದವರ ಸ್ನೇಹಿತರೆಲ್ಲರೂ ವಿರೋಧಕ್ಕೆ ಕಾರಣರಾದರೆಂದೂ ಹೇಳಿರುತ್ತಾರೆ ಅಲ್ಲದೆ ಸಾಮಾಜಿಕ ಸೇವೆಗಾಗಿ ಕೂಡುಕತನವನ್ನು ನಿಲ್ಲಿಸಲಿಕ್ಕಾಗಿ ಗುಜರಾತಿನ ಸ್ತ್ರೀಯರು ಘರುಸುರು ಎಲ್ಲರೂ ರೆಸ್ಸು ನರ್ಸಿಸ್ಸನ್ನು ಕಳಕೊಂಡು ಪಾಡುತ್ತಿರುವ ನೆ ವ ಮತ್ತು ತ್ಯಾಗವನ್ನು ಬಹು-ಶ್ಲಾಘಿಸಿದ್ದಾರೆ

---

## ಸೂಚನೆ.

'ಕೊಡಗು ಪತ್ರಿಕೆಗೆ ವಾರ ಒಂದರ ೨೦—೦—೦ ರೂ ಮೇರೆ ಪೋಸ್ಟಾಫೀಸಿನಿಂದಂಟಾಗುತ್ತಿರುವ ನಷ್ಟವನ್ನು ಹೇಗಾದರೂ ಪರಿಹರಿಸಲಿಕ್ಕಾಗಿ, ಪೊನ್ನಾರ್ಪು, ವೀರಾಜಪೇಟೆ, ಅಮ್ಮತ್ತಿ ಗೋಣಿಕೊಪ್ಪಲು ಫ್ಲೋಂದೇಟೆ ಹುದಿಕೇರಿ, ಸಂಟಿಕೊಪ್ಪಲು ಫ್ಲೋಂದೇಟೆ ಮತ್ತು ಸೋಮವಾರಪೇಟೆಗಳಲ್ಲಿ ಈ ಕೆಳಗಿನ ಮಹಾಶಯರ ಗೆಳಸ್ತ ನಮ್ಮ ಪತ್ರಿಕೆಯನ್ನು ಒಟವಾಡೆ ಮಾಡುವ ಕಲ್ಪಿಸಿಕೊಂಡಿದ್ದೇವೆ ಈ ಪೋಸ್ಟಗೊಳಪಟ್ಟ ಜಾಂಡಾರಿಗಳಿಗೆ ಈ ಸಂಜೀಬರುಗಳ ಪತ್ರಿಕೆಗಳನ್ನು ಒಟವಾಡೆ ಮಾಡುತ್ತಾರೆ ಪತ್ರಿಕೆ ಸಿಕ್ಕಲು ತಡವಾದರೆ ದಯಮಾಡಿ ಈ ವಿಷಯದಲ್ಲಿ ಹೊಂದಿಕೊಳ್ಳಬೇಕಾಗಿ ಕೋರುತ್ತೇವೆ.

ಪೋಸ್ಟು ತೆಸರು,

ಪೊನ್ನಾರ್ಪೆ—ಮೆ ನ ಡೆಯಂಡ ದೇವೈಯ್ಯನವರು

ಕಸ್ಟೂರಿಯಲ್ ಸ್ಟೋರ್.

ವೀರಾಜಪೇಟೆ—ಮೆ ಪುಲಿಯಂಡ ಗಣಪತ್ಯಿಯವರು

ಖಾದಿ ಬಂಡಾರ

ಅಮ್ಮತ್ತಿ—ಮೆ ಐಸಂಡ ಪಿ ವಾಣಿಸ್ವನವರು.

ಗೋಣಿಕೊಪ್ಪಲು—ಮೆ ಒನ್ನಂಡ ವಿಜಯನವರು

ಟೌನ್ ಹಾಲ್.

ಫ್ಲೋಂದೇಟೆ—ಮೆ ಪಿ ಜೆ ಮುದ್ದಯ್ಯಸ್ವನವರು,

ಹುದಿಕೇರಿ—ಮೆ ಗುಂದಿರ ಮೊದಯ್ಯಸ್ವನರ,

ಕೋಪರೇಟಿವ್ ಸೆಕ್ಕೆಟರಿ

ಸಂಟಿಕೊಪ್ಪಲು—ಮೆ ಅಪ್ಪಚೆಟ್ಟೀರಂಡ ನೂಮಯ್ಯಸ್ವನವರು

ಪ್ರಬಾರಪೇಟೆ—ಮೆ ಯಸ್. ಯಸ್. ರತನೆಶೆಟ್ಟಿಯನವರು,

ಸೋಮವಾರಪೇಟೆ—ಮೆ ಯಂ ಯಸ್ ರಾಮಯ್ಯನವರು,

ಕೋಪರೇಟಿವ್ ಸ್ಟೋರ್

(ಮೇನೆಜರ್)

---

## ಸೂಚನೆ.

ತಾ 17—12—30 ರಲ್ಲು ಮಡಿಕೇರಿ ಕೋಟೆಯಲ್ಲಿ ನೂಡಿದ ರಾತ್ರ್ಯ ದೃಜಾಕೋಹುವು ಸತ್ಯಾಗ್ರಹ ಮಂಡಳಿಯ ಆನ ಮತಿಯಿಂದ ಮಾಡಿದ್ದಲ್ಲ. ನೋಡಿದವರು ತಮ್ಮ ಸ್ವಂತ ಬಾಪಾಖ್ಯಾರಿತಿಯಿಂದ ನೂಡಿದ್ದಾಗಿದೆ.

ಅಜ್ಜಮಾಡ ಮಾದಪ್ಪ,

ಕೊಡಗು ಸತ್ಯಾಗ್ರಹ ಮಂಡಳಿಯ ಅಧ್ಯಕ್ಷರು.

---

## ವಿದ್ಯೆ.

(ಕಳೆದ ಸಂಚಿಕೆಯಿಂದ ಮುಂದೆ ನರದದ್ದು)

ಪ್ರಜೀನೆ ಹಿಂದೂದೇಶದಲ್ಲಿ ವಿದ್ಯಾ ಪ್ರಚಾರ.

(ಬಿಡಿ ಬಂದ್ಯ)

*

ವಿದ್ಯಾಭ್ಯಾಸವು ಕ್ರಾಮೀನ ಹಿಂದೂಸ್ಥಾನದಲ್ಲಿ ಸರಿಯಾದ ವ್ಯವಸ್ಥೆ ನ್ನು ಹೊಂದಿ ಬಹಳ ಕ್ರಮವಾಗಿ ನ್ಯಸರಾದಲ್ಲಿದ್ದಿರು ವೇದಗಳನ್ನು ಒರೆಯುವ ಕಾಲವ ವೇಳೆಗೆ ವ್ಯಾಪಿನ ಅರ್ಥರ ವಿದ್ಯಾ ಕ್ರಮವು ವ್ಯವಸ್ಥಿತವಾಗಿದ್ದಿತಲ್ಲದೆ ಬಹಳ ಇತಾಲದಿಂದ ಪ್ರಚಾರದಲ್ಲಿ ಒಂದುದೂ ಆಗಿದ್ದಿತು ದೊರೆಗಳು ವಿದ್ಯಾದಾನಕ್ಕೆ ಹೆಚ್ಚು ಗಮನವನ್ನು ಕೊಡುತ್ತಿದ್ದರು ಅತೀಕ್ಷ ಚಕ್ರವರ್ತಿಯು ವಿದ್ಯಾ ತತ್ವಗಳನ್ನು ಶಿಲೆಗಳ ಮೇಲೆ ಬರೆಯಿಸಿ ದೇಶದಲ್ಲೆಲ್ಲಾ ಪ್ರಚಾರ ಮಾಡಿದನು ಹಿಂದಿನ ರಾಜರು ಅಣ್ಯಾಗಳಲ್ಲಿ ಹುತಿಗಳಿಗೆ ಅಶ್ವಮೇಧಗಳನ್ನು ಕಲ್ಪಿಸಿ ಕೊಟ್ಟು ಎದ್ಯಾ ದಾನಕ್ಕೆ ಬೇಕಾದ ಅನುಕೂಲಗಳನ್ನೆಲ್ಲಾ ಮಾಡಿ ಕೊಡುತ್ತಿದ್ದರು ಇಂತಹ ಹುಹಿಗಳಿಗೆ ಕುಲಪತಿಗಳೆಂದು ಹೆಸರು ಬ್ಯಸಿಕ ಲಪತಿಯು ಬಳಿ ಹತ್ತು ಸಹಸ್ರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರೆಂದು ಕಾಳಿದಾಸನು ಹೇಳಿದ್ದಾನೆ. ಇಂತಹ ಪಟಿಷತ್ತುಗಳೂ, ಅಕ್ಷಯಮಗಳೂ ದೇಶದಲ್ಲೆಲ್ಲಾ ಅಸಂಖ್ಯಾತವಾಗಿದ್ದವು ಪ ಪಿಗಳು ವಿದ್ಯಾರ್ಥಿಗಳಿಗೆ ಬೊ

ರಿಗಳ ಸಹಾಯದಿಂದ ಅನ್ನ ವಸ್ತ್ರಗಳನ್ನು ಕೊಟ್ಟು ವಿದ್ಯಾದಾನವನ್ನು ಮಾಡುತ್ತಿದ್ದರು. ಹಂದಗ್ರಾಮನ ರಾಜ್ಯದ ಶಿಕ್ಷಣ ಕ್ರಮವನ್ನು ಕುರಿತು ಅರ್ಥಶಾಸ್ತ್ರದಲ್ಲಿ ಈ ಕೆಳಗಿನ ವಾಕ್ಯಗಳಿವೆ.

"ಮೌರ್ಯರ ಹಿಂದೂಸ್ಥಾನದಲ್ಲಿ ವಿಸ್ತಾರವಾದ ಮತ್ತು ಸುವ್ಯವಸ್ಥಿತವಾದ ವಿದ್ಯಾಭ್ಯಾಸ ಕ್ರಮವು ಜಾರಿಯಲ್ಲಿದ್ದಿತು. ಟಾಕ್ಷಿಲ ಮತ್ತು ಕಾಶಿನಗರಗಳಲ್ಲಿ ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳಿದ್ದುವು. ಆ ದೊಡ್ಡ ವಿದ್ಯಾಲಯಗಳಲ್ಲಿಯಲ್ಲದೆ ತಮ್ಮ ತಮ್ಮ ಆಶ್ರಮಗಳಲ್ಲಿಯೂ, ಚಿಕ್ಕ ಚಿಕ್ಕ ಸ್ಕೂಲುಗಳಲ್ಲಿಯೂ ಅನೇಕ ಉಪಾಧ್ಯಾಯರುಗಳೂ, ಸನ್ಯಾಸಿಗಳೂ ವಿದ್ಯಾ ದಾನ ಮಾಡುತ್ತಿದ್ದರು. ರಾಜನು ಅವರಿಗೆಲ್ಲಾ ದ್ರವ್ಯವನ್ನು ಕೊಟ್ಟು ಪೋಷಣೆ ಮಾಡುತ್ತಿದ್ದನು. ಇಂತಹ ಶಾಲೆಗಳಿಗೆ ಬೇಕಾಗುವಷ್ಟು ಉತ್ಪತ್ತಿ ಬರುವ ಜಮೀನನ್ನು ಶಾಲೆಗೆ ದಾನ ಮಾಡುವುದು ಆಗಿನ ಕಾಲದ ಪದ್ಧತಿಯೆಂಗಿದ್ದಿತ್ತು. ಆ ಜಮೀನುಗಳಿಗೆ ಭೂ ಕಂದಾಯವಿರಲಿಲ್ಲ. ಆದುದರಿಂದ ಉಪಾಧ್ಯಾಯರೂ, ವಿದ್ಯಾರ್ಥಿಗಳೂ ಯಾವ ವಿಧವಾದ ಯೋಚನೆಯೂ ಇಲ್ಲದೆ ವಿದ್ಯಾರ್ಜನೆಯಲ್ಲಿ ಆಸಕ್ತರಾಗಿರುತ್ತಿದ್ದರು

ಇದಲ್ಲದೆ ರಾಜರ ಪೃತ್ಯಕ್ಷ ಮೇಲು ವಿಚಾರಣೆಯಲ್ಲಿಯೂ ಕೆಲವು ಶಾಲೆಗಳಿರುತ್ತಿದ್ದುವು. ಅವುಗಳಲ್ಲಿ ಕೆಲವೊಂದಕ್ಕೆ ಸರ್ಕಾರದ ಖಜಾನೆಯಿಂದ ಸಂಬಳವು ಕೊಟ್ಟಲ್ಪಡುತ್ತಿದ್ದಿತು. ಈ ಸಂಬಳಕ್ಕೆ 'ಪೂಜಾವೇತನ' ಎಂಬ ಹೆಸರಿದ್ದಿತು. ಸರ್ಕಾರದ ವೆಚ್ಚದ ಬಾಬಿನಲ್ಲಿ ಇದಕ್ಕೆ ಪ್ರಮುಖವಾದ ಸ್ಥಾನವಿದ್ದಿತು. ಇವುಗಳಲ್ಲದೆ ಪ್ರತಿ ಗ್ರಾಮದಲ್ಲಿಯೂ ಪುರಾಣ ಪುಣ್ಯಕಥೆಗಳು ಪ್ರತಿನಿತ್ಯವೂ ನಡೆಯುತ್ತಿದ್ದುದರಿಂದ ಜನರಿಗೆ ಜ್ಞಾನಾರ್ಜನೆಗೆ ಬಹಳ ಅವಕಾಶವಿರುತ್ತಿತ್ತು. ಕ್ರಿ ಶ. 400 ನೇ ಸಂವತ್ಸರದಲ್ಲಿ ಹಿಂದೂದೇಶದ ಸಂಚಾರ ಮಾಡಿದ ಪಾಹಿಯಾನನು "ದೊರೆಗಳು ವಿದ್ಯಾದಾನ ಮಾಡುವುದಕ್ಕಾಗಿ ಬೌದ್ಧ ಸನ್ಯಾಸಿಗಳಿಗೆ ಬೇಕಾದ ಭೂಭಾಗಗಳನ್ನು ಕೊಟ್ಟು ಅವುಗಳನ್ನು ಗ್ರಾಮದ ಶಾಸನದಲ್ಲಿ ಬರೆಯುತ್ತಿದ್ದರೆಂದು ಹೇಳುತ್ತಾನೆ ಮಗಧ, ಕೋಸಲ ಮುಂತಾದ ದೇಶಗಳಲ್ಲಿ ವಿದ್ಯಾಭ್ಯಾಸವು ಸಾರ್ವಜನಿಕವಾಗಿದ್ದಿತು ನಲಂದ ವಿಶ್ವವಿದ್ಯಾಲಯದ ಹೆಸರನ್ನು ಕೇಳದವರು ಇರಲಿಲ್ಲ. ಅಲ್ಲಿನ ವಿದ್ವಾಂಸರೂ ವಿದ್ಯಾರ್ಥಿಗಳೂ ಒಬ್ಬ ವಿವೇಕಿಗಳೂ ವಿನಯಶೀಲರೂ ಜ್ಞಾನಿಗಳೂ ಆಗಿದ್ದರೆಂದು ಹೂಯನಕ್ತ್ಸಾಂಗನು ಹೇಳುತ್ತಾನೆ

ಪ್ರಾಚೀನ ಹಿಂದೂಸ್ಥಾನದ ವಿದ್ಯಾಭ್ಯಾಸದ ವಿಚಾರದಲ್ಲಿ ರೆವರೆಂಡ್ ಕೆಯಿವರು ಬರೆದ ಪುಸ್ತಕದಿಂದ ಕೆಲವು ಅಭಿಪ್ರಾಯಗಳನ್ನು ಕೊಡುತ್ತೇವೆ 'ಬ್ರಾಹ್ಮಣ, ಬೌದ್ಧ ಮತ್ತು ಮುಸಲ್ಮಾನರ ಬೇರೆ ಬೇರೆಯಾದ ಉತ್ತಮ ಸಂಸ್ಕೃತಿ ವಿದ್ಯೆಯೊಂದಿಗೆ ಹಿಂದೂದೇಶದ ಎಲ್ಲಾ ಭಾಗಗಳಲ್ಲಿಯೂ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮವು ಬೆಳೆಯಿತು. ಪ್ರಬೆಗಳು ಓದುವುದಕ್ಕೂ ಬರೆಯುವುದಕ್ಕೂ, ಉಂಟಾಗಿದ್ದ ಹೆಚ್ಚಾದ ಕ್ಷಾಮದಿಂದ ಈ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮವು ಜಾರಿಬಂದಿತು ವರ್ತಕರೂ, ವ್ಯವಸಾಯಗಾರರೂ ಇದಕ್ಕೆ ಪೂರ್ಣ ಪ್ರಯೋಜನವನ್ನು ಹೊಂದುತ್ತಿದ್ದರು. ಮಹೊನ್ನತ ಕಡೆ ಸಂಸ್ಕೃತವು ಪ್ರೌಢ ವಿದ್ಯಾಭ್ಯಾಸ ನಾಡುವವರ ಭಾಷೆಯಾಗಿದ್ದಿತು

ಬ್ರಿಟಿಷರು ಹಿಂದೂದೇಶವನ್ನು ತಮ್ಮ ಸ್ವಾಧೀನಕ್ಕೆ ತಂದುಕೊಳ್ಳುವ ವರೆಗೆ ವ್ಯವಸ್ಥಿತವಾದ ಸಾರ್ವಜನಿಕ ವಿದ್ಯಾಧಿಮಿಕ ಮತ್ತು ಪಾಶ್ಚಾತ್ಯ ಶಿಕ್ಷಣಗಳು ಹಿಂದೂದೇಶದಲ್ಲಿ ಪ್ರಚಾರದಲ್ಲಿದ್ದುವು 1822 26ನೇ ಸಂವತ್ಸರದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ತೆಗೆದ ವರದಿಯಿಂದ ಬಾಲಕರ ವಿದ್ಯಾಭ್ಯಾಸ ಪಾಠಶಾಲೆಗಳಿಗೆ ಹೋಗುತ್ತಿದ್ದರೆಂದು ತಿಳಿಯುತ್ತದೆ ಬೊಂಬಾಯಿನಲ್ಲಿ ಮಾಡಲ್ಪಟ್ಟ ಇದೇ ವರದಿಯಲ್ಲಿ 1824 ರಲ್ಲಿ ಶಾಲೆಗಳಿಗೆ ಹೋಗುತ್ತಿದ್ದ ಬಾಲಕರ ಸಂಖ್ಯೆಗಿಂತ ಹೆಚ್ಚಾಗಿದ್ದಿತು ಅದರೆ ಬಂಗಾಳದಲ್ಲಿ ವರದಿಯಿಂದ ಶೇಕಡ 13 2 ರಂತೆ ಜನರು ವಿದ್ಯಾವಂತರಾಗಿದ್ದರೆಂದು ತಿಳಿಯ ಬಂದಿತು. ಮತ್ತೊಂದು ಕಡೆ 9 ರಂತೆ ಹುಡುಗರು ಶಾಲೆಗಳಿಗೆ ಹೋಗುತ್ತಿದ್ದ ಸಂಖ್ಯೆಯು ಒಹಳ ಕಡಿಮೆಯೆಂದೂ ಬ್ರಿಟಿಷರಲ್ಲಿ ಈಗ ವಿದ್ಯೆಯನ್ನು ಸಂಪಾದಿಸುವ ಬಾಲಕರ ಸಂಖ್ಯೆಗಿಂತ ಆಗಿನ ಬಾಲಕರ ಸಂಖ್ಯೆಯು ಹೆಚ್ಚಾಗಿದ್ದಿತೆಂದೂ ತಿಳಿದುಬರುವುದು.

ಈ ವಿದ್ಯಾಭ್ಯಾಸದ ಬೆಲೆಯನ್ನು ಅರಿತ ರೆವರೆಂಡ್ ಕೆಯವರು ಈ ರೀತಿ ಬರೆದಿದ್ದಾರೆ

"ಪ್ರಪಂಚದಲ್ಲಿ ಯಾವ ರೀತಿಯ ವಿದ್ಯಾಭ್ಯಾಸಗಳಿಗಿಂತಲೂ ಇಲ್ಲವೇ ಇಲ್ಲ ಹಿಂದೂದೇಶದ ಸಂಕ್ರಮದಂತಹ ದೀರ್ಘವಾದ ಇತಿಹಾಸವುಳ್ಳ ಶಾಶ್ವತವಾದ ಕ್ರಮವುಳ್ಳದ್ದಾಗಿಲ್ಲ ಹಿಂದೂ ಶಿಕ್ಷಣ ಕ್ರಮವು ಪ್ರಚಾರದಲ್ಲಿದ್ದ ಆ ದಿನ್ನು ನೋಡಿದರೆ ಅದರಲ್ಲಿ ಒಹಳ ವಿಶೇಷ ಆವಶ್ಯಕತೆಗೆ ತಕ್ಕಂತೆ ಅದು ಇದೆ ಕ್ರಮವು ಮಹನೀಯರಾದ ವಿದ್ವಾಂಸರನ್ನೂ ಸೃಷ್ಟಿಮಾಡಿತು ಪ್ರಪಂಚದ ಹಿಂದೂಗಳೂ ತಮ್ಮ ದೊಡ್ಡ ಜಾಗವನ್ನು ಪಂಡಿತ ಶಿಕ್ಷಣ ಸಾಹಿತ್ಯಕ್ಕೂ ಶಾಸ್ತ್ರಗಳಾದ ಅನೇಕ ವಿದ್ಯಾ ಧ್ಯೇಯಗಳನ್ನು ಕೊಡಿದರು.